ಶನಿವಾರ, ಮೇ 24, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಇಶಾನ್ ಅಬ್ಬರ

ಲಖನೌನಲ್ಲಿ ಶುಕ್ರವಾರ ನಡೆದ ಐಪಿಎಲ್ ಟಿ20 ಕ್ರಿಕೆಟ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಇಶಾನ್ ಕಿಶನ್ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಮಿಂಚಿನ ಬ್ಯಾಟಿಂಗ್ ಮಾಡಿದರು. ಅದರಿಂದಾಗಿ ಸನ್‌ರೈಸರ್ಸ್ ತಂಡವು 231 ರನ್ ಪೇರಿಸಿತು.

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್‌ಗಳು ಆಯ್ದ ಪಿನ್ ಕೋಡ್ ನಲ್ಲಿ 25 ಮೇ 2025 ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಸಂಕ್ಷಿಪ್ತ ಸುದ್ದಿ

ಜಿಪಿಎಫ್: ವಾರ್ಷಿಕ ವಿವರ ಬಿಡುಗಡೆ

ಬೆಂಗಳೂರು: ಕರ್ನಾಟಕದಲ್ಲಿ ಕಾರ್ಯನಿರ್ವಹಿಸುವ ಸರ್ಕಾರಿ ಅಧಿಕಾರಿ, ನೌಕರರ ಸಾಮಾನ್ಯ ಭವಿಷ್ಯ ನಿಧಿಯ (ಜಿಪಿಎಫ್) ವೈಯಕ್ತಿಕ ಖಾತೆಯ ಸಂಗ್ರಹಿತ ಮೊತ್ತ, ಬಡ್ಡಿ ಹಾಗೂ ಒಟ್ಟು ಮೊತ್ತದ ವಿವರವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಅಖಿಲ ಭಾರತ ಸೇವೆಯ ಅಧಿಕಾರಿಗಳು, ರಾಜ್ಯದ ನ್ಯಾಯಾಲಯಗಳ ನ್ಯಾಯಮೂರ್ತಿಗಳು, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಖಾತೆ ವಿವರಗಳನ್ನು ಬಿಡುಗಡೆ ಮಾಡಲಾಗಿದೆ. ಸಾಮಾನ್ಯ ಭವಿಷ್ಯ ನಿಧಿಯ ವಂತಿಕೆದಾರರು ತಮ್ಮ ಖಾತೆಯ ವಿವರಗಳನ್ನು ಮಹಾ ಲೇಖಪಾಲರು, ಕರ್ನಾಟಕ ಕಚೇರಿಯ ವೆಬ್‌ಸೈಟ್ https://www.agkar.cag.gov.in ವಿಳಾಸದಿಂದ ಪಡೆಯಬಹು ದಾಗಿದೆ ಎಂದು ಮಹಾಲೇಖಪಾಲರು ತಿಳಿಸಿದ್ದಾರೆ.

ಅಭಿಜಯಗೆ ಪದವಿ ಪ್ರವೇಶ ಉಚಿತ

ಬೆಂಗಳೂರು: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟ ಮಂಜುನಾಥರಾವ್ ಅವರ ಪುತ್ರ ಅಭಿಜಯ ಅವರಿಗೆ ಆರ್‌.ವಿ ವಿಶ್ವ ವಿದ್ಯಾಲಯವು ಪದವಿ ತರಗತಿಗೆ ಉಚಿತ ಪ್ರವೇಶ ನೀಡಿದೆ. ಅಭಿಜಯ ಅವರು ಆರ್‌.ವಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಬ್ಯುಸಿನೆಸ್ ನಲ್ಲಿ ಪದವಿ ತರಗತಿಗೆ ಸೇರಿಕೊಂಡಿದ್ದಾರೆ.

26ರಿಂದ ವಸತಿ ಶಾಲೆ ನೌಕರರ ಧರಣಿ

ಬೆಂಗಳೂರು: ವಸತಿ ಶಿಕ್ಷಣ ನಿರ್ದೇಶನಾಲಯ ರಚನೆ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಆಗ್ರಹಿಸಿ ವಸತಿ ಶಾಲೆಗಳ ನೌಕರರ ಸಂಘವು ಇದೇ 26ರಿಂದ 28ರವರೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ರವಿಚಂದ್ರ ಪಿ.ಎನ್., 'ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ (ಕ್ರೈಸ್) ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಶಿಕ್ಷಕರು ಹಾಗೂ ನೌಕರರು ಹಲವು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಸಂಘದಡಿ 823 ವಸತಿ ಶಾಲೆಗಳಿದ್ದು, 6 ಸಾವಿರಕ್ಕೂ ಅಧಿಕ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಸತ್ಯಾಗ್ರಹ ನಡೆಸಿ, ಬೇಡಿಕೆ ಈಡೇರದಿದ್ದರೆ ಜಿಲ್ಲಾ ಹಂತದಲ್ಲಿ ಸತ್ಯಾಗ್ರಹ ಕೈಗೊಳ್ಳಲಾಗುವುದು' ಎಂದರು.

16 ಜಿಲ್ಲಾಸ್ಪತ್ರೆಗಳಲ್ಲಿ ಆರಂಭ, ಉಳಿದ ಜಿಲ್ಲೆಗಳಿಗೂ ಸೇವೆ ವಿಸ್ತರಣೆ –ಮುಖ್ಯಮಂತ್ರಿ

ಕಿಮೋ ಚಿಕಿತ್ಸಾ ಕೇಂದ್ರಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಮೈಸೂರು: ಕ್ಯಾನ್ಸರ್ ಬಾಧಿತರಿಗೆ ಕಿಮೋಥೆರಪಿ ನೀಡಲು 16 ಜಿಲ್ಲಾಸ್ಪತ್ರೆಗಳಲ್ಲಿ ಸ್ಥಾಪಿಸಿರುವ 'ಡೇ ಕೇರ್ ಕಿಮೋಥೆರಪಿ' ಕೇಂದ್ರಗಳಿಗೆ ಇಲ್ಲಿನ ಮೇಟಗಳ್ಳಿ ಜಿಲ್ಲಾಸ್ಪತ್ರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಚಾಲನೆ ನೀಡಿದರು. ಉಳಿದ ಜಿಲ್ಲೆಗಳಲ್ಲೂ ಕೇಂದ್ರ ಆರಂಭಿಸುವುದಾಗಿ ಪ್ರಕಟಿಸಿದರು.

ವಿಜಯಪುರ, ಉಡುಪಿ, ಬಳ್ಳಾರಿ, ಧಾರವಾಡ, ಚಿತ್ರದುರ್ಗ, ವಿಜಯನಗರ, ಹಾವೇರಿ, ಬೆಂಗಳೂರು ಗ್ರಾಮಾಂತರ, ರಾಮನಗರ, ಬೆಂಗಳೂರು ನಗರ, ದಕ್ಷಿಣ ಕನ್ನಡ, ಮೈಸೂರು, ದಾವಣಗೆರೆ, ತುಮಕೂರು, ಕೋಲಾರ ಮತ್ತು ಬಾಗಲಕೋಟೆ ಜಿಲ್ಲಾಸ್ಪತ್ರೆಗಳಲ್ಲಿ ಈ ಸೇವೆ ಸಿಗಲಿದೆ.

'ತಮಿಳುನಾಡು ಬಿಟ್ಟರೆ ಹೆಚ್ಚು ಕ್ಯಾನ್ಸರ್ ಬಾಧಿತರು ರಾಜ್ಯದಲ್ಲಿದ್ದಾರೆ. ಪ್ರತಿ ವರ್ಷ 70 ಸಾವಿರ ಮಂದಿ ರೋಗಪೀಡಿತರಾಗುತ್ತಿದ್ದಾರೆ. ರಾಜ್ಯದ ಎಲ್ಲ ಮೂಲೆಗಳಿಂದ ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಬರುವುದು ಕಷ್ಟ. ಬಡವರಿಗಾಗಿ 100 ಕಿ.ಮೀ ಪ್ರಯಾಣದೊಳಗಿನ ಜಿಲ್ಲಾಸ್ಪತ್ರೆಗಳಲ್ಲಿಯೇ 10 ಹಾಸಿಗೆಗಳ ಕಿಮೋ ಕೇಂದ್ರ ಆರಂಭಿಸಲಾಗಿದೆ' ಎಂದು ಸಿದ್ದರಾಮಯ್ಯ ಹೇಳಿದರು.



ಮೈಸೂರಿನ ಮೇಟಗಳ್ಳಿಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿ ರಾಜ್ಯದ 16 'ಡೇ ಕೇರ್ ಕಿಮೋಥೆರಪಿ ಕೇಂದ್ರ'ಗಳನ್ನು ಜ್ಯೋತಿ ಬೆಳಗುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕ ಕೆ.ಹರೀಶ್ ಗೌಡ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಕ್ಯಾನ್ಸರ್ ಆರಂಭದಲ್ಲಿಯೇ ಪತ್ತೆಯಾದರೆ ಕಿಮೋಥೆರಪಿಯಿಂದ ಗುಣವಾಗಲಿದೆ. ಮಾರಣಾಂತಿಕ ರೋಗ ನಿವಾರಣೆಗೆ ಹೊಸ ಔಷಧಗಳು, ಚಿಕಿತ್ಸಾ ವಿಧಾನಗಳು ಬಂದಿವೆ. ಅವು ಬಡವರಿಗೂ ಸಿಗಬೇಕೆಂಬುದು ಸರ್ಕಾರದ ಉದ್ದೇಶ. ಹೀಗಾಗಿಯೇ ಕಳೆದ ಬಜೆಟ್‌ನಲ್ಲಿ ಈ ಸೇವೆಯ ಘೋಷಣೆ ಮಾಡಲಾಗಿತ್ತು. ಈ ಆರ್ಥಿಕ ವರ್ಷದ ಆರಂಭದಲ್ಲಿಯೇ ಅನುಷ್ಠಾನಗೊಳಿಸಲಾಗಿದೆ' ಎಂದರು.

'ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಮೈಸೂರು, ಹುಬ್ಬಳ್ಳಿ, ಕಲಬುರಗಿಯಲ್ಲಿ ಆರಂಭಿಸಿರುವಂತೆಯೇ, ಕಿದ್ವಾಯಿ ಆಸ್ಪತ್ರೆಗಳನ್ನೂ ತೆರೆಯಲಾಗುತ್ತದೆ. ಅಲ್ಲದೆ, ಮೈಸೂರು, ಕಲಬುರಗಿಯಲ್ಲೂ ನಿಮ್ಹಾನ್ಸ್ ಶಾಖೆ ಆರಂಭಿಸಲಾಗುವುದು' ಎಂದು ಭರವಸೆ ನೀಡಿದರು.

'ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರಷ್ಟೇ ರೋಗ ಗುಣವಾಗುತ್ತದೆಯೆಂಬ ಭಾವನೆ ಬಿಡಬೇಕು. ಖಾಸಗಿ ಆಸ್ಪತ್ರೆಗಳಿಗಿಂತಲೂ ಹೆಚ್ಚಿನ ನುರಿತ, ಅನುಭವಿ ವೈದ್ಯರು ಸರ್ಕಾರಿ ಆಸ್ಪತ್ರೆಗಳಲ್ಲಿದ್ದಾರೆ. ಜಯದೇವ ಆಸ್ಪತ್ರೆಯಲ್ಲಿ ಅತ್ಯುತ್ತಮ ಸೇವೆ ಸಿಗುತ್ತಿಲ್ಲವೇ' ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು.

'ಇನ್ನೂ 25 ವರ್ಷ ಬದುಕುತ್ತೇನೆ'

'6 ವರ್ಷದ ಹಿಂದೆ ನನಗೂ ಆ್ಯಂಜಿಯೊಪ್ಲಾಸ್ಟಿ ಆಗಿತ್ತು. ಅದೀಗ ನನಗೆ ಮರೆತೇ ಹೋಗಿದೆ. ಮಾನಸಿಕವಾಗಿ ಗಟ್ಟಿಯಾಗಿದ್ದರೆ ಆಯಸ್ಸು ಹೆಚ್ಚಾಗುತ್ತದೆ. ನನಗೀಗ 78 ವರ್ಷ, ಇನ್ನೂ 25 ವರ್ಷ ಬದುಕುತ್ತೇನೆ' ಎಂದು ಸಿದ್ದರಾಮಯ್ಯ ನಗೆಯುಕ್ಕಿಸಿದರು.

'ಕ್ಯಾನ್ಸರ್ ಬಂತೆಂದು ಧೃತಿಗೆಡಬೇಕಾಗಿಲ್ಲ. ಚಿಕಿತ್ಸೆ ಪಡೆಯಬೇಕು. ಜೀವನ ಶೈಲಿ, ಆಹಾರ ಕ್ರಮ ಉತ್ತಮವಾಗಿಟ್ಟುಕೊಳ್ಳಿ, ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ' ಎಂದು ಅವರು ಸಲಹೆ ನೀಡಿದರು.

ಸುದ್ದಿ 2 ನಿಮಿಷ

ಆರ್‌ಟಿಪಿಎಸ್: ತಗ್ಗಿದ ಉತ್ಪಾದನೆ

ರಾಯಚೂರು: ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಕಡಿಮೆಯಾಗಿರುವ ಕಾರಣ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ (ಆರ್‌ಟಿಪಿಎಸ್) ವಿದ್ಯುತ್ ಉತ್ಪಾದನೆ ತಗ್ಗಿಸಲಾಗಿದೆ. ಒಟ್ಟು ಎಂಟು ಘಟಕಗಳ ಪೈಕಿ ಒಂದು ಘಟಕದಲ್ಲಿ ಮಾತ್ರ ವಿದ್ಯುತ್ ಉತ್ಪಾದನೆ ಮುಂದುವರಿಸಲಾಗಿದೆ.

ಆರ್‌ಟಿಪಿಎಸ್‌ನ ಒಟ್ಟು ಎಂಟು ಘಟಕಗಳ ಪೈಕಿ, ಒಂದು ಘಟಕ ಎರಡು ವರ್ಷಗಳಿಂದ ಬಂದ್ ಇದೆ. ಇನ್ನೊಂದು ತಾಂತ್ರಿಕ ಕಾರಣದಿಂದಾಗಿ ದುರಸ್ತಿಯಲ್ಲಿದೆ. ಒಂದು ಘಟಕದಲ್ಲಿ ಮಾತ್ರ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಐದು ಘಟಕಗಳಲ್ಲಿ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ.

ಬೇಸಿಗೆ ಕಾರಣ ಕೃಷಿಗೆ ಪಂಪ್‌ಸೆಟ್ ಬಳಕೆ ಕಡಿಮೆಯಾಗಿದೆ ಹಾಗೂ ಎರಡು ವಾರಗಳಿಂದ ರಾಜ್ಯದಲ್ಲಿ ಮಳೆ ಬೀಳುತ್ತಿರುವುದರಿಂದ ಕಟ್ಟಡ ನಿರ್ಮಾಣದಂತಹ ಉದ್ಯಮಕ್ಕೆ ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಬಳಕೆಯಾಗುತ್ತಿದೆ. ಹೀಗಾಗಿ ಸಹಜವಾಗಿಯೇ ವಿದ್ಯುತ್ ಬೇಡಿಕೆ ಕಡಿಮೆಯಾಗಿ ಉತ್ಪಾದನೆಯೂ ಇಳಿಮುಖವಾಗಿದೆ.

'ಯರಮರಸ್‌ನ ಎರಡು ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ. ಕೆಪಿಸಿ ಬೇಡಿಕೆಯಂತೆ ಇಲ್ಲಿ ವಿದ್ಯುತ್ ಉತ್ಪಾದಿಸಲಾಗುತ್ತದೆ. ಕಲ್ಲಿದ್ದಲಿನಿಂದ ವಿದ್ಯುತ್ ಉತ್ಪಾದನೆ ಮಾಡುವುದು ವೆಚ್ಚದಾಯಕ. ಹೀಗಾಗಿ ಮಳೆಗಾಲದಲ್ಲಿ ಜಲವಿದ್ಯುತ್‌ಗೆ ಆದ್ಯತೆ ನೀಡಲಾಗುತ್ತದೆ' ಎಂದು ಆರ್‌ಟಿಪಿಎಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಜಯಪ್ರಕಾಶ ತಿಳಿಸಿದ್ದಾರೆ.

ಪ್ರಿಯಕರನ ಕರೆ: ತಾಳಿ ಕಟ್ಟುವ ವೇಳೆ ಮದುವೆಗೆ ನಿರಾಕರಿಸಿದ ವಧು

ಹಾಸನ: ನಗರದ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಬೆಳಿಗ್ಗೆ ನಿಗದಿಯಾಗಿದ್ದ ಸಮಯಕ್ಕೆ ವರ ತಾಳಿಯನ್ನು ಕಟ್ಟುವ ಕ್ಷಣದಲ್ಲೇ ವಧುವಿಗೆ ಬಂದ ಆಕೆಯ ಪ್ರಿಯಕರನ ಕರೆಯು ಮದುವೆಯನ್ನೇ ರದ್ದಾಗುವಂತೆ ಮಾಡಿತು.

ಪ್ರಿಯಕರ ಏನು ಮಾತಾಡಿದ ಎಂಬುದು ಗೊತ್ತಾಗಿಲ್ಲ. ಆದರೆ ಆತನ ಕರೆ ಸ್ವೀಕರಿಸಿದ ಬಳಿಕ, ವಧು ಮದುವೆಯಾಗಲು ನಿರಾಕರಿಸಿದರು. ಬೇರೊಬ್ಬರನ್ನು ಪ್ರೀತಿಸುತ್ತಿರುವುದಾಗಿ ವಧು ಹೇಳಿದ್ದನ್ನು ಒಪ್ಪದ ಆಕೆಯ ಪೋಷಕರು, ಮದುವೆಗೆ ಒಪ್ಪಿಸಲು ಮಾಡಿದ ಪ್ರಯತ್ನವೂ ವಿಫಲವಾಯಿತು. ಈ ವೇಳೆ ಎರಡೂ ಕುಟುಂಬಗಳ ನಡುವೆ ಗಲಾಟೆ ನಡೆದಿದ್ದು, ಬಡಾವಣೆ ಹಾಗೂ ನಗರಠಾಣೆ ಪೊಲೀಸರು ಸ್ಥಳಕ್ಕೆ ಬಂದು ಪರಿಸ್ಥಿತಿ ತಿಳಿಗೊಳಿಸಿದರು. ನಂತರ ಎಲ್ಲರನ್ನೂ ಠಾಣೆಗೆ ಕರೆದೊಯ್ದರು.

'ಠಾಣೆಯಲ್ಲಿ ಮಾತುಕತೆ ಬಳಿಕ, ಮದುವೆಗೆ ತಗುಲಿರುವ ಖರ್ಚು– ವೆಚ್ಚವನ್ನು ಸಮನಾಗಿ ಹಂಚಿಕೊಳ್ಳಲು ಒಪ್ಪಂದ ಏರ್ಪಟ್ಟು, ವರನ ಕಡೆಯವರು ಮದುವೆ ರದ್ದತಿಗೆ ಒಪ್ಪಿಗೆ ಸೂಚಿಸಿದರು' ಎಂದು ತಿಳಿದುಬಂದಿದೆ. ಶನಿವಾರ ಹಮ್ಮಿಕೊಂಡಿದ್ದ ಬೀಗರ ಔತಣಕೂಟವೂ ರದ್ದಾಗಿದೆ.

ಸರ್ಕಾರಿ ಶಾಲೆಯೊಂದರಲ್ಲಿ ಶಿಕ್ಷಕರಾಗಿರುವ ವರನ ಕಡೆಯವರು ಅದ್ದೂರಿ ಮದುವೆಗೆ ವ್ಯವಸ್ಥೆ ಮಾಡಿದ್ದರು. ಬಂಧು ಬಳಗ, ಆಪ್ತರನ್ನೂ ಆಹ್ವಾನಿಸಿದ್ದರು. ಕಲ್ಯಾಣ ಮಂಟಪದಲ್ಲಿ ಸಾವಿರಾರು ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಬಹುತೇಕರು ಊಟ ಮಾಡದೆ ವಧುವಿನ ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಾ ತೆರಳಿದರು.

ಆಲಮಟ್ಟಿ: ಒಳಹರಿವು ಆರಂಭ

ವಿವಿಧೆಡೆ ಮಳೆ: ಅಂದಲಗಿಯಲ್ಲಿ ಕೆರೆಗೆ ಬಿದ್ದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಬೀದರ್: ಧಾರವಾಡ, ಉತ್ತರ ಕನ್ನಡ ಜಿಲ್ಲೆ ಮತ್ತು ಬೀದರ್ ಜಿಲ್ಲೆಯಲ್ಲಿ ಶುಕ್ರವಾರವೂ ಮಳೆ ಮತ್ತು ಗಾಳಿಯ ಅಬ್ಬರ ಮುಂದುವರೆಯಿತು.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಅಂದಲಗಿ ಗ್ರಾಮದಲ್ಲಿ ಮೀನು ಹಿಡಿಯಲು ಗ್ರಾಮದ ಕೆರೆಗೆ ತೆರಳಿದ್ದ ರಾಜು ಫಕ್ಕೀರಪ್ಪಾ ಮುಕ್ಕನಕಟ್ಟಿ (60) ನೀರಿಗೆ ಬಿದ್ದು ಮೃತಪಟ್ಟಿದ್ದಾರೆ. ಜಿಲ್ಲೆಯ ಬಹುತೇಕ ಕಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಅಲ್ಲಲ್ಲಿ ಮರಗಳು ಬಿದ್ದಿವೆ. 15ಕ್ಕೂ ಹೆಚ್ಚು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಕೃಷ್ಣಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿ ಮಳೆ ಸುರಿಯುತ್ತಿದ್ದು, ಆಲಮಟ್ಟಿ ಜಲಾಶಯದ ಒಳಹರಿವು ಆರಂಭಗೊಂಡಿದೆ. ಈ ವರ್ಷದ ಮೊದಲ ಬಾರಿಯ ಒಳಹರಿವು ಮೇ 19 ಸೋಮವಾರ ದಾಖಲಾಯಿತು. ಅಂದು ಜಲಾಶಯಕ್ಕೆ 424 ಕ್ಯುಸೆಕ್ ಒಳಹರಿವು ಬಂದಿದೆ. ಮೇ 20 ಮಂಗಳವಾರ 382, ಬುಧವಾರ 1722, ಗುರುವಾರ 1722, ಶುಕ್ರವಾರ 1679 ಕ್ಯುಸೆಕ್ ನೀರು ಹರಿದು ಬಂದಿದೆ. ಐದು ದಿನಗಳಲ್ಲಿ ಜಲಾಶಯಕ್ಕೆ 5929 ಕ್ಯುಸೆಕ್ ನೀರು ಹರಿದು ಬಂದಿದೆ.

ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಆರಂಭವಾಗಿದ್ದು, ಹಿನ್ನೀರಿನ ಪ್ರದೇಶ ಶುಕ್ರವಾರ ಕಂಡಿದ್ದು ಹೀಗೆ ಚಿತ್ರ: ಚಂದ್ರಶೇಖರ ಕೋಳೇಕರ

ಮಳೆಗೆ ತರಕಾರಿ ಬೆಳೆ ಹಾಳು : ಬೀದರ್ ಜಿಲ್ಲೆಯ ಹುಲಸೂರ ಪಟ್ಟಣ ಹಾಗೂ ಗ್ರಾಮೀಣ ಭಾಗಗಳಲ್ಲಿ ಉತ್ತಮವಾಗಿ ಮಳೆಯಾಗಿದೆ. ದಿನವಿಡೀ ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣ ಇತ್ತು.

ಗುರುವಾರ ತಡರಾತ್ರಿವರೆಗೆ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಮಳೆಯಾಗಿದೆ. ಕಮಲನಗರ–ಬಾಲೂರು ನಡುವಿನ ಬ್ರಿಜ್ ಕಂ ಬ್ಯಾರೇಜ್ ತುಂಬಿ ಸಮೀಪದ ಗದ್ದೆಗಳಿಗೆ ನೀರು ನುಗ್ಗಿದೆ. ಔರಾದ್ ತಾಲ್ಲೂಕಿನ ಡೊಂಗರಗಾಂವ್, ಮಮದಾಪೂರ ಹಾಗೂ ಭಂಡಾರಕುಮಟಾದಲ್ಲಿ ತಲಾ ಒಂದು ಮನೆ ಭಾಗಶಃ ಕುಸಿದಿದೆ.

ಕಲಬುರಗಿಯಲ್ಲೂ ಶುಕ್ರವಾರ ಸಂಜೆ ಜಿಟಿಜಿಟಿ ಮಳೆ ಸುರಿದಿದೆ.

ದ.ಕ, ಚಿಕ್ಕಮಗಳೂರಲ್ಲಿ ಮಳೆ

ಮಂಗಳೂರು: ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಉತ್ತಮ ಮಳೆ ಸುರಿದಿದೆ. ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಮಂಗಳೂರು ನಗರದಲ್ಲಿ ಬೆಳಿಗ್ಗೆ ಧಾರಾಕಾರ ಮಳೆಯಾಗಿತ್ತು. ಮಧ್ಯಾಹ್ನದ ನಂತರ ಬಿಸಿಲಿನ ವಾತಾವರಣವಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ 27ರ ವರೆಗೆ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಈ ನಾಲ್ಕು ದಿನಗಳಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಿದೆ.

ಅರಬ್ಬಿ ಸಮುದ್ರದ ದಕ್ಷಿಣ ಕೊಂಕಣ ತೀರ ಪ್ರದೇಶದಲ್ಲಿ ಕಡಿಮೆ ಒತ್ತಡದ ವಾತಾವರಣ ನಿರ್ಮಾಣವಾಗಿದ್ದು, ಶುಕ್ರವಾರ ಜಿಲ್ಲೆಯಲ್ಲಿ ಗಾಳಿಯ ಅಬ್ಬರ ಜೋರಾಗಿತ್ತು. ಇದೇ 24ರಂದು ಸಹ ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀವರೆಗಿನ ವೇಗದಲ್ಲಿ ಗಾಳಿ ಬೀಸಲಿದೆ. ಹಾಗಾಗಿ ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳಬಾರದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಶುಕ್ರವಾರ ಬೆಳಿಗ್ಗೆ ಧಾರಾಕಾರ ಮಳೆ ಸುರಿಯಿತು. ಮೂಡಿಗೆರೆ, ಕೊಟ್ಟಿಗೆಹಾರ, ಮುಳ್ಳಯ್ಯನಗಿರಿ, ಕುದುರೆಮುಖ, ಕಳಸ, ಶೃಂಗೇರಿ, ಬಾಳೆಹೊನ್ನೂರು, ಕೊಪ್ಪ, ಆಲ್ದೂರು, ನರಸಿಂಹರಾಜಪುರ, ಚಿಕ್ಕಮಗಳೂರು ನಗರ, ಕೆಮ್ಮಣ್ಣುಗುಂಡಿ ಸುತ್ತಮುತ್ತ ಮಳೆ ಸುರಿಯಿತು. ಬೆಳಿಗ್ಗೆ ಮನೆಯಿಂದ ಹೊರ ಬರಲು ಸಾಧ್ಯವಾಗದ ಸ್ಥಿತಿ ಇತ್ತು. ಮಧ್ಯಾಹ್ನದ ವೇಳೆಗೆ ಮಳೆ ಕೊಂಚ ಕಡಿಮೆಯಾಯಿತು.

ಸಂಜೆ ವೇಳೆಗೆ ಮತ್ತೆ ಚಿಕ್ಕಮಗಳೂರು ನಗರ ಸೇರಿ ಅಲ್ಲಲ್ಲಿ ಮಳೆ ಸುರಿಯಿತು. ನಿರಂತರವಾಗಿ ಮಳೆಯಾಗುತ್ತಿರುವುದು ಕೃಷಿ ಚಟುವಟಿಕೆಗೆ ತೊಡಕಾಗಿದೆ.

ಮಡಿಕೇರಿ: ಕಾವೇರಿ ನದಿಯ ಉಗಮ ಸ್ಥಾನ ತಲಕಾವೇರಿಯಲ್ಲಿ ಶುಕ್ರವಾರ ಭಾರಿ ಮಳೆ ಸುರಿದಿದೆ.

ಸೋಮವಾರಪೇಟೆ ತಾಲ್ಲೂಕಿನ ತೋಳೂರುಶೆಟ್ಟಳ್ಳಿ ಗ್ರಾಮದ ಸಬ್ಬಮ್ಮ ಸುಗ್ಗಿ ದೇವರ ಬನದ ಕಟ್ಟೆ ಮೇಲೆ ಬೃಹತ್ ಗಾತ್ರದ ಮರ ಬಿದ್ದು, ದೇವಾಲಯಕ್ಕೆ ಹಾನಿಯಾಗಿದೆ.

ಭದ್ರಾವತಿ ವಿಶ್ವೇಶ್ವರಯ್ಯ ಕಾರ್ಖಾನೆಯ ಪುನಶ್ಚೇತನ

₹10,000 ಕೋಟಿ ಹೂಡಿಕೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭದ್ರಾವತಿಯ ಸರ್. ಎಂ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಪ್ರಯತ್ನ ನಡೆಯುತ್ತಿದ್ದು, ವಿಸ್ತೃತ ಯೋಜನಾ ವರದಿಯು (ಡಿಪಿಆರ್) ಎರಡು ತಿಂಗಳಲ್ಲಿ ಸಿದ್ಧವಾಗಲಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಶುಕ್ರವಾರ ಇಲ್ಲಿ ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಅವರು, 'ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಮಾಡುವ ಪ್ರಶ್ನೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಇಡೀ ಕಾರ್ಖಾನೆಯನ್ನು ಹೊಸದಾಗಿ ಮರು ನಿರ್ಮಾಣ ಮಾಡಬೇಕಿದೆ. ಸುಮಾರು ₹8,000 ಕೋಟಿಯಿಂದ ₹10,000 ಕೋಟಿ ಹೂಡಿಕೆ ಮಾಡುವ ಬಗ್ಗೆ ಚಿಂತನೆ ನಡೆದಿದೆ. ಈಗಾಗಲೇ ಆ ಕಾರ್ಖಾನೆ ಭಾರತೀಯ ಉಕ್ಕು ಪ್ರಾಧಿಕಾರದ ಅಧೀನದಲ್ಲಿದೆ.

ವರ್ಷಾಂತ್ಯಕ್ಕೆ ಕಾರ್ಖಾನೆ ಪುನಶ್ಚೇತನ ಯೋಜನೆ ಕಾರ್ಯರೂಪಕ್ಕೆ ತರಲಾಗುವುದು. ಪ್ರಧಾನಿ ನರೇಂದ್ರ ಮೋದಿ ಈ ಯೋಜನೆಗೆ ಡಿಸೆಂಬರ್‌ನಲ್ಲಿ ಅಡಿಗಲ್ಲು ಹಾಕಲಿದ್ದಾರೆ

ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮುಂದಿನ ದಿನಗಳಲ್ಲಿ ರಾಷ್ಟ್ರದಲ್ಲಿ ಉಕ್ಕು ಕ್ಷೇತ್ರದಲ್ಲಿ ಪ್ರಾಧಿಕಾರ ₹1 ಲಕ್ಷ ಕೋಟಿ ಮೊತ್ತ ಹೂಡಿಕೆ ಮಾಡಲಿದೆ. ಅದೇ ಸಂದರ್ಭದಲ್ಲಿ ವಿಐಎಸ್‌ಎಲ್ ಕಾರ್ಖಾನೆಯನ್ನು ಕೂಡ ಪುನಶ್ಚೇತನಗೊಳಿಸಲಾಗುವುದು' ಎಂದು ಸಚಿವರು ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಅವರು 2030ರ ಹೊತ್ತಿಗೆ ದೇಶೀಯವಾಗಿ ವಾರ್ಷಿಕ 300 ದಶಲಕ್ಷ ಟನ್ ಉಕ್ಕು ಉತ್ಪಾದಿಸುವ ಗುರಿ ನಿಗದಿ ಮಾಡಿದ್ದು, ಅದಕ್ಕೆ ಪೂರಕವಾಗಿ ಸರಕಾರಿ ಸ್ವಾಮ್ಯದ ಉಕ್ಕು ಸ್ಥಾವರಗಳನ್ನು ಬಲಪಡಿಸುವ ಕೆಲಸ ಮಾಡಲಾಗುತ್ತಿದೆ' ಎಂದರು.

ವಿಐಎಸ್‌ಎಲ್ ಖಾಸಗೀಕರಣ ಮಾಡಲು ಕೇಂದ್ರ ಸಚಿವ ಸಂಪುಟವು 2016ರಲ್ಲಿ ಒಪ್ಪಿಗೆ ನೀಡಿತ್ತು. ಸಂಸ್ಥೆಯನ್ನು ಸಂಪೂರ್ಣವಾಗಿ ಮಾರಾಟ ಮಾಡಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಈ ಹಿಂದೆ ಬಿಡ್ ಕರೆದಿತ್ತು. ಬಿಡ್‌ದಾರರು ಆಸಕ್ತಿ ವಹಿಸದ ಕಾರಣಕ್ಕೆ ಕಾರ್ಖಾನೆಯನ್ನು ಖಾಸಗೀಕರಣ ಮಾಡುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ 2022ರ ನವೆಂಬರ್‌ನಲ್ಲಿ ಕೈಬಿಟ್ಟಿತ್ತು. ನಂತರ ಸರ್ಕಾರವು ಕಾರ್ಖಾನೆಯನ್ನು ಮುಚ್ಚುವ ಪ್ರಕ್ರಿಯೆ ಆರಂಭಿಸಿತ್ತು. ಸಂಸ್ಥೆಯ ಪುನರುಜ್ಜೀವನದ ಸಾಧ್ಯಾಸಾಧ್ಯತೆಗಳ ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೆ ಕುಮಾರಸ್ವಾಮಿ ಈ ಹಿಂದೆ ನಿರ್ದೇಶನ ನೀಡಿದ್ದರು.

ಹಕ್ಕಿಗಳ ಹಿಂಡು ...

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರ ಪಕ್ಷಿಧಾಮದ ಮರವೊಂದರ ಮೇಲೆದ ಸಣ್ಣ ನೀರು ಕಾಗೆಗಳ (ಲಿಟಲ್ ಕಾರ್ಮೋರೆಂಟ್) ಹಿಂಡು ಶುಕ್ರವಾರ ಕಂಡಿದ್ದು ಹೀಗೆ

ಪ್ರಜಾವಾಣಿ ಚಿತ್ರ: ಸಿ.ಶಿವಾನಂದ

ಆಸ್ತಿ: ಇದೇ 26ರಿಂದ ಡಿಜಿಟಲ್ ನೋಂದಣಿ ಪ್ರಕ್ರಿಯೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿ ಮತ್ತು ಇತರೆ ನೋಂದಣಿ ಪ್ರಕ್ರಿಯೆ ಮೇ 26ರಿಂದ ಸಂಪೂರ್ಣ ಡಿಜಿಟಲೀಕರಣಗೊಳ್ಳಲಿದೆ.

ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ಮಸೂದೆ–2025 ಅನ್ನು ಅಧಿಕೃತವಾಗಿ ಜಾರಿಗೊಳಿಸಲು ಕಂದಾಯ ಇಲಾಖೆ ಆದೇಶ ಹೊರಡಿಸಿದ್ದು, ಇನ್ನು ಮುಂದೆ ಸ್ವತ್ತು ಮತ್ತು ಇತರ ನೋಂದಣಿಗಳಲ್ಲಿ ಡಿಜಿಟಲ್ ಸಹಿ, ಡಿಜಿಟಲ್ ಇ–ಸ್ಟಾಂಪ್ ಬಳಕೆ ಜಾರಿ ಕಡ್ಡಾಯವಾಗಲಿದೆ. ಈ ಹಿಂದಿನಂತೆ ಅಂಟಿಸುವ ಅಥವಾ ಮುದ್ರೆ ಹಾಕುವ ಸ್ಟಾಂಪ್‌ಗಳ ಬಳಕೆಯನ್ನು ನಿಲ್ಲಿಸಲಾಗುತ್ತದೆ. ಇ–ಸ್ಟಾಂಪ್ ದುರುಪಯೋಗವನ್ನು ತಡೆಯಲು ಸ್ಟಾಂಪ್ ಮೊತ್ತವನ್ನು ವಿದ್ಯುನ್ಮಾನ ಪಾವತಿ ಮಾಡಬೇಕಿದೆ. ಸಿಬ್ಬಂದಿ ಮೂಲಕ (ಮ್ಯಾನ್ಯುವಲ್) ಸ್ಟಾಂಪ್ ವಿತರಿಸುವುದು ಸಂಪೂರ್ಣ ಸ್ಥಗಿತವಾಗಲಿದೆ.

ಡಿಜಿಟಲ್ ಸಹಿ ದುರುಪಯೋಗ ಆಗದಂತೆ ಮಾಡಲು ಜಿಲ್ಲಾಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರದ ಅಧಿಕಾರಿಯ ಸಹಿಯನ್ನು ಆಧಾರ್‌ಗೆ ಜೋಡಣೆ ಮಾಡಲಾಗಿರುತ್ತದೆ. ಸಹಿ ದೃಢೀಕರಣಗೊಂಡರೆ ಮಾತ್ರ ಸಹಿ ಸಾಧ್ಯ. ಡಿಜಿಟಲ್ ಸಹಿಯಲ್ಲಿ ಬಯೊಮೆಟ್ರಿಕ್ ಕೂಡ ಇರುತ್ತದೆ.

51 ಸಾವಿರ ಅತಿಥಿ ಶಿಕ್ಷಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆ ನೀಗಿಸಲು 51,000 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅನುಮತಿ ನೀಡಿದೆ.

ಪ್ರಾಥಮಿಕ ಶಾಲೆಗಳಿಗೆ 40,000 ಹಾಗೂ ಪ್ರೌಢಶಾಲೆಗಳಿಗೆ 11,000 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಂತೆ ಇಲಾಖೆ ಆದೇಶ ಹೊರಡಿಸಿದೆ. ಮೇ 29ರಿಂದ ಶಾಲೆಗಳು ಪುನರಾರಂಭವಾಗುತ್ತಿದ್ದು, ಶೈಕ್ಷಣಿಕ ಚಟುವಟಿಕೆಗಳು ಸುಗಮವಾಗಿ ಸಾಗಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

ಎಸ್‌.ಮಧು ಬಂಗಾರಪ್ಪ

'ಶಿಕ್ಷಕರ ಕೊರತೆ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಪರಿಣಾಮ ಬೀರಬಾರದು ಎಂಬ ಕಾರಣಕ್ಕಾಗಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳಲು ಶಾಲಾ ಆರಂಭಕ್ಕೂ ಮೊದಲೇ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಾಥಮಿಕ ಶಾಲೆಯ ಅತಿಥಿ ಶಿಕ್ಷಕರಿಗೆ ₹12 ಸಾವಿರ, ಪ್ರೌಢಶಾಲೆಯ ಅತಿಥಿ ಶಿಕ್ಷಕರಿಗೆ ₹12,500 ಗೌರವಧನ ನಿಗದಿ ಮಾಡಲಾಗಿದೆ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಸಹೋದ್ಯೋಗಿಗಳಿಗೆ ಪತ್ರ ಬರೆದ ಡಿಜಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಮಹಾ ನಿರ್ದೇಶಕರಾಗಿರುವ ಡಾ.ಎಂ.ಎ. ಸಲೀಂ ಅವರು ಸಹೋದ್ಯೋಗಿಗಳಿಗೆ ಪತ್ರ ಬರೆದು ಕೆಲವು ಸಲಹೆ ಹಾಗೂ ಸೂಚನೆಗಳನ್ನು ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ಅಪರಾಧಗಳ ನಿಯಂತ್ರಣ ಹಾಗೂ ಹೆಚ್ಚು ಸುರಕ್ಷಿತ ವಾತಾವರಣ ನಿರ್ಮಿಸಲು ರಾಜ್ಯ ಪೊಲೀಸ್ ಇಲಾಖೆಯ ಹಿರಿಯ, ಕಿರಿಯ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳ ಕುರಿತು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರಾಮಾಣಿಕತೆಯಲ್ಲಿ ಎಂದೂ ರಾಜಿಯಾಗಕೂಡದು. ಪ್ರಾಮಾಣಿಕತೆಗೆ ಆದ್ಯತೆ ನೀಡುವಿರಿ ಎಂಬ ವಿಶ್ವಾಸವಿದೆ. ಪಾರದರ್ಶಕತೆಗೆ ಅತಿ ಹೆಚ್ಚು ಒತ್ತು ನೀಡುವುದರಿಂದ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆ ಮೂಡಲಿದೆ. ದುರ್ಬಲ ವರ್ಗ, ಆರ್ಥಿಕವಾಗಿ ಹಿಂದುಳಿದವರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯ. ಇಂತಹ ಪ್ರಾಮಾಣಿಕತೆಯ ಸಿದ್ಧಾಂತಗಳು ನಮ್ಮ ನೈತಿಕತೆ ಮತ್ತು ಆತ್ಮತೃಪ್ತಿ ದ್ವಿಗುಣಗೊಳಿಸುತ್ತವೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಮಾದಕ ವಸ್ತುಗಳ ವಿರುದ್ಧದ ಸಮರ ನಿರಂತರವಾಗಿರಬೇಕು' ಎಂದು ಪತ್ರದಲ್ಲಿ ಸೂಚಿಸಿದ್ದಾರೆ.

'ಸಂಘಟಿತ ಅಪರಾಧಗಳನ್ನು ತಡೆಯಲು ಚಾಲ್ತಿಯಲ್ಲಿ ಇರುವ ಕಾನೂನುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ರಸ್ತೆಗಳಲ್ಲಿ ಉತ್ತಮ ಸಂಚಾರ ನಿರ್ವಹಣೆ ಜಾರಿ ಮಾಡುವುದು ಹಾಗೂ ರಸ್ತೆ ಅಪಘಾತಗಳ ಪರಿಣಾಮಕಾರಿ ನಿಯಂತ್ರಣದಿಂದ ಅಮಾಯಕರ ಪ್ರಾಣವನ್ನು ಉಳಿಸುವ ಹೊಣೆ ನಮ್ಮೆಲ್ಲರ ಮೇಲಿದೆ ಎಂಬುದನ್ನು ನಾವು ಅರಿಯಬೇಕು' ಎಂದಿದ್ದಾರೆ.

ರಾಜ್ಯದಲ್ಲಿ ಮಾದಕ ವಸ್ತುಗಳ ಉತ್ಪಾದನೆ, ಸಾಗಣೆ ಹಾಗೂ ಮಾರಾಟಗಳ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜಾರಿಗೆ ತರಬೇಕು

ಎಂ.ಎ. ಸಲೀಂ, ಡಿಜಿ–ಐಜಿಪಿ

'ಉತ್ತಮ ಮಾನವ ಸಂಪನ್ಮೂಲವೇ ಪೊಲೀಸ್ ಇಲಾಖೆಯ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ನಿಯಮಿತ ವ್ಯಾಯಾಮ ಮಾಡಬೇಕು. ಕೆಲಸದ ಒತ್ತಡ ನಿವಾರಣೆ ಮಾಡಿಕೊಳ್ಳಬೇಕು. ಸಿಬ್ಬಂದಿಗೆ ವಿನಾಕಾರಣ ರಜೆ ನಿರಾಕರಿಸಬಾರದು. ಉತ್ತಮ ಸೇವೆಯನ್ನು ಗುರುತಿಸಿ ಪುರಸ್ಕರಿಸಬೇಕು. ಅದರಿಂದ ಪ್ರೇರೇಪಣೆಗೊಂಡು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ' ಎಂದು ಉಲ್ಲೇಖಿಸಿದ್ದಾರೆ.

9 ತಿಂಗಳ ಮಗುವಿಗೆ ಕೋವಿಡ್ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೋಟೆ ದಂಪತಿಯ ಒಂಬತ್ತು ತಿಂಗಳ ಗಂಡು ಮಗುವಿಗೆ ಕೋವಿಡ್ ದೃಢಪಟ್ಟಿದ್ದು, ಹೆಚ್ಚಿನ ಚಿಕಿತ್ಸೆಗೆ ಇಲ್ಲಿನ ವಾಣಿವಿಲಾಸ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೆಲ ದಿನಗಳಿಂದ ಜ್ವರ ಕಾಣಿಸಿಕೊಂಡಿದ್ದರಿಂದ ಮಗುವನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮಗುವಿಗೆ ಕೋವಿಡ್ ಪರೀಕ್ಷೆಯನ್ನು ನಡೆಸಲಾಗಿದ್ದು, ಸೋಂಕು ದೃಢಪಟ್ಟಿದ್ದರಿಂದ ವೈದ್ಯರು ವಾಣಿವಿಲಾಸ ಆಸ್ಪತ್ರೆಗೆ ಶಿಫಾರಸು ಮಾಡಿದ್ದರು. ಮಗುವನ್ನು 22ರ ರಾತ್ರಿ ವಾಣಿವಿಲಾಸ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ.

'ಮಗುವಿಗೆ ಮಕ್ಕಳ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಆರೋಗ್ಯದ ಮೇಲೆ ನಿಗಾ ವಹಿಸಲಾಗಿದೆ' ಎಂದು ವೈದ್ಯರು ತಿಳಿಸಿದ್ದಾರೆ.

ಪುಸ್ತಕ ಮಳಿಗೆಗಳಲ್ಲಿ ಖಾಲಿ, ಹೊಸದಾಗಿ ಆರ್ಡರ್

'ಹಸೀನಾ ಮತ್ತು ಇತರ ಕಥೆಗಳು' ಕೃತಿಗೆ ಹೆಚ್ಚಿದ ಬೇಡಿಕೆ

• ಎಂ. ಮಹೇಶ್

ಮೈಸೂರು: ಪ್ರತಿಷ್ಠಿತ 'ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ'ಗೆ ಪಾತ್ರವಾದ 'ಹಾರ್ಟ್ ಲ್ಯಾಂಪ್'ನ ಮೂಲ ಕೃತಿಯಾದ 'ಎದೆಯ ಹಣತೆ' ಕಥೆಯನ್ನು ಒಳಗೊಂಡಿರುವ 'ಹಸೀನಾ ಮತ್ತು ಇತರ ಕಥೆಗಳು' ಕೃತಿಗೆ ಬೇಡಿಕೆ ಹೆಚ್ಚಾಗಿದೆ.

ಕಥೆಗಾರ್ತಿ ಬಾನು ಮುಷ್ತಾಕ್ ಅವರ ಸಣ್ಣ ಕಥೆಗಳ ಸಂಕಲನವನ್ನು ಮೈಸೂರಿನ 'ಅಭಿರುಚಿ ಪ್ರಕಾಶನ' ಪ್ರಕಟಿಸಿದೆ. ಇಂಗ್ಲಿಷ್ ಅನುವಾದವಾದ 'ಹಾರ್ಟ್‌ಲ್ಯಾಂಪ್' ಕೃತಿಯು ಪ್ರಶಸ್ತಿಗೆ ನಾಮನಿರ್ದೇಶನಗೊಂಡ ಬಳಿಕ, ಇದಕ್ಕೆ ಓದುಗರಿಂದ ಬೇಡಿಕೆ ಬರುತ್ತಿದೆ. ಕಾರಣ, ಬುಕ್‌ಹೌಸ್‌ಗಳಿಂದ ಅಭಿರುಚಿ ಪ್ರಕಾಶನಕ್ಕೆ ಆರ್ಡರ್ ಹೆಚ್ಚಾಗಿದೆ. ಪ್ರಶಸ್ತಿ ಘೋಷಣೆಯಾದ ನಂತರವಂತೂ, ಆ ಕೃತಿಯನ್ನು ಓದಲು ಸಾಹಿತ್ಯಾಸಕ್ತರಲ್ಲಿ ಕುತೂಹಲ ಜಾಸ್ತಿಯಾಗಿದೆ.



'ಹಸೀನಾ ಮತ್ತು ಇತರ ಕಥೆಗಳು' ಕೃತಿಯೊಂದಿಗೆ ಲೇಖಕಿ ಬಾನು ಮುಷ್ತಾಕ್

ಲಂಡನ್‌ನ ಟೇಟ್ ಮಾಡರ್ನ್‌ನಲ್ಲಿ ಪ್ರಶಸ್ತಿ ಘೋಷಣೆಯಾದ ದಿನವಾದ ಬುಧವಾರ ಬರೋಬ್ಬರಿ 450 ಪುಸ್ತಕಗಳು ಮಾರಾಟವಾಗಿವೆ. ಗುರುವಾರ ಮತ್ತೆ 300 ಪ್ರತಿಗಳಿಗೆ ಆರ್ಡರ್ ಬಂದಿದೆ. ಪ್ರಕಾಶಕರು ಮುದ್ರಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

776 ಪುಟಗಳ ಈ ಕೃತಿ 2013ರಲ್ಲಿ ಮೊದಲ ಮುದ್ರಣ ಕಂಡಿತ್ತು. ಪ್ರಶಸ್ತಿಗೆ ನಾಮನಿರ್ದೇಶನಗೊಂಡು ಘೋಷಣೆವರೆಗೆ 300 ಪ್ರತಿಗಳು ಮಾರಾಟವಾಗಿದ್ದವು. ಈ ಸಮಗ್ರ ಕೃತಿಯು ಇತ್ತೀಚೆಗೆ 2ನೇ ಮುದ್ರಣ ಕಂಡಿತ್ತು. ಮೈಸೂರಿನಲ್ಲೇ ಬಿಡುಗಡೆ ಕಾರ್ಯಕ್ರಮವೂ ನಡೆದಿತ್ತು. ಬಾನು ಮುಷ್ತಾಕ್ ಕೂಡ ಪಾಲ್ಗೊಂಡಿದ್ದರು. 'ಕನ್ನಡತಿಗೆ ಪ್ರತಿಷ್ಠಿತ ಬೂಕರ್ ದೊರೆಯಲೆಂದು ಎಲ್ಲರೂ ಪ್ರಾರ್ಥಿಸಿ' ಎಂದು ಕೋರಿದ್ದರು' ಎಂದು ಅಭಿರುಚಿ ಪ್ರಕಾಶನದ ಗಣೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಓದುಗರಿಂದ ಹೆಚ್ಚಿನ ವಿಚಾರಣೆ ಬರುತ್ತಿರುವುದರಿಂದ, ರಾಜ್ಯದ ಪ್ರಮುಖ ಪುಸ್ತಕ ಮಾರಾಟ ಮಳಿಗೆಗಳಾದ ನವಕರ್ನಾಟಕ, ಸಪ್ನ, ಅಂಕಿತ, ಕದಂಬ, ಆಕೃತಿ, ಬೀಟಲ್‌ಬುಕ್‌ಶಾಪ್, ವೀರಲೋಕ ಮೊದಲಾದ ಬುಕ್‌ಹೌಸ್‌ಗಳು ಆರ್ಡರ್ ಕೊಡುತ್ತಿವೆ' ಎಂದು ಮಾಹಿತಿ ನೀಡಿದರು.

''ಹಸೀನಾ ಮತ್ತು ಇತರ ಕಥೆಗಳು' ಕೃತಿಗೆ ಬೇಡಿಕೆ ಹೆಚ್ಚಾಗಿದೆ. ಬೆಲೆ ₹750 ಇದ್ದು, ಬಹಳಷ್ಟು ವಿಚಾರಣೆಗಳು ಬರುತ್ತಿವೆ. ನಮ್ಮಲ್ಲಿದ್ದ ಪ್ರತಿಗಳೆಲ್ಲವೂ ಖಾಲಿಯಾಗಿವೆ. ಸಾಕಷ್ಟು ಓದುಗರು ಬಂದು ಕೃತಿಗಾಗಿ ವಿಚಾರಿಸುತ್ತಿದ್ದಾರೆ. ಗುರುವಾರ ನಮ್ಮಲ್ಲಿ ಪುಸ್ತಕಗಳು ಲಭ್ಯವಿರಲಿಲ್ಲ. ಬೇಡಿಕೆಗೆ ತಕ್ಕಂತೆ ಪ್ರಕಾಶಕರಿಂದ ಪೂರೈಕೆ ಆಗುತ್ತಿಲ್ಲ. ಬೂಕರ್ ಪ್ರಶಸ್ತಿ ಬಂದ ನಂತರವಂತೂ ಖರೀದಿಸಲು ಹೆಚ್ಚಿನವರು ಬರುತ್ತಿದ್ದಾರೆ' ಎಂದು ನವಕರ್ನಾಟಕ ಪ್ರಕಾಶನದ ಮೈಸೂರು ಮಳಿಗೆ ವ್ಯವಸ್ಥಾಪಕ ಎನ್‌.ಕೆ.ಸತ್ಯನಾರಾಯಣ ಪ್ರತಿಕ್ರಿಯಿಸಿದರು.

ಶನಿವಾರ, ಮೇ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 143 | ಪುಟ 22

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ಭವಿಷ್ಯದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಅಧಿಕ’

20% ಇಸ್ರೊದಲ್ಲಿರುವ ಮಹಿಳಾ ಉದ್ಯೋಗಿಗಳ ಸಂಖ್ಯೆ

ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಶೇ 50ರಷ್ಟು ಇದ್ದಾರೆ. ಹಾಗಾಗಿ, ಮಹಿಳೆಯರ ಕೊಡುಗೆಗಳು ಕೂಡ ಮಹತ್ವದ್ದಾಗುತ್ತವೆ. ಇಸ್ರೊದಲ್ಲಿನ ಮಹಿಳಾ ಉದ್ಯೋಗಿಗಳು ಬಹಳ ಮಹತ್ತರವಾದ ಮತ್ತು ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ಭವಿಷ್ಯದಲ್ಲಿ ಈ ಸಂಖ್ಯೆಯು ಶೇ 40ಕ್ಕೆ ತಲುಪಬಹುದು

ವಿ. ನಾರಾಯಣನ್, ಇಸ್ರೊ ಅಧ್ಯಕ್ಷ

(ಕೋಲ್ಕತ್ತದ ಖಾಸಗಿ ಶಾಲಾ ಕಾರ್ಯಕ್ರಮವೊಂದರಲ್ಲಿ ಗುರುವಾರ ಆಡಿದ ಮಾತು)

‘ಬ್ರ್ಯಾಂಡ್ ವಿಸ್ತರಣೆಗೆ ನಟಿ ತಮನ್ನಾ ಆಯ್ಕೆ’ 6

ಉಪನ್ಯಾಸಕರಿಗೆ ಶಿಕ್ಷಕರಿಗಿಂತ ಕಡಿಮೆ ವೇತನ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,721	24,853	₹1.01 ಲಕ್ಷ (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	85.45

ಸಿಇಟಿ: ಇಂದು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಮೇ 24ರಂದು ಪ್ರಕಟವಾಗಲಿದೆ.

ಏ.16ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ, ಏ.17ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳನ್ನು 775 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗಿತ್ತು. ದ್ವಿತೀಯ ಪಿಯು ಪರೀಕ್ಷೆ–1 ಮತ್ತು ಪರೀಕ್ಷೆ–2, ಸಿಬಿಎಸ್‌ಇ, ಐಸಿಎಸ್‌ಇ ಫಲಿತಾಂಶ ಪ್ರಕಟವಾಗಿದ್ದು, ಅಭ್ಯರ್ಥಿಗಳು ಪಡೆದ ಅಂಕಗಳ ಕೂಡುವಿಕೆ ಕಾರ್ಯವನ್ನು ಕೆಇಎ ಪೂರ್ಣಗೊಳಿಸಿದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಏ. 15ರಂದು ಕನ್ನಡ ಭಾಷಾ ಪರೀಕ್ಷೆ ನಡೆಸಲಾಗಿತ್ತು. ಅವರಲ್ಲಿ ಹೆಚ್ಚಿನವರು ಕೇರಳದ ವಿದ್ಯಾರ್ಥಿಗಳು. ಈ ವಿದ್ಯಾರ್ಥಿಗಳ ಪಿಯು ಫಲಿತಾಂಶವನ್ನು ಕೇರಳ ಪದವಿಪೂರ್ವ ಶಿಕ್ಷಣ ಇಲಾಖೆ ಮೇ 21ರಂದು ಪ್ರಕಟಿಸಿದೆ.

7ನೇ ಪುಟ ನೋಡಿ

ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಹಣ ಪಾವತಿ • ಜಾರಿ ನಿರ್ದೇಶನಾಲಯದಿಂದ ಆರೋಪ ಪಟ್ಟಿ ಸಲ್ಲಿಕೆ

ಡಿಸಿಎಂ ಡಿಕೆಶಿ ₹25 ಲಕ್ಷ ದೇಣಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವೈಯಕ್ತಿಕವಾಗಿ ₹25 ಲಕ್ಷ ದೇಣಿಗೆ ನೀಡಿದ್ದಾರೆ ಹಾಗೂ ಅವರ ಟ್ರಸ್ಟ್ ಮೂಲಕ ₹2 ಕೋಟಿ ನೀಡಲಾಗಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಆರೋಪ-ಪಟ್ಟಿಯಲ್ಲಿ ಉಲ್ಲೇಖಿಸಿದೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಯಲ್ಲಿ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರು ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಇ.ಡಿ ದೆಹಲಿ ನ್ಯಾಯಾಲಯಕ್ಕೆ ತಿಳಿಸಿದೆ. ಆರೋಪಪಟ್ಟಿಯಲ್ಲಿ ಶಿವಕುಮಾರ್ ಹೆಸರನ್ನೂ ಕೇಂದ್ರೀಯ ತನಿಖಾ ತಂಡ ಸೇರಿಸಿದೆ. ಆದರೆ, ಅವರನ್ನು ಆರೋಪಿಯಾಗಿ ಹೆಸರಿಸಲಾಗಿದೆಯೇ ಎಂಬುದು ಇನ್ನೂ ಖಚಿತಗೊಂಡಿಲ್ಲ. ಶಿವಕುಮಾರ್ ಅವರು ಯಂಗ್ ಇಂಡಿಯನ್ ಮತ್ತು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ಗೆ ಈ ಮೊತ್ತ ಪಾವತಿಸಿದ್ದಾರೆ.

ದೇಣಿಗೆ ನೀಡಿರುವುದಾಗಿ ಶಿವಕುಮಾರ್ ಅವರು ಇ.ಡಿ.ಗೆ ನೀಡಿರುವ ಹೇಳಿಕೆಯಲ್ಲಿ ಒಪ್ಪಿಕೊಂಡಿದ್ದಾರೆ. ಆದರೆ, ಯಂಗ್ ಇಂಡಿಯನ್ ಕಾರ್ಯಾಚರಣೆಯ ಬಗ್ಗೆ ಅವರಿಗೆ ಹೆಚ್ಚಿನ ಮಾಹಿತಿ ಇಲ್ಲ. ‘ಎಐಸಿಸಿ ಖಜಾಂಚಿ ಪವನ್ ಬನ್ಸಾಲ್ ಸೂಚನೆಯ ಮೇರೆಗೆ ದೇಣಿಗೆ ಪಾವತಿಸಿದ್ದೇನೆ’ ಎಂದೂ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಯಾವುದೇ ಸಂಸ್ಥೆಗೆ ದೇಣಿಗೆ ನೀಡುವುದು ತಪ್ಪೇ? ಹಾಗೆ ಮಾಡುವುದು ತಪ್ಪೇನಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯವು ಕಳೆದ ತಿಂಗಳು ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು 2014ರ ಜೂನ್ 26ರಂದು ದಾಖಲಿಸಿದ ಖಾಸಗಿ ದೂರನ್ನು ಪಟಿಯಾಲಾ ಹೌಸ್ ನ್ಯಾಯಾಲಯದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಪರಿಗಣನೆಗೆ ತೆಗೆದುಕೊಂಡ ನಂತರ, ಇ.ಡಿ ತನಿಖೆಯು 2021ರಲ್ಲಿ ಶುರುವಾಗಿತ್ತು. ಸೋನಿಯಾ, ರಾಹುಲ್, ಸ್ಯಾಮ್ ಪಿತ್ರೊಡಾ, ಕಾಂಗ್ರೆಸ್ ಮುಖಂಡರಾಗಿದ್ದ ಮೋತಿಲಾಲ್ ವೋರಾ ಮತ್ತು ಆಸ್ಕರ್ ಫರ್ನಾಂಡಿಸ್, ಖಾಸಗಿ ಕಂಪನಿಯಾದ ಯಂಗ್ ಇಂಡಿಯಾ ಮತ್ತು ಕೆಲವು ಪ್ರಮುಖ ರಾಜಕೀಯ ವ್ಯಕ್ತಿಗಳು ಕ್ರಿಮಿನಲ್ ಪಿತೂರಿ ನಡೆಸಿದ್ದಾರೆ ಎಂದು ದೂರಿನಲ್ಲಿ ಎತ್ತಿತೋರಿಸಲಾಗಿತ್ತು.

6ನೇ ಪುಟ ನೋಡಿ

ಕದ್ದುಮುಚ್ಚಿ ಹಣ ನೀಡಿಲ್ಲ: ಶಿವಕುಮಾರ್

ವಿಜಯಪುರ: ‘ನ್ಯಾಷನಲ್ ಹೆರಾಲ್ಡ್ ನಮ್ಮ ಪಕ್ಷ ನಡೆಸುವಂತಹ ಪತ್ರಿಕೆ. ಅದಕ್ಕೆ ನಾನು ಹಾಗೂ ಸುರೇಶ್ ತಲಾ ₹25 ಲಕ್ಷ ದುಡ್ಡು ಕೊಟ್ಟಿದ್ದೇವೆ. ನಮ್ಮ ಟ್ರಸ್ಟ್‌ನಿಂದಲೂ ದೇಣಿಗೆ ನೀಡಿದ್ದೇವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೊಲ್ಹಾರದಲ್ಲಿ ಶುಕ್ರವಾರ ಸುದ್ದಿಗಾರರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಶಿವಕುಮಾರ್, ‘ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸಹೋದರ ಡಿ.ಕೆ. ಸುರೇಶ, ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಮತ್ತು ತಮ್ಮ ಹೆಸರು ಕೇಳಿ ಬಂದಿರುವುದಕ್ಕೆ ಸುದ್ದಿಗಾರರಿಗೆ ಉತ್ತರಿಸಿದ ಅವರು, ‘ನಾವು ದುಡಿದ ಆಸ್ತಿಯಿಂದ ರಾಜಾರೋಷವಾಗಿ ಹಣ ನೀಡಿದ್ದೇವೆ. ನಾವು ಕದ್ದುಮುಚ್ಚಿ ನೀಡಿಲ್ಲ’ ಎಂದು ಹೇಳಿದರು.

ರೇವಂತ ರೆಡ್ಡಿ ಹೆಸರೂ ಉಲ್ಲೇಖ?

ಹೈದರಾಬಾದ್: ಇ.ಡಿ ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರ ಹೆಸರಿದೆ ಎಂದು ವರದಿಯಾಗಿದೆ. ರೇವಂತ ರೆಡ್ಡಿ ಅವರು ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿದ್ದಾಗ ‘ಯಂಗ್ ಇಂಡಿಯನ್’ ಸಂಸ್ಥೆಗೆ ಹಣ ಕ್ರೋಡೀಕರಿಸಲು ಒತ್ತು ನೀಡಿದ್ದರು ಎಂದು ಉಲ್ಲೇಖಿಸಲಾಗಿದೆ ಎನ್ನಲಾಗಿದೆ. ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ ಅವರು, ‘ರೇವಂತ ರೆಡ್ಡಿ ಅವರು ತೆಲಂಗಾಣವನ್ನು ಕಾಂಗ್ರೆಸ್ ಪಕ್ಷದ ಎ.ಟಿ.ಎಂ ಆಗಿ ಪರಿವರ್ತಿಸಿದ್ದಾರೆ’ ಎಂದು ಟೀಕಿಸಿದ್ದಾರೆ.



ರೇವಂತ ರೆಡ್ಡಿ

ಅತ್ಯಾಚಾರ ಆರೋಪಿಗಳಿಂದ ವಿಜಯೋತ್ಸವ; ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಹಾನಗಲ್ ಬಳಿ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಜಾಮೀನು ಪಡೆದು ಜೈಲಿನಿಂದ ಹೊರಬಂದ ಆರೋಪಿಗಳು ವಿಜಯೋತ್ಸವ ಮಾಡಿದ್ದು, ಜಾಮೀನು ನಿಯಮ ಉಲ್ಲಂಘಿಸಿದ ಆರೋಪದಡಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

‘ಹಾನಗಲ್ ತಾಲ್ಲೂಕಿನ ಅಕ್ಕಿಆಲೂರ ಕಮಾಟಗೇರ ಓಣಿಯ ಸಮೀವುಲ್ಲಾ ಅಬ್ದುಲ್‌ವಾಹೀದ್ ಲಾಲಾನವರ (28), ಇಮಾಮನಗರದ ಮಹ್ಮದ ಸಾದಿಕ್ ಬಾಬುಸಾಬ ಅಗಸಿಮನಿ (30), ಹಳ್ಳೂರ ಓಣಿಯ ಶೋಹಿಬ್ ನಿಯಾಜ್ ಅಹ್ಮದ್ ಮುಲ್ಲಾ ಉರುಫ್ ಶೋಯಬ್ (20) ಮತ್ತು ಇಸ್ಲಾಂಪುರ ಓಣಿಯ ರಿಯಾಜ್ ಅಬ್ದುಲ್‌ರಫೀಕ್ ಸಾವಿಕೇರಿ (32) ಬಂಧಿತರು. ವಿಜಯೋತ್ಸವ-ದಲ್ಲಿದ್ದ ಪ್ರಮುಖ ಆರೋಪಿಗಳಲ್ಲಿ ಮೂವರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ತನಿಖೆ ಮುಂದುವರಿದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ತಿಳಿಸಿದರು.

2024ರ ಜನವರಿಯಲ್ಲಿ ಹಾನಗಲ್ ಠಾಣೆ ವ್ಯಾಪ್ತಿಯಲ್ಲಿ ಸಾಮೂಹಿಕ ಅತ್ಯಾಚಾರ ಪ್ರಕರಣ ದಾಖಲಾಗಿತ್ತು. ಕೃತ್ಯದಲ್ಲಿ ಭಾಗಿಯಾಗಿದ್ದ 19 ಆರೋಪಿಗಳನ್ನು ಬಂಧಿಸಲಾಗಿತ್ತು. ನ್ಯಾಯಾಂಗ ಬಂಧನದಲ್ಲಿದ್ದ 12 ಜನರಿಗೆ ಈ ಹಿಂದೆಯೇ ಜಾಮೀನು ಮಂಜೂರಾಗಿತ್ತು. ಬಾಕಿ ಉಳಿದ 7 ಜನರಿಗೆ ಮೇ 20ರಂದು ಜಾಮೀನು ಮಂಜೂರಾಗಿತ್ತು’

‘ಜಾಮೀನು ಮೇಲೆ ಜೈಲಿನಿಂದ ಹೊರಬಂದ 7 ಆರೋಪಿಗಳು, ಹಾವೇರಿಯಿಂದ ಅಕ್ಕಿಆಲೂರುವರೆಗೂ ಕಾರು–ಬೈಕ್‌ಗಳಲ್ಲಿ ವಿಜಯೋತ್ಸವ ಮಾಡಿದ್ದಾರೆ. ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊಗಳು ಹರಿದಾಡಿದ್ದವು. ವಿಡಿಯೊಗಳು ಗಮನಕ್ಕೆ ಬರುತ್ತಿದ್ದಂತೆ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದರು.

‘7 ಆರೋಪಿಗಳ ಹೆಸರು, ರೌಡಿ ಪಟ್ಟಿಯಲ್ಲಿದೆ. ಅವರ ಜಾಮೀನು ರದ್ದುಪಡಿಸಲು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗುವುದು’ ಎಂದು ಹೇಳಿದರು.

ಆರೋಪಿಗಳನ್ನು ಗುರುತಿಸದ ಸಂತ್ರಸ್ತೆ: ‘ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂತ್ರಸ್ತೆ, ಆರೋಪಿಗಳ ಮುಖಚಹರೆ ಗುರುತಿಸಿಲ್ಲ. ಇದೇ ಕಾರಣಕ್ಕೆ ಆರೋಪಿಗಳಿಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ’ ಎಂದು ಪೊಲೀಸರು ತಿಳಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

‘ದಲಿತ ನಾಯಕ ಪರಮೇಶ್ವರ ಅವರನ್ನು ರಾಜಕೀಯವಾಗಿ ಮುಗಿಸಲು ಯತ್ನ’

ಮಹಾನಾಯಕನ ಕುತಂತ್ರ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ದಲಿತ ನಾಯಕರನ್ನು ಮುಗಿಸಲು ಕುತಂತ್ರ ಮಾಡುತ್ತಿರುವ ಮಹಾನಾಯಕನೇ ಗೃಹ ಸಚಿವ ಜಿ. ಪರಮೇಶ್ವರ ಅವರನ್ನು ರಾಜಕೀಯವಾಗಿ ಮುಗಿಸಲು ಹೊರಟಿದ್ದಾನೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಚಿವ ಪರಮೇಶ್ವರ ಅವರು ಇಂಥ ಸಂಕಷ್ಟಕ್ಕೆ ಒಳಗಾಗಲು ಕಾಂಗ್ರೆಸ್ ಪಕ್ಷದ ಆ ಪ್ರಭಾವಿ ನಾಯಕನೇ ಕಾರಣ’ ಎಂದರು.

‘ಸುಳ್ಳಿಗೆ ಮತ್ತೊಂದು ಹೆಸರು ಎಚ್‌ಡಿಕೆ’

ವಿಜಯಪುರ: ‘ಸುಳ್ಳಿಗೆ ಮತ್ತೊಂದು ಹೆಸರು ಕುಮಾರಸ್ವಾಮಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ‘ಚಿನ್ನ ಕಳ್ಳಸಾಗಣೆಯ ರನ್ಯಾ ರಾವ್ ಪ್ರಕರಣದ ಮಾಹಿತಿ ನೀವೇ ನೀಡಿದ್ದೀರಿ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ’ ಎಂದು ಸುದ್ದಿಗಾರರು ಹೇಳಿದಾಗ , ‘ಕುಮಾರಸ್ವಾಮಿಗೆ ತಲೆ ಕೆಟ್ಟಿದೆ. ಅವರ ಮಾನಸಿಕ ಆರೋಗ್ಯ ಹದಗೆಟ್ಟಿರಬೇಕು’ ಎಂದು ಶಿವಕುಮಾರ್ ಪ್ರತಿಕ್ರಿಯಿಸಿದರು.

‘ಸಿ.ಡಿ ಹಾಗೂ ಪೆನ್ ಡ್ರೈವ್ ಫ್ಯಾಕ್ಟರಿ ಇಟ್ಟುಕೊಂಡಿರುವ ಪ್ರಭಾವಿ ನಾಯಕನ ಬಗ್ಗೆ ಸಚಿವ ಕೆ.ಎನ್. ರಾಜಣ್ಣ ಅವರು ವಿಧಾನಸಭೆಯಲ್ಲೇ ಹೇಳಿದ್ದರು. ಪರಮೇಶ್ವರ ಅವರು ದಲಿತ ನಾಯಕರ ಸಭೆ ಮಾಡಲು ಹೊರಟಿದ್ದು, ದೆಹಲಿ ನಾಯಕರನ್ನು ಭೇಟಿ ಮಾಡಿದ್ದೇ ಅವರ ವಿರುದ್ಧ ಕುತಂತ್ರ ನಡೆಯಲು ಕಾರಣ. ದುಬೈನಿಂದ ಸಿಕ್ಕಿ-ಬಿದ್ದಿರುವ ಆ ಮಹಿಳೆ ಚಿನ್ನ ತರುತ್ತಿದ್ದಾಳೆ ಎನ್ನುವ ಮಾಹಿತಿಯನ್ನು ಸೋರಿಕೆ ಮಾಡಿದ್ದೇ ಈ ಪ್ರಭಾವಿ ನಾಯಕ’ ಎಂದು ದೂರಿದರು.

‘ಪರಮೇಶ್ವರ ಅವರು ದಲಿತರ ಸಮಾವೇಶ ಮಾಡಲು ಹೊರಟರು. ತಾವು ಕೂಡ ಮುಖ್ಯಮಂತ್ರಿ ಪದವಿಯ ಆಕಾಂಕ್ಷಿ ಎಂದು ಹೇಳಿದರು. ತನ್ನ ದಾರಿಗೆ ಅಡ್ಡ ಬರುತ್ತಾರೆ ಎಂಬ ಕಾರಣಕ್ಕೆ ಪರಮೇಶ್ವರ ಅವರನ್ನು ಪ್ರಭಾವಿ ನಾಯಕ ಈ ಪ್ರಕರಣದಲ್ಲಿ ಸಿಲುಕಿಸುವ ಕುತಂತ್ರ ಹೂಡಿದರು. ಇಷ್ಟೆಲ್ಲಾ ಗಂಭೀರ ವಿಚಾರಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೊತ್ತಿಲ್ಲವೆಂದರೆ ಹೇಗೆ’ ಎಂದು ಪ್ರಶ್ನಿಸಿದರು.

ಮೀಸಲು ಸಮೀಕ್ಷೆ: 29ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳ ದತ್ತಾಂಶ ಸಂಗ್ರಹಕ್ಕೆ ನಡೆದಿರುವ ಸಮೀಕ್ಷೆಯ ಅವಧಿಯನ್ನು ಇದೇ 29ರವರೆಗೆ ವಿಸ್ತರಿಸಲಾಗಿದೆ.

ಮನೆ– ಮನೆ ಭೇಟಿ ನೀಡಿ ಸಮೀಕ್ಷೆ ನಡೆಸುವ ದಿನಾಂಕವನ್ನು ಇದೇ 29ರವರೆಗೆ, ವಿಶೇಷ ಶಿಬಿರ (ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ) 3 ದಿನ ಅಂದರೆ, ಮೇ 30, 31 ಮತ್ತು ಜೂನ್ 1ರವರೆಗೆ ಮರು ನಿಗದಿಪಡಿಸಲಾಗಿದೆ. ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಜೂನ್ 1ರವರೆಗೆ ಮುಂದುವರಿಯಲಿದೆ.

7ನೇ ಪುಟ ನೋಡಿ

ಪಾಕಿಸ್ತಾನಕ್ಕೆ ವಿಶ್ವಬ್ಯಾಂಕ್ ಸಾಲ: ಭಾರತದ ಆಕ್ಷೇಪ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಲಭಿಸುವ ಹಣಕಾಸಿನ ನೆರವನ್ನು ಪಾಕಿಸ್ತಾನವು ಶಸ್ತ್ರಾಸ್ತ್ರ ಮತ್ತು ಯುದ್ಧ ಸಾಮಗ್ರಿಗಳ ಖರೀದಿಗೆ ದುರ್ಬಳಕೆ ಮಾಡಿಕೊಳ್ಳಲಿದೆ. ಹಾಗಾಗಿ, ಮುಂದಿನ ತಿಂಗಳು ವಿಶ್ವಬ್ಯಾಂಕ್ ಆ ರಾಷ್ಟ್ರಕ್ಕೆ ನೀಡಲು ಉದ್ದೇಶಿಸುವ ಸಾಲದ ವಿರುದ್ಧ ಆಕ್ಷೇಪ ಮಂಡಿಸಲು ಭಾರತ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಸಕ್ತ ವರ್ಷದ ಜನವರಿಯಲ್ಲಿ ದೇಶದ ಪಾಲುದಾರಿಕೆ ಚೌಕಟ್ಟು ಕುರಿತಂತೆ ಮಾಡಿಕೊಂಡಿರುವ ಒಪ್ಪಂದದ ಅನ್ವಯ ಪಾಕಿಸ್ತಾನಕ್ಕೆ 2 ಸಾವಿರ ಕೋಟಿ ಡಾಲರ್ (₹1.70 ಲಕ್ಷ ಕೋಟಿ) ಸಾಲ ನೀಡಲು ವಿಶ್ವಬ್ಯಾಂಕ್ ತೀರ್ಮಾನಿಸಿದೆ. ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಆ ರಾಷ್ಟ್ರವು 2026ರಿಂದ 10 ವರ್ಷಗಳವರೆಗೆ ಈ ಹಣವನ್ನು ಹವಾಮಾನ ಮತ್ತು ನವೀಕರಿಸಬಹು-ದಾದ ಇಂಧನ ಅಭಿವೃದ್ಧಿ ಚಟುವಟಿಕೆಗಳಿಗೆ ಬಳಸಿಕೊಳ್ಳಲು ನಿರ್ಧರಿಸಿದೆ.

ಪಾಕಿಸ್ತಾನವು ಷರತ್ತುಗಳನ್ನು ಪೂರೈಸಿದೆ. ಹಾಗಾಗಿ, ಇದೇ ತಿಂಗಳು ಮೊದಲ ಕಂತಿನ 100 ಕೋಟಿ ಡಾಲರ್ (₹8,500 ಕೋಟಿ) ಸಾಲ ನೀಡಲಾಗುವುದು

ಜೂಲಿ ಕೊಜಾಕ್, ಐಎಂಎಫ್‌ನ ಸಂವಹನ ವಿಭಾಗದ ನಿರ್ದೇಶಕಿ

10ನೇ ಪುಟ ನೋಡಿ

ನಾಳೆ ಬೆಳಿಗ್ಗೆ 6ರಿಂದ ಮೆಟ್ರೊ ರೈಲುಗಳ ಸಂಚಾರ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಲು ಮೇ 25ರಂದು ಬೆಳಿಗ್ಗೆ 6ಕ್ಕೆ 'ನಮ್ಮ ಮೆಟ್ರೊ' ರೈಲು ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಸಂಚಾರ ಆರಂಭವಾಗುತ್ತಿತ್ತು. ಪರೀಕ್ಷೆ ಇರುವುದರಿಂದ ಈ ಭಾನುವಾರ ಮೆಟ್ರೊ ನಾಲ್ಕು ಟರ್ಮಿನಲ್‌ಗಳಾದ ವೈಟ್‌ಫೀಲ್ಡ್ (ಕಾಡುಗೋಡಿ), ಚಲ್ಲಘಟ್ಟ, ಮಾದಾವರ ಮತ್ತು ರೇಷ್ಮೆ ಸಂಸ್ಥೆಯಿಂದ ಬೆಳಿಗ್ಗೆ 6ಕ್ಕೆ ಮೊದಲ ರೈಲು ಹೊರಡಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಜಯನಗರ ವಿಭಾಗ, ಬಿಬಿಎಂಪಿ, 39ನೇ ಕ್ರಾಸ್, 18ನೇ ಮೇನ್, ಜಯನಗರ–4ನೇ"ಟಿ" ಬ್ಲಾಕ್, ಬೆಂಗಳೂರು–560041

ನಂ.: ಕಾಅ/(ಜೆಎನ್)/ಡಿಎಂ/ಇ–ಪ್ರೊಕ್ಯೂರ್/04/2025–26 ದಿನಾಂಕ : 23.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ದ್ವಿ ಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಪಾರ್ಕಿಂಗ್ ಶುಲ್ಕ ಸಂಗ್ರಹದಲ್ಲಿ ಅನುಭವ ಹೊಂದಿರುವ ಹೆಸರಾಂತ ಮತ್ತು ಅನುಭವಿ ಗುತ್ತಿಗೆ ಏಜೆನ್ಸಿಗಳಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಂ.	ಕಾಮಗಾರಿಯ ಹೆಸರು
1.	ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹ (ಕರೆ–5). ಇಎಂಡಿ ಮೊತ್ತ : ರೂ.1,70,349/– ಟೆಂಡರ್ ನಮೂನೆಯ ವೆಚ್ಚ : (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಮರುಪಾವತಿಸಲಾಗುವುದಿಲ್ಲ: ಕೆಪಿಪಿಪಿ ಪೋರ್ಟಲ್ ಪ್ರಕಾರ.

ಟೆಂಡರ್‌ನ ಕಾರ್ಯಸೂಚಿ: (1) ಇ–ಪೋರ್ಟಲ್ **https://kppp.karnataka.gov.in** ನಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **04.06.2025 ರಂದು ಸಂಜೆ 16:00 ರವರೆಗೆ. (2)** ತಾಂತ್ರಿಕ ಬಿಡ್ಡಿಂಗ್: ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ **05.06.2025 ರಂದು ಸಂಜೆ 16.05 ಕ್ಕೆ. (3)** ಇ–ಪೋರ್ಟಲ್‌ನಲ್ಲಿ ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **06.06.2025 ರಂದು ಸಂಜೆ 16.05 ಕ್ಕೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಯ ನಂತರ. (4) ಟೆಂಡರ್ ಪೂರ್ವ ಸಭೆ ನಡೆಯುವ **ದಿನಾಂಕ: 30.05.2025 ರಂದು ಮಧ್ಯಾಹ್ನ 3.00 ಗಂಟೆಗೆ. (5)** ಬಿಡ್‌ದಾರರು ಯಾವುದೇ ಪ್ರಶ್ನೆಗಳನ್ನು ಅಂಚೆ ಮೂಲಕ ಅಥವಾ ವೈಯಕ್ತಿಕವಾಗಿ **ದಿನಾಂಕ:30.05.2025** ರ ಮೊದಲು ಜಯನಗರ ವಿಭಾಗದ ಕಾರ್ಯಪಾಲಕ ಅಭಿಯಂತರರ ಕಚೇರಿಗೆ ಸಲ್ಲಿಸಬೇಕು.

ಸಹಿ/– ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ

ತಾಂತ್ರಿಕ ದೋಷ: ನೇರಳೆ ಮಾರ್ಗದ ಮೆಟ್ರೊ ವ್ಯತ್ಯಯ

ಬೆಂಗಳೂರು: ನೇರಳೆ ಮಾರ್ಗದ ವೈಟ್‌ಫೀಲ್ಡ್ (ಕಾಡುಗೋಡಿ) ಮೆಟ್ರೊ ನಿಲ್ದಾಣದಲ್ಲಿ ತಾಂತ್ರಿಕ ದೋಷ ಕಂಡು ಬಂದಿದ್ದರಿಂದ ಶುಕ್ರವಾರ ಬೆಳಿಗ್ಗೆ ಸುಮಾರು 5 ತಾಸು ಮೆಟ್ರೊ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ವಿದ್ಯುತ್ ಪೂರೈಕೆಯಲ್ಲಿ ಸಮಸ್ಯೆ ಕಂಡು ಬಂದಿದ್ದರಿಂದ ಬೆಳಿಗ್ಗೆ 5 ಗಂಟೆಯಿಂದ 9.55ರವರೆಗೆ ಸಂಚಾರ ಸ್ಥಗಿತಗೊಂಡಿತು. ಹೋಪ್ ಫಾರ್ಮ್ ಚನ್ನಸಂದ್ರ ನಿಲ್ದಾಣ ಮತ್ತು ಚಲ್ಲಘಟ್ಟ ನಿಲ್ದಾಣಗಳ ನಡುವೆ ಮಾತ್ರ ರೈಲುಗಳು ಸಂಚರಿಸಿದವು. ಮೆಟ್ರೊ ತಾಂತ್ರಿಕ ಸಿಬ್ಬಂದಿ ಸಮಸ್ಯೆ ಸರಿಪಡಿಸಿದ ಬಳಿಕ ರೈಲು ಸಂಚಾರ ಆರಂಭಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು. ವೈಟ್‌ಫೀಲ್ಡ್‌ನಿಂದ ಬೇರೆಡೆಗೆ ಹೋಗುವವರು ಬೆಳಿಗ್ಗೆ ಪರದಾಡುವಂತಾಯಿತು. ಅನೇಕರು ಬಸ್‌ಗಳಲ್ಲಿ ಪ್ರಯಾಣಿಸಿದರು. ಹಸಿರು ಮಾರ್ಗದಲ್ಲಿ ರೈಲು ಸಂಚಾರ ಎಂದಿನಂತಿತ್ತು.

ಅಂಬೇಡ್ಕರ್ ಜಯಂತಿ, ಸಂವಿಧಾನ ದಿನಾಚರಣೆಯಲ್ಲಿ ಸಚಿವ ಕೆ.ಎಚ್. ಮುನಿಯಪ್ಪ

ಅಸ್ಪೃಶ್ಯತೆ ಇರುವವರೆಗೆ ಮೀಸಲಾತಿ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದಲ್ಲಿ ಅಸ್ಪೃಶ್ಯತೆ ಇರುವವರೆಗೆ ಮೀಸಲಾತಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮುಂದುವರಿಸಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಬುಧವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಹಾಗೂ ಸಂವಿಧಾನ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಶೋಷಿತ ಸಮುದಾಯಗಳು ಬೇಡುವ ಸ್ಥಿತಿಯಿಂದ ನೀಡುವ ಸ್ಥಿತಿಗೆ ಬರಬೇಕು ಎಂದು ಅಂಬೇಡ್ಕರ್ ಅವರು ಮೀಸಲಾತಿಯನ್ನು ಜಾರಿಗೆ ತಂದರು. ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು ಎಲ್ಲರೂ ವಿದ್ಯಾವಂತರಾಗಬೇಕು. ನಮಗಿಂತ ಸಂಕಷ್ಟದಲ್ಲಿರುವ, ಬಡತನದಲ್ಲಿರುವ ಜನರನ್ನು ಕೈಹಿಡಿದು ಮೇಲೆತ್ತಬೇಕು' ಎಂದು ಹೇಳಿದರು.

ಡಾ.ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಸಚಿವ ಕೆ.ಎಚ್ ಮುನಿಯಪ್ಪ ಪುಷ್ಪಾರ್ಚನೆ ಮಾಡಿದರು. ಬೌದ್ಧ ಬಿಕ್ಕು ಸುಜಾತೋ, ಗೊಲ್ಲಹಳ್ಳಿ ಶಿವಪ್ರಸಾದ್, ಎಲ್ ಎನ್ ಮುಕುಂದ್‌ರಾಜ್ ಹಾಗೂ ಜಿ .ಕೃಷ್ಣಯ್ಯ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಸಂವಿಧಾನದ ಕರಡು ರಚಿಸುವ ಸಮಯದಲ್ಲಿ ಅಂಬೇಡ್ಕರ್ ಸಂಕಷ್ಟದಲ್ಲಿದ್ದರು. ಆರೋಗ್ಯ ಕೈಕೊಟ್ಟಿತ್ತು. ಉಳಿದವರು ಅಸಹಕಾರ ತೋರುತ್ತಿದ್ದರು. ಆದರೂ, ಸಮಾನತೆ ಸಾರುವ ಸಂವಿಧಾನ ರಚಿಸದೇ ಹೋದರೆ ಶೋಷಿತರಿಗೆ, ಹಿಂದುಳಿದವರಿಗೆ, ಮಹಿಳೆಯರಿಗೆ ನ್ಯಾಯ ನೀಡಲು ಸಾಧ್ಯ ಇಲ್ಲ ಎಂಬ ಕಾರಣಕ್ಕೆ ಪಟ್ಟು ಹಿಡಿದು ಸಂವಿಧಾನ ರಚಿಸಿದರು ಎಂದರು.

ಮಹಾಬೋಧಿ ಸೊಸೈಟಿಯ ಬಿಕ್ಕುಗಳಾದ ಸುಜಾತೋ ಮತ್ತು ರಕ್ಷಿತ ಅವರು ತ್ರಿಚರಣ ಮತ್ತು ಪಂಚಶೀಲ ದಮ್ಮಪದ ಸಂದೇಶ ನೀಡಿದರು. ರಾಜ್ಯ ಹಣಕಾಸು ಸಂಸ್ಥೆಯ ಬಿ. ಕೃಷ್ಣಯ್ಯ ಸಂವಿಧಾನ ಪೀಠಿಕೆ ಪಠಣ ಮಾಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಇದ್ದರು.

ಜಾಗೃತಿ ಮೂಡಿಸಲು ಒತ್ತಾಯ

ಬೆಂಗಳೂರು: 'ಅಸ್ಪೃಶ್ಯತೆ ಆಚರಣೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯೇ ಆಗುತ್ತಿಲ್ಲ. ಪರಿಣಾಮವಾಗಿ ಇಂತಹ ದೌರ್ಜನ್ಯಗಳು ನಡೆಯುತ್ತಲೇ ಇವೆ. ಈ ಸಂಬಂಧ ಸರ್ಕಾರವೇ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು' ಎಂದು ಕರ್ನಾಟಕ ದಲಿತ ಹಕ್ಕುಗಳ ಸಮಿತಿ ರಾಜ್ಯ ಉಪಾಧ್ಯಕ್ಷ ಬಿ.ರಾಜಶೇಖರಮೂರ್ತಿ ಒತ್ತಾಯಿಸಿದ್ದಾರೆ.

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿದ್ದವು. ಈ ಕಾರಣದಿಂದ ಬಹುತೇಕ ದಲಿತರು 2023ರ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಿದರು. ಆದರೆ ಕಾಂಗ್ರೆಸ್ ಸರ್ಕಾರದಿಂದಲೂ ದಲಿತರಿಗೆ ರಕ್ಷಣೆ ಇಲ್ಲದಾಗಿದೆ' ಎಂದು ದೂರಿದ್ದಾರೆ.

'ತುಮಕೂರಿನ ಮಧುಗಿರಿಯ ಕಂದಗಾಲು ಗ್ರಾಮದಲ್ಲಿ ಈಚೆಗೆ ದಲಿತರಿಗೆ ದೇವಾಲಯ ಪ್ರವೇಶ ನಿರಾಕರಿಸಲಾಗಿದೆ. ರಾಮನಗರದ ಹಾರೋಹಳ್ಳಿಯ ಬನವಾಸಿ ಗ್ರಾಮದ ಜಾತ್ರೆಗೆ ಬರಬೇಡಿ ಎಂದು ದಲಿತರಿಗೆ ನಿರ್ಬಂಧ ಹೇರಲಾಗಿದೆ. ಮಂಡ್ಯದ ಕೆ.ಆರ್.ಪೇಟೆಯ ಕತ್ತರಘಟ್ಟ ಗ್ರಾಮದ ಜಯಕುಮಾರ್ ಅವರ ಮನೆಗೆ ಬೆಂಕಿ ಹಾಕಲಾಗಿದೆ ಎಂಬ ಆರೋಪಗಳಿವೆ' ಎಂದು ವಿವರಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಷಣಗಳಲ್ಲಿ ಮಾತ್ರ ದಲಿತರ ರಕ್ಷಣೆ ಮಾಡುತ್ತೇವೆ ಎನ್ನುತ್ತಾರೆ. ಆದರೆ, ಈ ಸರ್ಕಾರದ ಅವಧಿಯಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯಾಗಿದ್ದು ಶೇ 3ರಷ್ಟರಲ್ಲಿ ಮಾತ್ರ. ಉಳಿದ ಪ್ರಕರಣಗಳನ್ನು ಮುಚ್ಚಿಹಾಕಲಾಗುತ್ತಿದೆ' ಎಂದು ವಿವರಿಸಿದ್ದಾರೆ.

ಪಾದಚಾರಿ ಮಾರ್ಗ ದುರಸ್ತಿಗೆ ಸೂಚನೆ

ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳನ್ನು ದುರಸ್ತಿಗೊಳಿಸುವಂತೆ ಯಲಹಂಕ ವಲಯ ಆಯುಕ್ತ ಕರೀಗೌಡ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯಲಹಂಕ ವಲಯದ ಸಂದೀಪ್ ಉನ್ನಿ ಕೃಷ್ಣನ್ ರಸ್ತೆಯಲ್ಲಿ ಶುಕ್ರವಾರ ಪಾದಚಾರಿ ಮಾರ್ಗಗಳನ್ನು ಪರಿಶೀಲನೆ ನಡೆಸಿದ ಅವರು, ಪಾದಚಾರಿ ಮಾರ್ಗದಲ್ಲಿರುವ ಸಮಸ್ಯೆಗಳನ್ನು ಒಂದು ವಾರದೊಳಗಾಗಿ ದುರಸ್ತಿಗೊಳಿಸಿ, ಚಿತ್ರಗಳೊಂದಿಗೆ ವರದಿ ನೀಡಲು ಹೇಳಿದರು.

ಆಹಾ ಸ್ವಾದ...

ತೋಟಗಾರಿಕೆ ಇಲಾಖೆ, ಜೈವಿಕ್ ಕೃಷಿಕ ಸೊಸೈಟಿ ವತಿಯಿಂದ ಲಾಲ್‌ಬಾಗ್ ಉದ್ಯಾನದಲ್ಲಿ ಆಯೋಜಿಸಿರುವ ಸಾವಯವ ಮಾವು ಮತ್ತು ಹಲಸಿನ ಹಬ್ಬದಲ್ಲಿ ಶುಕ್ರವಾರ ಜನರು ಹಣ್ಣಿನ ಸ್ವಾದ ಪರಿಶೀಲಿಸಿದರು ಪ್ರಜಾವಾಣಿ ಚಿತ್ರ

ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ ಭಾರತ ಸರ್ಕಾರ — COIR BOARD

ಗುತ್ತಿಗೆ ಆಧಾರದಲ್ಲಿ ಪ್ರಾಜೆಕ್ಟ್/ಟೆಕ್ನಿಕಲ್ ಸಿಬ್ಬಂದಿ ನಿಯೋಜನೆ

ಭಾರತ ಸರ್ಕಾರದ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ ಅಡಿಯಲ್ಲಿನ ಒಂದು ಶಾಸನ ಬದ್ಧ ಅಂಗಸಂಸ್ಥೆಯಾಗಿರುವ ನಾರು ಮಂಡಳಿ ಇವರು, ಕೆಳಕಂಡ ತಮ್ಮ ಎರಡು ಸಂಶೋಧನಾ ಸಂಸ್ಥೆಗಳಲ್ಲಿ ಪ್ರಾಜೆಕ್ಟ್/ಟೆಕ್ನಿಕಲ್ ಸಿಬ್ಬಂದಿ (22 ಹುದ್ದೆಗಳು) ಹುದ್ದೆಗಳಿಗೆ, ಪರಿಶುದ್ಧ ಗುತ್ತಿಗೆ ಆಧಾರದ ಮೇರೆಗೆ ನಿಯೋಜನೆ ಮಾಡಿಕೊಳ್ಳಲೆಂದು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ: ಕೇಂದ್ರೀಯ ನಾರು ಸಂಶೋಧನಾ ಸಂಸ್ಥೆ, ಅಲಪ್ಪುಜ, ಕೇರಳ ಮತ್ತು ಕೇಂದ್ರೀಯ ನಾರು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು, ಕರ್ನಾಟಕ.

ಅಭ್ಯರ್ಥಿಗಳು ವಿವರವಾದ ಜಾಹೀರಾತು ಪರಿಶೀಲಿಸಲು ನಾರು ಮಂಡಳಿಯ ವೆಬ್‌ಸೈಟ್ ಭೇಟಿ ನೀಡಬಹುದು (www.coirboard.gov.in). ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ 20ನೇ ಜೂನ್, 2025 ರಂದು ಸಂಜೆ 5.30 ಗಂಟೆಯೊಳಗೆ ಸಲ್ಲಿಸುವುದು.

ವೆಬ್‌ಸೈಟ್‌ಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

09.05.2025 ಸಹಿ/– ಕಾರ್ಯದರ್ಶಿ, ನಾರು ಮಂಡಳಿ

CBC 25131/12/0005/2526

ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್

ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರ

ಭಾರತ ಸರ್ಕಾರದ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (ಮೇಇಟಿ) ಅಡಿಯಲ್ಲಿನ, ಸಿ–ಡಾಕ್ ಎಂಬ ಒಂದು ಪ್ರಿಮಿಯರ್ ಸೈಂಟಿಫಿಕ್ ಸೊಸೈಟಿಯು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ವಿವಿಧ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತದೆ.

ಇದೀಗ ಸಿ–ಡಾಕ್ ಸಂಸ್ಥೆಯು ತನ್ನ ಕೇಂದ್ರಗಳಾದ್ಯಂತ ವಿವಿಧ ವೃಂದದ ಎ ಎಸ್&ಟಿ ಹುದ್ದೆಗಳಿಗಾಗಿ ಡೆಪ್ಯೂಟೇಶನ್ ಆಧಾರದಲ್ಲಿ ಅರ್ಜಿ ಆಹ್ವಾನಿಸಿದೆ:

ಹುದ್ದೆ ಹೆಸರು	ಹುದ್ದೆಗಳ ಸಂಖ್ಯೆ	7ನೇ ಸಿಪಿಸಿ ಪ್ರಕಾರ ವೇತನ ಶ್ರೇಣಿ
ಸೈಂಟಿಸ್ಟ್ ಡಿ	47	ಹಂತ 12
ಸೈಂಟಿಸ್ಟ್ ಇ	11	ಹಂತ 13
ಸೈಂಟಿಸ್ಟ್ ಎಫ್	5	ಹಂತ 13ಎ

ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಹತಾ ಷರತ್ತುಗಳಿಗಾಗಿ ದಯವಿಟ್ಟು ನಮ್ಮ https://www.cdac.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ – ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳು.

ಜಾಹೀರಾತು ಸಂ. ಸಿಒಆರ್‌ಪಿ/ಜಿಆರ್.ಎ/02/2025 **ನಿರ್ದೇಶಕರು (ಎಚ್‌ಆರ್‌ಡಿ), ಸಿ–ಡಾಕ್**

ದೇಶದ ಅಭಿವೃದ್ಧಿಗಾಗಿ ಅತ್ಯಾಧುನಿಕ ತಂತ್ರಜ್ಞಾನ

CBC 06132/12/0003/2526

ಜಾಹೀರಾತು ಸಂ. 8032/ಡಿವೈಎಸ್‌ಎಲ್–ಎಐ/ಜೆಆರ್‌ಎಫ್/ಎಚ್‌ಆರ್/2025–26/01

ಡಿಆರ್‌ಡಿಒ ಯಂಗ್ ಸೈಂಟಿಸ್ಟ್ ಲ್ಯಾಬೋರೇಟರಿ ಇವರು, ತಮ್ಮಲ್ಲಿನ ವಿವಿಧ ಸಂಶೋಧನಾ ಫಲಿತಾಂಶಗಳನ್ನು ಮತ್ತು ಆವಿಷ್ಕಾರ ಚಾಲನೆಯ ಸುಧಾರಣೆಗೆ ನೆರವಾಗಲೆಂದು, ಎಐ ಸಂಬಂಧಿತ ಸಂಶೋಧನೆಯಲ್ಲಿ ಜೂನಿಯರ್ ರಿಸರ್ಚ್ ಫೆಲೋ (ಜೆಆರ್‌ಎಫ್) ಎಂಬುದಾಗಿ ಮತ್ತು ಡೀಪ್ ಲರ್ನಿಂಗ್, ನ್ಯಾಚುರಲ್ ಲ್ಯಾಂಗ್ವೇಜ್ ಪ್ರಾಸೆಸಿಂಗ್ (ಎನ್‌ಎಲ್‌ಪಿ), ಕಂಪ್ಯೂಟರ್ ವಿಷನ್ ಹಾಗೂ ರಿಇನ್ಫೋರ್ಸ್‌ಮೆಂಟ್ ಲರ್ನಿಂಗ್ ಸಂಶೋಧನೆಯಲ್ಲಿ ತೊಡಗಿಕೊಳ್ಳಲು ಆಸಕ್ತಿಯುಳ್ಳ ಯುವ ಮತ್ತು ಪ್ರತಿಭಾವಂತ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಡಿವೈಎಸ್‌ಎಲ್–ಎಐ ಇವರಲ್ಲಿ, ನಮ್ಮ ಎಐ ತಂತ್ರಗಾರಿಕೆ ರೂಪ ನೀಡಲು ಮತ್ತು ಶೀಘ್ರ ಹಂತ ಪರಿಹಾರಗಳ ಮೂಲಕ ರಕ್ಷಣೆಗಾಗಿ ಎಐ ಸಂಭಾವ್ಯತೆಯನ್ನು ಪ್ರದರ್ಶಿಸಲು, ನಮ್ಮ ಒಂದು ಬಹುಶಿಸ್ತೀಯ ತಂಡಕ್ಕೆ ನೆರವಾಗಲು ನೀವು ಸೇರಿಕೊಳ್ಳುವಿರಿ. ಹೊರಹೊಮ್ಮುತ್ತಿರುವ ವಿದ್ಯಮಾನಗಳ ಪ್ರಯೋಜನ ಪಡೆಯಲು ಮತ್ತು ತಂತ್ರಜ್ಞಾನಗಳಲ್ಲಿ ಒಂದು ವಾಸ್ತವಿಕ ಭಿನ್ನತೆಯನ್ನು ರೂಪಿಸಲು ಇದೊಂದು ಉತ್ಕೃಷ್ಟ ಅವಕಾಶವಾಗಿದೆ.

ಅರ್ಹತಾ ಮಾನದಂಡ ಕೆಳಗಿನಂತಿರುತ್ತದೆ:

1. ಅಭ್ಯರ್ಥಿಗಳು ಕಡ್ಡಾಯವಾಗಿ ಎಐಸಿಟಿಇ ಮಾನ್ಯತೆಯುಳ್ಳ ಸಂಸ್ಥೆ/ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್/ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್/ಇನ್ಫಾರ್ಮೇಶನ್ ಟೆಕ್ನಾಲಜಿ/ಇಲೆಕ್ಟ್ರಿಕಲ್ ಇಂಜಿನಿಯರಿಂಗ್/ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಷಯದಲ್ಲಿ ಬಿ.ಇ/ಬಿ.ಟೆಕ್ ಪದವಿ ಉತ್ತೀರ್ಣರಾಗಿರಬೇಕು ಅಥವಾ ಕಂಪ್ಯೂಟರ್ ಸೈನ್ಸ್/ಇನ್ಫಾರ್ಮೇಶನ್ ಟೆಕ್ನಾಲಜಿ/ ಸ್ಟ್ಯಾಟಿಸ್ಟಿಕ್ಸ್/ ಮ್ಯಾಥೆಮ್ಯಾಟಿಕ್ಸ್/ ಇಲೆಕ್ಟ್ರಾನಿಕ್ಸ್ ಅಥವಾ ಅಪ್ಲೈಡ್ ಡಿಸಿಪ್ಲಿನ್‌ನಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು ಜೊತೆಗೆ ಸಿಎಸ್‌ಐಆರ್–ಯುಜಿಸಿ(ಎನ್‌ಇಟಿ)/ಗೇಟ್ ಅರ್ಹತೆ ಪಡೆದಿರಬೇಕು.

(ಅಥವಾ)

ಎಐಸಿಟಿಇ ಮಾನ್ಯತೆಯುಳ್ಳ ಸಂಸ್ಥೆ/ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್/ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್/ಸಿಗ್ನಲ್ ಪ್ರಾಸೆಸಿಂಗ್/ಇನ್ಫಾರ್ಮೇಶನ್ ಟೆಕ್ನಾಲಜಿ/ಇಲೆಕ್ಟ್ರಿಕಲ್ ಇಂಜಿನಿಯರಿಂಗ್/ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಷಯದೊಂದಿಗೆ ವೃತ್ತಿಪರ ಕೋರ್ಸ್‌ನಲ್ಲಿ (ಎಂ.ಇ/ಎಂ.ಟೆಕ್) 1ನೇ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಅಪೇಕ್ಷಿತ ಅರ್ಹತೆಗಳು:

- ಪ್ರಾಬ್ಲಮ್ ಸಾಲ್ವಿಂಗ್, ಅಲ್ಗೊರಿಥಮ್ ಡಿಸೈನ್ ಮತ್ತು ಕಾಂಪ್ಲೆಕ್ಸಿಟಿ ಅನಾಲೈಸಿಸ್‌ನಲ್ಲಿ ಸಾಕಷ್ಟು ಪ್ರಾಥಮಿಕ ಜ್ಞಾನ
- ಕನಿಷ್ಠ ಒಂದು ಪ್ರಮುಖ ಪ್ರೊಗ್ರಾಮಿಂಗ್‌ನಲ್ಲಿ (ಪೈಥಾನ್, ಜಾವಾ, ಸಿ++ ಅಥವಾ ತತ್ಸಮಾನ) ಪರಿಣಿತಿ
- ಎಐ ಅಲ್ಗಾರಿಥಮ್ಸ್, ಮಷೀನ್ ಲರ್ನಿಂಗ್ ಮತ್ತು ಡೀಪ್ ಲರ್ನಿಂಗ್ ಟೆಕ್ನಿಕ್‌ಗಳಲ್ಲಿ ಜ್ಞಾನವಿರುವುದು ಅಪೇಕ್ಷಿತ.
- ಪೈಟಾರ್ಚ್, ಟೆನ್ಸರ್‌ಫ್ಲೊ, ಕೆರಾಸ್, ಟೆನ್ಸರ್‌ಟಿ, ಪೈಟಾರ್ಚ್–ಮೊಬೈಲ್ ರೀತಿಯ ಸಾಫ್ಟ್‌ವೇರ್ ಲೈಬ್ರರಿಗಳಲ್ಲಿ ಅನುಭವ ಅಪೇಕ್ಷಿತ.

ಗರಿಷ್ಠ ವಯೋಮಿತಿ: ಸಂದರ್ಶನ ದಿನಾಂಕಕ್ಕೆ 28 ವರ್ಷ. ಸಂದರ್ಶನ ದಿನಾಂಕದ ಆಧಾರದ ಮೇರೆಗೆ ಪ್ರಾಯ ಮತ್ತು ಶೈಕ್ಷಣಿಕ ವಿದ್ಯಾರ್ಹತೆಗಳನ್ನು ಲೆಕ್ಕ ಹಾಕಲಾಗುತ್ತದೆ/ಇತ್ಯರ್ಥಪಡಿಸಲಾಗುತ್ತದೆ. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿ ಸಡಿಲಿಕೆ ಇರುತ್ತದೆ.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 5ನೇ ಜೂನ್ 2025

ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ನಮೂನೆಗಾಗಿ ದಯವಿಟ್ಟು ಡಿಆರ್‌ಡಿಒ ಸಂಸ್ಥೆಯ www.drdo.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/– (ರಾಹುಲ್ ರೈ) ಸೈ. 'ಸಿ'

CBC 10301/11/0020/2526 ಟೀಮ್ ಎಚ್‌ಆರ್, ನಿರ್ದೇಶಕರ ಪರವಾಗಿ

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 10/ಎಸ್‌ಬಿಸಿ/25 ದಿನಾಂಕ : 09–05–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಬೈಯಪ್ಪನಹಳ್ಳಿ – ಧರ್ಮವರಂ ಸೆಕ್ಷನ್ : ಚನ್ನಸಂದ್ರ – ಯಲಹಂಕ ನಿಲ್ದಾಣಗಳ ನಡುವೆ ಕಿ.ಮೀ.7/500–600 ನಲ್ಲಿ ಹಾಲಿ ಇರುವ ರಸ್ತೆ ಕೆಳಸೇತುವೆ ಸಂ. 535 ರನ್ನು (ಹಾಲಿ ಇರುವ 1x11.704ಮೀ ಸ್ಟೀಲ್ ಗರ್ಡರ್‌ನ್ನು ಸೂಕ್ತವಾಗಿ ಕಳಚಿಹಾಕುವುದರಿಂದ ಅಪ್ ಮಾರ್ಗಕ್ಕಾಗಿ) 2x9.00x5.0ಮೀ ಅಳತೆಯ ಆರ್‌ಸಿಸಿ ಟ್ವಿನ್ ಬಾಕ್ಸ್‌ಗಳಿಂದ ಉದ್ದೇಶಿತ ಮರುನಿರ್ಮಾಣ (ಬ್ಯಾರೆಲ್ ಉದ್ದ = 12.24ಮೀ ಅಂದಾಜು). ನಿರ್ವಹಣಾ ಅವಧಿಯು ಯಾವುದು ನಂತರವೋ ಅದರಂತೆ 6 ತಿಂಗಳು ಅಥವಾ ಒಂದು ಮಳೆಗಾಲದ ಅವಧಿ.	ರೂ. 3,54,79,386/–
2	**ಸಬ್‌ವರ್ಕ್–1 :** ಬೆಂಗಳೂರು – ಸಂಪಿಗೆ ರೋಡ್ ಸೆಕ್ಷನ್ : ಚಿಕ್ಕಬಾಣಾವರ, ಗೊಲ್ಲಹಳ್ಳಿ, ದೊಡ್ಡಬೆಲೆ, ಹಿರೇಹಳ್ಳಿ, ಕ್ಯಾತಸಂದ್ರ, ತುಮಕೂರು, ಹೆಗ್ಗೆರೆ, ಗುಬ್ಬಿ ನಿಲ್ದಾಣ ಕಾಲೋನಿಗಳಲ್ಲಿ ಸಿಬ್ಬಂದಿ ವಸತಿಗೃಹಗಳಿಗೆ ಸುಧಾರಣೆಗಳು. **ಸಬ್‌ವರ್ಕ್–2 :** ಯಶವಂತಪುರ – ಯಶವಂತಪುರ ಕಾಲೋನಿಯ ವಸತಿಗೃಹಗಳಿಗೆ ಸುಧಾರಣೆಗಳು. ನಿರ್ವಹಣಾ ಅವಧಿಯು 12 ತಿಂಗಳು.	ರೂ. 2,81,86,570/–
3	ಬೆಂಗಳೂರು – ಧರ್ಮವರಂ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಹಿಂದೂಪುರ ವ್ಯಾಪ್ತಿಯಲ್ಲಿನ ದೊಡ್ಡಬಳ್ಳಾಪುರ, ಮಾಕಳೀದುರ್ಗ, ತೊಂಡೇಭಾವಿ, ಗೌರಿಬಿದನೂರು, ಹಿಂದೂಪುರ, ಪೆನುಕೊಂಡ ಮತ್ತು ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ ಕಾಲೋನಿಗಳಲ್ಲಿ ಸಿಬ್ಬಂದಿ ವಸತಿಗೃಹಗಳಿಗೆ ಸುಧಾರಣೆಗಳು. ನಿರ್ವಹಣಾ ಅವಧಿಯು 12 ತಿಂಗಳು.	ರೂ. 1,14,80,779/–
4	ಯಲಹಂಕ – ಬಂಗಾರಪೇಟೆ ಸೆಕ್ಷನ್ : ಎಸ್‌ಎಸ್‌ಇ/ಪಿವೇ/ವೈಎನ್‌ಕೆ ಸೆಕ್ಷನ್‌ನಲ್ಲಿ ಕಿ.ಮೀ.46/000 – 85/340 (ಎಸ್‌ಎಲ್) ವರೆಗೆ 36.34 ಕಿ.ಮೀ.ಗಳ ಉದ್ದಕ್ಕಾಗಿ ಥ್ರೂ ಬಲ್ಲಾಸ್ಟ್ ರಿಕೂಪ್‌ಮೆಂಟ್ ಕಾಮಗಾರಿಗೆ ಸಂಬಂಧಿಸಿದಂತೆ ದೇವನಹಳ್ಳಿ ಡಿಪೋದಲ್ಲಿ ಲೀಡಿಂಗ್ ಮತ್ತು ಲೋಡಿಂಗ್ ಒಳಗೊಂಡಂತೆ ಬಲ್ಲಾಸ್ಟ್‌ನ ತಯಾರಿಕೆ, ಸರಬರಾಜು (ಪ್ರಮಾಣ : 54,510 ಸಿಯುಎಂ).	ರೂ. 5,07,75,520/–
5	ಹಿರಿಯ ಡಿಇಎನ್/ಉತ್ತರ/ಎಸ್‌ಬಿಸಿ ಮತ್ತು ಡಿಇಎನ್/ದಕ್ಷಿಣ/ಎಸ್‌ಬಿಸಿ ಸೆಕ್ಷನ್ : ಹಿರಿಯ ಡಿಇಎನ್/ಉತ್ತರ/ಎಸ್‌ಬಿಸಿ ಸೆಕ್ಷನ್ ಮತ್ತು ಡಿಇಎನ್/ದಕ್ಷಿಣ/ಎಸ್‌ಬಿಸಿ ಸೆಕ್ಷನ್‌ಗೆ ಸಂಬಂಧಿಸಿದಂತೆ ಇನ್–ಸಿಟು ವೆಲ್ಡಿಂಗ್ ಒಳಗೊಂಡಂತೆ 60ಕೆಜಿ ಮತ್ತು 52ಕೆಜಿ ಎಟಿ ವೆಲ್ಡಿಂಗ್ ಭಾಗಗಳ ತಯಾರಿಕೆ, ಸರಬರಾಜು ಮತ್ತು ಕಾರ್ಯಗತಗೊಳಿಸುವುದು.	ರೂ. 1,16,91,515/–
6	ಚಿಕ್ಕಬಾಣಾವರ – ಹಾಸನ ಸೆಕ್ಷನ್ : ಸೆಕ್ಷನಲ್ ವೇಗವನ್ನು ಗಂಟೆಗೆ 110 ಕಿ.ಮೀ. ಗಳಿಂದ 130 ಕಿ.ಮೀ.ಗಳಿಗೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಕಿ.ಮೀ.1/200–14/000 ಮತ್ತು 124/000–164/800 (ಎಸ್‌ಎಲ್) ವರೆಗೆ 53.6 ಕಿ.ಮೀ.ಗಳ ಉದ್ದಕ್ಕಾಗಿ ಸ್ಲೀಪರ್ ಡೆನ್ಸಿಟಿಯನ್ನು ಹೆಚ್ಚಿಸುವುದು (ಐಎಸ್‌ಡಿ).	ರೂ. 3,00,15,969/–
7	ಹಿರಿಯ ಡಿಇಎನ್/ಪೂರ್ವ/ಎಸ್‌ಬಿಸಿ ಸೆಕ್ಷನ್ : **ಸಬ್‌ವರ್ಕ್–1 :** ಬೆಂಗಳೂರು – ಜೋಲಾರಪೇಟೆ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಬೆಂಗಳೂರು ಸೆಕ್ಷನ್‌ನಲ್ಲಿನ ಕೆಎಸ್‌ಆರ್ ಬೆಂಗಳೂರು, ಮಾಲೂರು, ದೇವನಗೊಂದಿ, ವೈಟ್‌ಫೀಲ್ಡ್ ಮತ್ತು ಕೃಷ್ಣರಾಜಪುರಂ ಯಾರ್ಡ್‌ಗಳ ಲೂಪ್ ಲೈನ್‌ಗಳಲ್ಲಿ 9.522 ಕಿ.ಮೀ.ಗಳ ಉದ್ದಕ್ಕಾಗಿ ಹಾಲಿ ಇರುವ 52ಕೆಜಿ / 90ಯುಟಿಎಸ್ ರೈಲ್‌ಗಳನ್ನು 52ಕೆಜಿ 90 ಯುಟಿಎಸ್ ರೈಲ್‌ಗಳೊಂದಿಗೆ ಥ್ರೂ ರೈಲ್ ರಿನ್ಯೂವಲ್ (ಎಸ್). **ಸಬ್‌ವರ್ಕ್–2 :** ಬೆಂಗಳೂರು – ಜೋಲಾರಪೇಟೆ ಮತ್ತು ಯಲಹಂಕ – ಬಂಗಾರಪೇಟೆ ಸೆಕ್ಷನ್ : ಟಿಆರ್‌ಆರ್(ಎಸ್) – ಬಂಗಾರಪೇಟೆ, ವರದಾಪುರ, ಬಿಸಾನತ್ತಂ, ಮಾರಿಕುಪ್ಪಂ, ಟೇಕಲ್, ಚಿಂತಾಮಣಿ, ಶ್ರೀನಿವಾಸಪುರ, ತುರಾಂಡಹಳ್ಳಿ ಮತ್ತು ಕೋಲಾರ ಯಾರ್ಡ್‌ಗಳ ಲೂಪ್ ಲೈನ್‌ಗಳಲ್ಲಿ 14.592 ಕಿ.ಮೀ.	ರೂ. 1,38,13,183/–
8	ಹಿರಿಯ ಡಿಇಎನ್/ಪೂರ್ವ/ಎಸ್‌ಬಿಸಿ ಸೆಕ್ಷನ್ : ಬಾಣಸವಾಡಿ (ಬಿಎಎನ್‌ಡಿ) ಮೆಮು ಶೆಡ್‌ನಲ್ಲಿ ಡಿಫೆನ್ಸ್ ಲ್ಯಾಂಡ್ ಎಕ್ಸ್‌ಛೇಂಜ್‌ಗಾಗಿ ಕಾಂಪೌಂಡ್ ಗೋಡೆಯ ಉದ್ದೇಶಿತ ನಿರ್ಮಾಣ.	ರೂ. 1,19,68,074/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–06–2025 ರಂದು 15:00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ **www.ireps.gov.in** ಗೆ ಲಾಗ್‌ಆನ್ ಮಾಡಿ.

ಪಿಯುಬಿ/124/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26 **ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಬೆಂಗಳೂರು**

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR | sw_railways | SWRRLY | SWRRLY

ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ

ದೂರವಾಣಿ ಸಂಖ್ಯೆ: 08158–256277, ಇ–ಮೇಲ್ ವಿಳಾಸ: ghsdl105@gmail.com

ಸಂಖ್ಯೆ: ಸಾ.ಆ.ಶಿ/ಗ್ರೂಪ್‌ಡಿಹೊ.ಗು/ಟೆಂಡರ್/03/2025–26 ದಿನಾಂಕ: 21.05.2025

–:ಇ–ಟೆಂಡರ್ ಅಧಿಸೂಚನೆ:–

ವಿಷಯ: 2025–26 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ ಇಲ್ಲಿಗೆ ಗ್ರೂಪ್ 'ಡಿ' ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಉಲ್ಲೇಖ: (1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಮುಲೆಪ(ಆಂ/ಆಡಿ/ಹೋ.ಗುತ್ತಿಗೆ–ಗ್ರೂಪ್ ಡಿ/56/2019–20, ದಿನಾಂಕ: 31.12.2019.

(2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಮುಲೆಪ(ಆಂ/ಆಡಿ/ಗ್ರೂಪ್ ಡಿ–ನಿಬಂದನೆ/61/2019–20, ದಿನಾಂಕ: 13.01.2020.

(3) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರ ಅನುಮೋದನೆ ದಿನಾಂಕ: 16.05.2025

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನುಸಾರ 2025–26ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ ಇಲ್ಲಿಗೆ ಅವಶ್ಯವಿರುವ ಗ್ರೂಪ್ 'ಡಿ' ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದಿಂದ ಪಡೆಯುವ ಸಲುವಾಗಿ ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿದೆ.

ವಿವರಗಳು ಕೆಳಕಂಡಂತಿದೆ. ವಿವರ: (1) ಟೆಂಡರ್ ಪ್ರಕಟಣೆಯ **ದಿನಾಂಕ: 21.05.2025. (2)** ಇ.ಎಂ.ಡಿ ಮೊತ್ತ: **ರೂ. 1,20,000/– + ಇ–ಪ್ರೊಕ್ಯೂರ್‌ಮೆಂಟ್ ಶುಲ್ಕ. (3)** ಟೆಂಡರ್ ಪ್ರಾರಂಭದ ದಿನಾಂಕ (Web Portal) **21.05.2025. (4)** ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ & ಸಮಯ: **22.06.2025 ರಂದು ಮಧ್ಯಾಹ್ನ: 3.00 ಗಂಟೆಗೆ. (5)** ಪ್ರಿ ಬಿಡ್ ಸಭೆಯ ದಿನಾಂಕ & ಸಮಯ: ದಿನಾಂಕ: **05.06.2025 ರಂದು ಮಧ್ಯಾಹ್ನ: 3.00 ಗಂಟೆಗೆ. (6)** ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **ದಿನಾಂಕ: 23.06.2025 ರಂದು ಮಧ್ಯಾಹ್ನ: 3.00 ಗಂಟೆಗೆ. (7)** ಸಾಧ್ಯವಾದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ದಿನಾಂಕ: 26.06.2025 ರಂದು ಮಧ್ಯಾಹ್ನ: 3.00 ಗಂಟೆಗೆ.**

ಹೆಚ್ಚಿನ ವಿವರಗಳನ್ನು **http://kppp.karnataka.gov.in** ಹಾಗೂ ಕಚೇರಿ ವೇಳೆಯಲ್ಲಿ ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ ಇಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:69/ಕೆಎಸ್‌ಎಂಸಿಎ/2025–26

ನಗರಸಭಾ ಕಾರ್ಯಾಲಯ

ದೊಡ್ಡಬಳ್ಳಾಪುರ–561203

ಇ–ಮೇಲ್: ka.doddaballapur.cmc@gmail.com ವೆಬ್‌ಸೈಟ್: www.doddaballapurcity.gov.in

ಸಂಖ್ಯೆ:ನ.ಸ.ದೊಬ.ಪುರ/ಆವಿ/03/2025–26 ದಿನಾಂಕ:20.05.2025

ಆಸಕ್ತಿ ವ್ಯಕ್ತಪಡಿಸುವಿಕೆಯ ಆಹ್ವಾನ (Expression of Interest) ಪ್ರಕಟಣೆ

ದೊಡ್ಡಬಳ್ಳಾಪುರ ನಗರಸಭೆಗೆ ಸ್ವಚ್ಛ ಭಾರತ್ ಮಿಷನ್–2.0ರ ಅಡಿಯಲ್ಲಿ ಐ.ಇ.ಸಿ (IEC) ಚಟುವಟಿಕೆಳನ್ನು ಕೈಗೊಳ್ಳಲು ಸ್ವ–ಸಹಾಯ ಗುಂಪಿನ (SHG member) 16 ಸಂಖ್ಯೆ ಸದಸ್ಯರುನ್ನುಕಮ್ಯೂನಿಟಿ ಮೊಬಿಲೈಸರ್ಸ್ (Community Mobilizer)ಗಳಾಗಿ 03 ವರ್ಷಗಳಿಗೆ ನೇಮಕಾತಿ ಮಾಡಲು ಅರ್ಜಿಯನ್ನು ಆಹ್ವಾನಿಸಿದ್ದು, ಆಸಕ್ತಿಯುಳ್ಳ ಡೇ–ನಲ್ಮ್‌ನಲ್ಲಿ ನೋಂದಾಯಿತ ಸ್ವ–ಸಹಾಯ ಸಂಘದ ಸದಸ್ಯರು ಆಸಕ್ತಿ ವ್ಯಕ್ತಪಡಿಸುವಿಕೆ ಆಹ್ವಾನ (Expression of Interest) ರಡಿ ದೊಡ್ಡಬಳ್ಳಾಪುರ ನಗರಸಭೆಗೆ ಈ ಕೆಳಕಾಣಿಸಿದ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು **ದಿನಾಂಕ: 06.06.2025ರ ಸಂಜೆ 5.30 ರೊಳಗೆ ಸಲ್ಲಿಸಬಹುದಾಗಿದೆ** ಮತ್ತು ಅರ್ಹ ಸ್ವ–ಸಹಾಯ ಗುಂಪಿನ ಸದಸ್ಯರಿಗೆ ಪತ್ರದ ಮೂಲಕ ಮಾಹಿತಿಯನ್ನು ನೀಡಲಾಗುವುದು ಹಾಗೂ ಹೆಚ್ಚಿನ ಮಾಹಿತಿಯನ್ನು/ ವಿವರಗಳನ್ನು /TOR (Term of reference) ನ್ನು ವೆಬ್‌ಸೈಟ್ www.doddaballapurcity.mrc.gov.in ಅಥವಾ ನಗರಸಭೆಯ ಆರೋಗ್ಯ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಸ್ವ–ಸಹಾಯ ಗುಂಪಿನ ಸದಸ್ಯರು ಸಲ್ಲಿಸಬೇಕಾದ ದಾಖಲೆಗಳು 1) ನಿಗದಿತ ನಮೂನೆಯ ಅರ್ಜಿ 2) ಡೇ ನಲ್ಮ್‌ನಲ್ಲಿ ನೋಂದಾಯಿತ ಸ್ವ–ಸಹಾಯ ಸಂಘದ ಸದಸ್ಯರು ಗುರುತಿನ ಪ್ರತಿ / Empanelled document 3) ವಿಳಾಸ ಪುರಾವೆ 4) ವಿದ್ಯಾರ್ಹತೆ ದಾಖಲೆ 5) Endorsement form of Day NULM.

ಸಹಿ/– ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ | **ಸಹಿ/– ಉಪಾಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ** | **ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ**

ಸಹಿ/– ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ

ವಾಸಸಂಇ/ಸಿಪಿ/ಎಎಎ/823/2025–26

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್

(ಭಾರತ ಸರ್ಕಾರದ ಒಂದು ಶಾಸನಬದ್ಧ ಅಂಗಸಂಸ್ಥೆ)

(ಶಿಕ್ಷಣ ಸಚಿವಾಲಯ)

ನೆಲ್ಸನ್ ಮಂಡೇಲಾ ಮಾರ್ಗ, ವಸಂತಕುಂಜ, ನವದೆಹಲಿ–110070

ವೆಬ್‌ಸೈಟ್: www.aicte-india.org ದೂರವಾಣಿ: 011–29581000

ಎಐಸಿಟಿಇ ಇವರಲ್ಲಿ ಕೆಳಕಂಡ ಹುದ್ದೆಗಳಿಗಾಗಿ ಡೆಪ್ಯುಟೇಶನ್ ಆಧಾರದಲ್ಲಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಕ್ರ.ಸಂ.	ಹುದ್ದೆಯ ಹೆಸರು	6ನೇ ಸಿಪಿಸಿ ಮೇರೆಗಿನ ವೇತನ ಶ್ರೇಣಿ ಮತ್ತು ವೇತನ ದರ್ಜೆ	7ನೇ ಸಿಪಿಸಿ ಮೇರೆಗಿನ ವೇತನ ಶ್ರೇಢಿ ಮತ್ತು ವೇತನ ಹಂತ	ಹುದ್ದೆಗಳ ಸಂಖ್ಯೆ*
1.	ಅಡ್ವಾಯ್ಸರ್–1 (ಗ್ರೂಪ್–ಎ)	ಪಿಬಿ–4, ರೂ. 37400–67000 ಜಿ.ಪಿ. ರೂ. 10000	ರೂ. 144200–218200 ಹಂತ–14	01
2.	ಅಡ್ವಾಯ್ಸರ್–2 (ಗ್ರೂಪ್–ಎ)	ಪಿಬಿ–4, ರೂ. 37400–67000 ಜಿ.ಪಿ. ರೂ. 8900	ರೂ. 131100–216600 ಹಂತ–13ಎ	02
3.	ಡೈರೆಕ್ಟರ್ (ಗ್ರೂಪ್–ಎ)	ಪಿಬಿ–4, ರೂ. 37400–67000 ಜಿ.ಪಿ. ರೂ. 8700	ರೂ. 123100–215900 ಹಂತ–13	01
4.	ಅಸಿಸ್ಟಂಟ್ ಡೈರೆಕ್ಟರ್ (ಗ್ರೂಪ್–ಎ)	ಪಿಬಿ–3, ರೂ. 15600–39100 ಜಿ.ಪಿ. ರೂ. 6600	ರೂ. 67700–208700 ಹಂತ–11	08

* ಪರಿಷತ್‌ನ ಅಗತ್ಯತೆಯ ಮೇರೆಗೆ ಮೇಲ್ಕಂಡ ಖಾಲಿಹುದ್ದೆಗಳ ಸಂಖ್ಯೆ ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುತ್ತದೆ.

ಅರ್ಹತಾ ಮಾನದಂಡ, ವಿದ್ಯಾರ್ಹತೆಗಳು, ಅನುಭವ, ಆನ್‌ಲೈನ್ ಅರ್ಜಿ ಸಲ್ಲಿಕೆಯ ಪ್ರಕ್ರಿಯೆ ಮತ್ತು ನೇಮಕಾತಿ ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳು ಸೇರಿದಂತೆ ಇನ್ನಿತರ ಎಲ್ಲಾ ವಿವರಗಳು ಎಐಸಿಟಿಇ ಸಂಸ್ಥೆಯ (https://www.aicte-india.org/bulletins/advertisements) ವೆಬ್‌ಸೈಟ್‌ನಲ್ಲಿ **26.05.2025** ರಿಂದ ಲಭ್ಯವಾಗುತ್ತದೆ. ಮೇಲ್ಕಂಡ ಹುದ್ದೆಗಳಲ್ಲಿ ಆಸಕ್ತಿಯುಳ್ಳ ಅಭ್ಯರ್ಥಿಗಳು ಅಗತ್ಯ ಪೂರಕ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಮೂಲಕ **25.06.2025** ರೊಳಗೆ ತಮ್ಮ ಆನ್‌ಲೈನ್ ಅರ್ಜಿ ಸಲ್ಲಿಸತಕ್ಕದ್ದು. ಯಾವುದೇ ಕಾರಣ ನೀಡದೆಯೆ ಖಾಲಿಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿತಗೊಳಿಸುವ ಅಥವಾ ಜಾಹೀರಾತನ್ನು ರದ್ದುಗೊಳಿಸುವ ಹಕ್ಕನ್ನು ಪರಿಷತ್ ಕಾಯ್ದಿರಿಸಿಕೊಂಡಿದೆ.

ಜಾಹೀರಾತು ಸಂ. ಅಡ್ಮಿನ್ (ಎಸ್ಟ್.)/ಎಐಸಿಟಿಇ/05(03)/2025 **ಪ್ರೊ. ರಾಜೀವ್ ಕುಮಾರ್** ಸದಸ್ಯ ಕಾರ್ಯದರ್ಶಿ, ಎಐಸಿಟಿಇ

CBC 21300/12/0006/2526

'ಡ್ರೋನ್ ದೀದಿ' ತರಬೇತಿ

ಯಲಹಂಕ: 'ಕೃಷಿಯ ಬಗ್ಗೆ ಆಸಕ್ತಿ ಬೆಳೆಸಿಕೊಂಡು ಬೆಳೆಗಳ ಕುರಿತು ಅಧ್ಯಯನ ಮಾಡುವುದರ ಜೊತೆಗೆ ಡ್ರೋನ್ ತಂತ್ರಜ್ಞಾನವನ್ನು ಬಳಸಿದರೆ ಸಾರ್ಥಕತೆ ಪಡೆಯಲು ಸಾಧ್ಯ' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ ಹೇಳಿದರು.

ಕೃಷಿ ವಿಶ್ವವಿದ್ಯಾಲಯ, ಏರೋಸ್ಪೈಟ್ ಟೆಕ್ನಾಲಜೀಸ್ ಹಾಗೂ ಕ್ರಾಫ್‌ಲೈಫ್ ಇಂಡಿಯಾ ಆಶ್ರಯದಲ್ಲಿ ಜಿಕೆವಿಕೆಯಲ್ಲಿ 'ಡ್ರೋನ್ ದೀದಿ' ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಕೇವಲ ಡ್ರೋನ್ ಬಳಕೆದಾರರಾಗದೆ ಕೃಷಿ ವಿಸ್ತರಣಾ ಕಾರ್ಯಕರ್ತರಾಗಬೇಕು. ಆಗ ಕೃಷಿಯಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಸಾಧ್ಯ' ಎಂದರು.

ಜಂಟಿಕೃಷಿನಿರ್ದೇಶಕಶಿವಕುಮಾರ್, ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎಚ್.ಎಸ್. ಶಿವರಾಮು ರಾಷ್ಟ್ರೀಯ ಸಂಜೀವಿನಿ ಕೌಶಲಾಭಿವೃದ್ಧಿ ಮಿಷನ್‌ನ ಮುಖ್ಯಸ್ಥ ವೇಣುಗೋಪಾಲ್. ಎಸ್.ಆರ್, ಏರೋಸ್ಪೈಟ್ ಟೆಕ್ನಾಲಜೀಸ್ ಸಿಇಒ ಗೋಪಿನಾಥ್ ರಾಮಚಂದ್ರನ್, ಒಣಬೇಸಾಯ ಪ್ರಾಯೋಜನೆ ಮುಖ್ಯಸ್ಥ ಡಾ.ಮೂಡಲಗಿರಿಯಪ್ಪ ಇದ್ದರು.

ಕೃಷಿ ಇಲಾಖೆ

ಜಂಟಿ ಕೃಷಿ ನಿರ್ದೇಶಕರ ಕಛೇರಿ, # 302, 3ನೇ ಮಹಡಿ, ಜಿಲಾಡಳಿತ ಭವನ, ಬಿ.ಎಂ. ರಸ್ತೆ, ರಾಮನಗರ – 562159.

ದೂ. : 080–2727 6780, ಇ–ಮೇಲ್ : jdarmgm@gmail.com

ಸಂಖ್ಯೆ : ಜ.ಕೃ.ನಿ./ರಾ.ನ./ಆತ್ಮ/ಗು.ಆ.ಸಿ.ನೇ./2025–26

ದಿನಾಂಕ : 21–05–2025

ಕೃಷಿ ಇಲಾಖೆಯಲ್ಲಿ ಆತ್ಮ ಯೋಜನೆಯಡಿ ಕೆಲಸ ನಿರ್ವಹಿಸಲು ನೇರ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕಾತಿ ಪ್ರಕಟಣೆ

ಆತ್ಮ ಯೋಜನೆಯಡಿ ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಹುದ್ದೆಗಳಿಗೆ ಸೀಮಿತ ಅವಧಿಗೆ ನೇರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಹಾಗೂ ಸಂಬಂಧಿಸಿದ ದೃಢೀಕೃತ ದಾಖಲಾತಿಗಳೊಂದಿಗೆ **ಜಂಟಿ ಕೃಷಿ ನಿರ್ದೇಶಕರ ಕಛೇರಿ, ರಾಮನಗರ ಇವರಿಗೆ ದಿನಾಂಕ : 31–05–2025 ರೊಳಗಾಗಿ** ಸೀಲು **ಮಾಡಿದ ಲಕೋಟೆಯಲ್ಲಿ ಮುದ್ದಾಂ / ನೋಂದಾಯಿತ ಅಂಚೆ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.** ಹಾಗೂ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯಲ್ಲಿ ಮಾನದಂಡಗಳನ್ನು ಆಧರಿಸಿ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು.

ಹುದ್ದೆಗಳ ವಿವರ : 1) ಹುದ್ದೆಯ ಹೆಸರು : ಸಹಾಯಕ ತಾಂತ್ರಿಕ ವ್ಯವಸ್ಥಾಪಕರು, ಹುದ್ದೆಗಳ ಸಂಖ್ಯೆ : 02, ಯೋಜನೆಯ ಹೆಸರು : ಆತ್ಮ ಯೋಜನೆ, ವಿದ್ಯಾರ್ಹತೆ : ಬಿ.ಎಸ್ಸಿ. (ಕೃಷಿ) ಅಥವಾ ಕೃಷಿ ಸಂಬಂಧಿತ ವಿಷಯಗಳಲ್ಲಿ ಪದವಿ, ಅನುಭವ : 01 ವರ್ಷದ ಕೃಷಿ ಕ್ಷೇತ್ರದಲ್ಲಿ ಅನುಭವ ಹೊಂದಿರುವವರಿಗೆ ಆಧ್ಯತೆ.

ಅರ್ಜಿ ಪಡೆಯಬೇಕಾದ ಮತ್ತು ಸಲ್ಲಿಸಬೇಕಾದ ವಿಳಾಸ : ಜಂಟಿ ಕೃಷಿ ನಿರ್ದೇಶಕರ ಕಛೇರಿ, ನಂ. 302, ಕೃಷಿ ಇಲಾಖೆ, 3ನೇ ಮಹಡಿ, ಜಿಲ್ಲಾ ಪಂಚಾಯತ್ ಭವನ, ಬಿ. ಎಂ. ರಸ್ತೆ, ರಾಮನಗರ – 562 159.

ಸಹಿ/– ಜಂಟಿ ಕೃಷಿ ನಿರ್ದೇಶಕರು, ರಾಮನಗರ ಜಿಲ್ಲೆ, ರಾಮನಗರ.

ಡಿಐಪಿಆರ್/ರಾಮನಗರ/97/ಮಣಿಪಾಲ್/2025–26

PUBLIC NOTICE

The General Public are hereby informed that my Client is proposing to purchase for valuable consideration the immovable property more fully described in the Schedule written hereunder and hereinafter referred to as the **'Schedule Property'** from **Sri. B.R. Muralidhar Raju** son of late **Sri. Rajashekara Raju** who claims to be the lawful owner in possession and occupation of the Schedule Property. It is further represented by the owner to my Client that he along with his family members have lost/misplaced the originals of the allotment letter, possession certificate and sale deed executed by REMCO Industrial Workers Housing Co-operative Society Ltd in favour of **Smt. Anasooya** wife of Sri. Rajashekara Raju and in this regard a police complaint was also lodged on 24-04-2025. However, the owner has represented to my Client that till date he or his family members have neither found / received the aforesaid original documents nor have they received any objection/s from any quarter whatsoever and further represented that he or his family members have not mortgaged by deposit of title deeds to any Banks/ financial institutions or private lenders. Any person/s, financial institutions, statutory authorities objecting for the proposed purchase or having any right, title or interest of any nature in or any lien, charge or enforceable right in relation to the Schedule Property may lodge their objections and / or claims with the undersigned along with supporting documentary evidence **within 15 (fifteen)** days from the date of this publication and objection and / or claims received thereafter will not be binding on my Client and my Client will proceed to purchase the Schedule Property as if there are no claimants/ objections from any person/s.

SCHEDULE PROPERTY

All that piece and parcel of the immovable house property bearing **New Municipal No. 13, Old No. 311, New BBMP E Khatha No. 311-13, BBMP E.P.I.D. No. 5227201404, situated at 1st Cross, 5th Main, Kempapura Agrahara, REMCO Private Layout, Hosahalli, now referred as Hampinagar,** Bangalore, measuring **East to West: 40 feet** and **North to South: 30 feet,** in all measuring **1200 Square Feet** and bounded on the: **East by:** BDA Land, **West by**: Road, **North by**: House No. 312, **South by:** House No. 310.

Sd/- A.B. CARIAPPA, Advocate
Kar 1759/95, No. 154, III floor, Mallige Complex, K.H.B. Colony, 5th Block, Koramangala, Bengaluru-560 095.
Ph. 9845700443

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅಮೋಘ ಸಾಧನೆಗಳ 2 ವರ್ಷಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ವಿಷನ್ 2028
2028ರ ವೇಳೆಗೆ ₹5,000 ಕೋಟಿ ವಹಿವಾಟಿನ ಗುರಿ

ಶತಮಾನ ದಾಟಿದ ಪರಿಮಳದ ಪಯಣಕ್ಕೀಗ ಹೊಸ ತಿರುವು

- ಸಾಧನೆಯಲ್ಲಿ ಹೊಸ ದಾಖಲೆಗಳು
- ಪ್ರೇರಣೆ ನೀಡುವ ನಾಯಕತ್ವ
- ಬೆಳವಣಿಗೆಗೆ ಹೆಗ್ಗುರಿಗಳು

ವಾರ್ಷಿಕ ವಹಿವಾಟು

2022–23	₹1,375 ಕೋಟಿ
2023–24	₹1,571 ಕೋಟಿ
2024–25	₹1,788 ಕೋಟಿ



ನಿವ್ವಳ ಲಾಭ

ರಾಜಿಯಿಲ್ಲದ ಗುಣಮಟ್ಟ - ಯಶಸ್ಸಿನ ರಹಸ್ಯ

ಮೈಸೂರು ಸ್ಯಾಂಡಲ್ ಸೋಪ್‌ನ ಏಕೈಕ ಧ್ಯೇಯವಾಕ್ಯ - '**ರಾಜಿಯಿಲ್ಲದ ಗುಣಮಟ್ಟ**'. ದೇಶದ ಉದ್ದಗಲಕ್ಕೂ ಇರುವ ಗ್ರಾಹಕರು ಇಷ್ಟಪಡುವುದು ಕೂಡ ಇದೇ ಕಾರಣಕ್ಕೆ. 1916ರಲ್ಲಿ ಇದನ್ನು ಹುಟ್ಟುಹಾಕಿದ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಅದಕ್ಕೆ ಬಲ ತುಂಬಿದ ದಿವಾನ್ ಸರ್. ಎಂ.ವಿಶ್ವೇಶ್ವರಯ್ಯ ಅವರ ಉದ್ದೇಶವೂ ಇದೇ ಆಗಿತ್ತು. ಈಗಲೂ ತನ್ನ ಉತ್ಪನ್ನಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳ ಸಂಗ್ರಹಣೆ ಮತ್ತು ಸಂಸ್ಕರಣೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಮಾಡಲಾಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನೂರಾ ಒಂಬತ್ತು ವರ್ಷಗಳ ಮೈಲುಗಲ್ಲುಗಳನ್ನು ದಾಟಿ ಮುಂದೆ ಸಾಗಿರುವ ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ ಈಗಲೂ ಅದೇ 'ತಾಜಾತನ'ವನ್ನು ಉಳಿಸಿಕೊಂಡಿದೆ. ಈಗಾಗಲೇ 25 ರಾಷ್ಟ್ರಗಳಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಮತ್ತು ಇತರ ಉತ್ಪನ್ನಗಳು ಲಭ್ಯ. ಅದನ್ನು 80 ರಾಷ್ಟ್ರಗಳಿಗೆ ವಿಸ್ತರಿಸುವ ಮಹತ್ವಾಕಾಂಕ್ಷೆಯನ್ನು ಸಂಸ್ಥೆ ಹೊಂದಿದೆ. ಸಂಸ್ಥೆ ದೃಷ್ಟಿ ನೆಟ್ಟಿರುವ ಇನ್ನೊಂದು ಬಹುಮುಖ್ಯ ಗುರಿ ಎಂದರೆ 2028ರ ಹೊತ್ತಿಗೆ ಒಟ್ಟು ವಹಿವಾಟು ₹5,000 ಕೋಟಿ ದಾಟುವುದು. ಕ್ರಿಯಾಶೀಲತೆ ಹಾಗೂ ಸಾಧಿಸುವ ಛಲವನ್ನು ಇಡೀ ತಂಡವು ಮೈಗೂಡಿಸಿಕೊಂಡಿದ್ದು, ಹಲವು ಗುರುತರ ಗುರಿಗಳನ್ನು ಮೀರುವ ಲಕ್ಷಣಗಳು ನಿಚ್ಚಳವಾಗಿವೆ.

ಕೆಎಸ್‌ಡಿಎಲ್ ಸಂಸ್ಥೆಯು ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಿ, ಲಾಭದಾಯಕವಾಗಿ ಮುನ್ನಡೆಯುತ್ತಿದೆ. ಒಂದು ತಿಂಗಳ ಅವಧಿಯಲ್ಲಿ ಸೋಪ್‌ಗಳ ಉತ್ಪಾದನೆ 4,144 ಮೆಟ್ರಿಕ್ ಟನ್ ದಾಟಿರುವುದು ವಿಶೇಷ. ಈ ಮೂಲಕ ಸಂಸ್ಥೆ ಹೊಸ ಮೈಲುಗಲ್ಲನ್ನು ಸ್ಥಾಪಿಸಿದೆ.

- ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕೆಎಸ್‌ಡಿಎಲ್ ಸಂಸ್ಥೆಯು ನಮ್ಮ ರಾಜ್ಯದ ಹೆಮ್ಮೆ. ಮೈಸೂರು ಮಹಾರಾಜರಿಂದ ಸ್ಥಾಪಿತವಾದ ಈ ಸಂಸ್ಥೆಯು ನಮ್ಮ ಸರ್ಕಾರದ ಅವಧಿಯಲ್ಲಿ ಸಾಧನೆಗಳ ಮೆಟ್ಟಿಲನ್ನೇರುತ್ತಿರುವುದು ಸಂತಸ ತಂದಿದೆ.

- ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಕೆಎಸ್‌ಡಿಎಲ್‌ಗೆ ಮರುಜೀವ ತುಂಬಲು ನಾವು ನಡೆಸಿದ ಸತತ ಪ್ರಯತ್ನಗಳಿಗೆ ಫಲ ಸಿಗುತ್ತಿದೆ. ಈ ಹಿನ್ನೆಲೆಯಲ್ಲಿ ಸುವಾಸನೆಯುಕ್ತ ಸೋಪ್, ಜೆಲ್‌ಗಳು, ಕ್ಯಾಂಡಲ್‌ಗಳಂತಹ ವಿಭಿನ್ನ ಶ್ರೇಣಿಗಳನ್ನು ಸಂಸ್ಥೆಯಿಂದ ಬಿಡುಗಡೆ ಮಾಡಲಾಗುತ್ತಿದೆ. ನಮ್ಮ ಗುರಿ 2028ರ ವೇಳೆಗೆ ₹5,000 ಕೋಟಿ ವಹಿವಾಟು ನಡೆಸುವುದು.

- ಶ್ರೀ ಎಂ.ಬಿ. ಪಾಟೀಲ
ಮಾನ್ಯ ಸಚಿವರು, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯ ಅಭಿವೃದ್ಧಿ

ಕೆಎಸ್‌ಡಿಎಲ್ ಸಂಸ್ಥೆಯ ಪ್ರಗತಿಗಾಗಿ ಕೈಗೊಂಡ ಹೊಸ ನೀತಿಗಳು ಹಾಗೂ ಜಾಗತಿಕ ಬೇಡಿಕೆಗೆ ಅನುಗುಣವಾದ ತಂತ್ರಜ್ಞಾನ ರೂಪಾಂತರಗಳು ಇಂದು ಫಲ ನೀಡುತ್ತಿವೆ. ಪರಂಪರೆಗೂ ಹೆಗ್ಗುರುತಿಗೂ ಇಂದಿನ ಆಧುನಿಕತೆ ಬೆರೆತು ಉತ್ಕೃಷ್ಟತೆಯ ಹೊಸ ಅಧ್ಯಾಯ ಬರೆಯುತ್ತಿದೆ.

- ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಕೆಎಸ್‌ಡಿಎಲ್

ಕೆಎಸ್‌ಡಿಎಲ್ ಸಂಸ್ಥೆಯು ತನ್ನ ಉತ್ಪಾದನಾ ಸಾಮರ್ಥ್ಯವನ್ನೂ, ಮಾರುಕಟ್ಟೆ ವ್ಯಾಪ್ತಿಯನ್ನೂ ಗಂಭೀರವಾಗಿ ವಿಸ್ತರಿಸುತ್ತಿರುವುದು ಶ್ಲಾಘನೀಯ.

- ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಕಳೆದ 3 ವರ್ಷಗಳಿಂದ ಉತ್ಪನ್ನಗಳ ಬೆಲೆಯಲ್ಲಿ ಏರಿಕೆ ಮಾಡಿಲ್ಲ. ವಿಶ್ವವಿಖ್ಯಾತ ಸಾಬೂನು ಕೈಗೆಟುಕುವ ದರದಲ್ಲಿ ಸಿಗಲಿ ಎಂಬುದು ನಮ್ಮ ಉದ್ದೇಶ. ಸರ್ಕಾರದ ನಾಯಕತ್ವ ಮತ್ತು ಸಂಸ್ಥೆಯ ಕಾರ್ಯತತ್ಪರತೆ ಬೆಳವಣಿಗೆಗೆ ಮೂಲಮಂತ್ರವಾಗಿದೆ.

- ಡಾ. ಪ್ರಶಾಂತ್ ಪಿಕೆಎಂ, ಭಾ.ಅ.ಸೇ.
ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಡಿಎಲ್

ಕೆಎಸ್‌ಡಿಎಲ್‌ಗೆ ಹೊಸ ಚೈತನ್ಯ ತಂದ ಸಮರ್ಥ ಸಾರಥ್ಯ

ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ್ ಸರ್. ಎಂ. ವಿಶ್ವೇಶ್ವರಯ್ಯ ರವರ ಕನಸಿನ ಕೂಸಾಗಿ 1916 ರಲ್ಲಿ ಮೈಸೂರಿನಲ್ಲಿ ಸ್ಥಾಪನೆಯಾಯಿತು. 1918 ರಲ್ಲಿ ಕೇಂದ್ರ ಕಛೇರಿಯ ಶಾಖೆಯನ್ನು ಬೆಂಗಳೂರಿನಲ್ಲಿ ಆರಂಭಿಸಲಾಯಿತು. ಶತಮಾನದ ಇತಿಹಾಸವಿರುವ ಸಂಸ್ಥೆಯ ಸುದೀರ್ಘ ಹಾದಿಯಲ್ಲಿ ಸಾಧನೆಗಳ ಸರಮಾಲೆ ಆರಂಭವಾಗಿದೆ. 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕೆಎಸ್‌ಡಿಎಲ್ ದಿಕ್ಕು ಬದಲಾಯಿತು. ಇದಕ್ಕೆ ಮುಖ್ಯ ಕಾರಣ **ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ಎಂ.ಬಿ.ಪಾಟೀಲ** ರವರು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಮಾರ್ಗದರ್ಶನದಲ್ಲಿ ಶತಾಯಗತಾಯ ಈ ಸಂಸ್ಥೆಯನ್ನು ಉತ್ತುಂಗಕ್ಕೆ ಕೊಂಡೊಯ್ಯಬೇಕು ಎಂದು ಪಣತೊಟ್ಟರು. ಸಂಸ್ಥೆಗೆ ಹೊಸ ಕಾಯಕಲ್ಪವನ್ನು ನೀಡಲು ಬೇಕಾದ ಹತ್ತಾರು ಯೋಜನೆಗಳನ್ನು ರೂಪಿಸಿದರು. ಮಹಾರಾಜರು ಆರಂಭಿಸಿದ್ದ ಸಂಸ್ಥೆಯು ಜನಮಾನಸದಲ್ಲಿ, ಮಾರುಕಟ್ಟೆಯಲ್ಲಿ ವಿಜೃಂಭಿಸುವಂತೆ ಮಾಡಿದರು.

ತಮ್ಮದೇ ಆದ ವಿನೂತನ ಕಾರ್ಯತಂತ್ರಗಳಿಂದ ಮತ್ತಷ್ಟು ಬಲ ತುಂಬಲು ಬಂದವರು ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದ ಶಾಸಕ **ಶ್ರೀ ಅಪ್ಪಾಜಿ ಸಿ.ಎಸ್.ನಾಡಗೌಡ**ರು. ಅಧ್ಯಕ್ಷರಾಗಿ ನೇಮಕಗೊಂಡ ಬಳಿಕ ಅವರು ಅನುಷ್ಠಾನಕ್ಕೆ ತಂದ ಹಲವು ಯೋಜನೆಗಳು ಭರ್ಜರಿ ಯಶಸ್ಸನ್ನು ಸಂಸ್ಥೆಗೆ ತಂದುಕೊಟ್ಟಿತು.

ರೂಪುರೇಖೆಗಳನ್ನೊಳಗೊಂಡ ಕಾರ್ಯಕ್ರಮಗಳನ್ನು ಕರಾರುವಾಕ್ಕಾಗಿ ಕಾರ್ಯರೂಪಕ್ಕೆ ತರಲು ದಕ್ಷ ಅಧಿಕಾರಿಯ ಅಗತ್ಯವಿತ್ತು. ಆಗ ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡವರು **ಡಾ. ಪ್ರಶಾಂತ್ ಪಿ.ಕೆ.ಎಂ.** (ಭಾ.ಅ.ಸೇ.). ಅಲ್ಲಿಂದ ಸಂಸ್ಥೆಯ ಕಾರ್ಯನಿರ್ವಹಣೆ ಇನ್ನಷ್ಟು ಚುರುಕಾಗಿ, ಯಶಸ್ಸಿನೆಡೆ ದಾಪುಗಾಲಿಟ್ಟಿತು.

ಈ ಮೂವರ ಸಮರ್ಥ ಮುಂದಾಳತ್ವ ಶತಮಾನದ ಈ ಸಂಸ್ಥೆಯನ್ನು ಚೈತನ್ಯಶೀಲಗೊಳಿಸಿ, ಪುನರುಜ್ಜೀವನಕ್ಕೆ ನಾಂದಿಯಾಯಿತು. ಕೆಎಸ್‌ಡಿಎಲ್ ಸಂಸ್ಥೆಯ ಕಳೆದ ಎರಡು ವರ್ಷಗಳ '**ಸಾಧನೆಯ ಪಟ್ಟಿ**' ಇದಕ್ಕೆ ಸಾಕ್ಷಿ. ಅದನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲು ಅಧಿಕಾರಿ ವರ್ಗ, ಕಾರ್ಮಿಕ ವರ್ಗ, ಸಿಬ್ಬಂದಿ ವರ್ಗ ಟೊಂಕಕಟ್ಟಿ ನಿಂತಿದೆ.

"ಎಲ್ಲೋ ಮಳೆಯಾಗಿದೆ ಎಂದು ತಂಗಾಳಿಯು ಹೇಳುತಿದೆ...!"

ಮೊದಲ ಮಳೆ ಬಿದ್ದು ಮಣ್ಣಿನ ಘಮಲಿನೊಂದಿಗೆ ಬೀಸುವ ತಂಪಾದ ಗಾಳಿಯನ್ನು ಜೀವನದಲ್ಲಿ ಯಾರೊಬ್ಬರೂ ಮರೆಯಲು ಸಾಧ್ಯವಿಲ್ಲ. ಅದನ್ನು ಆಸ್ವಾದಿಸುತ್ತಾ ಕಣ್ಣು ಮುಚ್ಚಿ ಮೈಮರೆತುಬಿಡುತ್ತೇವೆ. ಅದು ನಮ್ಮ ಮೈ-ಮನಸ್ಸು ಪ್ರಫುಲ್ಲಗೊಳಿಸುತ್ತದೆ. ಅದಕ್ಕೆ ಸರಿಸಾಟಿಯಾದ ಇನ್ನೊಂದು ಘಮಲೆಂದರೆ ಮೈಸೂರು ಸ್ಯಾಂಡಲ್ ಸೋಪಿನ ಘಮಲು. ಎರಡೂ ಶುದ್ಧ-ಪರಿಶುದ್ಧ. ಎರಡೂ ಮನಸ್ಸಿಗೆ ಕೊಡುವ ಮುದ ಅವರ್ಣನೀಯ. ಮೈಸೂರು ಸ್ಯಾಂಡಲ್ ಸೋಪಿನ ಅಚ್ಚ ಗಂಧದ ಸುವಾಸನೆಯನ್ನೂ ಕಣ್ಣು ಮುಚ್ಚಿ ಅನುಭವಿಸಿ-ಬಿಡಬೇಕು ಎಂಬುದು ಕೂಡ ಅಷ್ಟೇ ಸತ್ಯ! ಗಾಳಿ ಬೀಸಿದರೆ 'ಗಂಧ ತೀಡಿದಂತಿರಬೇಕು' ಎಂಬ ಮಾತು ಮೈಸೂರು ಸ್ಯಾಂಡಲ್ ಸೋಪಿನ ವಿಚಾರದಲ್ಲಿ ಅಕ್ಷರಶಃ ನಿಜ.

ನಾಡಿನ ತುಂಬೆಲ್ಲಾ ಗಂಧದ ಪರಿಮಳ ಹರಡುವ ಕೈಂಕರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಸಂಸ್ಥೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆ (ಕೆಎಸ್‌ಡಿಎಲ್). ದೇಶ-ವಿದೇಶಗಳಲ್ಲಿ ಈ ಸಂಸ್ಥೆಯ ಹತ್ತಾರು ಉತ್ಪನ್ನಗಳು ನಿರಂತರವಾಗಿ ಸುವಾಸನೆಯನ್ನು ಬೀರುತ್ತಿವೆ. ವಿದೇಶದಿಂದ ರಜೆಗೆಂದು ಬಂದ ಪಯಣಿಗರು ಸಾರು-ಸಾಂಬಾರು ಪುಡಿಗಳ ಜೊತೆ ಮೈಸೂರು ಸ್ಯಾಂಡಲ್ ಸೋಪಿನ ಪ್ಯಾಕೆಟ್‌ಗಳನ್ನೂ ಸೇರಿಸಿಕೊಳ್ಳದಿದ್ದರೆ ಅವರ ಪಯಣವೇ ಅಪೂರ್ಣ! ಅಷ್ಟರಮಟ್ಟಿಗೆ ಸಂಸ್ಥೆಯ ಉತ್ಪನ್ನಗಳು ಜನಮಾನಸದಲ್ಲಿ ಅಚ್ಚೊತ್ತಿವೆ.

ಕೆಎಸ್‌ಡಿಎಲ್ ಇತ್ತೀಚಿನ ಕೆಲವು ವರ್ಷಗಳಲ್ಲಿ ಹತ್ತು- ಹಲವು ಹೊಚ್ಚಹೊಸ ಪ್ರಯೋಗಗಳನ್ನು ನಡೆಸುತ್ತಾ ಬಂದಿರುವುದು ವಿಶೇಷ. ಅದರ ಮಾರುಕಟ್ಟೆ ವಿಸ್ತರಿಸಿದೆ, ರಫ್ತು ಪ್ರಮಾಣ ಹೆಚ್ಚಿದೆ, ಉತ್ಪಾದನೆ ದುಪ್ಪಟ್ಟಾಗಿದೆ, ಕಾರ್ಯತತ್ಪರತೆ ಹೆಚ್ಚಿದೆ. ಎಲ್ಲಕ್ಕಿಂತ ಮಿಗಿಲಾಗಿ ಲಾಭ ಏರುಮುಖವಾಗಿದೆ. ಇವೆಲ್ಲವೂ ಸಮರ್ಥ ನಾಯಕತ್ವದ ಪ್ರತಿಫಲ. ನಮ್ಮ ನಾಡಿನ ಹೆಗ್ಗುರುತಾಗಿರುವ ಸಂಸ್ಥೆಗೆ ಹೆಗಲು ಕೊಟ್ಟವರ ಪರಿಶ್ರಮ-ಮಾರ್ಗದರ್ಶನದ ಫಲ. **ಒಂದು ಸಂಸ್ಥೆಗೆ ದಿಟ್ಟ, ಅಪೂರ್ವ ದೃಷ್ಟಿಕೋನದ ನಾಯಕತ್ವ ಸಿಕ್ಕಾಗ ಇಂತಹ ಅನೂಹ್ಯ ಅಚ್ಚರಿಗಳು ಸಂಭವಿಸುತ್ತವೆ ಎಂಬುದಕ್ಕೆ ಕೆಎಸ್‌ಡಿಎಲ್ ಸ್ಪಷ್ಟ ಉದಾಹರಣೆ.**

20 ಅತ್ಯುತ್ಕೃಷ್ಟ ಉತ್ಪನ್ನಗಳು

ಸಂಸ್ಥೆಯು ಹಲವು ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದ್ದು ಸೌಂದರ್ಯ ವರ್ಧಕಗಳು, ಅಗರಬತ್ತಿಗಳು, ಮಾರ್ಜಕಗಳು ಸೇರಿದಂತೆ 20ಕ್ಕೂ ಹೆಚ್ಚು ಬಗೆಯ ಉತ್ಪನ್ನಗಳು ಇದರಲ್ಲಿವೆ. ಅವೆಲ್ಲವೂ ಉತ್ಕೃಷ್ಟ ಶ್ರೇಣಿಯವು ಎಂಬುದು ನಿರ್ವಿವಾದ. ಮೈಸೂರು ಸ್ಯಾಂಡಲ್ ಮಿಲೇನಿಯಂ, ಮೈಸೂರು ಸ್ಯಾಂಡಲ್ ಗೋಲ್ಡ್ ನಂತಹ ಐಷಾರಾಮಿ ಉತ್ಪನ್ನಗಳಿಂದ ಆರಂಭವಾಗುವ ಈ ಶ್ರೇಣಿ ನೀಮ್, ಅಲೋವೆರಾ ಸೋಪ್, ಧೂಪ್, ಅಗರಬತ್ತಿ, ಫಿನಾಯಿಲ್, ಬಾಡಿವಾಶ್, ವಾಷಿಂಗ್ ಪೌಡರ್, ಗಂಧದೆಣ್ಣೆ... ಹೀಗೆ ಮುಂದುವರಿಯುತ್ತದೆ.

ನಕಲಿ ಜಾಲಗಳಿಗೆ ಅಂಕುಶ

ಹೆಚ್ಚು ಜನಪ್ರಿಯತೆ ಪಡೆಯುವ ಯಾವುದೇ ಉತ್ಪನ್ನಗಳಿಗೆ, ಅಸಲಿಯ ಸೋಗು ಹಾಕಿಕೊಂಡ ನಕಲಿ ಉತ್ಪನ್ನಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತವೆ. ದೇಶದ ನಾನಾ ಕಡೆಗಳಲ್ಲಿ ನಕಲಿ ಜಾಲಗಳಿರುವುದನ್ನು ಪತ್ತೆ ಮಾಡಿ, ಒಂದು ಸಾವಿರ ಕೋಟಿ ಮೌಲ್ಯದ ಸಾಮಗ್ರಿಗಳನ್ನು ವಶಪಡಿಸಿಕೊಂಡಿರುವುದು ನಕಲಿ/ಸೋಗು ಉತ್ಪನ್ನಗಳ ಮೇಲೆ ಸಂಸ್ಥೆಯು ಹದ್ದಿನ ಕಣ್ಣಿಟ್ಟಿರುವುದನ್ನು ತೋರಿಸಿಕೊಟ್ಟಿದೆ. ಇಂತಹ ಜಾಲಗಳ ಮೇಲೆ ದಾಳಿ ಮಾಡಿ ಕ್ರಮ ಜರುಗಿಸುವ ಕೆಲಸವನ್ನು ಕಳೆದ 10 ವರ್ಷಗಳಿಂದ ಮಾಡುತ್ತಲೇ ಬಂದಿದೆ. ಮೈಸೂರು ಸ್ಯಾಂಡಲ್ ಸೋಪ್ ಬ್ರಾಂಡ್‌ನ್ನು ದುರುಪಯೋಗ ಪಡಿಸಿಕೊಳ್ಳುವವರ ವಿರುದ್ಧ ಕಾನೂನು ಸಮರ ಚಾಲ್ತಿಯಲ್ಲಿದೆ.

ಲಾಭ, ವಹಿವಾಟು - ಎರಡರಲ್ಲೂ ದಾಖಲೆ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಂಸ್ಥೆಯ ಉತ್ಪಾದನೆ, ವಹಿವಾಟು, ಲಾಭದ ಪ್ರಮಾಣವು ಅದರ ಕಾರ್ಯನಿರ್ವಹಣೆಗೆ ಕನ್ನಡಿ ಹಿಡಿದಂತಿದೆ. 2022-2023ರಲ್ಲಿ ₹1,375 ಕೋಟಿ ಇದ್ದ ವಹಿವಾಟು 2024-25ರ ಹೊತ್ತಿಗೆ ₹1,788 ಕೋಟಿಗೆ ಜಿಗಿದಿದೆ. ಅಂದರೆ ನಿವ್ವಳ ಲಾಭ ಮೂರು ವರ್ಷಗಳಲ್ಲಿ ₹182 ಕೋಟಿಯಿಂದ ₹415 ಕೋಟಿಗೆ ಏರಿಕೆ ಕಂಡಿದೆ. ಇದು ಕೆಎಸ್‌ಡಿಎಲ್‌ನ ಐತಿಹಾಸಿಕ ಸಾಧನೆ.

ವಹಿವಾಟು ಅಂಕಿ-ಅಂಶಗಳು

ವರ್ಷ	ಒಟ್ಟು ವಹಿವಾಟು	ನಿವ್ವಳ ಲಾಭ	ಡಿವಿಡೆಂಡ್
2022–23	₹1,375 Cr	₹182 Cr	₹54.8 Cr
2023–24	₹1,571 Cr	₹362 Cr	₹108.6 Cr
2024–25	₹1,788 Cr	₹415 Cr	₹120 Cr

ವೇಗದ ಉತ್ಪಾದನೆ

ವರ್ಷ	ಗುರಿ (MT)	ಸಾಧನೆ (MT)	ಸಾಧನೆ %
2022–23	31,481	33,962	108%
2023–24	35,293	37,917	107%
2024–25	38,188	42,172 (est.)	110%

- ದೈನಂದಿನ ಉತ್ಪಾದನೆ: 1.8 ದಶಲಕ್ಷ ಸಾಬೂನುಗಳು
- ಒಟ್ಟು ಉತ್ಪಾದನೆಯಲ್ಲಿ ಸಾಬೂನುಗಳ ಪ್ರಮಾಣ 70%

ಅತ್ಯಾಧುನಿಕ ವಾಣಿಜ್ಯ ಸಂಕೀರ್ಣಕ್ಕೆ ಸಿದ್ಧತೆ

ಸಂಸ್ಥೆಯು ನಗರದ ಕೇಂದ್ರ ಭಾಗದಲ್ಲಿರುವ ವಿಶಾಲ ಪ್ರದೇಶವನ್ನು ಸದ್ಬಳಕೆ ಮಾಡಿಕೊಳ್ಳಲು ನಿರ್ಧರಿಸಿದೆ. ಸುಮಾರು ₹250 ಕೋಟಿ ವೆಚ್ಚದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣ ನಿರ್ಮಿಸಲು ನೀಲನಕ್ಷೆ ಸಿದ್ಧಗೊಂಡಿದೆ. ಈ ಸಂಕೀರ್ಣದಲ್ಲಿ ಆಧುನಿಕ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆ ತರುವುದು, ಜೊತೆಗೆ ಬಾಡಿಗೆ ರೂಪದಲ್ಲಿಯೂ ಸಂಪನ್ಮೂಲ ಕ್ರೋಢೀಕರಣ ಮಾಡುವ ನಿರೀಕ್ಷೆ ಹೊಂದಲಾಗಿದೆ.

ಗಂಧದ ಮರ ಬೆಳೆಯಲು ಉತ್ತೇಜನ

ಗಂಧದ ಮರಗಳನ್ನು ಬೆಳೆಯಲು ರೈತರಿಗೆ ಉತ್ತೇಜನ ನೀಡಲು 'ಗ್ರೋ ಮೋರ್ ಸ್ಯಾಂಡಲ್' ಕಾರ್ಯಕ್ರಮ ರೂಪಿಸಿದೆ. ರೈತರಿಗೆ 3 ವರ್ಷಗಳ ಅವಧಿಯಲ್ಲಿ ₹500 ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ಪ್ರತಿ ವರ್ಷ 1000 ಎಕರೆಯಲ್ಲಿ ಶ್ರೀಗಂಧದ ನೆಡುತೋಪು ನಿರ್ಮಾಣ ಮಾಡಿ, 10 ವರ್ಷಗಳ ಅವಧಿಯಲ್ಲಿ 10,000 ಎಕರೆ ವಿಸ್ತೀರ್ಣದಲ್ಲಿ ನೆಡುತೋಪು ಬೆಳೆಸುವ ಗುರಿ ಹೊಂದಲಾಗಿದೆ. ಈ ಹಿನ್ನೆಲೆಯಲ್ಲಿ 713 ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಕೆಎಸ್‌ಡಿಎಲ್ ಸಂಸ್ಥೆಯು 2024–25ನೇ ಆರ್ಥಿಕ ವರ್ಷದಲ್ಲಿ ಮಾರಾಟ ಮತ್ತು ಲಾಭದಲ್ಲಿ ಭಾರತದ ಪ್ರಮುಖ ಕಂಪನಿಗಳು ಹಾಗೂ ಎಫ್‌ಎಂಸಿಜಿ ದಿಗ್ಗಜರನ್ನು ಹಿಂದಿಕ್ಕಿದೆ.

14% ಮಾರಾಟದ ಬೆಳವಣಿಗೆ ದರ

15% ಲಾಭದ ಬೆಳವಣಿಗೆ ದರ

ತಮನ್ನಾ ಭಾಟಿಯಾ ರಾಯಭಾರಿ

ಕೆ.ಎಸ್.ಡಿ.ಎಲ್. ಸಂಸ್ಥೆಯು ಮೈಸೂರು ಸ್ಯಾಂಡಲ್ ಫೇಸ್ ವಾಶ್ ಉತ್ಪನ್ನವನ್ನು ದೇಶದಾದ್ಯಂತ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಬಹುಭಾಷಾ ನಟಿಯಾಗಿರುವ ಹಾಗೂ ದೇಶದ ಉದ್ದಗಲಕ್ಕೂ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ತಮನ್ನಾ ಭಾಟಿಯಾ ಅವರನ್ನು ರೂಪದರ್ಶಿಯಾಗಿ ನಿಯೋಜಿಸಿದೆ. ಈ ಕ್ರಮ ಕರ್ನಾಟಕದಿಂದಾಚೆಗೆ ಉತ್ಪನ್ನಗಳ ಮಾರುಕಟ್ಟೆಯನ್ನು ವಿಸ್ತರಿಸುವ ಕಾರ್ಯತಂತ್ರದ ಭಾಗವಾಗಿದೆ.

ಅಮೆರಿಕಾದಲ್ಲಿ ಖ್ಯಾತ ಬಾಣಸಿಗ ಶ್ರೀ ವಿಕಾಸ್ ಖನ್ನಾ ಅವರು ಮಾರ್ಬಲ್ ಬಾಕ್ಸ್ ನಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಇರಿಸಿ ಖ್ಯಾತ ನಟಿ ಆನಿ ಜಾಕ್ವೆಲಿನ್ ಹ್ಯಾಥ್ವೇ ಅವರಿಗೆ ಉಡುಗೊರೆ ನೀಡಿ ನಮ್ಮ ಭವ್ಯ ಪರಂಪರೆಯನ್ನು ಪ್ರಪಂಚದ ಮುಂದೆ ಪ್ರದರ್ಶಿಸಿದ್ದಾರೆ. ಶ್ರೀ ಎಂ.ಬಿ.ಪಾಟೀಲ ಅವರು ಇಲಾಖೆಯ ನಿಯೋಗದೊಂದಿಗೆ ಅಮೆರಿಕಾ ಪ್ರವಾಸದಲ್ಲಿದ್ದಾಗ ಶ್ರೀ ವಿಕಾಸ್ ಖನ್ನಾ ಅವರನ್ನು ಭೇಟಿ ಮಾಡಿ ಅವರಿಗೆ ಮೈಸೂರ್ ಸ್ಯಾಂಡಲ್ ಉತ್ಪನ್ನಗಳನ್ನು ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮಹೀಂದ್ರಾ ಸಮೂಹದ ಅಧ್ಯಕ್ಷರಾದ ಶ್ರೀ ಆನಂದ್ ಮಹೀಂದ್ರಾ ಅವರು, ಕೆಎಸ್‌ಡಿಎಲ್ ತಯಾರಿಸುವ ಪ್ರಸಿದ್ಧ ಮೈಸೂರು ಸ್ಯಾಂಡಲ್ ಸೋಪ್ ಬಗ್ಗೆ ತಮ್ಮ ಹಳೆಯ ನೆನಪುಗಳನ್ನು ಬಿಚ್ಚಿಟ್ಟರು. ಸೋಪುಗಳನ್ನು ಹೇಗೆ ತಯಾರಿಸಲಾಗುತ್ತಿದೆ ಎಂಬುದರ ವೀಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಅವರು, ಅವುಗಳನ್ನು ಮತ್ತೆ ಖರೀದಿಸುವುದಾಗಿ ಕೂಡ ಹೇಳಿದರು.

ಮುಂದಿನ ಕಾರ್ಯಚಟುವಟಿಕೆಗಳು

ವಾರ್ಷಿಕ ಆನ್‌ಲೈನ್ ಮಾರಾಟವನ್ನು **₹100 ಕೋಟಿ**ಗೆ ಹೆಚ್ಚಿಸಲು **ಇ-ಕಾಮರ್ಸ್** ವೇದಿಕೆಗಳೊಂದಿಗೆ ಪಾಲುದಾರಿಕೆ

ಪ್ರಚಾರ ಮತ್ತು ಮಾರಾಟ ಹೆಚ್ಚಿಸಲು ರಾಜ್ಯಾದ್ಯಂತ '**ಮೈಸೂರ್ ಸ್ಯಾಂಡಲ್ ಸೋಪ್ ಮೇಳ**' ಆಯೋಜನೆ

ಉತ್ತರ ಕರ್ನಾಟಕ ಭಾಗದಲ್ಲಿ ಮಾರಾಟ ವಿಸ್ತರಿಸಲು ವಿಜಯಪುರದಲ್ಲಿ ಉತ್ಪಾದನಾ ಘಟಕ ಸ್ಥಾಪಿಸಲು ಯೋಜನೆ. ಇದರಿಂದ ಸಾರಿಗೆ ವೆಚ್ಚದಲ್ಲಿ ಉಳಿತಾಯ.

ರಫ್ತು ಹೆಚ್ಚಿಸುವುದು
25 ರಾಷ್ಟ್ರಗಳಲ್ಲಿ ಮಾರುಕಟ್ಟೆ, **2026**ರ ವೇಳೆಗೆ **80** ರಾಷ್ಟ್ರಗಳಿಗೆ ವ್ಯಾಪಿಸುವ ಗುರಿ
ಈಶಾನ್ಯ ಭಾರತ, ಪಂಜಾಬ್, ರಾಜಾಸ್ಥಾನ, ಜಮ್ಮು-ಕಾಶ್ಮೀರ ರಾಜ್ಯಗಳಿಗೆ ಮಾರುಕಟ್ಟೆ ವಿಸ್ತರಣೆ

ಹಾಲಿ ಘಟಕಗಳಿಗೆ ಆಧುನಿಕ ಸ್ಪರ್ಶ ನೀಡಿ **ಉತ್ಪಾದನೆಯನ್ನು ದ್ವಿಗುಣಗೊಳಿಸುವುದು**

ಸಂದಿಗ್ಧ ಪರಿಸ್ಥಿತಿಯಲ್ಲಿದ್ದ ಐತಿಹಾಸಿಕ ಸಂಸ್ಥೆಯನ್ನು ಯಶಸ್ಸಿನ ಉತ್ತುಂಗಕ್ಕೆ ಏರಿಸಿದ ಕರ್ಮಯೋಗಿ ಶ್ರೀ ಎಂ.ಬಿ. ಪಾಟೀಲ

Excellent for the complexion

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. -ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಂಸ್ಥೆಯ ಈ ಅದ್ಭುತ ಸಾಧನೆಗೆ ಕಾರಣರಾದ ಕಾರ್ಮಿಕರು, ಸಿಬ್ಬಂದಿ ವರ್ಗ, ನೌಕರರ ಸಂಘ, ಅಧಿಕಾರಿ ವೃಂದ, ಪ್ರಧಾನ ವ್ಯವಸ್ಥಾಪಕರು-ಆಡಳಿತ, ಪ್ರಧಾನ ವ್ಯವಸ್ಥಾಪಕರು-ಹಣಕಾಸು, ಎಲ್ಲರಿಗೂ ಅವರ ಅಮೂಲ್ಯ ಕೊಡುಗೆಗಳಿಗೆ ಧನ್ಯವಾದಗಳು.

ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ಟ್ರ್ಯಾಕ್ಟರ್ ಪಲ್ಟಿ ರೈತ ಸಾವು

ಚನ್ನಪಟ್ಟಣ: ತಾಲ್ಲೂಕಿನ ಬ್ರಹ್ಮಣೀಪುರ-ವಿಠಲೇನಹಳ್ಳಿ ರಸ್ತೆಯಲ್ಲಿ ಗುರುವಾರ ರಾತ್ರಿ ಟ್ರ್ಯಾಕ್ಟರ್ ಪಲ್ಟಿಯಾಗಿ ದೊಡ್ಡನಹಳ್ಳಿ ಶರತ್ (28) ಎಂಬ ರೈತ ಮೃತಪಟ್ಟಿದ್ದಾರೆ.

ಮಾವು ಬೆಳೆಗಾರ ಶರತ್, ಮಾವುಗಳನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿಸಿಕೊಂಡು ಚನ್ನಪಟ್ಟಣದಲ್ಲಿ ಮಾರಾಟ ಮಾಡಲು ಹೋಗಿದ್ದರು. ಮಾವು ಮಾರಾಟ ಮಾಡಿ ರಾತ್ರಿ ಗ್ರಾಮಕ್ಕೆ ಹಿಂದಿರುಗುವಾಗ ಬ್ರಹ್ಮಣೀಪುರ-ವಿಠಲೇನಹಳ್ಳಿ ರಸ್ತೆಯಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡ ಟ್ರ್ಯಾಕ್ಟರ್ ರಸ್ತೆಯಲ್ಲಿ ಪಲ್ಟಿಯಾಗಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಚ್/ಸಿಎನ್/ಬಿಎನ್‌ಸಿ/118-ಎ/2025 ದಿನಾಂಕ : 20-05-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಜಮಖಂಡಿ – ಕುಡಚಿ	ರೂ. 6,26,20,300/-

ನಿಲ್ದಾಣಗಳ ನಡುವೆ ಕಿ.ಮೀ.85000 ನಿಂದ 142200 ವರೆಗೆ ಕಾಡು ಸ್ವಚ್ಛಗೊಳಿಸುವುದು, ಭೂಮಿ ಕಾಮಗಾರಿ, ರಚನೆಗಳನ್ನು ಕಳಚಿಹಾಕುವುದು, ಆರ್‌ಟಿಸಿ ಮತ್ತು ಮ್ಯುಟೇಶನ್ ಪ್ರತಿಗಳ ತಯಾರಿಕೆಯಲ್ಲಿ ಕರ್ನಾಟಕ ಸರ್ಕಾರದ ಅಧಿಕಾರಿಗಳೊಂದಿಗೆ ಸಂಪರ್ಕಿಸುವುದು, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಇತರ ಕಾಮಗಾರಿಗಳು (ಟೆಂಡರ್ ಉಲ್ಲೇಖ ಸಂ.: ಬಿಜಿಕೆ-ಕೆಯುಡಿ-46)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03-06-2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/136/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR SWRRLY SWRRLY

ಸರ್ಕಾರದ ₹7 ಸಾವಿರ ಕೋಟಿ ಅನುದಾನದ ಬೃಹತ್ ಕಾಮಗಾರಿಗಳ ಅನುಷ್ಠಾನಕ್ಕೆ ಎಸ್‌ಪಿವಿ

ಮೂಲಸೌಕರ್ಯ ಅಭಿವೃದ್ಧಿಗೆ 'ಬಿ–ಸ್ಮೈಲ್'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಬಿ–ಸ್ಮೈಲ್' ಸಂಸ್ಥೆಗೆ ಪ್ರಧಾನ ಎಂಜಿನಿಯರ್, ಮುಖ್ಯ ಎಂಜಿನಿಯರ್‌ಗಳ ನಿಯೋಜನೆ
- ಸುರಂಗ ರಸ್ತೆ, ಮೇಲ್ಸೇತುವೆ, ಸ್ಕೈಡೆಕ್, ವೈಟ್ ಟಾಪಿಂಗ್, ಬಫರ್ ರಸ್ತೆ ಸೇರಿ ಮೂಲಸೌಕರ್ಯ ಕಾಮಗಾರಿ
- 'ಬಿ–ಸ್ಮೈಲ್'ನ ತಾಂತ್ರಿಕ ನಿರ್ದೇಶಕರಾಗಿ ಪ್ರಹ್ಲಾದ್ ನೇಮಕ

ಬೆಂಗಳೂರು: ಮೂಲಸೌಕರ್ಯಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಒದಗಿಸಲಿರುವ ₹7 ಸಾವಿರ ಕೋಟಿ ಅನುದಾನದಲ್ಲಿ ಬೃಹತ್ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ)– 'ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ' (ಬಿ–ಸ್ಮೈಲ್) ಅನ್ನು ಸ್ಥಾಪಿಸಲಾಗಿದೆ.

ಬಿಬಿಎಂಪಿಯಿಂದ ಪ್ರಧಾನ ಎಂಜಿನಿಯರ್ ಹಾಗೂ ಮುಖ್ಯ ಎಂಜಿನಿಯರ್‌ಗಳನ್ನು 'ಬಿ–ಸ್ಮೈಲ್' ಸಂಸ್ಥೆಗೆ ನಿಯೋಜಿಸಲಾಗಿದ್ದು, ಅದಕ್ಕಾಗಿ ಹುದ್ದೆಗಳನ್ನು ಮರುಸೃಜನೆ ಹಾಗೂ ವಿಲೀನ ಮಾಡಲಾಗಿದೆ.

'ಬಿ–ಸ್ಮೈಲ್' ಹೆಸರು ಈಗಾಗಲೇ ನೋಂದಣಿಯಾಗಿದ್ದು, ಸಂಸ್ಥೆಯನ್ನು ನೋಂದಾಯಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಸಂಸ್ಥೆಯ ಮೂಲಕ ನಗರದಲ್ಲಿ ಸುರಂಗ ರಸ್ತೆ, ಮೇಲ್ಸೇತುವೆಗಳು, ಸ್ಕೈಡೆಕ್, ವೈಟ್ ಟಾಪಿಂಗ್, ಬಫರ್ ರಸ್ತೆಗಳು ಸೇರಿದಂತೆ ದೀರ್ಘಾವಧಿಯ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಬೃಹತ್ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕಿರುವುದರಿಂದ, ಅಗತ್ಯ ಮಾನವ ಸಂಪನ್ಮೂಲ ಒದಗಿಸಿಕೊಂಡು ಕಚೇರಿಯನ್ನು ಪ್ರಾರಂಭಿಸಬೇಕಿದೆ. ಅಲ್ಲದೆ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಗೆ ಬಂದಿರುವುದರಿಂದ ನಾಲ್ಕು ತಿಂಗಳೊಳಗೆ ಬಿಬಿಎಂಪಿಯನ್ನು ವಿಂಗಡಿಸಿ ಹೊಸ ನಗರ ಪಾಲಿಕೆಗಳನ್ನು ರಚಿಸಬೇಕಿದೆ. ಆದ್ದರಿಂದ ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಹುದ್ದೆಯನ್ನು 'ಬಿ–ಸ್ಮೈಲ್'ಗೆ ಪೂರ್ಣಕಾಲಿಕವಾಗಿ ವಿಲೀನಗೊಳಿಸಿ ನಗರಾಭಿವೃದ್ಧಿ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರನ್ನು 'ಬಿ–ಸ್ಮೈಲ್'ನ ತಾಂತ್ರಿಕ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಬಿಬಿಎಂಪಿಯನ್ನು ವಿಂಗಡಿಸಿ ಹೊಸ ನಗರ ಪಾಲಿಕೆಗಳನ್ನು ಸೃಜಿಸುವುದರಿಂದ, ಪಾಲಿಕೆಯ ಹುದ್ದೆಗಳು ಮತ್ತು ಪ್ರಕಾರ್ಯಗಳನ್ನು ಪರಿಷ್ಕರಿಸಲಾಗಿದೆ. ಹೀಗಾಗಿ, ಬಿಬಿಎಂಪಿಯ ಯೋಜನೆ– ಕೇಂದ್ರ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ವಿಭಜಿಸಲಾಗಿದೆ.

ಯೋಜನೆ–ಕೇಂದ್ರ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಕಟ್ಟಡ ಮತ್ತು ಸಂರಚನೆಗಳಿಗೆ ಸಂಬಂಧಿಸಿದ ಪ್ರಕಾರ್ಯಗಳನ್ನು ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಗೆ ವಿಲೀನಗೊಳಿಸಲಾಗಿದೆ.

ವೈಟ್ ಟಾಪಿಂಗ್, ಮೇಲ್ಸೇತುವೆ ಸೇರಿದಂತೆ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಪ್ರಕಾರ್ಯಗಳನ್ನು ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಗೆ ವಿಲೀನಗೊಳಿಸಲಾಗಿದೆ. ಈ ಹುದ್ದೆಯನ್ನು 'ಬಿ–ಸ್ಮೈಲ್' ಸಂಸ್ಥೆಗೆ ಸ್ಥಳಾಂತರಿಸಿ ಆದೇಶಿಸಲಾಗಿದೆ.

ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರನ್ನು 'ಬಿ–ಸ್ಮೈಲ್'ಗೆ ಪೂರ್ಣಾವಧಿಗೆ ನೇಮಿಸಿರುವುದರಿಂದ, ಬಿಬಿಎಂಪಿಯ ರಸ್ತೆ ಮೂಲಸೌಕರ್ಯ, ಬೃಹತ್ ನೀರುಗಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಗಳಿಗೆ ಸರ್ಕಾರ ನೇಮಕ ಮಾಡುವವರೆಗೂ, ಪ್ರಭಾರಿಗಳನ್ನು ನೇಮಿಸಲು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಲಾಗಿದೆ.

₹750 ಕೋಟಿ ಬಿಡುಗಡೆ

ರಾಜ್ಯ ಸರ್ಕಾರ 'ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ' ಯೋಜನೆಯಡಿ 2025–26ನೇ ಸಾಲಿನ ಮೊದಲ ಕಂತಿನ ₹750 ಕೋಟಿ ಅನುದಾನವನ್ನು ಬಿಬಿಎಂಪಿಗೆ ನಗರಾಭಿವೃದ್ಧಿ ಇಲಾಖೆ ಮೇ 20ರಂದು ಬಿಡುಗಡೆ ಮಾಡಿದೆ.

ವಿಶೇಷ ಮೂಲಸೌಕರ್ಯ ಯೋಜನೆಯಡಿ ಬೃಹತ್ ರಸ್ತೆಗಳು, ಮೇಲ್ಸೇತುವೆ, ಕಾರಿಡಾರ್ ಮುಂತಾದ ಯೋಜನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಗಳ ಬಿಲ್ ಬಾಕಿ ಇದ್ದು, ಅವುಗಳನ್ನು ಪಾವತಿಸದಿದ್ದರೆ ಪ್ರಗತಿ ಕುಂಠಿತವಾಗುವ ಸಂಭವವಿರುತ್ತದೆ. ಹೀಗಾಗಿ, 2025–26ನೇ ಸಾಲಿನಲ್ಲಿ ನಿಗದಿಪಡಿಸಲಾಗಿರುವ ₹3 ಸಾವಿರ ಕೋಟಿ ಅನುದಾನದಲ್ಲಿ ಮೊದಲ ಕಂತನ್ನು ಬಿಡುಗಡೆ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಕಚೇರಿ ಆರಂಭ ಶೀಘ್ರ'

ಬಿ.ಎಸ್. ಪ್ರಹ್ಲಾದ್

'ಸರ್ಕಾರದ ಅನುದಾನದಲ್ಲಿ ಬೃಹತ್ ಕಾಮಗಾರಿಗಳನ್ನು ಆರಂಭಿಸಬೇಕಿದೆ. 'ಬಿ–ಸ್ಮೈಲ್' ಕಚೇರಿಯನ್ನು ಕೂಡಲೇ ಸ್ಥಾಪಿಸಬೇಕಿದ್ದು, ಸ್ಮಾರ್ಟ್ ಸಿಟಿ ಕಚೇರಿಯಲ್ಲಿ ಅಥವಾ ಕೇಂದ್ರ ಭಾಗದ ಪ್ರಮುಖ ಸ್ಥಳದಲ್ಲಿ ಕಚೇರಿಯನ್ನು ಪ್ರಾರಂಭಿಸಲಾಗುತ್ತದೆ' ಎಂದು 'ಬಿ–ಸ್ಮೈಲ್'ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಸುದ್ದಿ 2 ನಿಮಿಷ

ಸಮೀಕ್ಷೆ: ಐವರ ಅಮಾನತು

ಬೆಂಗಳೂರು: ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆಯಲ್ಲಿ ನಿಗದಿತ ಸಮಯಕ್ಕೆ ಮಾಹಿತಿ ಸಂಗ್ರಹಿಸದ ಐವರನ್ನು ಬಿಬಿಎಂಪಿ ಅಮಾನತುಗೊಳಿಸಿದೆ.

ಸಮೀಕ್ಷೆಯ ಬಗ್ಗೆ ಮಾಹಿತಿ ಸಂಗ್ರಹಿಸದೆ, ಯಾವುದೇ ರೀತಿಯ ಪ್ರಗತಿ ಸಾಧಿಸದೆ ಕರ್ತವ್ಯಲೋಪ ಎಸಗಿರುವ, ಜಯನಗರದ ಹಿರಿಯ ಆರೋಗ್ಯ ಪರಿವೀಕ್ಷಕ ಶ್ರೀಜೇಶ್, ಮಹಾಲಕ್ಷ್ಮೀಪುರದ ಕಿರಿಯ ಆರೋಗ್ಯ ಪರಿವೀಕ್ಷಕ ವಿಜಯಕುಮಾರ್, ಅಂಜನಾಪುರ ವಿಭಾಗದ ಕಂದಾಯ ವಸೂಲಿಗಾರ ಎಚ್.ಸಿ. ಶಿವರಾಜು, ಸಿ.ವಿ. ರಾಮನ್‌ನಗರ ವಿಭಾಗದ ಕಂದಾಯ ವಸೂಲಿಗಾರ ಮಹದೇವ ಹಾಗೂ ಅಂಜನಾಪುರ ವಿಭಾಗದ ನಾಲ್ಕನೇ ದರ್ಜೆ ಸಹಾಯಕ ಶಂಕರ್ ಅವರನ್ನು ಅಮಾನತು ಮಾಡಿ ಬಿಬಿಎಂಪಿ ಆಡಳಿತ ವಿಭಾಗದ ಉಪ ಆಯುಕ್ತರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಐಐಎಚ್‌ಆರ್–ಪ್ರೆಸಿಡೆನ್ಸಿ ವಿವಿ ನಡುವೆ ಒಡಂಬಡಿಕೆ

ಹೆಸರಘಟ್ಟ: ಡಿಜಿಟಲ್ ತೋಟಗಾರಿಕೆಯಲ್ಲಿ ವಿದ್ಯಾರ್ಥಿ ವಿನಿಯಮ ಮತ್ತು ಸಂಶೋಧನಾ ಸಹಯೋಗಕ್ಕಾಗಿ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಮತ್ತು ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ (ಐಐಎಚ್‌ಆರ್) ನಡುವೆ ಒಡಂಬಡಿಕೆಗೆ ಶುಕ್ರವಾರ ಸಹಿ ಹಾಕಲಾಯಿತು.

ಇದಕ್ಕೂ ಮುನ್ನ ಐಐಎಚ್‌ಆರ್‌ನಲ್ಲಿ ಎರಡು ಸಂಸ್ಥೆಗಳ ಮುಖ್ಯಸ್ಥರು ಡಿಜಿಟಲ್ ತೋಟಗಾರಿಕೆಯಲ್ಲಿ ಸಂಶೋಧನೆ ಕುರಿತು ಚರ್ಚಿಸಿದರು.

ಐಸಿಎಆರ್ -ಐಐಎಚ್‌ಆರ್ ನಿರ್ದೇಶಕ ತುಷಾರ್ ಕಾಂತಿ ಬೆಹೇರಾ, ಪ್ರೊ. ಎಂ.ಡಿ.ಸಮೀರುದ್ದೀನ್ ಖಾನ್ ಮತ್ತು ವಿಜ್ಞಾನಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123

ದೂರವಾಣಿ ಸಂಖ್ಯೆ: 080–23718487

ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/13/2025–26 ದಿನಾಂಕ: 23–05–2025

ಟೆಂಡರ್ ಪ್ರಕಟಣೆ

(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2024–25ನೇ ಮತ್ತು 2025–26ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರು ಹಾಗೂ 2024–25ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನ ಮತ್ತು ನಗರಸಭೆ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಅಲ್ಪಾವಧಿ ಟೆಂಡರ್‌ನ ಇಂಡೆಂಟ್ ಸಂಖ್ಯೆ ಹಾಗೂ ವೇಳಾಪಟ್ಟಿ:

INDENT 40404, INDENT 40725, INDENT 40723

1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: **30.05.2025 ಸಂಜೆ 4.30 ಗಂಟೆಯವರೆಗೆ.** 2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **31.05.2025 ಸಂಜೆ 5.00 ವರೆಗೆ.** 3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **02.06.2025 ಸಂಜೆ 5.15 ಗಂಟೆಗೆ.** 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **04.06.2025 ಬೆಳಿಗ್ಗೆ 11.00 ಗಂಟೆಗೆ.**

ಪೂರ್ಣಾವಧಿ ಟೆಂಡರ್‌ನ ಇಂಡೆಂಟ್ ಸಂಖ್ಯೆ ಹಾಗೂ ವೇಳಾಪಟ್ಟಿ:

INDENT 40465

1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: **06.06.2025 ಸಂಜೆ 4.30 ಗಂಟೆಯವರೆಗೆ.** 2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **09.06.2025 ಸಂಜೆ 5.00 ವರೆಗೆ.** 3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **10.06.2025 ಸಂಜೆ 5.15 ಗಂಟೆಗೆ.** 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **12.06.2025 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ / ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ನಲ್ಲಿ ಮಾತ್ರ ತಿಳಿಸಲಾಗುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/831/ಸ್ಪ್ಯಾನ್/2025–26

ಟಿಡಿಆರ್ ವಂಚನೆ: ಬಿಬಿಎಂಪಿ ಅಧಿಕಾರಿಗಳು ಭಾಗಿ– ಇ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡ ಸ್ವತ್ತುಗಳಿಗೆ ಪ್ರತಿಯಾಗಿ ನೀಡಲಾಗಿದ್ದ ಅಭಿವೃದ್ಧಿ ಹಕ್ಕು ವರ್ಗಾವಣೆ ಪ್ರಮಾಣ ಪತ್ರ (ಟಿಡಿಆರ್ ಪ್ರಮಾಣ ಪತ್ರ) ವಂಚನೆ ಪ್ರಕರಣದಲ್ಲಿ ಬಿಬಿಎಂಪಿಯ ಉನ್ನತ ಅಧಿಕಾರಿಗಳು ನೇರವಾಗಿ ಭಾಗಿಯಾಗಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

ಈ ಸಂಬಂಧ ವಾಲ್‌ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಕಂಪನಿಗೆ ಸೇರಿದ ಒಂಬತ್ತು ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ಗುರುವಾರ ಮತ್ತು ಶುಕ್ರವಾರ ಶೋಧ ನಡೆಸಿದ್ದರು.

2009–2015ರ ಅವಧಿಯಲ್ಲಿ ಹೊರಮಾವು ಮತ್ತು ಟಿ.ಸಿ.ಪಾಳ್ಯ ರಸ್ತೆ ವಿಸ್ತರಣೆಗಾಗಿ ಬಿಬಿಎಂಪಿಯು ಜಮೀನು ಮತ್ತು ವಸತಿ ಕಟ್ಟಡಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿತ್ತು. ಆದರೆ 1989ರಲ್ಲೇ ಈ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಲಾಗಿತ್ತು ಎಂದು ಇ.ಡಿ ಮೂಲಗಳು ತಿಳಿಸಿವೆ.

ಈ ಸಂಗತಿಯನ್ನು ಮರೆಮಾಚಿ, ವಾಲ್‌ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಮತ್ತು ಕೆಲ ಮಧ್ಯವರ್ತಿಗಳು ಜಮೀನಿನ ಮೂಲ ಮಾಲೀಕರಿಂದ ಟಿಡಿಆರ್ ಕೋರಿ ಬಿಬಿಎಂಪಿಗೆ ಅರ್ಜಿ ಹಾಕಿಸಿದ್ದರು. ಬಿಬಿಎಂಪಿ ಅಧಿಕಾರಿಗಳಿಗೆ ಇದು ಗೊತ್ತಿದ್ದೂ, ₹27.68 ಕೋಟಿ ಮೊತ್ತದ ಟಿಡಿಆರ್ ನೀಡಿದ್ದರು ಎಂದು ಇ.ಡಿ ವಿವರಿಸಿದೆ.

ಮೂಲ ಮಾಲೀಕರಿಂದ ಟಿಡಿಆರ್ ಅನ್ನು ಜಿಪಿಎ ಮಾಡಿಸಿಕೊಂಡಿದ್ದ ವಾಲ್‌ಮಾರ್ಕ್ ಕಂಪನಿಯು, ಮಧ್ಯವರ್ತಿಗಳ ಮೂಲಕ ಅವನ್ನು 12 ಬೇರೆ ಬೇರೆ ಕಂಪನಿಗಳಿಗೆ ಮಾರಾಟ ಮಾಡಿತ್ತು. ಇದರಲ್ಲಿ ಬಿಬಿಎಂಪಿ ಅಧಿಕಾರಿಗಳೂ ನೇರವಾಗಿ ಭಾಗಿಯಾಗಿದ್ದರು. ಈ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿದ್ದಾರೆ ಎಂದು ತಿಳಿಸಿದೆ.

ಈ ಸಂಬಂಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ರಾಜ್ಯ ಪೊಲೀಸ್ ಇಲಾಖೆಗಳು ಹಲವು ಪ್ರಕರಣಗಳು ದಾಖಲಿಸಿಕೊಂಡು ತನಿಖೆ ನಡೆಸುತ್ತಿವೆ. ಆ ವಿವರಗಳನ್ನೂ ಕಲೆಹಾಕಿದ್ದು, ತನಿಖೆ ಮುಂದುವರೆಸಲಾಗಿದೆ ಎಂದು ಮಾಹಿತಿ ನೀಡಿದೆ.

ವಂಚನೆಯ ಪರಿ

'ಒಂದು ಅಂತಸ್ತು ಇದ್ದ ಕಟ್ಟಡವನ್ನು 3–4 ಅಂತಸ್ತು ಎಂದು ಬಿಬಿಎಂಪಿ ಅಧಿಕಾರಿಗಳು ಸುಳ್ಳು ವರದಿ ನೀಡಿದ್ದಾರೆ. ಖಾಲಿ ನಿವೇಶನದಲ್ಲೂ ವಾಣಿಜ್ಯ ಕಟ್ಟಡಗಳು ಇದ್ದವು ಎಂದು ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ. ಜತೆಗೆ ಟಿಡಿಆರ್ ಮೊತ್ತವನ್ನೂ ವಾಸ್ತವಕ್ಕಿಂತ ಹೆಚ್ಚು ತೋರಿಸಿದ್ದಾರೆ. ಈ ಮೂಲಕ ಬಿಬಿಎಂಪಿಗೆ ನಷ್ಟ ಉಂಟು ಮಾಡಿದ್ದಾರೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

'ಟಿಡಿಆರ್ ಸಂಬಂಧಿತ ಸಭೆಗಳಿಗೆ ಅಧಿಕಾರಿಗಳು ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳು ನಕಲಿ ಮಾಲೀಕರನ್ನು ಕರೆತಂದಿದ್ದಾರೆ. ಅವರಿಂದ ಸಹಿ ಪಡೆದು, ಟಿಡಿಆರ್ ಮಂಜೂರು ಮಾಡಿಸಿದ್ದಾರೆ. 2009 ಮತ್ತು 2015ರ ಅವಧಿಯಲ್ಲಿ ಈ ರೀತಿ ಹತ್ತಾರು ಕೋಟಿ ವಂಚಿಸಿದ್ದಾರೆ. ಈ ಬಗ್ಗೆ ವಿಸ್ತೃತ ತನಿಖೆಯ ಅಗತ್ಯವಿದೆ' ಎಂದು ಮಾಹಿತಿ ನೀಡಿವೆ.

ಇಂಡಿಯನ್ ಓಪನ್ ಸರ್ಫಿಂಗ್ 30ರಿಂದ

ಮಂಗಳೂರು: ಭಾರತ ಸರ್ಫಿಂಗ್ ಫೆಡರೇಷನ್ ಸಹಯೋಗದಲ್ಲಿ ನಗರದ ಮಂತ್ರ ಸರ್ಫಿಂಗ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಷನ್ ಆಯೋಜಿಸಿರುವ ಇಂಡಿಯನ್ ಓಪನ್ ಸರ್ಫಿಂಗ್ ಇದೇ 30ರಿಂದ ಜೂನ್ 1ರ ವರೆಗೆ ಸುರತ್ಕಲ್ ಸಮೀಪದ ಸಸಿಹಿತ್ಲು ಬೀಚ್‌ನಲ್ಲಿ ನಡೆಯಲಿದೆ.

ಉಡುಪ ಪ್ರತಿಷ್ಠಾನವು ದಶಮಾನೋತ್ಸವ ಅಂಗವಾಗಿ ಚೌಡಯ್ಯ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದ್ದ 'ಉಡುಪ ಸಂಗೀತೋತ್ಸವ'ದಲ್ಲಿ ವೆಂಕಟೇಶ ಕುಮಾರ್ ಅವರು ಗಾಯನ ಪ್ರಸ್ತುತಪಡಿಸಿದರು. ಹಾರ್ಮೋನಿಯಂನಲ್ಲಿ ವ್ಯಾಸಮೂರ್ತಿ ಕಟ್ಟಿ ಮತ್ತು ತಬಲಾದಲ್ಲಿ ಕೇಶವ ಜೋಶಿ ಸಾಥ್ ನೀಡಿದರು

ಅಮೆರಿಕ ಸಂಶೋಧನಾ ಸಂಸ್ಥೆಗೆ ಅಚ್ಯುತ ಸಮಂತ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ನ್ಯೂಯಾರ್ಕ್ ನಗರ ವಿಶ್ವವಿದ್ಯಾಲಯದಲ್ಲಿ (ಸಿಯುಎನ್‌ವೈ–ಕನಿ) ಹೊಸದಾಗಿ ಸ್ಥಾಪಿಸಲಾದ ಸಂಶೋಧನಾ ಸಂಸ್ಥೆಗೆ ಶಿಕ್ಷಣ ತಜ್ಞ ಅಚ್ಯುತ ಸಮಂತ ಅವರ ಹೆಸರನ್ನು ಇಡಲಾಗಿದೆ ಎಂದು ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ತಿಳಿಸಿದೆ.

ಅಚ್ಯುತಸಮಂತ ಇಂಡಿಯಾ ಇನಿಶಿಯೇಟಿವ್ ಕನಿ ಕ್ರೆಸ್ಟ್ ಇನ್‌ಸ್ಟಿಟ್ಯೂಟ್ (ಎಎಸ್‌ಐಐಸಿಸಿಐ) ಎಂದು ನಾಮಕರಣ ಮಾಡಲಾಗಿರುವ ಈ ಸಂಸ್ಥೆಯನ್ನು ಮಂಗಳವಾರ ನ್ಯೂಯಾರ್ಕ್‌ನಲ್ಲಿ ಉದ್ಘಾಟಿಸಲಾಯಿತು. ಅಮೆರಿಕದಲ್ಲಿ ಸಂಶೋಧನಾ ಸಂಸ್ಥೆಗೆ ಭಾರತೀಯರೊಬ್ಬರ ಹೆಸರಿಡಲಾಗುತ್ತಿರುವುದು ಇದೇ ಮೊದಲು. ಒಡಿಶಾದ ಕಲೆ ಮತ್ತು ಪರಂಪರೆಯ ಕುರಿತು ಅಮೆರಿಕನ್ ವಿದ್ಯಾರ್ಥಿಗಳು ನಡೆಸುವ ಸಂಶೋಧನೆಗೆ ಈ ಸಂಸ್ಥೆ ಬೆಂಬಲ ನೀಡಲಿದೆ. ಶಿಕ್ಷಣ ಮತ್ತು ಬುಡಕಟ್ಟು ಅಭಿವೃದ್ಧಿಯಲ್ಲಿ ಸಮಂತ ಅವರು ಮಾಡಿದ ಕೆಲಸದ ಮೇಲೆಯೂ ಬೆಳಕು ಚೆಲ್ಲಲಿದೆ ಎಂದು ಕೆಐಐಟಿ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

ಕನಿ ಅಡಿಯಲ್ಲಿ ಬರುವ ಬ್ರಾಂಕ್ಸ್ ಕಮ್ಯುನಿಟಿ ಕಾಲೇಜಿನ ಅಧ್ಯಕ್ಷ ಮಿಲ್ಟನ್ ಸ್ಯಾಂಟಿಯಾಗೊ ಅವರು ಇತ್ತೀಚೆಗೆ ಭುವನೇಶ್ವರದಲ್ಲಿರುವ ಕೆಐಐಟಿ ಮತ್ತು ಕೆಐಎಸ್‌ಎಸ್ ಸಂಸ್ಥೆಗಳಿಗೆ ಭೇಟಿ ನೀಡಿದ್ದಾಗ ಸಮಂತ ಅವರ ಕೆಲಸದಿಂದ ಪ್ರಭಾವಿತರಾಗಿದ್ದನ್ನು ತಿಳಿಸಿದ್ದರು. ಆನಂತರ ಸಂಶೋಧನಾ ಸಂಸ್ಥೆಗೆ ಸಮಂತ ಅವರ ಹೆಸರಿಡಲು ಸೂಚಿಸಿದ್ದರು. ಈ ಪ್ರಸ್ತಾವವನ್ನು ವಿಶ್ವವಿದ್ಯಾಲಯ ಮಂಡಳಿಯು ಅನುಮೋದಿಸಿತು ಎಂದು ತಿಳಿಸಿದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಚ್ಯುತ ಸಮಂತ ಅವರಿಗೆ ವಿಶ್ವವಿದ್ಯಾಲಯದ ಅತ್ಯುನ್ನತ ಗೌರವವಾದ ಅಧ್ಯಕ್ಷೀಯ ಪದಕ ನೀಡಿ ಗೌರವಿಸಲಾಯಿತು.

'ಅಮೆರಿಕದ ಸಂಸ್ಥೆಗೆ ಹೆಸರು ಇಟ್ಟಿರುವ ಗೌರವವನ್ನು ಒಡಿಶಾದ ಜನರಿಗೆ, ಕೆಐಐಟಿ, ಕೆಐಎಸ್‌ಎಸ್ ಸಂಸ್ಥೆಗಳಿಗೆ ಸಮರ್ಪಿಸುತ್ತೇನೆ' ಎಂದು ಅಚ್ಯುತ ಸಮಂತ ತಿಳಿಸಿದ್ದಾರೆ.

ಅಚ್ಯುತ ಸಮಂತ ಇಂಡಿಯಾ ಇನಿಶಿಯೇಟಿವ್ ಕನಿ ಕ್ರೆಸ್ಟ್ ಇನ್‌ಸ್ಟಿಟ್ಯೂಟ್ (ಎಎಸ್‌ಐಐಸಿಸಿಐ) ಅನ್ನು ನ್ಯೂಯಾರ್ಕ್‌ನಲ್ಲಿ ಉದ್ಘಾಟಿಸಲಾಯಿತು

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.

ದೂರವಾಣಿ: +91-80-41436000 ಫ್ಯಾಕ್ಸ್: +91-80-41436005

ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

31ನೇ ಮಾರ್ಚ್ 2025ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
		31 ಮಾರ್ಚ್ 2025 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಡಿಸೆಂಬರ್ 2024 (ಅಪರಿಶೋಧಿತ)	31 ಮಾರ್ಚ್ 2024 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಮಾರ್ಚ್ 2025 (ಪರಿಶೋಧಿತ)	31 ಮಾರ್ಚ್ 2024 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	3,687.38	2,813.45	2,968.93	11,554.17	10,908.20
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	253.58	32.06	1.44	284.35	127.57
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	298.31	(160.99)	(47.35)	136.03	78.78
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	215.25	(192.97)	(68.95)	(19.27)	(27.55)
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	204.07	(163.07)	(59.41)	(10.10)	(5.20)
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)				147.07	128.88
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಆಡಿಟೆಡ್ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				3,905.16	1,903.84
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ					
	ಎ) ಮೂಲಭೂತ:	16.92	(12.79)	(4.18)	1.89	1.38
	ಬಿ) ಡೈಲ್ಯೂಟೆಡ್:	16.92	(12.79)	(4.18)	1.89	1.36

ಸೂಚನೆ :

1. 31 ಮಾರ್ಚ್ 2025ರ ತ್ರೈಮಾಸಿಕ ಹಾಗೂ ವರ್ಷಕ್ಕೆ ಕೊನೆಗೊಂಡ ಪ್ರತ್ಯೇಕವಾದ ಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
	31 ಮಾರ್ಚ್ 2025 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಡಿಸೆಂಬರ್ 2024 (ಅಪರಿಶೋಧಿತ)	31 ಮಾರ್ಚ್ 2024 ಪರಿಶೋಧಿತ (ಟಿಪ್ಪಣಿ 5ನ್ನು ಸಹ ಗಮನಿಸಿ)	31 ಮಾರ್ಚ್ 2025 (ಪರಿಶೋಧಿತ)	31 ಮಾರ್ಚ್ 2024 (ಪರಿಶೋಧಿತ)
ನಿವ್ವಳ ಮಾರಾಟ / ಕಾರ್ಯಾಚರಣೆಗಳಿಂದ ಆದಾಯ	2,694.76	1,807.48	1,684.56	7,498.38	6,327.98
ಲಾಭ ತೆರಿಗೆಯ ಮುಂಚೆ	398.57	123.81	118.87	712.03	489.98
ಲಾಭ ತೆರಿಗೆಯ ನಂತರ	295.79	91.17	87.08	527.95	362.52

2. ಅಪರಿಶೋಧಿತ, ಪ್ರತ್ಯೇಕವಾದ ಹಾಗೂ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 21ನೇ ಮೇ, 2025 ರಂದು ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 22ನೇ ಮೇ, 2025 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಕಂಪನಿಯ ನಿರ್ದೇಶಕರ ಮಂಡಳಿಯು ಮೇ 22, 2025 ರಂದು ನಡೆದ ಸಭೆಯಲ್ಲಿ ಮಾರ್ಚ್ 31, 2025 ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಅವಧಿಗೆ ಪ್ರತಿ ಈಕ್ವಿಟಿ ಷೇರಿಗೆ ರೂ. 6 ರ ಡಿವಿಡೆಂಡ್ ಅನ್ನು ಶಿಫಾರಸು ಮಾಡಿದೆ, ಇದು ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.
4. ಮೇಲಿರುವ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಪರಿಶೋಧಿತ, ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪ ಮತ್ತು ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಸಂಕ್ಷಿಪ್ತ ರೂಪವಾಗಿದೆ. ಸಮಗ್ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಹಣಕಾಸಿನ ಪ್ರತ್ಯೇಕವಾದ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.
5. ಪ್ರಸ್ತುತ ಮಾರ್ಚ್ 31 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಹಿಂದಿನ ವರ್ಷದ ಸಂಯೋಜಿತ Ind AS ಹಣಕಾಸು ಫಲಿತಾಂಶಗಳಲ್ಲಿ ಸಂಪೂರ್ಣ ಹಣಕಾಸು ವರ್ಷಗಳ ಲೆಕ್ಕಪರಿಶೋಧನೆಯ ಅಂಕಿಅಂಶಗಳ ನಡುವಿನ ಸಮತೋಲನ ಅಂಕಿಅಂಶಗಳು ಮತ್ತು ಆಯಾ ವರ್ಷಗಳಿಗೆ ಡಿಸೆಂಬರ್ 31 ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಲೆಕ್ಕಪರಿಶೋಧನೆ ಮಾಡದ ಪ್ರಕಟಿತ ವರ್ಷದಿಂದ ದಿನಾಂಕದ ಅಂಕಿಅಂಶಗಳು, ಸೀಮಿತ ಪರಿಶೀಲನೆಗೆ ಒಳಪಟ್ಟಿರುವ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದ ಅಂತ್ಯದ ದಿನಾಂಕವಾಗಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ಮೇ 22, 2025

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. CIN : L23209KA1977PLC043357

E-mail : info@gpl.in, secretarial@gujaratpetrosynthese.com Website: www.gpl.in

ಮಾರ್ಚ್ 31, 2025ರ ತ್ರೈಮಾಸಿಕ ಹಾಗೂ ವರ್ಷದ ಅವಧಿಗೆ ಅಂತ್ಯಗೊಂಡ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಮಾರ್ಚ್ 2025 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2025 ವರ್ಷಕ್ಕೆ ಅಂತ್ಯಗೊಂಡ	ಮಾರ್ಚ್ 2024 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2024 ವರ್ಷಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	54,615	2,01,372	39,829	1,67,895
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	6,006	22,100	772	12,923
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	6,006	22,100	772	12,923
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	4,975	14,603	1,354	16,595
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	4,975	14,603	1,354	16,595
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969	5,969
7	ಮೀಸಲು(ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ				4,24,925
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.83	2.45	0.23	2.78

ಸೂಚನೆಗಳು:

A) ಈ ಮೇಲಿನವು 31ನೇ ಮಾರ್ಚ್ 2025ರ ತ್ರೈಮಾಸಿಕ ಹಾಗೂ ವರ್ಷದ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ಮೇ 23, 2025 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. B) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. C) ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ / ಮರು ಜೋಡಿಸಲಾಗಿದೆ.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್‌ನ ಪರವಾಗಿ
ಉರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ
ಡಿ.ಐ.ಎನ್ : 00319482

ಸ್ಥಳ : ಮುಂಬೈ
ದಿನಾಂಕ : 23/05/2025

ದೊಡ್ಡಪ್ಪನ ಹತ್ಯೆ ಮಾಡಿದ ಯುವಕ

ಗುಬ್ಬಿ: ಜಮೀನು ವಿಚಾರವಾಗಿ ದೊಡ್ಡಪ್ಪನನ್ನೇ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಸಿಎಸ್ ಪುರ ಹೋಬಳಿ ಅಂಕಳಕೊಪ್ಪದಲ್ಲಿ ಶುಕ್ರವಾರ ನಡೆದಿದೆ.

ಕೊಲೆಯಾದವರನ್ನು ಕರೀಂ ಸಾಬ್ (65) ಎಂದು ಗುರುತಿಸಲಾಗಿದೆ. ಅವರ ಸೋದರನ ಮಗನಾದ ಸಬ್ರೀಸ್ ಕೊಲೆ ಮಾಡಿ ತಲೆಮರೆಸಿಕೊಂಡಿರುವ ಆರೋಪಿ. ಸಿಎಸ್ ಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಿಧನ ವಾರ್ತೆ

ಯಶೋದಮ್ಮ

ಯಶೋದಮ್ಮ

ಯಲಹಂಕ: ಯಲಹಂಕ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ದಿವಂಗತ ಕೆ.ವಿ.ಬೈರೇಗೌಡ ಅವರ ಪತ್ನಿ ಯಶೋದಮ್ಮ (103) ಅವರು ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಮೃತರಿಗೆ ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಶುಕ್ರವಾರ ಮೃತರ ಅಂತ್ಯಕ್ರಿಯೆ ನೆರವೇರಿತು.

ಸಾಧಕ ಚಿತ್ರಕಲಾವಿದರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಚಿವ ತಂಗಡಗಿ ಅಭಿಪ್ರಾಯ

ಸಂಪೂರ್ಣ ಚಿತ್ರಣ ಕಟ್ಟಿಕೊಡುವ ಚಿತ್ರಕಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾವಿರ ಪದಗಳಲ್ಲಿ ಹೇಳಲಾಗದ್ದನ್ನು ಒಂದು ಚಿತ್ರ ಸರಳವಾಗಿ ಹೇಳುತ್ತದೆ. ಚಿತ್ರ ಕಲೆಗೆ ಯಾವುದೇ ಘಟನೆಯ ಸಂಪೂರ್ಣ ಚಿತ್ರಣವನ್ನು ಕಟ್ಟಿಕೊಡುವ ಶಕ್ತಿ ಇದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಅವರು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿದ್ದ ಸಾಧಕ ಚಿತ್ರಕಲಾವಿದರಿಗೆ 'ಗೌರವ ಪ್ರಶಸ್ತಿ' ಮತ್ತು 'ವರ್ಣಶ್ರೀ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

'ನಮ್ಮ ಸರ್ಕಾರ ನಾಡಿನ ಕಲೆ, ಸಂಸ್ಕೃತಿಯನ್ನು ನಿರಂತರವಾಗಿ ಪ್ರೋತ್ಸಾಹಿಸುತ್ತಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಬರುವ 14 ಅಕಾಡೆಮಿಗಳಿಗೂ ತಲಾ ₹1 ಕೋಟಿ ಅನುದಾನವನ್ನು ಒದಗಿಸಲಾಗಿದೆ' ಎಂದರು.

'ಹಿಂದಿನ ಸರ್ಕಾರ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ನೇಮಿಸಿರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣದಲ್ಲೇ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ಅಧ್ಯಕ್ಷ, ನಿರ್ದೇಶಕರನ್ನು ನೇಮಿಸಿದ್ದೇವೆ. ಎಲ್ಲ ಅಕಾಡೆಮಿಗಳ ಕಾರ್ಯಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ' ಎಂದು ತಿಳಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಅಕ್ಷರ ಲಿಪಿ ಹುಟ್ಟುವುದಕ್ಕೂ ಮುನ್ನವೇ ಚಿತ್ರಲಿಪಿ ಹುಟ್ಟಿತ್ತು. ಚಿತ್ರಕಲೆಗೆ ಇರುವ ಶಕ್ತಿ ಅಗಾಧವಾದುದು' ಎಂದು ಬಣ್ಣಿಸಿದರು.

'ಬಣ್ಣಕ್ಕೆ ಅದರದ್ದೇ ಆದ ಭಾವ ಇರುತ್ತದೆ. ಸಾಹಿತ್ಯಕ್ಕೂ ಮತ್ತು ಚಿತ್ರಕಲೆಗೂ ಸಂಬಂಧವಿದೆ. ಚಿತ್ರಗಳ ಮೂಲಕವೇ ಕಥೆಯನ್ನು ಹೇಳಲಾಗುತ್ತದೆ. ಪಠ್ಯ ಪುಸ್ತಕದಲ್ಲಿ ಚಿತ್ರಕಲೆಯ ಮಹತ್ವ ಹೆಚ್ಚಿದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಲಲಿತಾಕಲಾ ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ವೆಂಕಟೇಶ್, ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಲಲಿತಕಲಾ ಅಕಾಡೆಮಿಯ 2021ರಿಂದ 2024ನೇ ಸಾಲಿನ ವರೆಗಿನ 'ವರ್ಣಶ್ರೀ ಪ್ರಶಸ್ತಿ' ಹಾಗೂ 'ಗೌರವ ಪ್ರಶಸ್ತಿ' ಪುರಸ್ಕೃತರೊಂದಿಗೆ ಕೆ.ಎಂ. ಗಾಯತ್ರಿ, ಎಂ. ವಿ. ವೆಂಕಟೇಶ್, ಶಿವರಾಜ್ ಎಸ್ ತಂಗಡಗಿ, ಬರಗೂರು ರಾಮಚಂದ್ರಪ್ಪ, ಪ.ಸ.ಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ

ಹೆಸರು ಬದಲಿಗೆ ಮನವಿ

ಲಲಿತಕಲಾ ಅಕಾಡೆಮಿಯ ಹೆಸರನ್ನು ಬದಲಿಸುವಂತೆ ಅಕಾಡೆಮಿಯ ಅಧ್ಯಕ್ಷರು ಹಾಗೂ ಹಿರಿಯ ಕಲಾವಿದರು ವೇದಿಕೆಯಲ್ಲಿದ್ದ ಸಚಿವರಿಗೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಹೆಸರು ಬದಲಾಯಿಸಲು ನಮ್ಮ ವಿರೋಧ ಇಲ್ಲ. ಅಕಾಡೆಮಿ ಹಾಗೂ ಸದಸ್ಯರು ಒಕ್ಕೊರಲಿನಿಂದ ಒಂದು ಹೆಸರು ಶಿಫಾರಸು ಮಾಡಿದರೆ, ಮುಖ್ಯಮಂತ್ರಿಯವರ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದು' ಎಂದರು.

ಪ್ರಶಸ್ತಿ ಪ್ರದಾನ

ಗೌರವ ಪ್ರಶಸ್ತಿ: ಬಿ.ಪಿ.ಕಾರ್ತಿಕ್, ಕಮಲ್ ಅಹ್ಮದ್ ಎಂ., ಸಿ.ಎಸ್.ನಿರ್ಮಲಾ ಕುಮಾರಿ ಅವರಿಗೆ 2022-23ನೇ ಸಾಲಿನ 'ಗೌರವ ಪ್ರಶಸ್ತಿ' ಹಾಗೂ ನಿಜಲಿಂಗಪ್ಪ ಬ.ಹಾಲ್ವಿ, ಡಾ.ವಿಠಲರಡ್ಡಿ ಫ.ಚುಳಕಿ ಹಾಗೂ ಹೆಚ್. ಬಾಬುರಾವ್ ಅವರಿಗೆ 2023-24ನೇ ಸಾಲಿನ 'ಗೌರವ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ವರ್ಣ ಪ್ರಶಸ್ತಿ: ವೀಣಾಶ್ರೀನಿವಾಸ್, ಪರಮೇಶ್ ಡಿ.ಜೋಳದ, ಪಿ.ಎ.ಬಿ.ಈಶ್ವರ್, ಕೂಡಲಯ್ಯ ಹಿರೇಮಠ, ಅಶೋಕ್ ಕಲಶೆಟ್ಟಿ, ನಂದಬಸಪ್ಪ ವಾಡೆ, ಕೆ.ಜಿ. ಲಿಂಗದೇವರು, ಬಿ.ಎಲ್.ಮಹೇಶ್, ಶಂಕುತಲಾ ವರ್ಣೇಕರ್, ಮಂಜುನಾಥ ಗೋವಿಂದವಾಡ ಅವರಿಗೆ 2021-22ನೇ ಸಾಲಿನ ಪ್ರಶಸ್ತಿ ಹಾಗೂ ಪ್ರಕಾಶ್ ಜಿ.ನಾಯಕ್, ಬಸವರಾಜ ಸಿ.ಕುತ್ನಿ, ಜಗದೀಶ್ ಎಂ.ಕಾಂಬಳೆ, ಟಿ.ಎಸ್. ಜಯದೇವಣ್ಣ, ಶ್ರೀಶೈಲ ಎಸ್.ಧೋತ್ರೆ, ಎ.ಮಹದೇವಸ್ವಾಮಿ, ಮೀನಾಕ್ಷಿ ಸದಲಗಿ, ಕೆ.ಎಂ.ರವೀಶ್, ಎಫ್.ವಿ.ಚಿಕ್ಕಮಠ, ಸೈಯದ್ ಆಸೀಫ್ ಅಲಿ ಅವರಿಗೆ 2022-23ನೇ ಸಾಲಿನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2: ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ಮೇ 26ರಿಂದ ಜೂನ್ 2ರ ವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಘೋಷಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಆದೇಶ ಹೊರಡಿಸಿದ್ದಾರೆ.

ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲಾ ವ್ಯಾಪ್ತಿಯ 50 ಪರೀಕ್ಷಾ ಕೇಂದ್ರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ವ್ಯಾಪ್ತಿಯ 53 ಸೇರಿ 103 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷೆಗಳನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದೆ. ಝೆರಾಕ್ಸ್, ಸೈಬರ್ ಹಾಗೂ ಕಂಪ್ಯೂಟರ್ ಸೆಂಟರ್ ಮುಚ್ಚುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಜೈಲಿಗೆ ವಾಪಸ್ ಬಾರದ ಕೈದಿ

ಬೆಂಗಳೂರು: ಪೆರೋಲ್ ಮೇಲೆ ಹೊರ ಬಂದಿದ್ದ ಕೈದಿ ಮೊಹಮ್ಮದ್ ಇದ್ರಿಸ್ ಎಂಬಾತ ವಾಪಸ್ ಜೈಲಿಗೆ ಮರಳದೆ ತಲೆಮರೆಸಿಕೊಂಡಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಗೆ ದೂರು ನೀಡಲಾಗಿದೆ.

ಕೇಂದ್ರ ಕಾರಾಗೃಹ ಅಧೀಕ್ಷಕ ಇಮಾಮ್ ಸಾಬ್ ಮ್ಯಾಗೇರಿ ಅವರ ದೂರಿನ ಮೇರೆಗೆ ಮೊಹಮ್ಮದ್ ಇದ್ರಿಸ್, ಈತನಿಗೆ ಜಾಮೀನು ನೀಡಿದ್ದ ಅಭಿಲಾಷಾನು ಮತ್ತು ಹುಸ್ನಾಬಾನ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.24, ಸುವರ್ಣ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 080- 23300497 41159606 , 23359600 ಇ–ಮೇಲ್ : vjn@jscbl.com

ಸ್ವಾಧೀನ ಸೂಚನೆ ನಿಯಮ 8(1)ರಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

ಶ್ರೀ ಸಿ.ಗಂಗಾಧರ ಮೂರ್ತಿ ಬಿನ್ ಚೆನ್ನಿಗಪ್ಪ

ಶ್ರೀಮತಿ ಕುಸುಮಾ ಆರ್ ಕೋಂ ಗಂಗಾಧರ ಮೂರ್ತಿ ಸಿ

ಕೆಳಸಹಿದಾರರು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002 ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **12.02.2025** ರಂದು ಇದ್ದಂತೆ **ರೂ. 11,71,39,705/–** (ರೂಪಾಯಿ ಹನ್ನೊಂದು ಕೋಟಿ ಎಪ್ಪತ್ತೊಂದು ಲಕ್ಷದ ಮೂವತ್ತೊಂಭತ್ತು ಸಾವಿರದ ಏಳುನೂರ ಐದು ಮಾತ್ರ) ಪಾವತಿ ಮಾಡಲು **ಸಾಲಗಾರರಾದ: ಶ್ರೀ ಸಿ.ಗಂಗಾಧರ ಮೂರ್ತಿ ಬಿನ್ ಚೆನ್ನಿಗಪ್ಪ ಮತ್ತು ಶ್ರೀಮತಿ ಕುಸುಮಾ ಆರ್** ಕೋಂ ಗಂಗಾಧರ ಮೂರ್ತಿ ಸಿ, ಇವರಿಬ್ಬರ ವಿಳಾಸ : 322, 3ನೇ ಎ ಕ್ರಾಸ್, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು–560079 ಇವರಿಗೆ ದಿನಾಂಕ: **24.02.2025** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್ 13(8) ರೊಂದಿಗೆ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 22.05.2025** ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ವಿಜಯನಗರ, ಬೆಂಗಳೂರು** ಇವರಿಗೆ ಸಂದಾಯವಾಗತಕ್ಕ ಸಾಲ ಮತ್ತು **(1) ಎಂಟಿಎಲ್–69 ವಿಜಯನಗರ** ಮೊತ್ತ ಮೊಬಲಗು **ರೂ7,79,92,506/– (ರೂಪಾಯಿ ಏಳು ಕೋಟಿ ಎಪ್ಪತ್ತೊಂಭತ್ತು ಲಕ್ಷದ ತೊಂಭತ್ತೆರಡು ಸಾವಿರದ ಐದುನೂರ ಆರು ಮಾತ್ರ) (2) ಎಂಟಿಎಲ್–154 ವಿಜಯನಗರ** ಮೊತ್ತ ಮೊಬಲಗು **ರೂ.4,36,86,497/– (ರೂಪಾಯಿ ನಾಲ್ಕು ಕೋಟಿ ಮೂವತ್ತಾರು ಲಕ್ಷದ ಎಂಭತ್ತಾರು ಸಾವಿರದ ನಾಲ್ಕುನೂರ ತೊಂಭತ್ತೇಳು ಮಾತ್ರ) ದಿನಾಂಕ 17.05.2025** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಉಪ ಕಾಯಿದೆ 8 ಮತ್ತು ಕಾಯಿದೆಯ ಸೆಕ್ಷನ್ 13ರ ಅನ್ವಯ ಇರುತ್ತದೆ.

(ಹೈಪೋಥಿಕೇಟೆಡ್ ಸ್ವತ್ತುಗಳ ವಿವರಗಳು ಮತ್ತು ಸಾಲಗಾರನ ಅಡಮಾನ ಆಸ್ತಿಗಳ ವಿವರಗಳು)
ಆಸ್ತಿಯು ಶ್ರೀಮತಿ. ಕುಸುಮಾ.ಆರ್. ರವರ ಹೆಸರಿನಲ್ಲಿದೆ.

ಸ್ಥಿರಾಸ್ತಿಯ ಮನಿಸಿಪಲ್ ಖಾತಾ ನಂ. 11 (11, 11/1 & 11/2), ಹಳೇ ನಂ. 7, 13ನೇ ಕ್ರಾಸ್, 1ನೇ ಮುಖ್ಯರಸ್ತೆ, ವಸಂತನಗರ, (ಕೊಡವ ಸಮಾಜ ಎದುರು), ಬಿಬಿಎಂಪಿ ವಾರ್ಡ್ ನಂ. 78, ಪಿಐಡಿ ಸಂಖ್ಯೆ. 78–100–11, ಹೊಸ ಪಿಐಡಿ ಸಂಖ್ಯೆ 093-M0044-115, ಬೆಂಗಳೂರು–560052 ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 90 ಅಡಿ, ಒಟ್ಟು ವಿಸ್ತೀರ್ಣ 4500 ಚದರ ಅಡಿ, ಮತ್ತು ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : 13ನೇ ಅಡ್ಡ ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ. 06, ಉತ್ತರಕ್ಕೆ : ಮುಖ್ಯ ರಸ್ತೆ, ದಕ್ಷಿಣಕ್ಕೆ : ನಿವೇಶನ ನಂ. 08.

ದಿನಾಂಕ : 23.05.2025
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಮಂಗಳೂರು: ಮದುವೆ ದಲ್ಲಾಳಿಯ ಹತ್ಯೆ

ಮಂಗಳೂರು: ಮದುವೆಯಾದ ಆರೇ ತಿಂಗಳಲ್ಲಿ ಪತ್ನಿ ತನ್ನನ್ನು ತೊರೆದು ತವರು ಮನೆ ಸೇರಿದ್ದಾಳೆ ಎಂಬ ಸಿಟ್ಟಿಗೆ ಪತಿಯು ಮದುವೆ ಮಾಡಿಸಿದ್ದ ದಲ್ಲಾಳಿಯನ್ನೇ ಚೂರಿಯಿಂದ ಇರಿದು ಕೊಲೆ ಮಾಡಿದ್ದಾನೆ.

'ವಾಮಂಜೂರಿನ ಸುಲೇಮಾನ್ (50) ಕೊಲೆಯಾದವರು. ಅವರ ಪುತ್ರರಾದ ರಿಯಾಬ್ ಹಾಗೂ ಶಿಯಾಬ್ ಕೂಡ ಗಾಯಗೊಂಡಿದ್ದಾರೆ. ಸುಲೇಮಾನ್ ಸಂಬಂಧಿ ವಳಚ್ಚಿಲ್ ನಿವಾಸಿ ಮುಸ್ತಾಫಾ (30) ಕೊಲೆ ಆರೋಪಿಯಾಗಿದ್ದು, ಆತನನ್ನು ಬಂಧಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ಷಾಹಿನಾಜ್ ಎಂಬ ಯುವತಿಯನ್ನು ಮುಸ್ತಾಫಾ 8 ತಿಂಗಳ ಹಿಂದೆ ಮದುವೆಯಾಗಿದ್ದ. ಮದುವೆ ದಲ್ಲಾಳಿಯಾಗಿದ್ದ ಸುಲೇಮಾನ್ ಈ ಸಂಬಂಧ ಕುದುರಿಸಿದ್ದರು. ಮದುವೆಯಾದ ಕೆಲವೇ ತಿಂಗಳಲ್ಲಿ ದಂಪತಿ ನಡುವೆ ಮನಃಸ್ತಾಪ ಉಂಟಾಗಿತ್ತು. ಷಾಹಿನಾಜ್ ಎರಡು ತಿಂಗಳ ಹಿಂದೆ ಪತಿಯನ್ನು ತೊರೆದು ತವರು ಮನೆ ಸೇರಿದ್ದರು. ಮಾತುಕತೆ ನಡೆಸಿ ವಿಚಾರ ಬಗೆಹರಿಸಲು ಸುಲೇಮಾನ್ ತಮ್ಮ ಇಬ್ಬರು ಪುತ್ರರ ಜೊತೆ ಮುಸ್ತಾಫಾನ ವಳಚ್ಚಿಲ್‌ನ ಮನೆಗೆ ಗುರುವಾರ ರಾತ್ರಿ ತೆರಳಿದ್ದರು.

ಈ ವೇಳೆ ಏಕಾಏಕಿ ಸಿಟ್ಟಾದ ಮುಸ್ತಾಫಾ ಮನೆಯಲ್ಲಿದ್ದ ಚೂರಿ ತಂದು ಸುಲೇಮಾನ್ ಮತ್ತು ಅವರ ಪುತ್ರರಿಗೆ ಚೂರಿಯಿಂದ ಇರಿದಿದ್ದಾನೆ.

ಆರೋಪಿ ಮೊಬೈಲ್ ಎಫ್‌ಎಸ್‌ಎಲ್‌ಗೆ ರವಾನೆ

ಅತ್ಯಾಚಾರ ಪ್ರಕರಣ: ಪೊಲೀಸ್ ಕಸ್ಟಡಿಗೆ ಮನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹ ನಟಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಬಂಧಿತರಾಗಿರುವ ನಟ ಮಡೆನೂರು ಮನು ಅವರನ್ನು ಹೆಚ್ಚಿನ ವಿಚಾರಣೆಗೆ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ.

ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಆರೋಪಿಯನ್ನು ಗುರುವಾರ ಬಂಧಿಸಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ಬಳಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶರ ಎದುರು ಆರೋಪಿಯನ್ನು ಹಾಜರು ಪಡಿಸಿ, ಕಸ್ಟಡಿಗೆ ನೀಡುವಂತೆ ಮನವಿ ಮಾಡಿದರು. ಶನಿವಾರ ಸ್ಥಳ ಮಹಜರು ನಡೆಸುವ ಸಾಧ್ಯತೆಯಿದೆ.

ಮೊಬೈಲ್ ವಶ: ನಟನ ಮೊಬೈಲ್ ವಶಪಡಿಸಿಕೊಂಡಿದ್ದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಇಬ್ಬರ ನಡುವೆ ಮೊಬೈಲ್‌ನಲ್ಲಿ ವಿನಿಮಯವಾಗಿರುವ ಸಂದೇಶಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಕರೆಗಳ ರೆಕಾರ್ಡ್ ಹಾಗೂ ಇತರೆ ಮಾಹಿತಿಗಳ ಸಂಗ್ರಹಕ್ಕೆ ಪ್ರಯತ್ನ ಆರಂಭಿಸಿದ್ದಾರೆ.

ಮೊಬೈಲ್ ಪರಿಶೀಲನೆ ವೇಳೆ ವಿಡಿಯೊಗಳು ಹಾಗೂ ಫೋಟೊಗಳು ಲಭ್ಯವಾಗಿಲ್ಲ. ಒಂದು ವೇಳೆ ಆರೋಪಿ ವಿಡಿಯೊಗಳನ್ನು ಅಳಿಸಿ ಹಾಕಿದ್ದರೆ, ಅವುಗಳನ್ನು ಮರುಸಂಗ್ರಹ ಮಾಡಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂತ್ರಸ್ತೆ ಹೇಳಿಕೆ ದಾಖಲು: ಸಂತ್ರಸ್ತೆ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ. ಆರೋಪಕ್ಕೆ ಸಂಬಂಧಿಸಿದಂತೆ ಕೆಲವೊಂದು ದಾಖಲೆಗಳನ್ನು ಕೇಳಿದ್ದಾರೆ.

ಬಳಿಕ ಮಾತನಾಡಿದ ಸಂತ್ರಸ್ತೆ, 'ಸಿನಿಮಾ ವಿಚಾರಕ್ಕೂ ದೂರಿಗೂ ಸಂಬಂಧ ಇಲ್ಲ. ಚಿತ್ರ ತಂಡದವರು ದೂರು ಕೊಡದಂತೆ ಮನವಿ ಮಾಡಿದರು. ಆದರೆ, ಮನು ಕೊಟ್ಟಿರುವ ಹಿಂಸೆಯಿಂದ ದೂರು ನೀಡಿದ್ದೇನೆ' ಎಂದು ಹೇಳಿದ್ದಾರೆ.

ಸಂತ್ರಸ್ತೆ ಮತ್ತೊಬ್ಬ ನಟರೊಬ್ಬರ ಬಗ್ಗೆ ಮಾತನಾಡಿರುವ ಆಡಿಯೊ ಜಾಲತಾಣದಲ್ಲಿ ಹರಿದಾಡಿದೆ. ಈ ಬಗ್ಗೆ ಸ್ಪಷ್ಟನೆ ನೀಡಿರುವ ಸಂತ್ರಸ್ತೆ, 'ಆಡಿಯೊದಲ್ಲಿ ಮಾತನಾಡಿರುವುದು ನಿಜವಲ್ಲ, ಮನು ಹೇಳಿದ ಕಾರಣ ಆ ರೀತಿ ಮಾಡಬೇಕಾಯಿತು. ಮನು ಎಂದರೆ ಜೀವ ಬಿಡುತ್ತಿದ್ದೆ. ಹಾಗಾಗಿ ಆ ನಟರ ನಿವಾಸಕ್ಕೆ ತೆರಳಿ ಕ್ಷಮೆ ಕೇಳಿದ್ದೇನೆ' ಎಂದು ತಿಳಿಸಿದ್ದಾರೆ.

ಮಹಿಳೆಯರ ವಿಡಿಯೊ ಸೆರೆ: ಸಿಕ್ಕಿಬಿದ್ದ ಅಕೌಂಟೆಂಟ್

ದಿಗಂತ್

ಬೆಂಗಳೂರು : ನಮ್ಮ ಮೆಟ್ರೊದಲ್ಲಿ ಮಹಿಳಾ ಪ್ರಯಾಣಿಕರ ವಿಡಿಯೊ ಸೆರೆ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಆರೋಪಿಯನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಾಸನ ಜಿಲ್ಲೆಯ ಹೊಳೆನರಸೀಪುರದ ದಿಗಂತ್ (28) ಬಂಧಿತ ಆರೋಪಿ. ಕುಟುಂಬದೊಂದಿಗೆ ಪೀಣ್ಯದ ತಿಗಳರಪಾಳ್ಯದಲ್ಲಿ ಆರೋಪಿ ವಾಸವಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಿಗಂತ್ ಇಂದಿರಾನಗರದ ಖಾಸಗಿ ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿದ್ದು, ಪ್ರತಿದಿನ ಮೆಟ್ರೊದಲ್ಲಿ ಓಡಾಡುತ್ತಿದ್ದ. ಪ್ರಯಾಣದ ವೇಳೆ ಮಹಿಳೆಯರ ಹಾಗೂ ಯುವತಿಯರ ವಿಡಿಯೊಗಳನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು 'ಮೆಟ್ರೊ ಚೀಕ್ಸ್' ಎಂಬ ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಪ್‌ಲೋಡ್ ಮಾಡುತ್ತಿದ್ದ. ಈ ಬಗ್ಗೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿತ್ಯ ಮೆಟ್ರೊದಲ್ಲಿ ಸಂಚರಿಸುತ್ತಿದ್ದ ಕಾರಣ ಬ್ಲಾಗರ್‌ಗಳಂತೆ ಈತ ಸಹ ಮೊಬೈಲ್‌ನಲ್ಲಿ ಮಹಿಳಾ ಪ್ರಯಾಣಿಕರ ಆಕ್ಷೇಪಾರ್ಹ ವಿಡಿಯೊಗಳನ್ನು ಸೆರೆಹಿಡಿದು ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದ. ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ತನ್ನ ಖಾತೆಯಲ್ಲಿನ ವಿಡಿಯೊಗಳನ್ನು ಆರೋಪಿ ಅಳಿಸಿ ಹಾಕಿದ್ದ. ಈ ಸಂಬಂಧ ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

14 ವಿಡಿಯೊ ಅಪ್‌ಲೋಡ್: ಆರೋಪಿಯು ಮೆಟ್ರೊದಲ್ಲಿ ಸಂಚರಿಸುವ ಹಾಗೂ ನಿಲ್ದಾಣಗಳಲ್ಲಿ ನಡೆದು ಹೋಗುವ ಮಹಿಳೆಯರನ್ನು ಹಿಂಬಾಲಿಸಿ, ಅವರ ದೇಹದ ಹಿಂಭಾಗ ಹಾಗೂ ಮುಂಭಾಗವನ್ನು ವಿಡಿಯೊ ಚಿತ್ರೀಕರಣ ಮಾಡಿದ್ದ. ಒಟ್ಟು14 ವಿಡಿಯೊಗಳನ್ನು ಮೆಟ್ರೊ ಚೀಕ್ಸ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದ. ಇದಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು.

ವೈದ್ಯನ ಮನೆಗೆ ಬೆಂಕಿ ಹಚ್ಚಿದ್ದ ನಾಲ್ವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ರಾಕೇಶ್

ಸಚಿನ್

ಜೀವನ್


ಪ್ರಜ್ವಲ್

ಬೆಂಗಳೂರು: ವೈದ್ಯರೊಬ್ಬರ ಮನೆಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಚಂದ್ರಾ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರಜ್ವಲ್, ರಾಕೇಶ್, ಸಚಿನ್ ಹಾಗೂ ಜೀವನ್ ಎಂಬುವವರನ್ನು ಬಂಧಿಸಿದ್ದು, ಬೆಂಕಿ ಹಚ್ಚಲು ಸುಪಾರಿ ನೀಡಿದ್ದ ಪ್ರಮುಖ ಆರೋಪಿ ರವಿ ನಾಪತ್ತೆಯಾಗಿದ್ದು, ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳಿಗೆ ₹50 ಸಾವಿರ ನೀಡಿ, ಗಂಗಾಧರ್ ಅವರ ಮನೆ ತೋರಿಸಿ ಬೆಂಕಿ ಹಚ್ಚಲು ಬಿಜೆಪಿ ಶಾಸಕರೊಬ್ಬರ ಆಪ್ತ ರವಿ ಹೇಳಿದ್ದ. ಆತನ ಸೂಚನೆಯಂತೆ ಬೆಂಕಿ ಹಚ್ಚಲಾಗಿದೆ. ಇದಕ್ಕಾಗಿ ಎಲೆಕ್ಟ್ರಾನಿಕ್ ಸಿಟಿಯಿಂದ 40 ಲೀಟರ್ ಪೆಟ್ರೋಲ್ ತರಲಾಗಿತ್ತು ಎಂಬ ವಿಷಯವನ್ನು ವಿಚಾರಣೆ ವೇಳೆ ಆರೋಪಿಗಳು ತಿಳಿಸಿದ್ದಾರೆ. ಬಂಧಿತರು ಈ ಹಿಂದೆ ಪ್ರಕರಣವೊಂದರಲ್ಲಿ ಜೈಲು ಸೇರಿ, ಜಾಮೀನಿನ ಮೇಲೆ ಹೊರ ಬಂದಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ರವಿಯ ಸೂಚನೆಯಂತೆ ಕೃತ್ಯ ಎಸಗಿರುವುದಾಗಿ ತಿಳಿಸಿದ್ದಾರೆ. ಕೃತ್ಯಕ್ಕೆ ಕಾರಣ ನಿಗೂಢವಾಗಿದ್ದು, ಆತನ ಬಂಧನದ ಬಳಿಕವಷ್ಟೇ ಯಾವ ಕಾರಣಕ್ಕಾಗಿ ಗಂಗಾಧರ್ ಮನೆಗೆ ಬೆಂಕಿ ಹಚ್ಚಲು ಹೇಳಿದ್ದ ಎಂಬುದು ಗೊತ್ತಾಗಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮೇ 10ರ ನಡು ರಾತ್ರಿ ಬಾಪೂಜಿ ಲೇಔಟ್‌ನ 4ನೇ ಕ್ರಾಸ್‌ನಲ್ಲಿ ಘಟನೆ ನಡೆದಿತ್ತು. ಎರಡು ಬೈಕ್‌ಗಳಲ್ಲಿ ಹೆಲ್ಮೆಟ್ ಧರಿಸಿ ಬಂದಿದ್ದ ಆರೋಪಿಗಳು ಡಾ. ಬಿ. ಎಸ್. ಗಂಗಾಧರ್ ಅವರ ಮನೆಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು. ಘಟನೆಯಲ್ಲಿ ಆರೋಪಿಗಳಿಗೂ ಬೆಂಕಿ ತಾಗಿದ್ದು, ತಕ್ಷಣ ಅಲ್ಲಿಂದ ಪರಾರಿಯಾಗಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಘಟನೆಯಲ್ಲಿ ಮನೆಯ ಭದ್ರತಾ ಸಿಬ್ಬಂದಿ ತ್ಯಾಗರಾಜ್ ಗಾಯಗೊಂಡಿದ್ದರು. ಕಾರು ಸೇರಿ ಸುಮಾರು ₹ 45 ಲಕ್ಷ ಮೌಲ್ಯದ ವಸ್ತುಗಳು ಬೆಂಕಿಗೆ ಆಹುತಿಯಾಗಿದ್ದವು. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಚಾಕು ಸಹ ಸ್ಥಳದಲ್ಲಿ ಪತ್ತೆಯಾಗಿತ್ತು.

ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಎಚ್‌ಡಿ.ಕುಮಾರಸ್ವಾಮಿ ಪ್ರಶ್ನೆ

'ದಕ್ಷಿಣ'ದ ರಸ್ತೆಗಳಿಗೆ ಚಿನ್ನದ ತಗಡು ಹಾಕುತ್ತಾರಾ?

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ನವದೆಹಲಿ: ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, 'ಹೆಸರು ಬದಲಿಸಿ ಜಿಲ್ಲೆಯ ರಸ್ತೆಗಳಿಗೆ ಚಿನ್ನದ ತಗಡು ಹಾಕುತ್ತಾರಾ' ಎಂದು ಪ್ರಶ್ನಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇವರೇನು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರೆಯೇ. ಮುಂದೆ ಪರಿಸ್ಥಿತಿ ಬದಲಾಗಲಿದೆ. ಆಗ ಇವರು ಇಟ್ಟಿರುವ ಹೆಸರೂ ಬದಲಾಗಲಿದೆ' ಎಂದರು.

'ಈ ರಾಜ್ಯಕ್ಕೆ ರಾಮನಗರ ಜಿಲ್ಲೆ ಮೂವರು ಮುಖ್ಯಮಂತ್ರಿಗಳನ್ನು ಕೊಟ್ಟಿದೆ. ಇಡೀ ಜಗತ್ತೇ ನಿಬ್ಬೆರಗಾಗುವ ವಿಧಾನಸೌಧವನ್ನು ಕೆಂಗಲ್ ಹನುಮಂತಯ್ಯ ಕಟ್ಟಿಸಿದ್ದರು. ನೆಹರೂ ಅವರಿಗೆ ಸಡ್ಡು ಹೊಡೆದು ರಾಜಕೀಯ ಮಾಡಿದ್ದರು. ಅಂತಹ ಮಹನೀಯರ ಹೆಸರನ್ನಾದರೂ ಜಿಲ್ಲೆಗೆ ಇಡಬಹುದಿತ್ತು. ಅವರ ಹೆಸರು ಇಟ್ಟಿದ್ದರೆ ಅಭಿನಂದಿಸುತ್ತಿದ್ದೆ' ಎಂದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಭೂಮಿಗಳ ಬೆಲೆ ಏರಿಸುವ ಷಡ್ಯಂತ್ರದ ಭಾಗವಾಗಿ ಜಿಲ್ಲೆಯ ಹೆಸರು ಬದಲಿಸಿದ್ದಾರೆ' ಎಂದರು.

'ಹೇಳಿ ಕೇಳಿ ಈ ವ್ಯಕ್ತಿ ರಿಯಲ್ ಎಸ್ಟೇಟ್ ವ್ಯಾಪಾರಿ. ಏನೆಲ್ಲಾ ತಂತ್ರಗಾರಿಕೆ ಹೂಡಿದರೆ ತಮ್ಮ ಜಮೀನುಗಳಿಗೆ ಬೆಲೆ ಬರುತ್ತದೆ ಎನ್ನವುದು ಅವರಿಗೆ ಗೊತ್ತಿದೆ. ಮಧ್ಯರಾತ್ರಿ ಒಂದು ಗಂಟೆಯ ವರೆಗೆ ವ್ಯಾಪಾರ ಮಾಡುತ್ತಿರುವವರು ಯಾರು. ಅವರ ಎಲ್ಲ ಹಣಬರಹ ನನಗೆ ಗೊತ್ತಿದೆ' ಎಂದು ಅವರು ವಾಗ್ದಾಳಿ ನಡೆಸಿದರು.

'ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ'

ಕೆ.ಆರ್.ನಗರ (ಮೈಸೂರು ಜಿಲ್ಲೆ): 'ಸರ್ಕಾರಕ್ಕಿರುವ ಅಧಿಕಾರವನ್ನು ಚಲಾಯಿಸಿ ರಾಮನಗರಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಮರುನಾಮಕರಣ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ' ಎಂದರು.

'ಮರುನಾಮಕರಣ ಮಾಡಿ ಜಿಲ್ಲೆಯ ಇತಿಹಾಸ ತಿರುಚಲಾಗುತ್ತಿದೆ' ಎಂಬ ಎಚ್.ಡಿ. ಕುಮಾರಸ್ವಾಮಿ ಟೀಕೆಗೆ ಪ್ರತಿಕ್ರಿಯಿಸಿ, 'ಅಲ್ಲಿನ ಜನಾಭಿಪ್ರಾಯವನ್ನು ಪಡೆದೇ ನಿರ್ಣಯಿಸಲಾಗಿದೆ. ಕುಮಾರಸ್ವಾಮಿಯವರು ರಾಮನಗರ ಜಿಲ್ಲೆಯನ್ನು ಸೃಜಿಸುವಾಗ, ಅಲ್ಲಿನ ಇತಿಹಾಸದ ಬಗ್ಗೆ ಯೋಚಿಸಿ ರಲಿಲ್ಲವೇ? ಆಗ ಏನು ಇತಿಹಾಸವಿತ್ತು' ಎಂದು ಕೇಳಿದರು.

ಇ.ಡಿ ತನ್ನ ಎಲ್ಲೆ ಮೀರುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಗಮನಿಸಿರುವ ಕುರಿತ ಪ್ರಶ್ನೆಗೆ, 'ಇ.ಡಿ, ಐ.ಟಿ ತನಿಖೆಯನ್ನು ಅಥವಾ ಕಪ್ಪುಹಣದ ವ್ಯವಹಾರವನ್ನು ಪತ್ತೆ ಹಚ್ಚುವುದನ್ನು ಆಕ್ಷೇಪಿಸುವುದಿಲ್ಲ. ಆದರೆ, ಆ ಸಂಸ್ಥೆಗಳ ದಾಳಿಗಳು ರಾಜಕೀಯ ದುರುದ್ದೇಶದಿಂದ ನಡೆಯಕೂಡದು. ಗೃಹ ಸಚಿವ ಜಿ.ಪರಮೇಶ್ವರ ಅವರ ಶಿಕ್ಷಣ ಸಂಸ್ಥೆಯ ಮೇಲೆ ನಡೆದಿರುವ ಇ.ಡಿ. ದಾಳಿಯೂ ರಾಜಕೀಯ ಪ್ರೇರಿತ. ಸುಪ್ರೀಂ ಕೋರ್ಟ್ ಯಾವ ಪ್ರಕರಣಕ್ಕೆ ಸಂಬಂಧಿಸಿ ಹೀಗೆ ಅವಲೋಕಿಸಿದೆ ಎಂಬುದು ತೀರ್ಪು ಪರಿಶೀಲಿಸಿದ ನಂತರವಷ್ಟೇ ತಿಳಿಯಲಿದೆ' ಎಂದರು.

'ಎಚ್‌ಡಿಕೆ ರಾಮನಗರಕ್ಕೆ ಏಕೆ ಬಂದ್ರು?'

ವಿಜಯಪುರ: 'ರಾಜಕೀಯ ಮಾಡಲು ಕುಮಾರಸ್ವಾಮಿ ಹಾಸನ ಬಿಟ್ಟು ರಾಮನಗರಕ್ಕೆ ಏಕೆ ಬಂದ್ರು? ಅವರ ಹೆಸರಿನಲ್ಲಿರುವ ಊರಿನ ಹೆಸರು ಹಾಗೂ ತಂದೆಯ ಹೆಸರನ್ನು ಇನ್ನು ಏಕೆ ಇಟ್ಟುಕೊಂಡಿದ್ದಾರೆ. ಮೊದಲು ಅದನ್ನು ಬದಲಾವಣೆ ಮಾಡಿಕೊಳ್ಳಲಿ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

ಎಚ್.ಡಿ.ಕುಮಾರಸ್ವಾಮಿ ಟೀಕೆಗೆ ಕೊಲ್ಹಾರದಲ್ಲಿ ಪ್ರತಿಕ್ರಿಯಿಸಿದ ಅವರು, 'ಪ್ರತಿ ಊರಿನ ಹೆಸರಿಗೂ ತನ್ನದೇ ಆದ ಇತಿಹಾಸ ಇರುತ್ತದೆ. ಮದ್ರಾಸ್ ಅನ್ನು ಮತ್ತೆ ಏಕೆ ಚೆನ್ನೈ ಎಂದು ಕರೆದರು? ಗುಲಬರ್ಗಾವನ್ನು ಕಲಬುರಗಿ ಎಂದು ಮರುನಾಮಕರಣ ಮಾಡಲಾಗಿದೆ. ನಾವು ಬೆಂಗಳೂರು ಜಿಲ್ಲೆಯವರು. ನಮಗೂ ನಮ್ಮದೇ ಆದ ಆಸೆ ಇರುತ್ತದೆ. ಅವರಿಗೆ ಏನು ತೊಂದರೆಯಾಗಿದೆ' ಎಂದು ಪ್ರಶ್ನಿಸಿದರು.

'ಸಂಸತ್ ಕ್ಷೇತ್ರವನ್ನು ಮೊದಲು 'ಕನಕಪುರ' ಎಂದು ಕರೆಯಲಾಗುತ್ತಿತ್ತು. ಅದನ್ನು 'ಬೆಂಗಳೂರು ಗ್ರಾಮಾಂತರ' ಎಂದು ಆನಂತರ ಏಕೆ ಮಾಡಿದರು? ರಾಮನಗರವೇ ಜಿಲ್ಲಾ ಕೇಂದ್ರ. ಅದರ ಹೆಸರು ಬದಲಿಸುತ್ತಿಲ್ಲ. ಜಿಲ್ಲೆಯ ಹೆಸರನ್ನಷ್ಟೇ ಬದಲಿಸುತ್ತಿದ್ದೇವೆ' ಎಂದರು.

'ರಿಯಲ್ ಎಸ್ಟೇಟ್‌ಗಾಗಿ ಹೆಸರು ಬದಲಿಸಲಾಗಿದೆ' ಎಂಬ ಆರೋಪಕ್ಕೆ ಉತ್ತರಿಸಿದ ಅವರು, 'ಹೌದು, ನಮ್ಮ ಹಳ್ಳಿಯ ಜನ ಉದ್ಧಾರ ಆಗಬೇಕು. ಅವರ ಆಸ್ತಿ ಮೌಲ್ಯ ಹೆಚ್ಚಾಗಬೇಕು. ಹೊರದೇಶದವರು ಬಂಡವಾಳ ಹೂಡಬೇಕು. ಅಭಿವೃದ್ಧಿ ಆಗಬೇಕು ಎಂಬುದು ನಮ್ಮ ಆಸೆ' ಎಂದರು.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ.24, "ಸುವರ್ಣ ಭವನ", 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 23300497 41159606 , ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

ಟೆಂಡರ್ ಮತ್ತು ಹರಾಜು ಮಾರಾಟ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತಾ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಅಡಿಯಲ್ಲಿ ಹರಾಜು ಮಾರಾಟ ಮುಂದುವರಿದಂತೆ

ಶ್ರೀ ಜಿ.ಎಂ. ಯಶಸ್‌ಕುಮಾರ್ ಬಿನ್ ಶ್ರೀ ಗಂಗಾಧರಮೂರ್ತಿ

ಶ್ರೀ ಆನಂದ್. ಬಿ. ಬಿನ್ ಶ್ರೀ ಬಸವಯ್ಯ

ಮೆ॥ ಐಕಾನ್ ಮೈನಿಂಗ್ ಕಂಪನಿ ನಂ. 45, 1ನೇ ಮಹಡಿ, ತಿಮ್ಮಯ್ಯ ಪ್ರೈವೇಟ್ ಲೇಔಟ್, ಬಸವೇಶ್ವರನಗರ, ಬೆಂಗಳೂರು–560079, **ಪ್ರತಿನಿಧಿಸುವ ಪಾಲುದಾರರು: (1) ಶ್ರೀ ಜಿ.ಎಂ. ಯಶಸ್‌ಕುಮಾರ್** ಬಿನ್ ಗಂಗಾಧರಮೂರ್ತಿ.ಸಿ, **ವಿಳಾಸ:** ನಂ. 322, 3–ಎ ಕ್ರಾಸ್, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು–560079 **ಹಾಗೂ (2) ಶ್ರೀ ಆನಂದ್.** ಬಿ. ಬಿನ್ ಬಸವಯ್ಯ, ವಿಳಾಸ: ನಂ. 331/ಎ, 1ನೇ ಮೇನ್, ಲವಕುಶನಗರ, ಲಗ್ಗೆರೆ, ಬೆಂಗಳೂರು–560058, ಇವರುಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು** ರವರಿಂದ ಪಡೆದ ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಷರತ್ತು ಮತ್ತು ನಿಯಮಗಳ ಒಪ್ಪಂದದ ಅನುಸಾರ ಒಟ್ಟು ಮೊತ್ತ **ರೂ. 6,00,41,347/– (ರೂಪಾಯಿ ಆರು ಕೋಟಿ ನಲವತ್ತೊಂದು ಸಾವಿರದ ಮುನ್ನೂರ ನಲವತ್ತೇಳು ಮಾತ್ರ) ದಿನಾಂಕ 09.05.2025 ರಂದು ಇದ್ದಂತೆ** ಜೊತೆಗೆ ನಂತರ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು.

ಸರ್ಫೇಸಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಮತ್ತು ಕಾಯಿದೆಯ ಸೆಕ್ಷನ್ 13 (4) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಅನುಸರಿಸಲು ಮತ್ತು ಚಲಾಯಿಸಲು ಬ್ಯಾಂಕ್ ನೋಟಿಸ್ ನೀಡಿರುತ್ತಾರೆ, ಅಧಿಕೃತ ಅಧಿಕಾರಿ ಅಡಮಾನದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಮತ್ತು ಅದರ ವಿವರಗಳನ್ನು ಕೆಳಗೆ ಸಂಪೂರ್ಣವಾಗಿ ವಿವರಿಸಲಾಗಿದೆ, ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಸಂಬಂಧಿತ ನಿಯಮಗಳೊಂದಿಗೆ ಓದಿದ ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಈ ಕೆಳಗಿನ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ಸ್ವತ್ತಿನ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ
ಪರಿವರ್ತಿತ ಭೂಮಿಯ ಸರ್ವೆ ನಂ. 9/1, 4 ಎಕರೆ, 11 ಗುಂಟೆ ವಿಸ್ತೀರ್ಣ (17,300.312 ಚದರ ಮೀಟರ್), ಕುಲುವನಹಳ್ಳಿ ಗ್ರಾಮ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ನೆಲಮಂಗಲ ತಾಲ್ಲೂಕು, ಕುಲುವನಹಳ್ಳಿ ಗ್ರಾಮ ಪಂಚಾಯಿತಿಯಿಂದ ನೀಡಲಾದ ಸ್ವತ್ತಿನ ಖಾತಾ ನಂ. 217/9/1 ಹೊಂದಿರುವ ಕಛೇರಿ ಆದೇಶ ನಂ. ಎಎಲ್‌ಎನ್(ಎನ್)/ಎಸ್ ಆರ್/33,34,35 & 36/01–02, ದಿನಾಂಕ: 24.05.2003 ರಂತೆ ಪರಿವರ್ತನೆಗೊಂಡಿದೆ), ಚಕ್ಕುಬಂದಿ: ಪೂರ್ವಕ್ಕೆ: ಎನ್‌ಹೆಚ್–48, ಪಶ್ಚಿಮಕ್ಕೆ: ಸರ್ವೆ ನಂ. 9/1ರಲ್ಲಿನ ಉಳಿಕೆ ಭೂಮಿ, ಉತ್ತರಕ್ಕೆ: ಸರ್ವೆ ನಂ. 9/1ರಲ್ಲಿನ ಉಳಿಕೆ ಭೂಮಿ, ದಕ್ಷಿಣಕ್ಕೆ: ಸರ್ವೆ ನಂ. 9/2ರ ಭೂಮಿ.	**18.06.2025 ಬೆಳಗ್ಗೆ 11.30 ನಿಗದಿತ** **ಕೆಳಗೆ ಉಲ್ಲೇಖಿಸಲಾದ ಷೆಡ್ಯೂಲ್ ಆಸ್ತಿಯಲ್ಲಿ**	**ಮೀಸಲು ಬೆಲೆ ರೂ.13,40,77,600/– (ರೂಪಾಯಿ ಹದಿಮೂರು ಕೋಟಿ ನಲವತ್ತು ಲಕ್ಷದ ಎಪ್ಪತ್ತೇಳು ಸಾವಿರದ ಆರುನೂರು ಮಾತ್ರ)** **ಇಎಂಡಿ : 10% ರಂತೆ ಮೀಸಲು ಬೆಲೆ ರೂ.1,34,07,760/– (ರೂಪಾಯಿ ಒಂದು ಕೋಟಿ ಮೂವತ್ತನಾಲ್ಕು ಲಕ್ಷದ ಏಳು ಸಾವಿರದ ಏಳುನೂರ ಅರವತ್ತು ಮಾತ್ರ)**

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: – (1) ಟೆಂಡರ್ ಫಾರಂಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.24, "ಸುವರ್ಣ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು.** (ದೂ. 080–23300497, 41159606) ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. **(2)** ಇಚ್ಛಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ಬೆಂಗಳೂರು** ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್/ಆರ್‌ಟಿಜಿಎಸ್‌ಗಳನ್ನು ಈ ಟೆಂಡರ್–ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. **(3)** ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು,** ಇವರಿಗೆ **ದಿನಾಂಕ: 17.06.2025,** ಸಮಯ **ಸಂಜೆ 5.00** ರ ಒಳಗೆ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. **(4)** ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. **(5)** ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. **(6)** ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. **(7)** ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ **ದಿನಾಂಕ: 18.06.2025 ರಂದು ಬೆಳಗ್ಗೆ 11.30 ಗಂಟೆಗೆ** ತೆರೆಯುವರು. **(8)** ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್‌ದಾರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಅವಕಾಶ ನೀಡಬಹುದು, ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಬಹುದು. **(9)** ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್/ ಆರ್‌ಟಿಜಿಎಸ್ ರೂಪದಲ್ಲಿ ಪಡೆಯಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. **(10)** ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು/ಶುಲ್ಕ/ಆಸ್ತಿ ತೆರಿಗೆ/ಬೆಸ್ಕಾಂ ಶುಲ್ಕ/ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. **(11)** ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹಿರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. **(12)** ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. **(13)** ಈ ಮಾರಾಟವು ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು **ಬೆಳಗ್ಗೆ 10.00 ಘಂಟೆಯಿಂದ ಸಂಜೆ 5.00 ರವರೆಗೆ,** ಷೆಡ್ಯೂಲಿನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸಬಹುದಾಗಿದೆ. **(14)** ಆಸ್ತಿಯನ್ನು **'ಎಲ್ಲಿ ಹೇಗಿದೆಯೋ ಹಾಗೆ'** ಮತ್ತು **'ಎಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು. **(15)** ಡಿಆರ್‌ಟಿ/ಡಿಆರ್‌ಎಟಿ/ ಹೈಕೋರ್ಟ್ ಅಥವಾ ಯಾವುದೇ ಇತರ ನ್ಯಾಯಾಲಯದ ಮುಂದಿನ ಪ್ರಕ್ರಿಯೆಗಳ ತಡೆ ಸಂದರ್ಭದಲ್ಲಿ, ಹರಾಜನ್ನು ಮುಂದೂಡಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಮಾರಾಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಅಂತಹ ಮುಂದೂಡಿಕೆಗಾಗಿ ಹಾನಿ, ಪರಿಹಾರ ಅಥವಾ ವೆಚ್ಚವನ್ನು ಕ್ಲೈಮ್ ಮಾಡುವ ಹಕ್ಕನ್ನು ಹೊಂದಿರುವುದಿಲ್ಲ. **(16)** (ಸಾಲಗಾರರು / ಜಾಮೀನುದಾರರು / ಅಡಮಾನದಾರರು) ಅವರ ಬಾಕಿ ಮೊತ್ತವನ್ನು ಪೂರ್ಣವಾಗಿ ಮರುಪಾವತಿ ಮಾಡದಿದ್ದರೆ, ಕಾಯಿದೆಯ ಪ್ರಕಾರ ಅನ್ವಯವಾಗುವ ಇತರ ನಿಯಮಗಳು ಮತ್ತು ಷರತ್ತುಗಳನ್ನು ಮೇಲೆ ತಿಳಿಸಿದ ದಿನಾಂಕದಂದು ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ಇದು ಸೂಚನೆಯಾಗಿದೆ.

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್ಡುದಾರರು ಅಧಿಕೃತ ಅಧಿಕಾರಿ, ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.24, "ಸುವರ್ಣ ಭವನ" 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು. (ದೂ. 080–23300497, 41159606) ಮೊಬೈಲ್ ನಂ. 9916738709, 9945052783, 9742327028ಇ–ಮೇಲ್: vjn@jscbl.com.

ದಿನಾಂಕ : 23.05.2025
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಬಂಧನ ಬಿಡುಗಡೆಯಾಚೆಗೆ...

ಮಂಜುಶ್ರೀ ಎಂ. ಕಡಕೋಳ

ಇನ್ನೇನು ಬೇಸಿಗೆಯ ದಿನಗಳು ಮುಗಿದು, ಮುಂಗಾರಿನ ದಿನಗಳಿಗೆ ಮುನ್ನುಡಿ ಬರೆಯುತ್ತಿರುವ ಕಾಲವಿದು. ರಣಬಿಸಿಲು, ಸೆಕೆಯ ದಿನಗಳ ಬಾಗಿಲು ಅರ್ಧ ಮುಚ್ಚಿ, ಮಳೆಗಾಲದ ತಂಪಿನ ಸಂಭ್ರಮದ ಕಾಲ ಬಾಗಿಲು ತಟ್ಟುತ್ತಿರುವ ಹೊತ್ತಲ್ಲೂ ನಿತ್ಯದ ಉಡುಗೆ–ತೊಡುಗೆಯ ಸಿಕ್ಕುಗಳಲ್ಲಿ ಅವಳ ಮನಸು ಸಿಲುಕಿ ಒದ್ದಾಡುವುದು ನಿಂತಿಲ್ಲ.

ಸೆಕೆಗಾಲದಲ್ಲಿ ಗಂಡುಮಕ್ಕಳು ರಾಜಾರೋಷವಾಗಿ ಪ್ಯಾಂಟು, ಶರ್ಟು, ಬನಿಯನ್ ಕಳಚಿ ಬರೀ ಬರ್ಮುಡಾದಲ್ಲಿ ಹಾಯಾಗಿ ಇರುವಂಥ ಸ್ವಾತಂತ್ರ್ಯ ಅವಳಿಗಿನ್ನೂ ದೂರವಾ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರವಿನ್ನೂ ಸಿಕ್ಕಿಲ್ಲ. ಸೆಕೆ ಎಂಥಲೋ, ಉಟ್ಟ ಉಡುಗೆ ಆರಾಮದಾಯಕ ಅನಿಸುತ್ತಿಲ್ಲ ಎಂತಲೋ ಗಂಡೊಬ್ಬ ರಾಜಾರೋಷವಾಗಿ ಉಡುಗೆಯನ್ನು ಕಳಚಿಬಿಡುವಷ್ಟು 'ಧೈರ್ಯ' ಹೆಣ್ಣಿಗೆ ಮರೀಚಿಕೆಯೇ. ಮನೆಯ ಮಾಳಿಗೆಯ ಮೇಲೋ, ಚೆನ್ನಾಗಿ ಗಾಳಿಯಾಡುವ ಸ್ಥಳದಲ್ಲೋ, ಮನೆಯ ಅಂಗಳದಲ್ಲೋ ಆರಾಮವಾಗಿ ಹೇಗೆಂದರೆ ಹಾಗೆ ಮಲಗುವ ಸ್ವಾತಂತ್ರ್ಯವೂ ಅವಳಿಗೆ ಒಡ್ಡಿದ ನಿಷಿದ್ಧದ ಪಟ್ಟಿಯಲ್ಲಿದೆ.

'ಅಮ್ಮಾ ತುಂಬಾ ಸೆಕೆ ಅಣ್ಣನಂತೆ ನಾನೂ ಶಾರ್ಟ್ಸ್, ಸ್ಲೀವ್‌ಲೆಸ್ ಟಾಪ್ ಹಾಕಿಕೊಳ್ತೀನಿ' ಅಂತ ಆಗಷ್ಟೇ ಹದಿಹರೆಯಕ್ಕೆ ಕಾಲಿಡುತ್ತಿರುವ ಮಗಳು ಇನ್ನೂ ಬೇಡಿಕೆಯೋ, ಕೋರಿಕೆಯ ಪತ್ರ ಸಲ್ಲಿಸುತ್ತಿದ್ದಾಳೆ. 'ಅಪ್ಪ ನೋಡಿದ್ರೆ ಏನಂದುಕೊಳ್ತಾರೆ? ನೀನು ಹಾಗೆಲ್ಲ ಬಟ್ಟೆ ಹಾಕ್ಕೋಬೇಡ. ಬೇಕಿದ್ದರೆ ಮಂಡಿತನಕದ ಪ್ಯಾಂಟ್ ಹಾಕ್ಕೊ' ಅನ್ನುವ ಸಿದ್ಧ ಉತ್ತರವೇ ಅವಳಿಗೆ ಕಟ್ಟಿಟ್ಟದ್ದು. 'ಅಪ್ಪ, ಅಣ್ಣ ಮಾತ್ರ ಬರೀ ಬರ್ಮುಡಾದಲ್ಲಿ ಎಲ್ಲೆಂದರಲ್ಲಿ ತಿರುಗಬಹುದಾ? ನಾನ್ಯಾಕೆ ಹಾಕ್ಕೊಬಾರದು, ಕಾಲ ಬದಲಾಗಿದೆ' ಅನ್ನುವ ಮಾತು ಅವಳ ಗಂಟಲಲ್ಲಿಯೇ ಉಳಿಯುತ್ತಿದೆ. 'ಅಯ್ಯೋ ಹೋಗಮ್ಮಾ, ಗಂಡಸರು ಹೇಗೆ ಬೇಕೋ ಹಾಗಿರಬಹುದಾ? ಅವರಿಗೆ ಆಗುವ ಸೆಕೆ ನಮಗೆ ಆಗಲ್ವಾ? ಅದರಲ್ಲೇ ತಾರತಮ್ಯ? ನಾನಂತೂ ಶಾರ್ಟ್ಸ್, ಸ್ಲೀವ್‌ಲೆಸ್ ಟಾಪ್ ಹಾಕ್ಕೊತೀನಿ...' ಅನ್ನುವ ಧೀರೆಯರಿನ್ನೂ ಕಡಿಮೆ ಸಂಖ್ಯೆಯಲ್ಲಿದ್ದಾರೆ.

'ಮಗಳಿಗೆ ಹೊಕ್ಕಳು ಕಾಣುವಂತೆ ಲಂಗದಾವಣಿಯೋ, ಲೆಹಾಂಗವನ್ನೋ ಹಾಕಬೇಡ. ಅವಳಿಗೆ ಸರಿಯಾಗಿ ಇರಲು ಹೇಳು. ಸರಿಯಾಗಿ ಕೂರೋಕೆ ಹೇಳು. ಮಲಗಿದಾಗ ಡ್ರೆಸ್ ಸರಿಯಾಗಿರುವಂತೆ ನೋಡಿಕೋ...' ಹೀಗೆ ಹೆಣ್ಣುಮಕ್ಕಳ ದೇಹಪ್ರಜ್ಞೆಯನ್ನು ಪದೇಪದೇ ಎಚ್ಚರವಾಗುವಂತೆ ಮಾಡುವ ನುಡಿಗಳಿಗೆ ವಿರಾಮವೇ ಇಲ್ಲ. ಅದರಲ್ಲೂ ಆಕೆ ತುಸು ಮೈಕೈ ತುಂಬಿಕೊಂಡ ಹೆಣ್ಣುಮಗಳಾದರೆ ಅವಳಿಗೆ ವಿಧಿಸುವ ನಿಷಿದ್ಧಗಳ ಪಟ್ಟಿಯಂತೂ ಮತ್ತಷ್ಟು ಉದ್ದವಾಗುತ್ತಲೇ ಹೋಗುತ್ತದೆ. ಬೇಸಿಗೆ ಕಾಲದಲ್ಲಿ ಮುಟ್ಟಾದಾಗ ಗಾಳಿಯಾಡದೇ ತೊಡೆಸಂದಿಯಲ್ಲಿ ಉಂಟಾಗುವ ಗಾಯಗಳಿಗೆ ಮುಲಾಮು ಹಚ್ಚಿಕೊಂಡರೂ, ಗಾಳಿಯಾಡುವಂತೆ ಕಾಲು ಅಗಲಸಿ ಮಲಗುವುದುಂಟೇ? ತೌಬಾ ತೌಬಾ...! ಸ್ವಲ್ಪ ಹೆಣ್ಣಿನಂತೆ ಇರೋದು ಕಲಿ. ನೀನೇನೂ ಗಂಡಸಾ ಹೇಗೆ ಬೇಕೇ ಹಾಗೆ ಮಲಗಲು? ಒಂಚೂರು ನಾಚಿಕೆಯೇ ಇಲ್ಲವಲ್ಲ ಅನ್ನುವಾಗ ಹೆಣ್ಣಾಗಿ ಹುಟ್ಟಿದ್ದೇ ತಪ್ಪಾಗೋಯ್ತಾ ಅನ್ನುವ ಕೀಳರಿಮೆ ಆಕೆಯನ್ನು ಕಾಡದಿರದು.

ಮುಚ್ಚಿಟ್ಟ ಮೈ, ಚರ್ಮದ ಕಾರಣಕ್ಕಾಗಿಯೇ ವಿಟಮಿನ್ ಡಿ ಕೊರತೆಯಾಗಿ, ಸೂರ್ಯನ ಕಿರಣ ತಾಗದೇ ಚರ್ಮಕೋಶಗಳು ಗಾಳಿಯಾಡದೇ ಒಳಗೊಳಗೇ ಅವಳು ಅನುಭವಿಸುವ ಪಾಡು ಅವಳಿಗಷ್ಟೇ ಗೊತ್ತು. ಬೇಸಿಗೆ, ಮಳೆ, ಚಳಿಗಾಲ ಕಾಲ ಯಾವುದೇ ಇರಲಿ ಒಳಉಡುಪುಗಳಿಗಂತೂ ಸದಾ ಮುಚ್ಚಟ್ಟೆಕಾಲವೇ!. ಬೇಸಿಗೆಯಲ್ಲಾದರೂ ಹೇಗೋ ಒಣಗುವ ಒಳಉಡುಪುಗಳು ಚಳಿ–ಮಳೆಗಾಲದಲ್ಲಿ ಸರಿಯಾಗಿ ಒಣಗದಿರುವಾಗ ಅವನ್ನೇ ಧರಿಸಿ ತುರಿಕೆಯೋ, ಶಿಲೀಂಧ್ರ ಸೋಂಕೋ ತಗುಲಿ ಅವಳ ಆತ್ಮವಿಶ್ವಾಸದ ಜತೆಗೆ ಆರೋಗ್ಯವನ್ನೂ ಸದ್ದಿಲ್ಲದೇ ಕಸಿಯುತ್ತದೆ.

ಏನೇ ಆಗಲಿ ಹೆಣ್ಣಿಗೆ ಸೀರೆಯೇ ಚಂದ ಕಣ್ರೀ. ಸೀರೆಯಲ್ಲಿ ಅವಳ ಅಂದ ದುಪ್ಪಟ್ಟು. ಅದರಷ್ಟು ಘನತೆಯ, ಮಾದಕತೆಯ ಉಡುಪು ಮತ್ತೊಂದಿಲ್ಲ ಅನ್ನುವ ಮಾತುಗಳನ್ನು ಹೆಣ್ಣು–ಗಂಡು ಇಬ್ಬರೂ ಸದ್ದಿಲ್ಲದೇ ಸ್ವೀಕರಿಸಿರುವಾಗ, ಗಂಡಿನ ಉಡುಪಿನ ಘನತೆ, ಮಾದಕತೆಯ ಪ್ರಶ್ನೆಗಳು ಅಪ್ರಸ್ತುತವಾಗುವುದು ಸಹಜ. ಹೆಣ್ಣಿನ ಉಡುಪು ಗಂಡನ್ನು ಕಾಮಕ್ಕೆ ಉದ್ರೇಕಿಸುವಾಗ ಗಂಡಿನ ಶರ್ಟ್‌ನ ಮೊದಲೆರಡು ಗುಂಡಿ ತೆರೆದಿರುವುದು, ಟೈಟ್ ಜೀನ್ಸ್, ತೋಳ್ಬಲ ತೋರಿಸುವ ಟೈಟ್ ಟೀ ಶರ್ಟು, ಶರ್ಟ್ ತೊಡದ ದೇಹ, ಬರೀ ಬರ್ಮುಡಾ ತೊಟ್ಟು ಅಡ್ಡಾಡುವ ಅವನ ದೇಹ ಹೆಣ್ಣಿನ ಮನವನ್ನು ಕೆಣಕದಿರದೇ? ಎಂದರೆ ಇವಳು ನಡತೆಗೆಟ್ಟವಳೋ ಅಥವಾ ಕೈಗೆ ಸುಲಭವಾಗಿ ಸಿಗುವವಳೋ ಎಂದು ಪರಿಭಾವಿಸುವವರೇ ಹೆಚ್ಚು. ಉಡುಪೊಂದು ಹೆಣ್ಣು ಮತ್ತು ಗಂಡಿನ ಕಾಮನೆಗಳನ್ನು ಬೇರೆಬೇರೆಯಾಗಿಸುವ ಹಿಂದಿನ ರಾಜಕಾರಣದ ಮರ್ಮ ಅಷ್ಟು ಸುಲಭವಾಗಿ ಬಗೆಹರಿಯದು.

ಉದ್ಯೋಗಸ್ಥೆಯರು, ಶಾಲಾ–ಕಾಲೇಜು ಹುಡುಗಿಯರು, ಗೃಹಿಣಿಯರು, ಕೂಲಿಕೆಲಸ ಕಟ್ಟಡ ಕಾರ್ಮಿಕ ಮಹಿಳೆಯರು, ಮನೆಗೆಲಸದವರು ಹೀಗೆ ಮಹಿಳೆ ಯಾವ ಸ್ಥಳದಲ್ಲಿದ್ದರೂ ಆಕೆ ಸದಾ ದೇಹಪ್ರಜ್ಞೆಯೊಳಗೇ ಗಿರಕಿ ಹೊಡೆಯಬೇಕಿದೆ. ಇದೊಂಥರಾ ವೃತ್ತಾಕರದ ಸರಪಳಿ. ಭೂಮಿಯಷ್ಟೇ ಅಲ್ಲ, ಬಾಹ್ಯಾಕಾಶಕ್ಕೆ ಹೋದರೂ ಅವಳ ಸಾಧನೆಯಾಚೆಗೆ ಶೀಲ, ಪಾವಿತ್ರ್ಯ, ಉಡುಪಿನತ್ತ ಸಮಾಜದ ಕಿಂಚಿತ್ತಾದರೂ ಚಿತ್ತ ಚಲಿಸದೇ ಇರದು. ಜಗತ್ತೇ ಮೆಚ್ಚುವಂಥ ಸಾಧನೆ ಮಾಡಿದಾಗಲೂ ಅವಳು ಧರಿಸಿದ ಉಡುಪು ಧರ್ಮ–ಸಂಸ್ಕೃತಿಯ ಪ್ರತೀಕವಾಗಿ ಗೋಚರಿಸಿದಷ್ಟು ಗಂಡಸಿನ ಉಡುಪು ಗೋಚರಿಸದು. ಪುರುಷ ರಾಜಕಾರಣದ ಯಶಸ್ಸಿನ ಮೂಲಮಂತ್ರವೇ ಇದಾಗಿರುವಾಗ, ಪ್ರಜ್ಞೆಯೋ, ಅಪ್ರಜ್ಞಾಪೂರ್ವಕವಾಗಿಯೋ ಅವನೂ, ಅವಳೂ ಇಬ್ಬರೂ ಇದರಲ್ಲಿ ಬಂಧಿಗಳೇ. ಅವನು, ಅವಳು ಎಂಬ ಪ್ರಜ್ಞೆಯಾಚೆಗೆ ದಾರಿದೀಪವಾಗಬೇಕಾದ ಉಡುಪು, ಲೈಂಗಿಕತೆಯ ದ್ಯೋತಕವೋ, ಲಿಂಗ ತಾರತಮ್ಯದ ನೆಲೆಯೋ ಆದಾಗ ಅವಳ ಬಗೆಗಿನ ದೃಷ್ಟಿಕೋನ, ಕಣ್ಣೋಟ ಬದಲಿಸಿಕೊಳ್ಳಬೇಕಾಗಿರುವುದು ಯಾರು ಎಂಬುದು ಮುಖ್ಯವಾದೀತು.

'ಊಟ ತನ್ನಿಚ್ಛೆ, ನೋಟ ಪರರಿಚ್ಛೆ', 'ಬೇಸಿಗೆ ಮಾನಗೇಡಿ, ಚಳಿಗಾಲ ಮರ್ಯಾದಸ್ಥ' ಅನ್ನುವ ಜನಜನಿತ ಮಾತುಗಳಲ್ಲೂ ಹೆಣ್ಣು–ಗಂಡಿನ ನಡುವಿನ ತಾರತಮ್ಯದ ಧೋರಣೆಗಳು ಢಾಳಾಗಿವೆ. ಸ್ಲೀವ್ ಲೆಸ್ ರವಿಕೆ ಧರಿಸುವ ಹೆಣ್ಣು ಆಧುನಿಕಳೂ, ಮೈತುಂಬಾ ಸೆರಗು ಹೊದೆಯುವ ಹೆಣ್ಣು ಸೌಮ್ಯ ಸ್ವಭಾವದವಳೂ ಎನ್ನುವ ಕ್ಲೀಷೆಯ ಮನೋಭಾವವಿನ್ನೂ ಬದಲಾಗಿಲ್ಲ. ಹೆಣ್ಣಿನ ಮಾನವನ್ನು ಮುಚ್ಚಲು ಎಷ್ಟೊಂದು ಪದರಪದರಗಳ ಬಟ್ಟೆಗಳು? ಅದೇ ಗಂಡಸಿನ ಮಾನ ಮುಚ್ಚಲು ಬಟ್ಟೆಯ ತುಣುಕೊಂದು ಸಾಕೇ?

ಗಂಡಿನ ಮಾನ ಹೆಣ್ಣನ್ನು ಗೌರವಿಸುವ, ಆಕೆಯನ್ನು ತನ್ನಂತೆಯೇ ಸಹಜೀವಿಯೆಂದು ಪರಿಗಣಿಸುವಲ್ಲಿ ಇದೆಯೆಂದು ಮನವರಿಕೆ ಮಾಡಿಕೊಡುವ ಕಾಲ ಬರುವುದಾದರೂ ಯಾವಾಗ?

> ಅವನು, ಅವಳು ಎಂಬ ಪ್ರಜ್ಞೆಯಾಚೆಗೆ ದಾರಿದೀಪವಾಗಬೇಕಾದ ಉಡುಪು, ಲೈಂಗಿಕತೆಯ ದ್ಯೋತಕವೋ, ಲಿಂಗ ತಾರತಮ್ಯದ ನೆಲೆಯೋ ಆದಾಗ ಅವಳ ಬಗೆಗಿನ ದೃಷ್ಟಿಕೋನ, ಕಣ್ಣೋಟ ಬದಲಿಸಿ ಕೊಳ್ಳಬೇಕಾಗಿರುವುದು ಯಾರು ಎಂಬುದು ಮುಖ್ಯವಾದೀತು.

ಆಯ್ಕೆ ಅವಳದ್ದೇ ಆಗಿರಲಿ...

ಮನೆ, ಕಚೇರಿ, ಕಾಲೇಜು, ಪಾರ್ಟಿ, ಶುಭ ಸಮಾರಂಭ ಸಂದರ್ಭ ಯಾವುದೇ ಇರಲಿ ಧರಿಸುವ ಉಡುಪಿನ ಆಯ್ಕೆಯ ಹಕ್ಕು ಅವಳದ್ದೇ ಆಗಿರಲಿ. ದೇಹದ ಆಕಾರಕ್ಕೆ ತಕ್ಕ, ಆರಾಮದಾಯಕ ಉಡುಪು ಆಕೆಯ ಆತ್ಮವಿಶ್ವಾಸವನ್ನು ಹೆಚ್ಚು ಮಾಡಬಲ್ಲದು.

ಋತುಮಾನಕ್ಕೆ ತಕ್ಕ ಉಡುಪು ಧರಿಸುವುದು ಅಗತ್ಯ. ಮುಖ್ಯವಾಗಿ ಸ್ವಚ್ಛವಾದ, ಚೆನ್ನಾಗಿ ಒಣಗಿರುವ ಒಳಉಡುಪು ಧರಿಸುವುದು ಆರೋಗ್ಯಕರ. ಕಂಫರ್ಟ್ ಅನಿಸದ ಉಡುಪನ್ನು ಬಲವಂತವಾಗಿ ಧರಿಸಬೇಡಿ. ಧರಿಸುವ ಉಡುಪಿಗಿಂತ ನಿಮ್ಮ ಆತ್ಮವಿಶ್ವಾಸವೇ ವ್ಯಕ್ತಿತ್ವದ ಪ್ರತಿಬಿಂಬ ಅನ್ನುವುದನ್ನು ಮರೆಯದಿರಿ.

ಹೆರಿಗೆ ಭಯ ನಿವಾರಣೆಗಿದೆ ಉಪಾಯ

ಕಾಳಜಿ

ಡಾ. ವಿಜಯರತ್ನ ವೆಂಕಟರಾಮನ್

ಹೆಣ್ಣಿನ ಬದುಕಿನಲ್ಲಿ ತಾಯ್ತನವೆಂಬುದು ಸುಂದರ ಗಳಿಗೆಗಳನ್ನು ಕೂಡಿಡುವ ಘಟ್ಟವಾದರೂ, ಹೆರಿಗೆ ಮತ್ತು ಅದರ ನೋವನ್ನು ನೆನೆಸಿಕೊಂಡೇ ಸಹಜವಾಗಿ ಆತಂಕಕ್ಕೆ ಈಡಾಗುವ ಹೆಣ್ಣುಮಕ್ಕಳ ಸಂಖ್ಯೆ ದೊಡ್ಡದೇ ಇದೆ. ಇದಕ್ಕಾಗಿ ಗರ್ಭಧಾರಣೆಯನ್ನು ಮುಂದೂಡುವವರ ಸಂಖ್ಯೆಯೂ ಕಡಿಮೆಯೇನಿಲ್ಲ.

ಗರ್ಭಿಣಿಯಾದಾಗ ಸಹಜವಾಗಿ ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಏರಿಳಿತಗಳಿರುತ್ತವೆ. ಪ್ರತಿಯೊಬ್ಬರ ತಾಯ್ತನದ ಅನುಭವ ಬೇರೆಯಾದರೂ ಹೆರಿಗೆ ನೋವು ಅಂದಾಕ್ಷಣ, ಅದರ ಬಗ್ಗೆ ಭಯವಂತೂ ಇದ್ದೇ ಇರುತ್ತದೆ. ಅಧ್ಯಯನಗಳ ಪ್ರಕಾರ ಶೇ 6ರಿಂದ ಶೇ 10ರಷ್ಟು ಗರ್ಭಿಣಿಯರು ಹೆರಿಗೆ ಭಯವನ್ನು ಹೊಂದಿರುತ್ತಾರೆ. ಈ ಭಯವು ಮುಖ್ಯವಾಗಿ ವೈದ್ಯಕೀಯ ಮಾಹಿತಿ ಕೊರತೆಯಿಂದ ಆಗಿರುತ್ತದೆ. ಜತೆಗೆ ಬಂಧುಗಳು, ಕುಟುಂಬದ ಸದಸ್ಯರು ಅನುಭವಿಸಿದ ಹೆರಿಗೆ ನೋವಿನ ಕಥೆಯು ಭಯವನ್ನು ಹೆಚ್ಚು ಮಾಡಿರುತ್ತದೆ.

ತಾಯ್ತನದಲ್ಲಿ ಆರೈಕೆಯೆಂಬುದು ಅತಿ ಅಗತ್ಯವಾದರೂ ವಿನಾಕಾರಣ ಆತಂಕಕ್ಕೆ ಒಳಗಾಗಬೇಕಿಲ್ಲ ಎಂಬುದನ್ನು ಗರ್ಭಿಣಿಯರು ಅರಿಯಬೇಕು. ಗರ್ಭಾವಸ್ಥೆಯಲ್ಲಿ ಎಷ್ಟು ಪೌಷ್ಟಿಕಾಂಶ ಸೇವನೆ ಮಾಡಬೇಕು, ದೈಹಿಕ ಚಟುವಟಿಕೆ ಹೇಗಿರಬೇಕು, ಯಾವ ಹಂತದಲ್ಲಿ ಪ್ರಯಾಣ ಮಾಡಿದರೆ ಒಳಿತು, ಮಗುವಿನ ಒದೆಯುವಿಕೆ ಎಷ್ಟಿರಬೇಕು, ಎಂಥ ಸಂದರ್ಭದಲ್ಲಿ ಸ್ತ್ರೀರೋಗತಜ್ಞರನ್ನು ಭೇಟಿ ಮಾಡಬೇಕು ಎಂಬೆಲ್ಲ ಪ್ರಶ್ನೆಗಳಿರುತ್ತವೆ. ಸರಿಯಾದ ಮಾರ್ಗದರ್ಶನವಿದ್ದಾಗ ಅನವಶ್ಯಕ ಭಯ ಇರುವುದಿಲ್ಲ.

ಆರೈಕೆ ಹೇಗಿರಬೇಕು?

ಸಾಂಪ್ರದಾಯಿಕ ಹಾಗೂ ಆಧುನಿಕ ಪದ್ಧತಿಯ ಆರೈಕೆಗಳೆರಡಕ್ಕೂ ಪ್ರಾಮುಖ್ಯ ನೀಡಬಹುದು. ಆದರೆ, ವಿನಾಕಾರಣ ಭಯ ಪಡುವುದನ್ನು ಬಿಡಿ. ಗರ್ಭ ಧರಿಸುವುದು ಎಂದರೆ ಕಾಯಿಲೆಯಲ್ಲ. ಬದುಕಿನ ಸಂತಸ ಘಟ್ಟ ಎಂಬುದನ್ನು ಮರೆಯಬಾರದು. ಎಂಥದ್ದೇ ಸಂದರ್ಭದಲ್ಲಿಯೂ ಸಕಾರಾತ್ಮಕ ಧೋರಣೆಯನ್ನು ಬಿಡಬೇಡಿ. ಇದರ ಜತೆಗೆ ಸರಿಯಾದ ಸಮಯಕ್ಕೆ ಪೌಷ್ಟಿಕ ಆಹಾರ ಸೇವನೆ ಮಾಡಿ, ದೈಹಿಕವಾಗಿ ಚಟುವಟಿಕೆಯಿಂದ ಇರಿ. ಗರ್ಭಿಣಿಯರು ಆತ್ಮವಿಶ್ವಾಸದಿಂದ ಇರುವುದು ಮುಖ್ಯ. ಗರ್ಭ ಧರಿಸಿದಾಗಿನಿಂದ ಹೆರಿಗೆಯವರೆಗೆ ಕಾಲ ಕಾಲಕ್ಕೆ ಮಗು ಮತ್ತು ತಾಯಿಯ ಆರೋಗ್ಯದ ಬಗ್ಗೆ ಮಾಹಿತಿ ನೀಡಲು ಹಲವು ತಂತ್ರಜ್ಞಾನಗಳಿವೆ. ಎ.ಐ ಆಧಾರಿತ ಆ್ಯಪ್‌ಗಳು ಲಭ್ಯ ಇವೆ. ಇದರಲ್ಲಿ ಸ್ತ್ರೀರೋಗತಜ್ಞರು, ಪೌಷ್ಟಿಕತಜ್ಞರು, ಯೋಗಪಟುಗಳು, ಫಿಸಿಯೋಥೆರಪಿಸ್ಟ್ ಸೇರಿದಂತೆ ತಜ್ಞರ ಜಾಲವಿರುತ್ತದೆ. ಜತೆಗೆ ಔಷಧ ಸೇವನೆ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಮಗುವಿನ ಬೆಳವಣಿಗೆಯನ್ನು ಟ್ರ್ಯಾಕ್ ಮಾಡುವ ವ್ಯವಸ್ಥೆ ಇರುತ್ತದೆ. ಇಂಥದ್ದನ್ನು ಬಳಸಿಕೊಳ್ಳುವುದು ಕೂಡ ಅಗತ್ಯ. ಹಿಲೋಫೈ, ಮದರ್‌ಹುಡ್ ಕೇರ್ ಆ್ಯಪ್‌ಗಳು ಸಹಾಯಕ್ಕೆ ಬರುತ್ತವೆ. ಈ ಆ್ಯಪ್‌ಗಳು ಆಯಾ ತಾಯಂದಿರ ಅಗತ್ಯವನ್ನು ಅರಿತು ಅದಕ್ಕೆ ತಕ್ಕಂಥ ಸೇವೆ ನೀಡುತ್ತವೆ. ಪ್ರತಿ ಹಂತದಲ್ಲೂ ಅಗತ್ಯವಿರುವ ಮಾರ್ಗದರ್ಶನ ಮಾಡುತ್ತವೆ. ಬಳಸುವ ವಿವೇಚನೆ ನಮ್ಮದಾಗಿರಬೇಕಷ್ಟೆ. ❖

ಸ್ಪಂದನ

ಡಾ. ವೀಣಾ ಎಸ್. ಭಟ್

ಗರ್ಭಿಣಿಯರಲ್ಲಿ ಮಲಬದ್ಧತೆ ಸಹಜವೇ?

- **ಮೊದಲ ಬಾರಿಗೆ ಗರ್ಭ ಧರಿಸಿದ್ದು, ನಾಲ್ಕು ತಿಂಗಳು ನಡೆಯುತ್ತಿದೆ. ನಿತ್ಯ ಮಲವಿಸರ್ಜನೆ ಸರಿಯಾಗಿ ಆಗುತ್ತಿಲ್ಲ. ಅದಕ್ಕಾಗಿ ತುಂಬಾ ಹೊತ್ತು ತಿಣುಕಾಡುವಂತೆ ಆಗುತ್ತಿದೆ. ದಿನವಿಡೀ ಹೊಟ್ಟೆ ಉಬ್ಬರಿಸಿದ ಹಾಗಿರುತ್ತದೆ. ವೈದ್ಯರು ಇದರ ನಿವಾರಣೆಗಾಗಿ ಔಷಧಿ ನೀಡಿದ್ದಾರೆ. ಆದರೂ ಹೀಗೆ ತಿಣುಕಾಡುವಾಗೆಲ್ಲ ಗರ್ಭಪಾತ ಆಗಿಬಿಡುತ್ತೇನೋ ಎನ್ನುವ ಭಯ. ಏನು ಮಾಡಲಿ?**

ಜೀರ್ಣಕ್ರಿಯೆ ಬಾಯಿಯಲ್ಲಿರುವ ಜೊಲ್ಲು ರಸದಿಂದ ಆರಂಭವಾಗುತ್ತದೆ. ಹಾಗಾಗಿ ಆಹಾರವನ್ನು ಸಾಧ್ಯವಾದಷ್ಟು ಬಾಯಿಯಲ್ಲಿಯೇ ಅಗಿದು ಸೇವಿಸಬೇಕು. ಅಲ್ಲಿಂದ ಅದು ಅನ್ನನಾಳದ ಮುಖಾಂತರ ಜಠರಕ್ಕೆ ಹೋಗುತ್ತದೆ. ಅಲ್ಲಿಯ ಜಠರಾಮ್ಲವು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಜಠರದಿಂದ ಆಹಾರ ಸಣ್ಣಕರುಳಿಗೆ ಹೋಗಿ ಅಲ್ಲಿ ಜೀರ್ಣಕ್ರಿಯೆ ಮುಂದುವರಿದು ಪೋಷಕಾಂಶಗಳ ಹೀರುವಿಕೆಯೂ ಆಗುತ್ತದೆ. ನಂತರ ಆಹಾರವು ದೊಡ್ಡಕರುಳಿಗೆ ಹೋಗಿ ಅಲ್ಲಿ ಆಹಾರದಲ್ಲಿರುವ ನೀರಿನಂಶವೆಲ್ಲ ಹೀರಲ್ಪಟ್ಟು ಮಲವಾಗಿ ಪರಿವರ್ತನೆ ಆಗುತ್ತದೆ. ಇದು ಮಲಕೋಶಕ್ಕೆ ಬಂದು ನಂತರ ಗುದದ್ವಾರದಿಂದ ನಿಯಮಿತವಾಗಿ ಹೊರಹಾಕಲಾಗುತ್ತದೆ. ಈ ಪ್ರಕ್ರಿಯೆಗೆ ನಿಯಮಿತವಾದ ಕರುಳಿನ ಪೆರಿಸ್ಟಾಲಿಸಿಸ್ ಕಂಪನ ಅಗತ್ಯ. ದಿನನಿತ್ಯ ನಾವು ತಿಂದ ಆಹಾರ ಸರಿಯಾಗಿ ಪಚನವಾಗಿ ಮಲವಿಸರ್ಜನೆಯು ಸಲೀಸಾಗಿ ಆಗಲು ಸಾಕಷ್ಟು ನಾರಿನಂಶ ಹಾಗೂ ನೀರಿನಂಶ ಅತ್ಯಗತ್ಯ. ತಪ್ಪು ಆಹಾರ ಪದ್ಧತಿಯಿಂದಾಗಿ ಮಲಬದ್ಧತೆ ಹೆಚ್ಚುತ್ತದೆ.

ಗರ್ಭಿಣಿಯರಲ್ಲಿ ಜನಸಾಮಾನ್ಯರಿಗಿಂತ ಮಲಬದ್ಧತೆ ಇನ್ನೂ ಹೆಚ್ಚಾಗಿ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಪ್ರೊಜೆಸ್ಟಿರಾನ್ ಹಾರ್ಮೋನ್ ಹೆಚ್ಚಾಗುವುದರಿಂದ ಕರುಳಿನ ಸ್ನಾಯುಗಳ ಚಲನೆ ಕಡಿಮೆಯಾಗುತ್ತವೆ. ಜೀರ್ಣಕ್ರಿಯೆ ಮತ್ತು ಕರುಳಿನ ಕಂಪನಗಳು ಕಡಿಮೆಯಾಗುವುದರಿಂದ ಮಲಬದ್ಧತೆ ಹೆಚ್ಚುತ್ತದೆ. ಗರ್ಭದಲ್ಲಿರುವ ಮಗುವಿನಿಂದಾಗಿ ಕರುಳಿನ ಮೇಲೆ ಒತ್ತಡ ಉಂಟಾಗಿ, ಮಲವಿಸರ್ಜನೆ ಕಷ್ಟವಾಗಬಹುದು.

ಕಬ್ಬಿಣಾಂಶ ಮಾತ್ರೆಗಳ ಸೇವನೆಯಿಂದಲೂ ಕೆಲವೊಮ್ಮೆ ಮಲಬದ್ಧತೆ ಉಂಟಾಗಬಹುದು. ಚಟುವಟಿಕೆ ಕಡಿಮೆ ಆಗುವುದರಿಂದ ಮಲಬದ್ಧತೆ ಉಂಟಾಗಿ, ಮೂಲವ್ಯಾಧಿ ಸಮಸ್ಯೆಯಾಗಬಹುದು. ಇದರ ಜತೆಗೆ ಪದೇ ಪದೇ ಬಾಯಿಹುಣ್ಣು, ಖಿನ್ನತೆ, ನಿರುತ್ಸಾಹ ಕಾಣಿಸಿಕೊಳ್ಳಬಹುದು.

ಹೆರಿಗೆಯ ನಂತರ ಈ ಸಮಸ್ಯೆ ನಿವಾರಣೆಯಾದರೂ ಕೆಲವೊಮ್ಮೆ ಬಾಣಂತನದಲ್ಲೂ ಮರುಕಳಿಸಬಹುದು. ನಿತ್ಯ ಬೆಳಿಗ್ಗೆ 6ರಿಂದ ಸಂಜೆ 6ರ ಒಳಗೆ 3 ಲೀಟರ್ ನೀರನ್ನು ಸೇವಿಸಿ. ಕರಗಬಲ್ಲ ನಾರಿನಂಶವನ್ನು ಕನಿಷ್ಠ 30 ಗ್ರಾಂ ಪ್ರತಿದಿನ ಸೇವಿಸಲೇಬೇಕು. ಸವತೆಕಾಯಿ, ಹೀರೇಕಾಯಿ, ಕ್ಯಾರೆಟ್, ಮೂಲಂಗಿ, ಸೋರೆಕಾಯಿ, ಬೆಂಡೆಕಾಯಿ, ಬಸಳೆ, ಪಾಲಕ್ ಹೇರಳವಾಗಿ ಬಳಸಿ. ಪೇರಳೆಹಣ್ಣು, ಸೇಬುಹಣ್ಣು, ಬಾಳೆಹಣ್ಣು, ಅಂಜೂರ, ಒಣದ್ರಾಕ್ಷಿ ಬಳಸಿ.

ಅತಿಯಾಗಿ ಕರಿದ, ಹುರಿದ ಸಂಸ್ಕರಿಸಿದ ಆಹಾರಗಳ ಬಳಕೆ ಬೇಡ. ಕೆಫಿನ್ ಸೇವನೆ ಅತಿಯಾಗಿ ಬೇಡ. ಆಹಾರವನ್ನು ನಿಧಾನವಾಗಿ ಅಗಿದು ಸೇವಿಸಿ. ಮಾನಸಿಕ ಒತ್ತಡವಿರುವಾಗ ಆಹಾರ ಸೇವನೆ ಬೇಡ. ಒಂದು ಚಮಚ ಮೆಂತ್ಯ, ಒಂದು ಚಮಚ ಅಗಸೆ ಬೀಜ, ಒಂದು ಚಮಚ ಎಳ್ಳನ್ನು ರಾತ್ರಿ ನೆನೆಸಿಟ್ಟು ಬೆಳಿಗ್ಗೆ ಅದನ್ನ ಜ್ಯೂಸ್ ತರಹ ಮಾಡಿ ಸೇವಿಸಬಹುದು. ಒಂದು ಗಂಟೆಯಾದರೂ ಸಾಧಾರಣ ಶ್ರಮದ ಚಟುವಟಿಕೆ ಮಾಡಿ. ದೀರ್ಘ ಉಸಿರಾಟ, ನಾಡಿಶೋಧನ ಪ್ರಾಣಾಯಾಮಗಳಿಂದ ವಪೆಯ (ಡಯಾಫ್ರಾಮ್) ಕಾರ್ಯಕ್ಷಮತೆ ಹೆಚ್ಚುತ್ತದೆ.

ಜೀರ್ಣಕ್ರಿಯೆ ಸರಾಗವಾಗಿ ಆಗಿ ಮಲವಿಸರ್ಜನೆ ಸರಾಗವಾಗಿ ಆಗುತ್ತದೆ. ಯೋಗಾಸನದಲ್ಲಿ ಮಲಾಸನ, ಮಾರ್ಜರಿ ಆಸನ, ಭಾರದ್ವಾಜಾಸನ, ಪವನಮುಕ್ತಾಸನಗಳು ಮಲಬದ್ಧತೆ ನಿವಾರಣೆಗೆ ಸಹಕಾರಿ.

ಹಲಸು ತರಹೇವಾರಿ ತಿನಿಸು

ರಸಾಸ್ವಾದ

ವೇದಾವತಿ ಎಚ್. ಎಸ್.

ಹಪ್ಪಳ

ಬೇಕಾಗುವ ಸಾಮಗ್ರಿಗಳು: ಹಲಸಿನ ಹಣ್ಣಿನ ಪ್ಯೂರಿ 2 ಕಪ್, ಬೆಲ್ಲದ ಪುಡಿ 1/2 ಕಪ್ (ಹಲಸಿನ ಹಣ್ಣಿನ ಸಿಹಿಗೆ ಅನುಸಾರವಾಗಿ ಹಾಕಿ), ಏಲಕ್ಕಿಪುಡಿ 1/4 ಟೀ ಚಮಚ, ದಾಲ್ಚಿನ್ನಿ ಚಿಟಿಕೆ ಚಕ್ಕೆ ಪುಡಿ, ತುಪ್ಪ 1 ಟೀ ಚಮಚ.

ತಯಾರಿಸುವ ವಿಧಾನ: ಬಾಣಲೆಗೆ ಹಲಸಿನ ಹಣ್ಣಿನ ಪ್ಯೂರಿ ಮತ್ತು ಬೆಲ್ಲವನ್ನು ಹಾಕಿ. ಬೆಲ್ಲ ಕರಗುವವರೆಗೆ ಮಿಶ್ರಣ ಮಾಡಿ. ಮಿಶ್ರಣವು ಗಟ್ಟಿಯಾಗುತ್ತಾ ಬರುವಾಗ ಏಲಕ್ಕಿಪುಡಿ, ಚಕ್ಕೆಪುಡಿ ಹಾಕಿ ಮಿಶ್ರಣ ಮಾಡಿ ಒಲೆಯಿಂದ ಇಳಿಸಿ. ತಟ್ಟೆಗೆ ತುಪ್ಪ ಸವರಿ ತಯಾರಿಸಿದ ಹಲಸಿನ ಹಣ್ಣಿನ ಮಿಶ್ರಣವನ್ನು ಹಾಕಿ ಸಮತಟ್ಟಾಗಿ ಮಾಡಿ. ಎರಡರಿಂದ ಮೂರು ದಿನ ಬಿಸಿಲಿನಲ್ಲಿ ಒಣಗಿಸಿ. ಬಳಿಕ ನಿಮಗೆ ಬೇಕಾದ ರೀತಿಯಲ್ಲಿ ಕತ್ತರಿಸಿ ಅಥವಾ ಸುರುಳಿ ಸುತ್ತಿ ಇಡಿ. ಇದನ್ನು ವರ್ಷದವರೆಗೆ ಇಟ್ಟು ಸವಿಯಬಹುದು.

ಕಾಯಿ ಹೂರಣ ಸ್ಪೆಷಲ್

ಬೇಕಾಗುವ ಸಾಮಗ್ರಿಗಳು: ಗೋಧಿಹಿಟ್ಟು 1 ಕಪ್, ಚಿಟಿಕೆ ಉಪ್ಪು, ತುಪ್ಪ 1 ಟೀ ಚಮಚ, ಚಿಟಿಕೆ ಅರಿಶಿನ, ತೆಂಗಿನ ಕಾಯಿ ಬಿಳಿ ಭಾಗ 1 ಕಪ್, ಬೆಲ್ಲದ ಪುಡಿ 1/4 ಕಪ್, ಏಲಕ್ಕಿಪುಡಿ 1/4 ಟೀ ಚಮಚ, ಹಲಸಿನ ಹಣ್ಣಿನ ತೊಳೆಗಳು 20, ಎಣ್ಣೆ ಕರಿಯಲು, ನೀರು ಸ್ವಲ್ಪ.

ತಯಾರಿಸುವ ವಿಧಾನ: ಬಟ್ಟಲಿಗೆ ಗೋಧಿಹಿಟ್ಟು, ಉಪ್ಪು, ಅರಿಶಿನ, ತುಪ್ಪ, ನೀರು ಹಾಕಿ ಚಪಾತಿ ಹಿಟ್ಟಿನ ಹದಕ್ಕೆ ಕಲಸಿಕೊಳ್ಳಿ. ಬಾಣಲೆಗೆ ತೆಂಗಿನತುರಿ ಮತ್ತು ಬೆಲ್ಲ ಹಾಕಿ. ಬೆಲ್ಲ ಕರಗಿ ತೆಂಗಿನತುರಿಯೊಂದಿಗೆ ಸೇರಿ ಬಣ್ಣ ಬದಲಾಗುವವರೆಗೆ ಹುರಿಯಿರಿ. ನಂತರ ಏಲಕ್ಕಿಪುಡಿ ಸೇರಿಸಿ ಮಿಶ್ರಣ ಮಾಡಿ ಒಲೆಯಿಂದ ಇಳಿಸಿ. ಆರಲು ಬಿಡಿ. ಹಲಸಿನ ತೊಳೆಯಲ್ಲಿರುವ ಬೀಜವನ್ನು ತೆಗೆಯಿರಿ. ಬೀಜ ತೆಗೆದ ಜಾಗದಲ್ಲಿ ತಯಾರಿಸಿದ ತೆಂಗಿನಕಾಯಿ ಹೂರಣ ತುಂಬಿಸಿ. ಬಳಿಕ ಗೋಧಿ ಹಿಟ್ಟಿನಿಂದ ಸುತ್ತಲೂ ತೆಳುವಾಗಿ ಮುಚ್ಚಿ. ಎಲ್ಲವನ್ನೂ ಹಾಗೇ ತಯಾರಿಸಿಕೊಳ್ಳಿ. ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿಕೊಂಡು ಮಧ್ಯಮ ಉರಿಯಲ್ಲಿ ಬೋಂಡದಂತೆ ಕೆಂಬಣ್ಣ ಬರುವರೆಗೆ ಕರಿಯಿರಿ. ಬಿಸಿ ಬಿಸಿ ಇರುವಾಗಲೇ ಸವಿಯಿರಿ.

ಕೇಸರಿಬಾತ್

ಬೇಕಾಗುವ ಸಾಮಗ್ರಿಗಳು: ಚಿರೋಟಿ ರವೆ 1 ಕಪ್, ನೀರು 2 ಕಪ್, ಸಕ್ಕರೆ 3/4 ಕಪ್, ಕೇಸರಿದಳ ಚಿಟಿಕೆ (2 ಟೇಬಲ್ ಚಮಚ ಬಿಸಿ ಹಾಲಿನಲ್ಲಿ ನೆನೆಸಿಡಿ), ಹಲಸಿನ ಹಣ್ಣಿನ ಪ್ಯೂರಿ(ಗಟ್ಟಿಯಾದ ರಸ) 1 ಕಪ್, ತುಪ್ಪ 4 ಟೇಬಲ್ ಚಮಚ, ಗೋಡಂಬಿ 10, ಒಣದ್ರಾಕ್ಷಿ 10 ರಿಂದ 20, ಏಲಕ್ಕಿಪುಡಿ 1/2 ಟೀ ಚಮಚ.

ತಯಾರಿಸುವ ವಿಧಾನ: ಬಾಣಲೆಗೆ ಒಂದು ಟೇಬಲ್ ಚಮಚ ತುಪ್ಪ ಹಾಕಿ ಗೋಡಂಬಿ ಮತ್ತು ದ್ರಾಕ್ಷಿಯನ್ನು ಕೆಂಬಣ್ಣಕ್ಕೆ ಹುರಿದು ತುಪ್ಪದಿಂದ ತೆಗೆದಿಡಿ. ಅದೇ ತುಪ್ಪದಲ್ಲಿ ಚಿರೋಟಿ ರವೆಯನ್ನು ಪರಿಮಳ ಬರುವವರೆಗೆ ಹುರಿದು ತೆಗೆದಿಡಿ. ಬಾಣಲೆಗೆ ನೀರನ್ನು ಹಾಕಿ ಬಿಸಿ ಮಾಡಿ. ಬಳಿಕ ಹುರಿದ ರವೆಯನ್ನು ಹಾಕಿ ಗಂಟಾಗದ ರೀತಿಯಲ್ಲಿ ಮಿಶ್ರಣ ಮಾಡಿ. ನಂತರ ಹಲಸಿನ ಹಣ್ಣಿನ ಪ್ಯೂರಿ, ಹಾಲಿನಲ್ಲಿ ನೆನೆಸಿಟ್ಟ ಕೇಸರಿದಳ ಮತ್ತು ಸಕ್ಕರೆ ಸೇರಿಸಿ ಮಿಶ್ರಣ ಮಾಡಿ. ಒಂದು ನಿಮಿಷ ಮುಚ್ಚಿ ಬೇಯಿಸಿ. ಬಳಿಕ ಮಿಶ್ರಣ ಮಾಡಿ ತುಪ್ಪವನ್ನು ಸೇರಿಸಿ. ಹೊಂದಿಕೆ ಆಗುವವರೆಗೆ ಮಿಶ್ರಣ ಮಾಡಿ. ಕೊನೆಯಲ್ಲಿ ಏಲಕ್ಕಿಪುಡಿ, ಹುರಿದ ಗೋಡಂಬಿ ಮತ್ತು ದ್ರಾಕ್ಷಿ ಸೇರಿಸಿ ಮಿಶ್ರಣ ಮಾಡಿ. ರುಚಿಕರವಾದ ಹಲಸಿನಹಣ್ಣಿನ ಕೇಸರಿಬಾತ್ ಸಿದ್ಧ.

ಹಲ್ವಾ

ಬೇಕಾಗುವ ಸಾಮಗ್ರಿಗಳು: ಹಲಸಿನಹಣ್ಣಿನ ಪ್ಯೂರಿ ಒಂದೂವರೆ ಕಪ್, ಬೆಲ್ಲದ ಪುಡಿ 3/4 ಕಪ್, ಕಾರ್ನ್‌ಫ್ಲೋರ್ 2 ಟೇಬಲ್ ಚಮಚ, ಗೋಡಂಬಿ ಚೂರುಗಳು 1/4 ಕಪ್, ಏಲಕ್ಕಿಪುಡಿ 1/2 ಟೀ ಚಮಚ, ತುಪ್ಪ 4 ಟೇಬಲ್ ಚಮಚ.

ತಯಾರಿಸುವ ವಿಧಾನ: ಬೆಲ್ಲಕ್ಕೆ ಅರ್ಧ ಕಪ್ ನೀರನ್ನು ಹಾಕಿ ಕುದಿಸಿ ಸೋಸಿಕೊಳ್ಳಿ. ಕಾರ್ನ್‌ಫ್ಲೋರ್‌ಗೆ ಕಾಲು ಕಪ್ ನೀರು ಹಾಕಿ ಪೇಸ್ಟ್ ತಯಾರಿಸಿಕೊಳ್ಳಿ. ಬಾಣಲೆಗೆ 2 ಟೇಬಲ್ ಚಮಚ ತುಪ್ಪವನ್ನು ಹಾಕಿ ಗೋಡಂಬಿಯನ್ನು ಹುರಿದು ತುಪ್ಪದಿಂದ ತೆಗೆದಿಟ್ಟುಕೊಳ್ಳಿ. ಅದೇ ತುಪ್ಪಕ್ಕೆ ಹಲಸಿನಹಣ್ಣಿನ ಪ್ಯೂರಿಯನ್ನು ಹಾಕಿ ಮಧ್ಯಮ ಉರಿಯಲ್ಲಿ ಎರಡು ನಿಮಿಷ ಮಿಶ್ರಣ ಮಾಡಿ. ಬಳಿಕ ಕಾರ್ನ್‌ಫ್ಲೋರ್ ಹಾಕಿ ಗಂಟಾಗದ ರೀತಿಯಲ್ಲಿ ಮಗುಚಿ. ಗಟ್ಟಿಯಾಗುತ್ತಾ ಬರುವಾಗ 2 ಟೇಬಲ್ ಚಮಚ ತುಪ್ಪ, ಏಲಕ್ಕಿಪುಡಿ ಮತ್ತು ಹುರಿದ ಗೋಡಂಬಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಮಿಶ್ರಣವು ಬಾಣಲೆಯನ್ನು ಬಿಟ್ಟು ಬರುವಾಗ ತುಪ್ಪ ಸವರಿದ ತಟ್ಟೆಗೆ ಹಾಕಿ ಸಮತಟ್ಟಾಗಿ ಮಾಡಿ. ಒಂದು ಗಂಟೆ ಬಿಟ್ಟು ಕತ್ತರಿಸಿ.

ಸಂಕ್ಷಿಪ್ತ ಸುದ್ದಿ

ಹಿಂದೂ ದೇವಾಲಯ ಮಸೂದೆ ರಾಷ್ಟ್ರಪತಿ ಅಂಕಿತಕ್ಕೆ

ಬೆಂಗಳೂರು: ಮುಜರಾಯಿ ಇಲಾಖೆಯ ವ್ಯಾಪ್ತಿಯ ಶ್ರೀಮಂತ ದೇವಸ್ಥಾನಗಳಲ್ಲಿ ಸಂಗ್ರಹವಾಗುವ ಆದಾಯದಲ್ಲಿ ಒಂದು ಪಾಲನ್ನು 'ಸಾಮಾನ್ಯ ಸಂಗ್ರಹಣಾ ನಿಧಿ'ಗೆ ವರ್ಗಾಯಿಸಲು ಅವಕಾಶ ಮಾಡಿಕೊಡುವ 'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆ'ಯನ್ನು ರಾಷ್ಟ್ರಪತಿಯ ಅಂಕಿತಕ್ಕೆ ಕಾಯ್ದಿರಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ವಾಪಸ್ ಕಳುಹಿಸಿದ್ದಾರೆ.

'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ– 1997'ರ ತಿದ್ದುಪಡಿಗಾಗಿ ಉಭಯ ಸದನಗಳ ಅನುಮೋದನೆ ಪಡೆಯಲಾಗಿತ್ತು. ಆದರೆ, ಕೆಲವು ಸ್ಪಷ್ಟೀಕರಣ ಕೇಳಿ ರಾಜ್ಯಪಾಲರು ವಾಪಸ್ ಕಳುಹಿಸಿದ್ದರು. ಮುಜರಾಯಿ

ಇಲಾಖೆಯು ಸ್ಪಷ್ಟನೆಯೊಂದಿಗೆ ಮತ್ತೆ ರಾಜ್ಯಪಾಲರ ಅಂಕಿತಕ್ಕೆ ಮಸೂದೆಯನ್ನು ಕಳುಹಿಸಿತ್ತು. ಈಗ ರಾಜ್ಯಪಾಲರು, 'ಈ ಮಸೂದೆಯ ಅಂಶಗಳಿಗೆ ಹೈಕೋರ್ಟ್ ತಡೆ ನೀಡಿದೆ. ಜತೆಗೆ ಸಂವಿಧಾನದಲ್ಲೂ ನಿರ್ಬಂಧಗಳಿವೆ. ಹೀಗಾಗಿ ಇದನ್ನು ರಾಷ್ಟ್ರಪತಿಯ ಅಂಕಿತಕ್ಕೆ ಕಾಯ್ದಿರಿಸಲಾಗಿದೆ' ಎಂದು ತಿಳಿಸಿದ್ದಾರೆ.

ವಾರ್ಷಿಕ ₹1 ಕೋಟಿಗಿಂತ ಹೆಚ್ಚು ಆದಾಯ ಸಂಗ್ರಹವಾಗುವ ದೇವಾಲಯಗಳ ಆದಾಯದಲ್ಲಿ ಶೇ 10ರಷ್ಟು, ₹10 ಲಕ್ಷಕ್ಕಿಂತ ಹೆಚ್ಚು ಮತ್ತು ₹ 1 ಕೋಟಿಗಿಂತ ಕಡಿಮೆ ಸಂಗ್ರಹವಾಗುವ ದೇವಾಲಯಗಳ ಆದಾಯದ ಶೇ 5ರಷ್ಟನ್ನು 'ಸಾಮಾನ್ಯ ಸಂಗ್ರಹಣಾ ನಿಧಿ' ವರ್ಗಾಯಿಸಲು ಈ ಮಸೂದೆ ಅವಕಾಶ ಮಾಡಿಕೊಡುತ್ತದೆ.

'ಬೂಕರ್ ಪ್ರಶಸ್ತಿ: ತಲಾ ₹10 ಲಕ್ಷ ಬಹುಮಾನ ನೀಡಿ'

ಬೆಂಗಳೂರು: 'ಪ್ರತಿಷ್ಠಿತ 'ಅಂತರ ರಾಷ್ಟ್ರೀಯ ಬೂಕರ್ ಪ್ರಶಸ್ತಿ'ಗೆ ಭಾಜನರಾದ ಲೇಖಕಿ ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಭಾಸ್ತಿ ಅವರಿಗೆ ರಾಜ್ಯ ಸರ್ಕಾರವು ತಲಾ ₹10 ಲಕ್ಷ ನಗದು ಬಹುಮಾನ ಘೋಷಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

'ಪ್ರಶಸ್ತಿಯ ನಗದಿಗೂ ಕೇಂದ್ರ ಸರ್ಕಾರವು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸೇರಿ ಶೇಕಡ 30ರಷ್ಟು ತೆರಿಗೆ ವಿಧಿಸಿದೆ. ಇದರಿಂದ ಪೂರ್ಣ ಪ್ರಮಾಣದಲ್ಲಿ ನಗದು ಬಹುಮಾನ ಪಡೆಯಲು ಸಾಧ್ಯವಿಲ್ಲ. ತೆರಿಗೆ ರಹಿತ ನೀಡಲು ನಮ್ಮ ಕಾನೂನಿನಡಿ ಅವಕಾಶವಿಲ್ಲ. ಹಾಗಾಗಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ಹಾಗೂ ಭಾರತಕ್ಕೆ ಕೀರ್ತಿ ತಂದಿರುವ ಇಬ್ಬರಿಗೂ ರಾಜ್ಯ ಸರ್ಕಾರದಿಂದ ಗೌರವಧನ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಮನು ಬಳಿಗಾರ್

'ಈ ಹಿಂದೆ ಚಂದ್ರಶೇಖರ ಕಂಬಾರ ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಅವರಿಗೆ ₹ 5 ಲಕ್ಷ ಗೌರವಧನ ನೀಡಿತ್ತು. ಅದೇ ರೀತಿ, ಎಸ್.ಎಲ್. ಭೈರಪ್ಪ ಅವರಿಗೆ 'ಸರಸ್ವತಿ ಸಮ್ಮಾನ್ ಪ್ರಶಸ್ತಿ' ಬಂದಾಗ ₹ 5 ಲಕ್ಷ ನೀಡಿ ಗೌರವಿಸಲಾಗಿತ್ತು. ಆದರೆ, ಅವರು ಆ ಹಣವನ್ನು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ ಅಭಿವೃದ್ಧಿಗೆ ಬಳಸುವಂತೆ ಸರ್ಕಾರಕ್ಕೆ ಹಿಂತಿರುಗಿಸಿದ್ದರು' ಎಂದು ಸ್ಮರಿಸಿದ್ದಾರೆ.

ಬಿಬಿಎಂಪಿ, ಜಲಮಂಡಳಿ ಅಧಿಕಾರಿಗಳಿಗೆ ಲೋಕಾಯುಕ್ತ ತರಾಟೆ

'ಸಮನ್ವಯದ ಕೊರತೆಯಿಂದ ಪ್ರವಾಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ ತೀವ್ರ ಮಳೆಯಾದಾಗ ಪ್ರವಾಹ ಸ್ಥಿತಿ ತಲೆದೋರಲು ಬಿಬಿಎಂಪಿ, ಜಲಮಂಡಳಿ ಮಧ್ಯೆ ಸಮನ್ವಯ ಇಲ್ಲದೇ ಇರುವುದೇ ಕಾರಣ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಸಿಲ್ಕ್ ಬೋರ್ಡ್ ವೃತ್ತ, ಸಾಯಿ ಬಡಾವಣೆ, ಪಣತ್ತೂರು ರೈಲ್ವೆ ಕೆಳಸೇತುವೆ ಬಳಿ ಪ್ರವಾಹ ಸ್ಥಿತಿ ಉಂಟಾಗುವ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತವು ಬಿಬಿಎಂಪಿ, ಜಲಮಂಡಳಿ, ಬಿಎಂಆರ್‌ಸಿಎಲ್ ಮತ್ತು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧಿಕಾರಿಗಳನ್ನು ಶುಕ್ರವಾರ ವಿಚಾರಣೆ ನಡೆಸಿದರು.

'ಬಿಬಿಎಂಪಿಯವರು ಎಲ್ಲಿ ಕಾಮಗಾರಿ ನಡೆಸುತ್ತಿದ್ದಾರೆ, ಜಲಮಂಡಳಿಯವರು ಎಲ್ಲಿ ಅಗೆಯುತ್ತಿದ್ದಾರೆ ಎಂಬುದರ ಬಗ್ಗೆ ಪರಸ್ಪರರಿಗೆ ಮಾಹಿತಿಯೇ ಇರುವುದಿಲ್ಲ. ಬಿಎಂಆರ್‌ಸಿಎಲ್‌ನವರು, ರೈಲ್ವೆಯವರು ರಾಜಕಾಲುವೆ ಮುಚ್ಚಿರುವುದೂ ಇವರಿಗೆ ಗೊತ್ತಾಗುವುದಿಲ್ಲ' ಎಂದು ತರಾಟೆಗೆ ತೆಗೆದುಕೊಂಡರು.

'ಸಿಲ್ಕ್ ಬೋರ್ಡ್ ವೃತ್ತದಲ್ಲಿ ಬಿಎಂಆರ್‌ಸಿಎಲ್‌ನವರು ಮೆಟ್ರೊ ನಿಲ್ದಾಣ ಕಾಮಗಾರಿ ನಡೆಸುತ್ತಿದ್ದು, ರಾಜಕಾಲುವೆಯಲ್ಲಿ ಪಿಲ್ಲರ್ ನಿರ್ಮಿಸಿದ್ದಾರೆ. ಇದರಿಂದ ರಾಜಕಾಲುವೆಯಲ್ಲಿ ನೀರು ಹರಿಯುತ್ತಿಲ್ಲ. ಈ ಕಾರಣದಿಂದಲೇ ಪ್ರವಾಹ ತಲೆದೋರುತ್ತಿದೆ. ಈ ಬಗ್ಗೆ ಜಲಮಂಡಳಿಯವರಾಗಲೀ, ಬಿಬಿಎಂಪಿಯವರಾಗಲೀ ಏಕೆ ಕ್ರಮ ತೆಗೆದುಕೊಂಡಿಲ್ಲ' ಎಂದು ಲೋಕಾಯುಕ್ತರು ಅಧಿಕಾರಿಗಳನ್ನು ಪ್ರಶ್ನಿಸಿದರು.

ನೀರು ಸರಾಗವಾಗಿ ಹರಿಯಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅಧಿಕಾರಿಗಳು ವಿವರಣೆ ನೀಡಿದಾಗ ಲೋಕಾಯುಕ್ತರು, 'ಪ್ರವಾಹ ತಲೆದೋರುವವರೆಗೂ ಇಂತಹ ಸಾಮಾನ್ಯ ಸಂಗತಿಗಳು ನಿಮಗೆ ಏಕೆ ಅರ್ಥವಾಗುವುದಿಲ್ಲ. ಕಾಮಗಾರಿ ನಡೆಸುತ್ತಿರುವ ಬಿಎಂಆರ್‌ಸಿಎಲ್‌ನ ಎಂಜಿನಿಯರ್ ಅನ್ನು ಕರೆಸಿ, ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಅವರಿಗೆ ಸೂಚಿಸಿ. ಈ ಸಮಸ್ಯೆಯನ್ನು ಬಗೆಹರಿಸಿ ಜೂನ್ 3ರ ಒಳಗೆ ವರದಿ ಸಲ್ಲಿಸಿ' ಎಂದು ತಾಕೀತು ಮಾಡಿದರು.

ವಿಚಾರಣೆ ವೇಳೆ ಅಧಿಕಾರಿಗಳು ಲೋಕಾಯುಕ್ತರಿಗೆ ವಿವರಣೆ ನೀಡಿದರು

'ಪಣತ್ತೂರು ರೈಲ್ವೆ ಕೆಳಸೇತುವೆ ಪಕ್ಕದಲ್ಲೇ, ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮವು ಮತ್ತೊಂದು ಕೆಳಸೇತುವೆ ನಿರ್ಮಿಸುತ್ತಿದೆ. ಅಲ್ಲಿ ಹಾದುಹೋಗುವ ಮಳೆ ನೀರಿನ ಕಾಲುವೆಯನ್ನು ಮುಚ್ಚಿಹಾಕಿದೆ. ಜತೆಗೆ ಪಣತ್ತೂರು ಕೆರೆಯ ಹೊರಕಾಲುವೆಯನ್ನೂ ಮುಚ್ಚಿ ಹಾಕಿದೆ. ಈ ಕಾರಣದಿಂದಲೇ ಮಳೆಬಂದಾಗ ನೀರು ನಿಂತು, ಮನೆಗಳಿಗೆ ನುಗ್ಗುತ್ತಿದೆ. ಮಳೆ ನೀರಿನ ಕಾಲುವೆಯನ್ನು ಶೀಘ್ರವೇ ಸರಿಪಡಿಸಿ, ವರದಿ ನೀಡಿ' ಎಂದು ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧಿಕಾರಿಗಳಿಗೆ ಸೂಚಿಸಿದರು.

'ಅವೈಜ್ಞಾನಿಕ ರಾಜಕಾಲುವೆ'

'ನಗರದಲ್ಲಿ ಹಲವೆಡೆ ಹೊಸದಾಗಿ ರಾಜಕಾಲುವೆಗಳನ್ನು ನಿರ್ಮಿಸಲಾಗಿದೆ. ಆದರೆ ಅವು ಅವೈಜ್ಞಾನಿಕವಾಗಿ ಇರುವುದರಿಂದಲೇ ಕೋರಮಂಗಲ, ಮಹದೇವಪುರ ವ್ಯಾಪ್ತಿಯಲ್ಲಿ ಮಳೆ ಬಂದಾಗ ಪ್ರವಾಹ ಸ್ಥಿತಿ ಉಂಟಾಗುತ್ತಿದೆ' ಎಂದು ಹಲವು ಸಾರ್ವಜನಿಕರು ಲೋಕಾಯುಕ್ತರಿಗೆ ದೂರಿತ್ತರು.

'ರಸ್ತೆಗಿಂತ ಹೆಚ್ಚು ಎತ್ತರವಾಗಿ ರಾಜಕಾಲುವೆಗಳ ತಡೆಗೋಡೆ ನಿರ್ಮಿಸಲಾಗಿದೆ. ರಸ್ತೆಯಲ್ಲಿನ ನೀರು ರಾಜಕಾಲುವೆಗೆ ಹೋಗಲು ಆ ತಡೆಗೋಡೆಗಳೇ ಅಡ್ಡಿಯಾಗಿವೆ. ನೀರು ರಾಜಕಾಲುವೆಗೆ ಹೋಗಲು ಕಿಂಡಿಗಳನ್ನೂ ನಿರ್ಮಿಸಿಲ್ಲ' ಎಂದರು.

ಈ ಬಗ್ಗೆ ಅಧಿಕಾರಿಗಳಿಂದ ವಿವರಣೆ ಪಡೆದ ಲೋಕಾಯುಕ್ತರು, 'ತಡೆಗೋಡೆ ನಿರ್ಮಾಣದಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಿ. ನೀರು ಹರಿದುಹೋಗಲು ಅನುವಾಗುವಂತೆ ಇಳಿಜಾರುಗಳನ್ನು, ಕಿಂಡಿಗಳನ್ನು ನಿರ್ಮಿಸಿ' ಎಂದು ಸೂಚಿಸಿದರು.

ಕಾಮಗಾರಿಯ ಮೇಲ್ವಿಚಾರಣೆ ನಡೆಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

'ಗೆದ್ದಲಹಳ್ಳಿ ರೈಲ್ವೆ ಕೆಳಕಾಲುವೆ ಕಿರಿದಾಗಿರುವ ಕಾರಣದಿಂದಲೇ ಮಳೆ ಬಂದಾಗ, ರಾಜಕಾಲುವೆಯ ನೀರು ಹಿಮ್ಮುಖವಾಗಿ ಹರಿದು ಎಚ್‌ಬಿಆರ್ ಬಡಾವಣೆ, ಸಾಯಿ ಬಡಾವಣೆಗಳಲ್ಲಿ ಪ್ರವಾಹ ಸ್ಥಿತಿ ತಲೆದೋರುತ್ತಿದೆ. ಈ ಸಮಸ್ಯೆಯನ್ನು ಬೇಗ ಬಗೆಹರಿಸಿ' ಎಂದು ಲೋಕಾಯುಕ್ತರು ಹೇಳಿದರು.

ಆಗ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್, 'ರೈಲ್ವೆ ಕೆಳಕಾಲುವೆ ವಿಸ್ತರಣೆಗೆ ರೈಲ್ವೆ ಇಲಾಖೆ ಅನುಮತಿ ನೀಡಿದೆ. ಈಗಾಗಲೇ ಕಾಮಗಾರಿ ಆರಂಭಿಸಲಾಗಿದೆ' ಎಂದು ಮಾಹಿತಿ ನೀಡಿದರು. ಅದಕ್ಕೆ ಲೋಕಾಯುಕ್ತರು, 'ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿ, ವರದಿ ಸಲ್ಲಿಸಿ' ಎಂದರು.

ಶುಕ್ರವಾರದ ವಿಚಾರಣೆ ವೇಳೆ ಅಹವಾಲು ಸಲ್ಲಿಸಲು ಸಾರ್ವಜನಿಕರಿಗೂ ಅವಕಾಶ ಕಲ್ಪಿಸಲಾಗಿತ್ತು. ಮಾನ್ಯತಾ ಟೆಕ್ ಪಾರ್ಕ್ ಬಳಿ ರಾಜಕಾಲಲುವೆ ಒತ್ತುವರಿಯಾಗಿರುವ ಬಗ್ಗೆ ಹಲವರು ದೂರು ಸಲ್ಲಿಸಿದರು. ಅದಕ್ಕೆ ಪ್ರತಿಯಾಗಿ ಬಿಬಿಎಂಪಿ ಅಧಿಕಾರಿಗಳು, 'ಒತ್ತುವರಿ ತೆರವು ಮಾಡಿ, ರಾಜಕಾಲುವೆಯ ತಡೆಗೋಡೆ ನಿರ್ಮಿಸುತ್ತೇವೆ ಎಂದು ಮಾನ್ಯತಾ ಟೆಕ್‌ಪಾರ್ಕ್ ತಿಳಿಸಿದೆ. ಇದಕ್ಕೆ 90 ದಿನಗಳ ಕಾಲಾವಕಾಶ ನೀಡಲಾಗಿದೆ' ಎಂದು ವಿವರಣೆ ನೀಡಿದರು.

ಜಯನಗರದ ಅರಸು ಕಾಲೊನಿಯಲ್ಲಿ ರಾಜಕಾಲುವೆಯನ್ನು ನಿಖಿಲ್ ಕುಮಾರಸ್ವಾಮಿ ವೀಕ್ಷಿಸಿದರು

'ಒತ್ತುವರಿ ತೆರವು ಸಾಧ್ಯವೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕಾಲುವೆಗಳು ಒತ್ತುವರಿ ಆಗಿರುವುದರಿಂದಲೇ, ಬೆಂಗಳೂರಿನಲ್ಲಿ ಮಳೆ ಬಂದಾಗ ಪ್ರವಾಹ ಸ್ಥಿತಿ ಉಂಟಾಗುತ್ತದೆ. ಪ್ರಭಾವಿಗಳೇ ಒತ್ತುವರಿ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒತ್ತುವರಿ ತೆರವು ಮಾಡಿಸುತ್ತಾರೆಯೇ' ಎಂದು ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪ್ರಶ್ನಿಸಿದರು.

ಬೆಂಗಳೂರಿನಲ್ಲಿ ಈಚೆಗೆ ಸುರಿದ ಭಾರಿ ಮಳೆಯಿಂದ ಜಲಾವೃತವಾಗಿದ್ದ ಪ್ರದೇಶಗಳಿಗೆ ಗುರುವಾರ ಜೆಡಿಎಸ್ ನಿಯೋಗವು ಭೇಟಿ ನೀಡಿ, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿತು. ಆನಂತರ ಸುದ್ದಿಗಾರರ ಜತೆ ಮಾತನಾಡಿದ ನಿಖಿಲ್, 'ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರು ಕಾಟಾಚಾರಕ್ಕೆ ಈ ಪ್ರದೇಶಗಳಿಗೆ ಭೇಟಿ ನೀಡಿದ್ದಾರೆ' ಎಂದರು.

'ಮಳೆ ಬಂದರೆ ಏನು ತೊಂದರೆ ಎಂದು ಉಪ ಮುಖ್ಯಮಂತ್ರಿ ಅವರು ನಿರ್ಲಕ್ಷ್ಯದಿಂದ ಮಾತನಾಡಿದ್ದಾರೆ. ಅವರಿಗೆ ಸರ್ಕಾರದ ಎರಡು ವರ್ಷದ ಸಾಧನಾ ಸಮಾವೇಶ ನಡೆಸುವುದೇ ಮುಖ್ಯವಾಗಿತ್ತು. ಹೀಗಾಗಿ ತಡವಾಗಿ ಜನರ ಬಳಿ ಬಂದರು' ಎಂದು ಆರೋಪಿಸಿದರು.

ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು, ಶಾಸಕ ಸಿ.ಎನ್. ಬಾಲಕೃಷ್ಣ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಅವರೂ ಇದ್ದ ನಿಯೋಗವು ಜಯನಗರದ ಅರಸು ಕಾಲೊನಿ, ರೇಷ್ಮೆ ಮಂಡಳಿ ವೃತ್ತ, ಮಹದೇವಪುರದ ಪಣತ್ತೂರು ರೈಲ್ವೆ ಕೆಳಸೇತುವೆ, ಸಾಯಿ ಬಡಾವಣೆ ಮತ್ತು ಸರ್ವಜ್ಞ ನಗರಗಳಿಗೆ ಭೇಟಿ ನೀಡಿತ್ತು.

ಧರೆಗೆ ಉರುಳಿದ 150 ವರ್ಷದ ಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಸುಮಾರು 150 ವರ್ಷದ ಮರವೊಂದು ಶುಕ್ರವಾರ ಸಂಜೆ ಉರುಳಿ ಬಿದ್ದಿದೆ.

ಫೈಕಸ್ ಕನ್ನಿಂಗ್ ಹ್ಯಾಮಿ ಪ್ರಭೇದದ ಮರವು ಲಾಲ್‌ಬಾಗ್ ಉದ್ಯಾನದಲ್ಲಿತ್ತು. 'ವಿ' ಆಕಾರದಲ್ಲಿ ಎರಡು ಬೃಹತ್ ರೆಂಬೆಗಳು ಬೆಳೆದಿದ್ದು, ಮಧ್ಯೆ ಟೊಳ್ಳಾಗಿತ್ತು. ಮಳೆ ಬಂದಾಗ ಭಾರ ತಡೆಯಲಾರದೇ ಟೊಳ್ಳಾಗಿದ್ದ ಜಾಗವು ಇಬ್ಭಾಗವಾಗಿ ಬಿದ್ದಿದೆ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಜಗದೀಶ ಮಾಹಿತಿ ನೀಡಿದರು.

ಫೈಕಸ್ ತಳಿಯಲ್ಲಿ ಆಲ, ಅರಳಿ ಸೇರಿದಂತೆ 200ಕ್ಕೂ ಅಧಿಕ ಪ್ರಭೇದಗಳಿವೆ. ಅದರಲ್ಲಿ ಕನ್ನಿಂಗ್ ಹ್ಯಾಮಿ ಕೂಡಾ ಒಂದು. ಸಣ್ಣ ಹಣ್ಣುಗಳನ್ನು ಬಿಡುವ ಈ ಮರ ಹಕ್ಕಿಗಳಿಗೆ ಅನುಕೂಲಕರವಾಗಿತ್ತು. ಮರವನ್ನು ಶನಿವಾರ ತೆರವುಗೊಳಿಸಲಾಗುವುದು ಎಂದು ಅವರು ತಿಳಿಸಿದರು.

ಯಾರಿಗೂ ಅಪಾಯ ಉಂಟಾಗಿಲ್ಲ ಎಂದು ಪ್ರತ್ಯಕ್ಷದರ್ಶಿ, ವಾಯುವಿಹಾರಿ ಅನಿಲ್ ತಿಳಿಸಿದ್ದಾರೆ.

ಲಾಲ್‌ಬಾಗ್ ಉದ್ಯಾನದಲ್ಲಿ ಶುಕ್ರವಾರ ಫೈಕಸ್ ಕನ್ನಿಂಗ್ ಹ್ಯಾಮಿ ಪ್ರಭೇದದ ಮರ ಉರುಳಿಬಿತ್ತು

ಜಿಬಿಎ: ಜನಾಭಿಪ್ರಾಯ

'ಜಿಬಿಎ ರಚನೆಯ ನಂತರ ಮುಂದೇನಾಗಬೇಕು'– ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ಬಿಬಿಎಂಪಿಯನ್ನು ಜಿಬಿಎ ಮಾಡುತ್ತಿರುವುದು ಸರಿ. ಆದರೆ, ಗ್ರೇಟ್ ಎನಿಸುವಷ್ಟು ಅಭಿವೃದ್ಧಿ ಎಲ್ಲಿದೆ? ಉದ್ಯಾನ ನಗರಿ ಈಗ ತ್ಯಾಜ್ಯ ನಗರವಾಗಿ ಬದಲಾಗಿದೆ. ಗುಂಡಿಗಳೇ ಇಲ್ಲದ ರಸ್ತೆಗಳು ಎಲ್ಲಿವೆ? ಪಾದಚಾರಿ ಮಾರ್ಗಗಳು ವ್ಯಾಪಾರ ಮಾಡುವ ಸ್ಥಳಗಳಾಗಿವೆ. ಅನ್ಯ ಭಾಷಿಕರ ದಬ್ಬಾಳಿಕೆ ಹೆಚ್ಚಾಗಿದೆ. ನಗರದಲ್ಲಿನ ಹಸಿರೀಕರಣ ಮಾಯವಾಗಿದೆ. ಜಿಬಿಎ ಮಾಡುವ ಮುನ್ನ ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು.

ದೀಪುರಾವ್ ಕೆ.ಎ., ಕೆಂಚನಪುರ

ಜಿಬಿಎಗೆ ಆರಂಭಿಕವಾಗಿ ವಿರೋಧ ವ್ಯಕ್ತಪಡಿಸಲಾಗುತ್ತದೆ. ಆದರೆ, ಎಲ್ಲರೂ ಇದಕ್ಕೆ ಸಹಕಾರ ನೀಡಬೇಕು. ಮುಖ್ಯವಾಗಿ ಜಿಬಿಎಗೆ ಚುನಾವಣೆ ನಡೆಸಬೇಕು. ಆಯ್ಕೆಯಾದ ಜನಪ್ರತಿನಿಧಿಗಳು ಅಧಿಕಾರಿಗಳ ಜೊತೆಗೆ ಸೇರಿ ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಬೇಕು. ಭವಿಷ್ಯದಲ್ಲಿ ಮಳೆಯಿಂದ ಆಗುವ ಹಾನಿಯನ್ನು ತಪ್ಪಿಸಲು ಯೋಜನೆಗಳನ್ನು ರೂಪಿಸಬೇಕು. ನಗರದಲ್ಲಿ ಸ್ವಚ್ಛತೆ, ರಸ್ತೆ ಸಾರಿಗೆ ಅಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಬೇಕು.

ತಾ.ಸಿ. ತಿಮ್ಮಯ್ಯ, ಮಲ್ಲತ್ತಹಳ್ಳಿ

ಗ್ರೇಟರ್ ಬೆಂಗಳೂರು ಹೋಗಿ 'ಲೂಟರ್ಸ್ ಬೆಂಗಳೂರು' ಆಗದಿರಲಿ. ಈಗಾಗಲೇ ಬೆಂಗಳೂರಿನ ಕೆರೆ–ಕಟ್ಟೆಗಳನ್ನು ಒತ್ತುವರಿ ಮಾಡಿಕೊಂಡು, ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ನಗರದ ಎಲ್ಲ ರಸ್ತೆಗಳು ಗುಂಡಿಮಯವಾಗಿವೆ. ಗಾರ್ಡನ್ ಸಿಟಿ ಹೋಗಿ 'ಗಾರ್ಬೇಜ್ ಸಿಟಿ'ಯಾಗಿ ಬದಲಾಗಿದೆ. ಜಿಬಿಎಯಲ್ಲಿ ಸ್ವಚ್ಛ, ಸುಂದರ ಹಾಗೂ ಸುಸಜ್ಜಿತ ಬೆಂಗಳೂರಿನ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ನೀಡಬೇಕು.

ಹು.ಕಾ. ಗೌಡಯ್ಯ, ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ

ಜಿಬಿಎ ಮಾಡುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಜಿಬಿಎನಲ್ಲಿ ಸಂಚಾರ ದಟ್ಟಣೆ, ಕಸ ವಿಲೇವಾರಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ ಆದ್ಯತೆ ನೀಡಬೇಕು. ಎಲ್ಲರೂ ಮಳೆ ನೀರು ಸಂಗ್ರಹ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಬಿಬಿಎಂಪಿ ಜಿಬಿಎ ಆಗಿ ಬದಲಾದರೆ, ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ಭೀಮಾ ನಾಯಕ, ಗೋವಿಂದರಾಜನಗರ

ಜಿಬಿಎ ಆಯ್ತು: ಮುಂದೇನಾಗಬೇಕು

'ಗ್ರೇಟರ್ ಬೆಂಗಳೂರು ಪ್ರದೇಶ' ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ.ಜೊತೆಗೆ ವಿಳಾಸ, ಭಾವಚಿತ್ರವಿರಲಿ.

9606038256

ಸಾಯಿ ಲೇಔಟ್‌ನಲ್ಲಿ ಆರೋಗ್ಯ ಶಿಬಿರ ಏರ್ಪಡಿಸಿದ ಬಿಬಿಎಂಪಿ

ಸಾಂಕ್ರಾಮಿಕ ರೋಗ ಹರಡದಂತೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದ ಹೊರಮಾವು ಸಮೀಪದ ಸಾಯಿ ಲೇಔಟ್‌ನಲ್ಲಿ ಮಳೆ ನೀರು ನುಗ್ಗಿ ತೀವ್ರ ಸಮಸ್ಯೆ ಉಂಟು ಮಾಡಿತ್ತು. ಈ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಬಿಬಿಎಂಪಿ ಕೈಗೊಂಡಿದೆ.

ಮೇ 18ರಂದು ಸುರಿದಿದ್ದ ಭಾರಿ ಮಳೆಯಿಂದ ಸಾಯಿ ಲೇಔಟ್ ಪ್ರದೇಶವು ಜಲಾವೃತವಾಗಿ ಜನಜೀವನ ಅಸ್ತವ್ಯಸ್ತವಾಗಿತ್ತು. ಪಾಲಿಕೆಯ ಸಿಬ್ಬಂದಿ ಸ್ಥಳದಲ್ಲಿದ್ದು, ಸಮಸ್ಯೆ ಬಗೆಹರಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೆ ಎಂದು ಮಹದೇವಪುರ ವಲಯ ಆಯುಕ್ತ ಕೆ.ಎನ್. ರಮೇಶ್ ಮಾಹಿತಿ ನೀಡಿದರು.

ಸಾಯಿ ಲೇಔಟ್ ಪ್ರದೇಶದಲ್ಲಿನ ನಿವಾಸಿಗಳಿಗೆ ಸಾಂಕ್ರಾಮಿಕ ರೋಗಗಳು ಹರಡದಂತೆ ಪಾಲಿಕೆಯ ಆರೋಗ್ಯ ವಿಭಾಗವು ತಕ್ಷಣವೇ ಸ್ಪಂದಿಸಿದೆ. ಘಟನಾ ಸ್ಥಳಕ್ಕೆ ವಲಯ ಆರೋಗ್ಯ ಅಧಿಕಾರಿಯಾದ ಡಾ.ಲೋಕೇಶ್, ಆರೋಗ್ಯವೈದ್ಯಾಧಿಕಾರಿ ಡಾ. ವಿಶ್ವೇಶ್ವರಯ್ಯ ಅವರು ಆರೋಗ್ಯ ತಂಡದೊಂದಿಗೆ ಭೇಟಿ ನೀಡಿ ಸ್ಥಳೀಯ ನಿವಾಸಿಗಳ ಆರೋಗ್ಯದ ಕುರಿತು ಮುಂಜಾಗೃತಾ ಕ್ರಮಗಳನ್ನು ಕೈಗೊಂಡಿದ್ದಾರೆ ಎಂದರು.

ಸಾಯಿ ಲೇಔಟ್‌ನಲ್ಲಿ ಬಿಬಿಎಂಪಿ ವತಿಯಿಂದ ಆರೋಗ್ಯ ಶಿಬಿರ ಆಯೋಜಿಸಲಾಗಿದೆ

ವೈದ್ಯಾಧಿಕಾರಿ ಹಾಗೂ ಅರೆವೈದ್ಯಕೀಯ ಸಿಬ್ಬಂದಿಯನ್ನು ಒಳಗೊಂಡ ತಂಡವನ್ನು ಘಟನಾ ಸ್ಥಳದಲ್ಲಿ ನಿಯೋಜಿಸಲಾಗಿದ್ದು, ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ. ಅಗತ್ಯ ಔಷಧಗಳ ಜೊತೆಗೆ, ರಕ್ತದೊತ್ತಡ ಪರೀಕ್ಷಿಸುವ ಸಾಧನ, ಒಂದು ಆಂಬುಲೆನ್ಸ್ ವ್ಯವಸ್ಥೆ ಕೂಡ ಮಾಡಲಾಗಿದೆ.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನೇತೃತ್ವದಲ್ಲಿ ಆಶಾ ಕಾರ್ಯಕರ್ತೆಯರನ್ನು ಒಳಗೊಂಡ ತಂಡವು ಮನೆ-ಮನೆ ಭೇಟಿ ನೀಡಿ, ಸಾಂಕ್ರಾಮಿಕ ರೋಗ, ನೀರಿನಿಂದ ಹರಡಬಹುದಾದ ಕಾಯಿಲೆಗಳು, ಡೆಂಗಿ ನಿಯಂತ್ರಣ, ಶುದ್ಧ ಕುಡಿಯುವ ನೀರು ಬಳಸುವ ಬಗ್ಗೆ ಜಾಗೃತಿ ಮೂಡಿಸಲಾಯಿತು. ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಡೆಗಟ್ಟಲು ಸೋಂಕು ನಿವಾರಕ ರಾಸಾಯನಿಕ ಸಿಂಪಡಣೆ ಮಾಡಲಾಗುತ್ತಿದೆ. ಜೊತೆಗೆ ಸೊಳ್ಳೆಗಳ ನಿಯಂತ್ರಣಕ್ಕಾಗಿ ಫಾಗಿಂಗ್ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೆ. ನಾರಾಯಣಪುರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಮ್ಮ ಕ್ಲಿನಿಕ್ ವತಿಯಿಂದ ಆರೋಗ್ಯ ಶಿಬಿರ ಏರ್ಪಡಿಸಿ, ಸ್ಥಳೀಯ ನಿವಾಸಿಗಳಿಗೆ ರಕ್ತದ ಒತ್ತಡ, ಮಧುಮೇಹ, ಚರ್ಮ ರೋಗಗಳು ಸೇರಿದಂತೆ ವಿವಿಧ ರೋಗಗಳಿಗೆ ಸುಮಾರು 115 ಮಂದಿಗೆ ಚಿಕಿತ್ಸೆ ನೀಡಲಾಗಿದೆ. ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರು ಮಹದೇವಪುವರ ವಲಯದ ನಿಯಂತ್ರಣ ಕೊಠಡಿಯ ಸಹಾಯವಾಣಿ 080-28512300 ಅಥವಾ ವಾಟ್ಸ್‌ಆ್ಯಪ್ 9480685706ಗೆ ಮಾಹಿತಿ ನೀಡಲು ಮನವಿ ಮಾಡಿದರು.

ಮಳೆಗಾಲಕ್ಕೆ ಸನ್ನದ್ಧರಾಗಿರಲು ಸೂಚನೆ

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಮಳೆಗಾಲದ ವೇಳೆ ಜಲಾವೃತವಾಗುವ ಪ್ರದೇಶಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ರಸ್ತೆ ಬದಿಯ ಚರಂಡಿಗಳಲ್ಲಿರುವ ಹೂಳನ್ನು ಸಂಪೂರ್ಣವಾಗಿ ತೆರವುಗೊಳಿಸಿ ಮಳೆ ನೀರು ಸರಾಗವಾಗಿ ಹರಿದುಹೋಗುವಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಪಶ್ಚಿಮ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಸೂಚಿಸಿದರು.

ಮಳೆಗಾಲಕ್ಕೆ ತೆಗೆದುಕೊಳ್ಳಬೇಕಿರುವ ಮುಂಜಾಗ್ರತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮಳೆಗಾಲದ ವೇಳೆ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಕ್ರಮ ಕೈಗೊಳ್ಳಲು ಎಲ್ಲಾ ವಿಭಾಗಗಳ ಎಂಜಿನಿಯರ್, ಅರಣ್ಯ ವಿಭಾಗದ ಅಧಿಕಾರಿಗಳಿಗೆ ಆದೇಶಿಸಿದರು. ನೀರುಗಾಲುವೆ ಹಾಗೂ ಚರಂಡಿಗಳಲ್ಲಿ ನಿರಂತರವಾಗಿ ಹೂಳೆತ್ತಬೇಕು. ನಿಯಂತ್ರಣ ಕೊಠಡಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ನಾಗರಿಕರಿಂದ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ ಕೂಡಲೇ ಇತ್ಯರ್ಥಪಡಿಸಲು ಸೂಚಿಸಿದರು. ಕೆ.ಆರ್ ಮಾರುಕಟ್ಟೆ ಹಾಗೂ ವಾಹನಗಳ ನಿಲುಗಡೆಯ ಸ್ಥಳದಲ್ಲಿ ನೀರು ನಿಲ್ಲುವುದರಿಂದ ವ್ಯಾಪಾರಸ್ಥರು ಹಾಗೂ ಗ್ರಾಹಕರಿಗೆ ಸಾಕಷ್ಟು ಸಮಸ್ಯೆಯಾಗಲಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಕಾಮಗಾರಿ ನಡೆಸಲು ಅಂದಾಜು ಪಟ್ಟಿ ಸಿದ್ದಪಡಿಸಬೇಕು ಎಂದರು.

ಬೆಸ್ಕಾಂ ವ್ಯಾಪ್ತಿಯಲ್ಲಿ 380 ವಿದ್ಯುತ್ ಪರಿವರ್ತಕಗಳಿಗೆ ಹಾನಿ ● ಅಂದಾಜು ₹7.08 ಕೋಟಿ ನಷ್ಟ

ಬಿರುಗಾಳಿ ಮಳೆ: 3 ಸಾವಿರ ಕಂಬಗಳು ಧರೆಗೆ

● ಗಾಣಧಾಳು ಶ್ರೀಕಂಠ

ಬೆಂಗಳೂರು: ಈ ವರ್ಷದ ಏಪ್ರಿಲ್–ಮೇ ತಿಂಗಳಲ್ಲಿ ಬಿರುಗಾಳಿ ಸಹಿತ ಸುರಿದ ಪೂರ್ವ ಮುಂಗಾರು ಮಳೆಗೆ ಬೆಸ್ಕಾಂ ವ್ಯಾಪ್ತಿಯಲ್ಲಿ ಸುಮಾರು ಮೂರುವರೆ ಸಾವಿರದಷ್ಟು ವಿದ್ಯುತ್ ಕಂಬಗಳು ಧರೆಗುರುಳಿದ್ದು, 350ಕ್ಕೂ ಹೆಚ್ಚು ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. ಅಂದಾಜು ₹7.08 ಕೋಟಿಗೂ ಹೆಚ್ಚು ನಷ್ಟ ಸಂಭವಿಸಿದೆ.

ಲಭ್ಯವಾಗಿರುವ ಮಾಹಿತಿ ಪ್ರಕಾರ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆಸ್ಕಾಂ) ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಏಪ್ರಿಲ್ ಮತ್ತು ಮೇ 18ರವರೆಗೆ 3,461 ವಿದ್ಯುತ್ ಕಂಬಗಳು ಧರೆಗುರುಳಿವೆ. 380 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. ಪರಿಕರಗಳಿಗೆ ₹6.08 ಕೋಟಿ ಹಾಗೂ ಕಾರ್ಮಿಕರಿಗೆ ₹98.78 ಲಕ್ಷ ವೆಚ್ಚವಾಗುವುದಾಗಿ ಅಂದಾಜಿಸಲಾಗಿದೆ.

ಮೇ ತಿಂಗಳಲ್ಲಿ ಹೆಚ್ಚು: ಏಪ್ರಿಲ್ ತಿಂಗಳಲ್ಲಿ 1,880 ವಿದ್ಯುತ್ ಕಂಬಗಳಿಗೆ, 150 ಪರಿವರ್ತಕಗಳಿಗೆ ಹಾನಿಯಾಗಿದೆ. ಮೇ ತಿಂಗಳ ಮಧ್ಯಭಾಗದ ವೇಳೆಗೆ ಎರಡೂ ಪರಿಕರಗಳ ಹಾನಿ ಪ್ರಮಾಣ ಕ್ರಮವಾಗಿ 1,581 ಹಾಗೂ 229ರಷ್ಟಾಗಿದೆ. ಎರಡೇ ತಿಂಗಳಲ್ಲಿ ₹2.26 ಕೋಟಿ ನಷ್ಟ ಸಂಭವಿಸಿದೆ.

ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು 1,120 ವಿದ್ಯುತ್ ಕಂಬಗಳು ಧರೆಗುರುಳಿವೆ. ಹಾಗೆಯೇ, ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು 183 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. ಉಳಿದಂತೆ ದಾವಣಗೆರೆ ಜಿಲ್ಲೆಯಲ್ಲಿ 734, ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ತಲಾ 400ಕ್ಕೂ ಹೆಚ್ಚು ಕಂಬಗಳಿಗೆ ಹಾನಿಯಾಗಿದೆ.

ಈ ವರ್ಷ ಫೆಬ್ರವರಿ ತಿಂಗಳ ಅಂತ್ಯದಿಂದಲೇ ಮುಂಗಾರು ಪೂರ್ವ ಮಳೆ ಆರಂಭವಾಯಿತು. ಮಾರ್ಚ್ ಮಧ್ಯಭಾಗದ ವೇಳೆ ತುಸು ಬಿರುಸಾಯಿತು. ಕಳೆದ ವರ್ಷ ಏಪ್ರಿಲ್ ಕೊನೆಯ ವಾರದಲ್ಲಿ ಮಳೆ ಆರಂಭವಾಗಿತ್ತು. ಈ ವರ್ಷ ಎರಡನೇ ವಾರದಿಂದಲೇ ಗಾಳಿ ಮತ್ತು ಮಳೆಯ ತೀವ್ರತೆ ಹೆಚ್ಚಾಯಿತು, ಅದು ಮೇ ತಿಂಗಳಲ್ಲೂ ಮುಂದುವರಿಯಿತು. ಇವೆಲ್ಲ ಹಾನಿ ಪ್ರಮಾಣ ಹೆಚ್ಚಳಕ್ಕೆ ಕಾರಣ ಎಂದು ಬೆಸ್ಕಾಂನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ನಗರ ಪ್ರದೇಶದಲ್ಲಿ ಅಧಿಕ: ನಗರ ಪ್ರದೇಶದಲ್ಲಿ ಮರಗಳು ತಂತಿಗಳ ಮೇಲೆ ಬಿದ್ದು ವಿದ್ಯುತ್ ಕಂಬಗಳು ಮುರಿದುಬಿದ್ದಿರುವ ಪ್ರಮಾಣ ಹೆಚ್ಚಾಗಿದೆ. ಒಂದೊಂದು ಮರ ಬಿದ್ದಾಗಲೂ, ಎರಡು -ಮೂರು ಕಂಬಗಳಿಗೆ ಹಾನಿಯಾಗುತ್ತದೆ ಎಂಬುದು ಅಧಿಕಾರಿಗಳ ವಿಶ್ಲೇಷಣೆ.

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಹೀಗೆ ಹಾನಿಗೊಳಗಾಗಿರುವ ಪ್ರಮಾಣ ಹೆಚ್ಚಾಗಿದೆ. ಈ ಜಿಲ್ಲಾ ವ್ಯಾಪ್ತಿಯ ಐದು ತಾಲ್ಲೂಕುಗಳಲ್ಲಿ ಏಪ್ರಿಲ್–ಮೇ (18ರವರೆಗೆ) ತಿಂಗಳಲ್ಲಿ 276 ಮರಗಳು ಉರುಳಿವೆ. 183 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. ₹2.26 ಕೋಟಿ ನಷ್ಟವಾಗಿದೆ.

ಪ್ರತಿ ವರ್ಷ ಪೂರ್ವ ಮುಂಗಾರು ಮತ್ತು ಹಿಂಗಾರು ಮಳೆಯ ಅವಧಿಯಲ್ಲಿ ವಿದ್ಯುತ್ ಕಂಬಗಳು, ತಂತಿಗಳು, ವಿದ್ಯುತ್ ಪರಿವರ್ತಕಗಳು ಮತ್ತು ಡಿಪಿ ಸ್ಟ್ರಕ್ಚರ್‌ಗಳು ಹೆಚ್ಚು ಹಾನಿಗೊಳಗಾಗುತ್ತವೆ. 2022-23 ಮತ್ತು 2024-35 2022-23 ರಲ್ಲಿ ಅಂದಾಜು ₹25.52 ಕೋಟಿ, 2023–24ರಲ್ಲಿ ₹15.22 ಕೋಟಿ ಮತ್ತು 2024-25 ರಲ್ಲಿ ₹30.50 ಕೋಟಿ ನಷ್ಟವಾಗಿದೆ. ಈ ವರ್ಷ, ಇಲ್ಲಿಯವರೆಗಿನ ಅಂದಾಜು ನಷ್ಟ ₹7.08 ಕೋಟಿಯಷ್ಟಾಗಿದೆ.

ಬೆಸ್ಕಾಂ ಜಿಲ್ಲೆಗಳಲ್ಲಿ (ಏಪ್ರಿಲ್–ಮೇ) ಹಾನಿ ಪ್ರಮಾಣ

ಜಿಲ್ಲೆ	ವಿದ್ಯುತ್ ಕಂಬಗಳು	ಪರಿವರ್ತಕಗಳು	ಒಟ್ಟು ವೆಚ್ಚ(ಕೋಟಿಗಳಲ್ಲಿ)
ಬೆಂಗಳೂರು ನಗರ	276	183	₹2.55
ಬೆಂಗಳೂರು ಗ್ರಾಮಾಂತರ	56	19	₹0.28
ರಾಮನಗರ	447	56	₹1.25
ಕೋಲಾರ	167	15	₹0.43
ಚಿಕ್ಕಬಳ್ಳಾಪುರ	212	12	₹0.24
ತುಮಕೂರು	1,120	18	₹0.90
ದಾವಣಗೆರೆ	734	46	₹0.87
ಚಿತ್ರದುರ್ಗ	449	31	₹0.52

(** ಮೇ 18ರವರೆಗಿನ ಮಾಹಿತಿ)

ಸಾಂದರ್ಭಿಕ ಚಿತ್ರ

ವರ್ಷಾವಾರು ಹಾನಿ ಪ್ರಮಾಣ



'ಧ್ಯಾನದಿಂದ ಮಿದುಳಿನ ವಯಸ್ಸು ಹಿಮ್ಮುಖ'

ಬೆಂಗಳೂರು: 'ಸದ್ಗುರು ಅವರ ನೇತೃತ್ವದಲ್ಲಿ ನಡೆಸಲಾಗುತ್ತಿರುವ 'ಸಂಯಮ ಸಾಧನ' ಎಂಬ ಧ್ಯಾನದಿಂದ ಮಿದುಳಿನ ವಯಸ್ಸನ್ನು ಸರಾಸರಿ 5.9 ವರ್ಷಗಳಷ್ಟು ಹಿಮ್ಮುಖಗೊಳಿಸಬಹುದು ಎಂಬುದು ಅಧ್ಯಯನದಿಂದ ದೃಢಪಟ್ಟಿದೆ' ಎಂದು ಈಶಾ ಫೌಂಡೇಷನ್ ತಿಳಿಸಿದೆ.

ಶುಕ್ರವಾರ ಇಲ್ಲಿ ಫೌಂಡೇಷನ್ ಪರವಾಗಿ ಮಾತನಾಡಿದ ನಿಮ್ಹಾನ್ಸ್ ನರವಿಜ್ಞಾನ ವಿಭಾಗದ ಸಂಶೋಧಕ ಡಾ.ಸಾಕೇತ್, 'ಹಾರ್ವರ್ಡ್ ಮೆಡಿಕಲ್ ಸ್ಕೂಲ್, ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಇಂಡಿಯಾನಾ ವಿಶ್ವವಿದ್ಯಾಲಯದ ಸಂಶೋಧಕರನ್ನು ಒಳಗೊಂಡ ತಂಡವು ಈ ಅಧ್ಯಯನ ನಡೆಸಿದೆ. ಫೌಂಡೇಷನ್‌ನ ಯೋಗ ಕೇಂದ್ರದಲ್ಲಿ ನಡೆಸಲಾಗುತ್ತಿರುವ 'ಸಂಯಮ ಧ್ಯಾನ' ಎಂಟು ದಿನಗಳ ಶಿಬಿರಗಳಲ್ಲಿ ಭಾಗವಹಿಸಿದ ಸಾವಿರಾರು ಮಂದಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಈ ಧ್ಯಾನದಿಂದ ಉತ್ತಮ ನಿದ್ದೆ, ಮಾನಸಿಕ ಒತ್ತಡ ಇಳಿಕೆ ಹಾಗೂ ಮನೋ ಆರೋಗ್ಯ ಸುಧಾರಣೆ ಸಾಧ್ಯವಾಗಲಿದೆ. ಪರಿಣಾಮ, ಮಿದುಳಿನ ಆರೋಗ್ಯ ವೃದ್ಧಿಯಾಗಲಿದೆ' ಎಂದು ಹೇಳಿದರು.

'ವ್ಯಕ್ತಿಯ ನಿದ್ದೆಯನ್ನು ಆಧರಿಸಿ, 'ಎಲೆಕ್ಟ್ರೋ ಎನ್ಸೆಫಲೋಗ್ರಾಮ್ (ಇಇಜಿ) ಸ್ಕ್ಯಾನ್' ಹಾಗೂ ಎಂಆರ್‌ಐ ಸ್ಕ್ಯಾನ್ ಬಳಸಿ ಮಿದುಳಿನ ವಯಸ್ಸು ಹಿಮ್ಮುಖ ಆಗುವುದನ್ನು ಗುರುತಿಸಲಾಗಿದೆ. 'ಶಾಂಭವಿ ಮಹಾಮುದ್ರ ಕ್ರಿಯೆ'ಯ ನಿಯಮಿತ ಅಭ್ಯಾಸವು ನಿದ್ದೆಗೆ ಸಂಬಂಧಿಸಿದ ಮಿದುಳಿನ ಅನೇಕ ತರಂಗ ಮಾದರಿಗಳನ್ನು ಮರುಸೃಷ್ಟಿಸಿ, ನಿದ್ದೆಯ ಗುಣಮಟ್ಟವನ್ನು ಹೆಚ್ಚಿಸಲಿದೆ ಎನ್ನುವುದೂ ಅಧ್ಯಯನದಿಂದ ದೃಢಪಟ್ಟಿದೆ. ಈ ಅಭ್ಯಾಸ ಅನುಸರಿಸಿದ ಕಾರ್ಪೊರೇಟ್ ನೌಕರರ ಒತ್ತಡವು ಶೇ 50ರಷ್ಟು ಇಳಿಕೆಯಾಗಿದೆ' ಎಂದರು.

'ಈ ಅಧ್ಯಯನ ವರದಿಯು 'ಮೈಂಡ್‌ಫುಲ್' ಜರ್ನಲ್‌ನಲ್ಲಿ ಪ್ರಕಟವಾಗಿದೆ. ಮಿದುಳಿನ ಚಟುವಟಿಕೆಗಳ ಬಗ್ಗೆ ನಿಗಾ ವಹಿಸಲು ಅಧ್ಯಯನಕ್ಕೆ ಒಳಗಾದವರಿಗೆ 'ಇಇಜಿ ಹೆಡ್‌ಬ್ಯಾಂಡ್' ಅಳವಡಿಸಲಾಗಿತ್ತು. ಇದರಿಂದ ನಿಖರ ದತ್ತಾಂಶ ಸಂಗ್ರಹ ಸಾಧ್ಯವಾಯಿತು. ಈ ಧ್ಯಾನದಿಂದ ಮಿದುಳಿನ ಮೇಲಿನ ಒತ್ತಡ ಕಡಿಮೆಯಾಗುವ ಜತೆಗೆ, 'ಅಲ್ಜಮೈರ್', 'ಡಿಮೆನ್ಶಿಯಾ'ದಂತಹ (ಮರೆಗುಳಿತನ) ಕಾಯಿಲೆಗಳ ಅಪಾಯ ಕಡಿಮೆಯಾಗಲಿದೆ' ಎಂದು ಹೇಳಿದರು.

ಈಶಾ ಯೋಗಾ ಕೇಂದ್ರದದ ಸ್ವಾಮಿ ಪ್ರಬೋಧ, ಈಶಾ ಫೌಂಡೇಷನ್‌ನ ಲತಾ ಉಪಸ್ಥಿತರಿದ್ದರು.

ಎರಡು ವರ್ಷಗಳ ಹಿಂದೆಯೇ ಕೇಳಿದ್ದ ಕೆ–ರೈಡ್; ಅನುಮತಿ ನಿರಾಕರಿಸಿದ್ದ ನೈರುತ್ಯ ರೈಲ್ವೆ

ತುಮಕೂರಿಗೆ ರೈಲು: ಬಿಎಸ್‌ಆರ್‌ಪಿಗೆ ಇಲ್ಲ ಒಪ್ಪಿಗೆ

ಬಿಎಸ್‌ಆರ್‌ಪಿ ಪ್ರಸ್ತಾವಿತ ಯೋಜನೆ							
	107 ಕಿ.ಮೀ.	55 ಕಿ.ಮೀ.	45 ಕಿ.ಮೀ.	125 ಕಿ.ಮೀ.	45 ಕಿ.ಮೀ.	23 ಕಿ.ಮೀ.	62 ಕಿ.ಮೀ.
	ದೇವನಹಳ್ಳಿ–ಕೋಲಾರ	ಚಿಕ್ಕಬಾಣಾವರ–ತುಮಕೂರು	ಚಿಕ್ಕಬಾಣಾವರ–ಮಾಗಡಿ	ಕೆಂಗೇರಿ–ಮೈಸೂರು	ವೈಟ್‌ಫೀಲ್ಡ್–ಬಂಗಾರಪೇಟೆ	ಹೀಲಲಿಗೆ–ಹೊಸೂರು	ರಾಜಾನುಕುಂಟೆ–ಗೌರಿಬಿದನೂರು

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯನ್ನು (ಬಿಎಸ್‌ಆರ್‌ಪಿ) ತುಮಕೂರುವರೆಗೆ ವಿಸ್ತರಿಸಲು ಕಾರ್ಯಸಾಧ್ಯತಾ ಅಧ್ಯಯನ ನಡೆಸಲು ಎರಡು ವರ್ಷಗಳಾದರೂ ಅನುಮತಿ ಸಿಕ್ಕಿಲ್ಲ. ಆದರೆ, ನಗರದೊಳಗೆ ಮಾತ್ರ ಸಂಚರಿಸಲು ಅವಕಾಶ ಇರುವ ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಷನ್ ಲಿಮಿಟೆಡ್‌ಗೆ (ಬಿಎಂಆರ್‌ಸಿಎಲ್) ಅನುಮತಿ ಸಿಕ್ಕಿ, ಕಾರ್ಯಸಾಧ್ಯತಾ ಅಧ್ಯಯನವೂ ಮುಕ್ತಾಯವಾಗಿದೆ.

ಕೋಲಾರ, ತುಮಕೂರು, ಮಾಗಡಿ, ಮೈಸೂರು, ಬಂಗಾರಪೇಟೆ, ಹೊಸೂರು, ಗೌರಿಬಿದನೂರಿಗೆ ಉಪ ನಗರ ರೈಲು ವಿಸ್ತರಿಸಿದರೆ ಬೆಂಗಳೂರು ಮತ್ತು ಆ ಉಪ ನಗರಗಳ ಮಧ್ಯೆ ಸಂಪರ್ಕ ಇನ್ನಷ್ಟು ಸುಲಲಿತವಾಗಲಿದೆ. ಪ್ರಯಾಣಿಕರು ಸುಲಭವಾಗಿ ರಾಜ್ಯದ ರಾಜಧಾನಿಗೆ ಬಂದು, ಹಿಂತಿರುಗಬಹುದು. ಅದಕ್ಕಾಗಿ ಒಟ್ಟು 452 ಕಿ.ಮೀ. ಉದ್ದದ ಮಾರ್ಗದಲ್ಲಿ ವಿಸ್ತರಣೆಯ ಕಾರ್ಯಸಾಧ್ಯತಾ ಅಧ್ಯಯನವನ್ನು ನಡೆಸಲು ಅನುಮತಿ ನೀಡಬೇಕು ಎಂದು ಕರ್ನಾಟಕ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತವು (ಕೆ-ರೈಡ್) ರೈಲ್ವೆ ಮಂಡಳಿಗೆ 2023ರ ಜುಲೈನಲ್ಲಿ ಪತ್ರ ಬರೆದಿತ್ತು.

ನೈರುತ್ಯ ರೈಲ್ವೆಯಿಂದ ಈಗಾಗಲೇ ಈ ಮಾರ್ಗಗಳಲ್ಲಿ ರೈಲುಗಳು ಸಂಚರಿಸುತ್ತಿದ್ದು, ಮುಂದೆ ಮೂಲಸೌಕರ್ಯ ಮತ್ತು ರೈಲುಗಳ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಲಾಗುವುದು. ಜೊತೆಗೆ ವೃತ್ತ ರೈಲು ನಿರ್ಮಾಣ ಯೋಜನೆ ಕೂಡಾ ಇದೆ. ಹಾಗಾಗಿ ಕೆ-ರೈಡ್ ಕಾರ್ಯಸಾಧ್ಯತಾ ಅಧ್ಯಯನ ನಡೆಸುವ ಅಗತ್ಯ ಕಾಣುತ್ತಿಲ್ಲ ಎಂದು ನೈರುತ್ಯ ರೈಲ್ವೆ ಸ್ಪಷ್ಟನೆ ನೀಡಿ ಕೆ-ರೈಡ್‌ನ ಪ್ರಸ್ತಾವಕ್ಕೆ ಒಪ್ಪಿಗೆ ನಿರಾಕರಿಸಿತ್ತು.

ನೈರುತ್ಯ ರೈಲ್ವೆಯು ತನ್ನ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು 2024ರ ಮಾರ್ಚ್‌ನಲ್ಲಿ ಕೆ-ರೈಡ್ ಮತ್ತೆ ಪತ್ರ ಬರೆದಿತ್ತು. ಸುತ್ತಲಿನ ನಗರಗಳಿಗೆ ಉಪನಗರ ಯೋಜನೆ ವಿಸ್ತರಿಸಿದಾಗ ಪ್ರತಿ ಊರಿನಲ್ಲಿ ನಿಲ್ದಾಣಗಳಿರುತ್ತವೆ. ಪ್ರತಿ 2–3 ಕಿ.ಮೀ. ದೂರದಲ್ಲಿ ಒಂದು ನಿಲ್ದಾಣ ಇರಲಿರುವು ದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತದೆ. ವೃತ್ತ ರೈಲು ಸಂಪರ್ಕ ಜಾಲದ ಮೂಲಕವೇ ಬಿಎಸ್‌ಆರ್‌ಪಿ ಪ್ರಸ್ತಾವಿತ ಯೋಜನೆ ಹಾದು ಹೋಗುವುದರಿಂದ ಇನ್ನಷ್ಟು ಅನುಕೂಲವಾಗಲಿದೆ ಎಂದು ಎರಡನೇ ಪತ್ರದಲ್ಲಿ ಕೆ-ರೈಡ್ ವಿವರಿಸಿತ್ತು. ಈ ಪತ್ರಕ್ಕೆ ನೈರುತ್ಯ ರೈಲ್ವೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

‘ನಮ್ಮ ಮೆಟ್ರೊವನ್ನು ತುಮಕೂರಿಗೆ ವಿಸ್ತರಿಸಲು ಕಾರ್ಯಸಾಧ್ಯತಾ ವರದಿಯನ್ನು ಸಲ್ಲಿಸಿ’ ಎಂದು ಈ ನಡುವೆ ರಾಜ್ಯ ಸರ್ಕಾರವು ಬಿಎಂಆರ್‌ಸಿಎಲ್‌ಗೆ ಸೂಚನೆ ನೀಡಿತ್ತು. ಖಾಸಗಿ ಕಂಪನಿ ಮೂಲಕ ಅಧ್ಯಯನ ಮಾಡಿಸಿದ ಬಿಎಂಆರ್‌ಸಿಎಲ್ ಅದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

‘ಉಪನಗರ ರೈಲು ಯೋಜನೆಯನ್ನು ಬೆಂಗಳೂರಿನ ಸುತ್ತಲಿನ ಉಪ ನಗರಗಳಿಗೆ ವಿಸ್ತರಿಸಲು ಅವಕಾಶವಿದೆ. ಅದಕ್ಕಾಗಿ ಕಾರ್ಯಸಾಧ್ಯತಾ ಅಧ್ಯಯನ ನಡೆಸುವುದಕ್ಕಾಗಿ ಅನುಮತಿ ಪಡೆಯಲು ರಾಜ್ಯ ಸರ್ಕಾರದ ಸೂಚನೆಯಂತೆ ನೈರುತ್ಯ ರೈಲ್ವೆ ಮೂಲಕ ರೈಲ್ವೆ ಮಂಡಳಿಗೆ ಪತ್ರ ಬರೆಯಲಾಗಿತ್ತು. ಅದರಲ್ಲಿ ಚಿಕ್ಕಬಾಣಾವರದಿಂದ ತುಮಕೂರಿಗೆ 55 ಕಿ.ಮೀ. ವಿಸ್ತರಿಸುವ ಯೋಜನೆಯೂ ಒಳಗೊಂಡಿತ್ತು. 2023ರ ಜುಲೈಯಿಂದ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಅನುಮತಿ ಸಿಗದೇ ಹಿನ್ನಡೆಯಾಗಿದೆ. ರಾಜ್ಯ ಸರ್ಕಾರವು ಬಿಎಂಆರ್‌ಸಿಎಲ್‌ಗೆ ಅವಕಾಶ ನೀಡುವ ಬದಲು ಬಿಎಸ್‌ಆರ್‌ಪಿಗೆ ಅನುಮತಿ ಸಿಗುವಂತೆ ಒತ್ತಡ ತಂದಿದ್ದರೆ ಹಿನ್ನಡೆ ಯಾಗುತ್ತಿರಲಿಲ್ಲ’ ಎಂದು ಬಿಎಸ್‌ಆರ್‌ಪಿ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿದರು.

ಕಾರ್ಯ ಸಾಧುವಲ್ಲದ ಯೋಜನೆ

ಬೆಂಗಳೂರು–ತುಮಕೂರು ಮೆಟ್ರೊ ಸಂಚಾರ ಕಾರ್ಯಸಾಧುವಲ್ಲ. ವೆಚ್ಚ, ಸಮಯ, ಪ್ರಯಾಣ ದರ ಎಲ್ಲವೂ ಅಧಿಕವಾಗುವುದರಿಂದ ವಿಫಲಗೊಳ್ಳುವ ಸಾಧ್ಯತೆ ಇದೆ. ಅದಕ್ಕಿಂತ ಉಪ ನಗರ ರೈಲು ಯೋಜನೆಯಾದರೆ ಕಡಿಮೆ ವೆಚ್ಚದಲ್ಲಿ ಯೋಜನೆ ಅನುಷ್ಠಾನ ಮಾಡಬಹುದು. ಪ್ರಯಾಣ ದರವೂ ಕಡಿಮೆ ಇರುತ್ತದೆ. ಈಗಿನ ಮೆಟ್ರೊ ದರದ ಪ್ರಕಾರ ಮಾದಾವರದಿಂದ ತುಮಕೂರಿಗೆ ಹೋಗಲು ಕನಿಷ್ಠ ₹125 ನೀಡಬೇಕಾಗುತ್ತದೆ. ಅದೇ ಈಗ ರೈಲಿನಲ್ಲಿ ಬೆಂಗಳೂರಿನಿಂದ ತುಮಕೂರಿಗೆ ₹20 ಇದೆ. ಉಪ ನಗರ ರೈಲಿಗೆ ಇದರ ಎರಡೂವರೆ ಪಟ್ಟು ಅಂದರೂ ₹50ರಷ್ಟು ಆಗಬಹುದು.

ರಾಜಕುಮಾರ್ ದುಗರ್, ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಸಂಸ್ಥಾಪಕ

ಮೆಟ್ರೊ ಯೋಜನೆ ಘೋಷಣೆಯಷ್ಟೇ ಇರಬೇಕು

ಮೆಟ್ರೊ ರೈಲು ಸಂಪರ್ಕ ಮಾರ್ಗವು ಹೆದ್ದಾರಿಯ ನಡುವೆ ಇಲ್ಲವೇ ಪಕ್ಕದಿಂದಲೇ ಹಾದು ಹೋಗುವುದರಿಂದ ಕಾಮಗಾರಿ ನಡೆಯುವಾಗ ವಾಹನ ಸಂಚಾರಕ್ಕೆ ತೊಡಕಾಗುತ್ತದೆ. ಉಪ ನಗರ ರೈಲು ಈಗಿರುವ ರೈಲು ಹಳಿಗಳ ಪಕ್ಕದಲ್ಲಿ ಹಾದುಹೋಗುತ್ತದೆ. ರೈಲು ಸಂಪರ್ಕವಿಲ್ಲದ ಮಾಕಳಿ, ನೆಲಮಂಗಲ, ಟಿ. ಬೇಗೂರಿನಂತಹ ಕೆಲವು ಪ್ರದೇಶಗಳನ್ನು ಮೆಟ್ರೊ ಸಂಪರ್ಕಸುತ್ತದೆ ಎಂಬುದಷ್ಟೇ ಸಕಾರಾತ್ಮಕ ಅಂಶ. ಮೆಟ್ರೊ ಯೋಜನೆ ಅನುಷ್ಠಾನ ತರಲು ಮಾಡಿದಂತಿಲ್ಲ. ಮೆಟ್ರೊ ಹೆಸರಲ್ಲಿ ರಿಯಲ್ ಎಸ್ಟೇಟ್ ವ್ಯವಹಾರವನ್ನು ಹೆಚ್ಚಿಸಿಕೊಳ್ಳಲು ಮಾಡಿದಂತೆ ಕಾಣುತ್ತಿದೆ.

ಕೆ.ಎನ್. ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

ಸುದ್ದಿ 2 ನಿಮಿಷ

500 ದಾಟಿದ ಟ್ರಾಫಿಕ್ ಸಿಗ್ನಲ್‌ಗಳು

ಬೆಂಗಳೂರು: ಸಂಚಾರ ದಟ್ಟಣೆ ಸುಧಾರಣೆಗೆ ಆಗಸ್ಟ್ ಅಂತ್ಯದ ವೇಳೆಗೆ ಇನ್ನೂ 50ಕ್ಕೂ ಹೆಚ್ಚು ಹೊಸ ಸಿಗ್ನಲ್‌ಗಳನ್ನು ಅಳವಡಿಸಲಾಗುವುದು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಹೆಚ್ಚುತ್ತಿರುವ ವಾಹನಗಳಿಂದ ಸಂಚಾರ ದಟ್ಟಣೆ ದಿನೇ ದಿನೇ ಹೆಚ್ಚುತ್ತಿದೆ. ಮೂರು ವರ್ಷಗಳಲ್ಲಿ 100 ಹೊಸ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಸದ್ಯ ನಗರದಲ್ಲಿ 501 ಸಿಗ್ನಲ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ನಗರದ ವಿಸ್ತೀರ್ಣ ಹೆಚ್ಚಾಗುತ್ತಿದೆ. ಹೊಸ ವಾಹನಗಳ ಖರೀದಿಯೂ ಹೆಚ್ಚುತ್ತಿದೆ. ಈ ಸಂಬಂಧ ಸುಗಮ ಸಂಚಾರಕ್ಕೆ ಅಧಿಕ ಸಿಗ್ನಲ್‌ಗಳ ಅಳವಡಿಕೆ ಮಾಡಲಾಗುತ್ತಿದೆ. ಸದ್ಯ 501 ಸಿಗ್ನಲ್‌ಗಳ ಪೈಕಿ 197 ಅಡಾಪ್ಟಿವ್ ಸಿಗ್ನಲ್‌ಗಳು ಮತ್ತು 304 ಸ್ಥಿರ ಸಮಯ ಸಿಗ್ನಲ್‌ಗಳು ಇವೆ. ಹೊಸದಾಗಿ ಸ್ಥಾಪಿಸುವ 50 ಸಿಗ್ನಲ್‌ಗಳು ಸ್ಥಿರ ಸಿಗ್ನಲ್‌ಗಳಾಗಿ ಕಾರ್ಯ ನಿರ್ವಹಿಸಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

‘ಅಕ್ರಮ ಬಡಾವಣೆ; ಖಾತೆ ನೀಡಬೇಡಿ’

ಕೆ.ಆರ್.ಪುರ: ಸರ್ಕಾರ ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ಮಂಜೂರು ಮಾಡಿರುವ ವ್ಯವಸಾಯದ ಭೂಮಿಗಳಲ್ಲಿ ಅಕ್ರಮವಾಗಿ ನಿರ್ಮಿಸಿರುವ ಬಡಾವಣೆಯ ನಿವೇಶನಗಳಿಗೆ ಖಾತೆ ನೀಡಬಾರದು ಎಂದು ಒತ್ತಾಯಿಸಿ ಪ್ರಜಾ ವಿಮೋಚನಾ ಚಳವಳಿಯ ಕಾರ್ಯಕರ್ತರು ಬಿದರಹಳ್ಳಿ ಗ್ರಾ. ಪಂ. ಎದುರು ತಮಟೆ ಚಳವಳಿ ನಡೆಸಿದರು.

ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿಯ ಬೈಯಪ್ಪನಹಳ್ಳಿ ಗ್ರಾಮದ ಸರ್ವೆ ನಂ 130, 131/1, 131/2, 131/3, 131/4 ಮತ್ತು 169 ಸೇರಿದಂತೆ ಕೆಲವು ಸರ್ವೆ ನಂಬರ್ ಜಮೀನುಗಳು ಪರಿಶಿಷ್ಟ ಜಾತಿಯವರಿಗೆ ಮಂಜೂರಾಗಿದೆ. ಈ ಸದರಿ ಭೂಮಿಗಳು ಹಸಿರು ವಲಯ ವ್ಯಾಪ್ತಿಗೆ ಒಳಪಟ್ಟಿದೆ. ವ್ಯವಸಾಯಕ್ಕೆ ಮಂಜೂರಾಗಿದ್ದ ಸುಮಾರು 40 ಎಕರೆ ಜಮೀನಿನಲ್ಲಿ ಬಿಲ್ಡರ್‌ಗಳು ಕಾನೂನನ್ನು ಗಾಳಿಗೆ ತೂರಿ ಅಕ್ರಮವಾಗಿ ಖಾಸಗಿ ಬಡಾವಣೆಗಳನ್ನು ನಿರ್ಮಿಸಿದ್ದಾರೆ ಎಂದು ಪ್ರಜಾ ವಿಮೋಚನಾ ಚಳವಳಿಯ ರಾಜ್ಯ ಘಟಕದ ಅಧ್ಯಕ್ಷ ಆನೇಕಲ್ ಕೃಷ್ಣಪ್ಪ ದೂರಿದರು.

ಸಂಘಟನೆಯ ಬೆಂಗಳೂರು ವಿಭಾಗೀಯ ಅಧ್ಯಕ್ಷ ಮಾದೇಶ್, ಪೂರ್ವ ತಾಲ್ಲೂಕು ಅಧ್ಯಕ್ಷ ಆದೂರು ಗಣೇಶ್, ಅಶ್ರಫ್ ಅಲಿ, ನಿಸಾರ್, ಗುಲಾಬ್ ಜಾನ್, ವೆಂಕಟೇಶ್ ಉಪಸ್ಥಿತರಿದ್ದರು.

ರಕ್ಷಣೆಗೆ ಧಾವಿಸದ ಪೊಲೀಸರು: ಗೌರವಕ್ಕೆ ಧಕ್ಕೆ– ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಹಲ್ಲೆ ಯತ್ನ: ಸಭಾಪತಿಗೆ ಛಲವಾದಿ ದೂರು

ಪ್ರಜಾವಾಣಿ ವಾರ್ತೆ

ಸಭಾಪತಿ ಕಚೇರಿಗೆ ದೂರು ಸಲ್ಲಿಸಿದ ಬಿಜೆಪಿ ನಾಯಕರು

ಬೆಂಗಳೂರು: ಕಲಬುರಗಿ ಜಿಲ್ಲೆ ಚಿತ್ತಾಪುರದಲ್ಲಿ ಇದೇ 21 ರಂದು ‘ತಿರಂಗಾಯಾತ್ರೆ’ ಕಾರ್ಯಕ್ರಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ತಮ್ಮನ್ನು ಅಕ್ರಮ ಬಂಧನದಲ್ಲಿರಿಸಿ, ಹಲ್ಲೆಗೆ ಪ್ರಯತ್ನಿಸಿರುವ ಘಟನೆ ನಡೆದಿದೆ ಎಂದು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಸಭಾಪತಿಗೆ ದೂರು ನೀಡಿದ್ದಾರೆ.

‘ಚಿತ್ತಾಪುರದ ಅತಿಥಿಗೃಹದ ಆವರಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಎಂದು ಹೇಳಿಕೊಂಡ ರಾಜಕೀಯ ಪ್ರೇರಿತ ಗೂಂಡಾಗಳು ಜಮಾಯಿಸಿ ನನ್ನನ್ನು ಆರು ಗಂಟೆ ಅಕ್ರಮ ಬಂಧನದಲ್ಲಿ ಇರಿಸಿದ್ದೂ ಅಲ್ಲದೇ ಹಲ್ಲೆಗೆ ಯತ್ನ ನಡೆಸಿದರು. ಆ ಸಂದರ್ಭದಲ್ಲಿ ರಕ್ಷಣೆಗೆ ಧಾವಿಸದ ಪೊಲೀಸರು ನನ್ನ ಹಕ್ಕಿಗೆ ಚ್ಯುತಿ ತಂದಿದ್ದಾರೆ. ವಿರೋಧಪಕ್ಷದ ನಾಯಕನಾಗಿ ನನ್ನ ಸ್ಥಾನಮಾನ ಹಾಗೂ ಗೌರವಕ್ಕೆ ಧಕ್ಕೆಯಾಗಿದೆ’ ಎಂದು ಅವರು ದೂರಿನಲ್ಲಿ ವಿವರಿಸಿದ್ದಾರೆ.

‘ಈ ಘಟನೆ ನಡೆದಾಗ ಸ್ಥಳಕ್ಕೆ ಬರದೆ, ನನ್ನ ಕರೆಗೂ ಸ್ಪಂದಿಸದ ಕಲಬುರಗಿ ಎಸ್‌ಪಿ ಅಡುರು ಶ್ರೀನಿವಾಸುಲು, ಸ್ಥಳದಲ್ಲಿದ್ದ ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್, ಡಿವೈಎಸ್‌ಪಿ ಶಂಕರಗೌಡ ಪಾಟೀಲ, ಸಿಪಿಐಗಳಾದ ಚಂದ್ರಶೇಖರ ತಿಗಡಿ, ನಟರಾಜ ಲಾಡೆ, ಪಿಎಸ್‌ಐಗಳಾದ ಶ್ರೀಶೈಲ ಅಂಬಾಟಿ, ತಿಮ್ಮಯ್ಯ, ಚಂದ್ರಕಾಂತ ಮೇಕಾಲೆ, ಶೀಲಾದೇವಿ ಹಾಗೂ ಇನ್ನುಳಿದ ಡಿವೈಎಸ್‌ಪಿಗಳು ಕರ್ತವ್ಯ ಲೋಪ ಎಸಗಿದ್ದಾರೆ. ಇವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು’ ಎಂದು ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.

‘ಎಸ್‌ಪಿ ಹೊರತುಪಡಿಸಿ, ಇತರ ಅಧಿಕಾರಿಗಳು ಸ್ಥಳದಲ್ಲಿ ಇದ್ದರೂ ರಾತ್ರಿ 7.38 ರ ವೇಳೆಗೆ ಗೂಂಡಾಗಳ ಗುಂಪು ಬಲವಂತವಾಗಿ ಸರ್ಕ್ಯೂಟ್ ಹೌಸ್ ಆವರಣಕ್ಕೆ ನುಗ್ಗಿ, ನನ್ನ ಅಧಿಕೃತ ಸರ್ಕಾರಿ ವಾಹನದ ಮೇಲೆ ನೀಲಿ ಬಣ್ಣ ಎರಚಿ ವಾಹನ ಜಖಂಗೊಳಿಸಿದರು. ಹಲ್ಲೆಗೆ ಯತ್ನಿಸಿ, ಪದೇ ಪದೇ ಕೀಳು ಮಟ್ಟದ ಭಾಷೆ ಬಳಸಿ, ಜೀವ ಬೆದರಿಕೆ ಒಡ್ಡಿದರು. ಸ್ಥಳದಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳು ತಮಗೆ ಪದೇ ಪದೇ ದೂರವಾಣಿಯಲ್ಲಿ ಬರುತ್ತಿದ್ದ ಸೂಚನೆಗಳನ್ನು ಪಾಲಿಸುತ್ತಿದ್ದರು’ ಎಂದರು.

ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್. ನವೀನ್, ಪ್ರದೀಪ್ ಶೆಟ್ಟರ್, ಸುಜಾ ಕುಶಾಲಪ್ಪ, ಹೇಮಲತಾ ನಾಯಕ್, ಕೇಶವಪ್ರಸಾದ್ ಎಸ್ ಮತ್ತು ಕಿಶೋರ್ ಕುಮಾರ್ ಪುತ್ತೂರು ಇದ್ದರು.

> ಕಲಬುರಗಿಯಲ್ಲಿ ಕಾಂಗ್ರೆಸ್‌ನ ಗೂಂಡಾ ಸಂಸ್ಕೃತಿ ಅನಾವರಣಗೊಂಡಿದೆ. ಅಲ್ಲಿ ಹಕ್ಕುಚ್ಯುತಿ ಆಗಿರುವುದನ್ನು ಸಭಾಪತಿಯವರ ಗಮನಕ್ಕೆ ತಂದಿದ್ದು, ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದ್ದಾರೆ
>
> **ಛಲವಾದಿ ನಾರಾಯಣಸ್ವಾಮಿ,** ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ

‘ದಿನಕ್ಕೊಂದು ವೇಷ, ಗಂಟೆಗೊಂದು ಬಣ್ಣ’

ಪ್ರಿಯಾಂಕ್ ಖರ್ಗೆ

‘ಮನುವಾದಿ ಛಲವಾದಿ ನಾರಾಯಣಸ್ವಾಮಿ ಅವರೇ ನಿಮ್ಮದು ದಿನಕ್ಕೊಂದು ವೇಷ, ಗಂಟೆಗೊಂದು ಬಣ್ಣ, ಗಳಿಗೆಗೊಂದು ಸುಳ್ಳು, ನಿಮ್ಮ ರಾಜಕೀಯ ಸದಾರಮೆ ನಾಟಕವು ರಾಜ್ಯದ ಜನರನ್ನು ಬೆರಗುಗೊಳಿಸಿದೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

‘ವೀರಾವೇಶದಲ್ಲಿ ನೀವೇ ಬೈದು, ಈಗ ನೀವೇ ಸಂತ್ರಸ್ತನ ವೇಷ ತೊಡಲು ಪ್ರಯತ್ನಿಸುತ್ತಿದ್ದೀರಿ. ಇದು ಆಧುನಿಕ ಯುಗ, ಜನತೆ ಪ್ರಜ್ಞಾವಂತರಿದ್ದಾರೆ. ನಿಮ್ಮ ನಾಟಕವನ್ನು ನಂಬುವುದಿಲ್ಲ’ ಎಂದು ‘ಎಕ್ಸ್’ನಲ್ಲಿ ವ್ಯಂಗ್ಯವಾಡಿದ್ದಾರೆ.

‘ನೀವು ಚಿತ್ತಾಪುರದಲ್ಲಿ ಒಂದು ಮಾತನಾಡಿದ್ದೀರಿ, ಬೆಂಗಳೂರಿನಲ್ಲಿ ಮತ್ತೊಂದು ರೀತಿ ಮಾತನಾಡಿದ್ದೀರಿ. ಚಿತ್ತಾಪುರಕ್ಕೆ ಒಂದು ನಾಲಿಗೆ, ಬೆಂಗಳೂರಿಗೆ ಒಂದು ನಾಲಿಗೆ ಇದೆಯೇ? ನಿಮ್ಮ ಸುಳ್ಳು ಸಂತ್ರಸ್ತನ ವೇಷವನ್ನು ಈ ವಿಡಿಯೋಗಳೇ ಕಳಚುತ್ತಿವೆ. ನಾಡಿನ ಜನರ ಮುಂದೆ ನಿಮ್ಮ ಸದಾರಮೆ ನಾಟಕ ಬಯಲಾಗಿದೆ’ ಎಂದು ಹೇಳಿದ್ದಾರೆ.

ಇಂದು ಕಲಬುರಗಿ ಚಲೋ

‘ಸಚಿವ ಪ್ರಿಯಾಂಕ್ ಖರ್ಗೆ ಅವರು ದೌರ್ಜನ್ಯ, ಗೂಂಡಾಗಿರಿ ಮತ್ತು ಸಂವಿಧಾನ ವಿರೋಧಿ ನಡೆ ಅನುಸರಿಸುತ್ತಿದ್ದಾರೆ’ ಎಂದು ಆರೋಪಿಸಿ ಬಿಜೆಪಿ ಶನಿವಾರ ಬೆಳಿಗ್ಗೆ 11.30 ಕ್ಕೆ ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ವೃತ್ತದ ಬಳಿ ‘ಕಲಬುರಗಿ ಚಲೋ’ ಹೋರಾಟವನ್ನು ಹಮ್ಮಿಕೊಂಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ ಮತ್ತು ಇತರರು ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಪ್ರಕಟಣೆ ತಿಳಿಸಿದೆ

ಫುಟ್‌ಬಾಲ್ ಇಸಿಡಿ ತಂಡ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಯತೀಂದ್ರನ್ ಅವರ ಆಟದ ನೆರವಿನಿಂದ ಇಸಿಡಿ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 4–0ಯಿಂದ ಮಾಡ್ರನ್ ಬಾಯ್ಸ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಇಸಿಡಿ ತಂಡದ ಪರ ಯಶು (3ನೇ ನಿಮಿಷ), ಕೆ.ಯತೀಂದ್ರನ್ (21ನೇ ಮತ್ತು 60ನೇ) ಮತ್ತು ಜೊಶುವಾ (41ನೇ) ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಸರ್ವಜ್ಞ ನಗರ ಎಫ್‌ಸಿ ತಂಡವು 1–1 ಗೋಲುಗಳಿಂದ ಲಾ ಮಾಸಿಯಾ ಎಫ್‌ಸಿ ತಂಡವು ಡ್ರಾ ಸಾಧಿಸಿತು. ಸರ್ವಜ್ಞನಗರ ಪರ ಕಾರ್ತಿಕ್ (40ನೇ), ಮಾಸಿಯಾ ಪರ ರೋಶನ್ ಶರ್ಮಾ (15ನೇ) ತಲಾ ಒಂದು ಗೋಲು ಗಳಿಸಿದರು.

ಇತರ ಪಂದ್ಯಗಳಲ್ಲಿ ಅಂಬೇಡ್ಕರ್ ಎಫ್‌ಸಿ 3–2 ಗೋಲುಗಳಿಂದ ವಿವೇಕಾನಂದ ಎಫ್‌ಸಿ ವಿರುದ್ಧ; ಮಹಾರಾಜ ಸೋಶಿಯಲ್ಸ್ ಎಫ್‌ಸಿ 3–1ರಿಂದ ತ್ರಿವೇಣಿ ಎಫ್‌ಸಿ ವಿರುದ್ಧ; ಹಂಪಿನಗರ ಎಫ್‌ಸಿ 2–0ಯಿಂದ ಐಐಎಸ್ಸಿ ಎಫ್‌ಸಿ ವಿರುದ್ಧ ಜಯ ಸಾಧಿಸಿತು.

ಬೆಂಗಳೂರು ರೇಸ್

ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ ಗೆಲುವಿನ ನಿರೀಕ್ಷೆಯಲ್ಲಿ ಪಿನ್ಲೆ

ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಮುಖ ರೇಸ್ ಹನ್ನೊಂದು ಕುದುರೆಗಳು ಭಾಗವಹಿಸುತ್ತಿರುವ ಈ ರೇಸ್‌ನಲ್ಲಿ ಫಿನ್ಲೆ ಗೆಲ್ಲುವ ನಿರೀಕ್ಷೆಯಿದೆ. ದಿನದ ಪ್ರಧಾನ ರೇಸ್ ವಾರ್ ಹ್ಯಾಮರ್ ಮಿಲಿಯನ್ ರೇಸ್‌ನಲ್ಲಿ ಗ್ಲೋರಿಯಸ್‌ನೆಸ್ ಗೆಲ್ಲುವ ಅವಕಾಶದಲ್ಲಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1. ರಾಯಲ್ ಟರ್ನ್ ಪ್ಲೇಟ್: 1200 ಮೀ. ಮ್ಯಾಕ್ಲರ್ 3, ಮಿಡ್‌ನೈಟ್ ಬ್ಲೂ 4, ವೆಗಥ 8
2. ಸೂಪರ್‌ವೈಟ್ ಪ್ಲೇಟ್-ಡಿ.2; 1400 ಮೀ. ನಾಟಿ ಸ್ಕಾಟಿ 5, ಸ್ಟೆಂಟೋರಿಯನ್ 1, ನೋಬಲ್ ಕಾಸ್ 3
3. ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ; 1400 ಮೀ. ಫಿನ್ಲೆ 2, ಎಕ್ಸಲೆಂಟ್ ಲಾಸ್ 1, ಐರನ್ ಕಿಂಗ್ 10
4. ಕರ್ನಲ್ ದೇಸ್ರಾಜ್ ಅರಸ್ ಟ್ರೋಫಿ; 1200 ಮೀ. ರೀಗಲ್ ರಿಯಾಲಿಟಿ 11, ನೆವರ್ ಗೀವ್ ಇನ್ 2, ಜೆರ್ಸಿ ಕಿಂಗ್ 5
5. ವಾರ್ ಹ್ಯಾಮರ್ ಮಿಲಿಯನ್; 1400 ಮೀ. ಗ್ಲೋರಿಯಸ್‌ನೆಸ್ 3, ಸರ್ಕಲ್ ಆಫ್ ಡ್ರೀಮ್ಸ್ 5, ವೈಬ್ರ್ಯಾಂಟ್ ಬ್ಲಿಸ್ 1
6. ಉಷಾ ಸ್ಟಡ್ ಪ್ಲೇಟ್; 1200 ಮೀ. ನಾಟಿ ಪ್ಯಾಟನ್ 2, ದುಫಿ 9, ಸ್ಪ್ರಿಂಗ್‌ಸ್ಟೀನ್ 11
7. ಸೂಪರ್‌ವೈಟ್ ಪ್ಲೇಟ್-ಡಿ.1; 1400 ಮೀ. ಪ್ರೈಸ್‌ಲೆಸ್ ಪ್ರಿನ್ಸ್ 2, ಹಬಿಬ್ಟಿ 7, ಸ್ಕಾರ್ಲೆಟ್ ಲೇಡಿ 1

ಉತ್ತಮ ಬೆಟ್; ನಾಟಿ ಸ್ಕಾಟಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸೌಂದರ್ಯ ವೆಂಕಟರಮಣ ಸ್ವಾಮಿ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ



ಸೌಂದರ್ಯ ವೆಂಕಟರಮಣ ಸ್ವಾಮಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರನ್ನು ಅಭಿನಂದಿಸಲಾಯಿತು

ಪೀಣ್ಯ ದಾಸರಹಳ್ಳಿ:‘ನಾವು ಭೂಮಿಗೆ ಬರಿಗೈಯಲ್ಲಿ ಬಂದಿದ್ದೇವೆ. ಭಗವಂತ ಕೊಟ್ಟಿದ್ದನ್ನು ಅನುಭವಿಸುತ್ತಿದ್ದೇವೆ. ನಮ್ಮದೆಲ್ಲ ದೇವರು ಕೊಟ್ಟದ್ದು ಎನ್ನುವ ಕೃತಜ್ಞತೆಯ ಸಮರ್ಪಣೆ, ನಿವೇದನೆಯೇ ನೈವೇದ್ಯ’ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ತಿಳಿಸಿದರು.

ಸಿಡೇದಹಳ್ಳಿಯ ಸೌಂದರ್ಯ ನಗರದಲ್ಲಿ ಸೌಂದರ್ಯ ಟೆಂಪಲ್ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಶ್ರೀ ಸೌಂದರ್ಯ ವೆಂಕಟರಮಣ ಸ್ವಾಮಿ ಪ್ರತಿಷ್ಠಾಪನೆ, ದೇವಸ್ಥಾನ ಉದ್ಘಾಟನೆ ಮತ್ತು ಬ್ರಹ್ಮಕಲಶೋತ್ಸವದಲ್ಲಿ ಪೂಜೆ ನೆರವೇರಿಸಿ ಮಾತನಾಡಿದರು.

‘ದೇವರು ನಿರ್ಮಿಸಿದ ಭೂಮಿಯಲ್ಲಿ ಭವ್ಯ ಮಂದಿರ ಕಟ್ಟಿ, ಟ್ರಸ್ಟ್ ಅಧ್ಯಕ್ಷ ಮಂಜಪ್ಪನವರು ಕೆರೆಯ ನೀರನ್ನು ಕೆರೆಗೆ ಚೆಲ್ಲಿದ್ದಾರೆ 'ಎಂದರು.

‘ಬದುಕಿನ ಸಾರಥ್ಯವನ್ನು ಭಗವಂತನಿಗೆ ಕೊಟ್ಟು ಕರ್ತವ್ಯ ನಿರತರಾದರೆ ಬದುಕು ಸುಭದ್ರ. ನಾವು ಜೀವನದಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗುವುದರ ಮೂಲಕ ಭಗವಂತನ ಸಾಮೀಪ್ಯ ಪಡೆಯುತ್ತೇವೆ. ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯಬೇಕು’ ಎಂದು ಉಪದೇಶಿಸಿದರು.

ಟೆಂಪಲ್ ಟ್ರಸ್ಟ್ ಅಧ್ಯಕ್ಷ ಸೌಂದರ್ಯ ಮಂಜಪ್ಪ ಮಾತನಾಡಿ, ‘ದೇವರ ಮೂರ್ತಿಯನ್ನು ಮಹಾಬಲಿಪುರಂನಿಂದ ತಂದು, ಇಲ್ಲಿ ಮೆರವಣಿಗೆಯಲ್ಲಿ ತರಲಾಯಿತು. ದೇವಸ್ಥಾನದ ಜಾಗ ಅತಿಕ್ರಮಣವಾಗಿತ್ತು. ದೈವಾನುಗ್ರಹದಿಂದ ವ್ಯಾಜ್ಯ ತೀರ್ಮಾನವಾಗಿ ಎಲ್ಲರ ಸಹಕಾರದಿಂದ ಮಂದಿರ ನಿರ್ಮಾಣವಾಗಿದೆ. ದೇವಸ್ಥಾನದಲ್ಲಿ ಧರ್ಮ ಕಾರ್ಯಗಳನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿ ಎಲ್ಲರ ಮೇಲಿದೆ’ ಎಂದರು.

ಮಂಗಳೂರು ಶೈಲಿಯಲ್ಲಿ ಮಂದಿರ ನಿರ್ಮಾಣವಾಗಿದೆ. ಒಂದು ವಾರ, ನಿರಂತರ ಮೂರು ಹೊತ್ತು ಅನ್ನ ಪ್ರಸಾದ ನೀಡಲಾಗುತ್ತಿದೆ. ಸಂಗೀತ, ಸಾಂಸ್ಕೃತಿಕ ಕಾರ್ಯಗಳು ನಡೆಯುತ್ತಿದೆ ಎಂದರು.

ವಕೀಲ ಪ್ರಶಾಂತ್ ಚಂದ್ರ, ಬಿ.ಎಂ. ಹೆಗಡೆ, ಸಾಯಿರಾಮ್ ಪ್ರಸಾದ್, ಎಫ್‌ಕೆಸಿಸಿಐ ಉಪಾಧ್ಯಕ್ಷ ಸುಬ್ರಹ್ಮಣ್ಯ ಗೌಡ, ಜನಾರ್ದನ, ರವೀಂದ್ರ, ಟೆಂಪಲ್ ಧರ್ಮದರ್ಶಿ ಸುನಿತಾ ಮಂಜಪ್ಪ, ಎಂ.ಕೀರ್ತನ್ ಕುಮಾರ್, ವರುಣ್ ಕುಮಾರ್, ಪ್ರತೀಕ್ಷಾ ಉಪಸ್ಥಿತರಿದ್ದರು.

ಜಿಎಚ್‌ಎ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ವಿದ್ಯಾರ್ಥಿಗಳು

‘ಪ್ರಾಯೋಗಿಕ ಕಲಿಕೆ, ಸಂಶೋಧನೆಗಿಲ್ಲ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ

ಜಿಎಚ್‌ಎ ಅಭಿವೃದ್ಧಿಪಡಿಸಿದ ‘ಜಿಎಚ್‌ಎ ಸ್ಟೆಪ್ ನೀಟ್–ಪಿಜಿ’ ಆ್ಯಪ್ ಅನ್ನು ಗುರುವಾರ ಬಿಡುಗಡೆ ಮಾಡಲಾಯಿತು. ಡಾ. ನವೀನ್ ಟಿ., ಡಾ.ಬಿ.ಎಸ್ ಅಜಯ್ ಕುಮಾರ್, ಡಾ.ಕೆ.ಬಿ.ಲಿಂಗೇಗೌಡ, ಡಾ. ರಮೇಶ್ ಎಸ್ ಬಿಳಿಮಗ್ಗ, ಡಾ.ಕೆ.ಎಸ್ ನಾಗೇಶ್ ಉಪಸ್ಥಿತರಿದ್ದರು

ಬೆಂಗಳೂರು: ಅಂತರರಾಷ್ಟ್ರೀಯ ದರ್ಜೆಯ ಎಂಬಿಬಿಎಸ್ ಶಿಕ್ಷಣಕ್ಕೆ ನಿಮ್ಮ ವೈದ್ಯಕೀಯ ಕಾಲೇಜುಗಳು ಸೂಕ್ತ ಮೂಲಸೌಕರ್ಯ ಹೊಂದಿವೆಯೆ? ಹೆಚ್ಚಿನ ಪ್ರಾಯೋಗಿಕ ಕಲಿಕೆಗೆ ಅವಕಾಶವಿದೆಯೆ? ಸಂಶೋಧನೆಗೆ ಅಗತ್ಯ ವ್ಯವಸ್ಥೆಯಿದೆಯೆ?

ವೈದ್ಯಕೀಯ ತಜ್ಞರ ಈ ಪ್ರಶ್ನೆಗಳಿಗೆ ಬಹುತೇಕ ವಿದ್ಯಾರ್ಥಿಗಳ ಉತ್ತರ ‘ಇಲ್ಲ’ ಎಂಬುದಾಗಿತ್ತು. ಗ್ಲೋಬಲ್ ಹೆಲ್ತ್ ಕೇರ್ ಅಕಾಡೆಮಿ (ಜಿಎಚ್‌ಎ) ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ದುಂಡು ಮೇಜಿನ ಸಭೆಯಲ್ಲಿ ವೈದ್ಯಕೀಯ ಶಿಕ್ಷಣ ವ್ಯವಸ್ಥೆ ಬಗ್ಗೆ ಚರ್ಚಿಸಲಾಯಿತು. ಇದೇ ವೇಳೆ ನೆರೆದಿದ್ದ ವಿದ್ಯಾರ್ಥಿಗಳಿಗೆ ವೈದ್ಯಕೀಯ ವ್ಯವಸ್ಥೆಯ ಬಗ್ಗೆ ಆನ್‌ಲೈನ್ ಮತದಾನದ ಅವಕಾಶ ಕಲ್ಪಿಸಲಾಗಿತ್ತು. ಹೆಚ್ಚಿನ ವಿದ್ಯಾರ್ಥಿಗಳು, ‘ಸಂಶೋಧನೆ, ಪ್ರಾಯೋಗಿಕ ಕಲಿಕೆಯು ಹಾಲಿ ಶಿಕ್ಷಣ ವ್ಯವಸ್ಥೆಯಲ್ಲಿ ಸಾಧ್ಯವಾಗುತ್ತಿಲ್ಲ’ ಎಂಬ ಅಭಿಪ್ರಾಯವನ್ನು ಮತ ಹಾಕುವ ಮೂಲಕ ವ್ಯಕ್ತಪಡಿಸಿದರು.

‘ವೈದ್ಯಕೀಯ ಕಾಲೇಜುಗಳಿಗೆ ವಿಶಾಲ ಸ್ಥಳಾವಕಾಶ, ಬೃಹತ್ ಕಟ್ಟಡಗಳ ಜತೆಗೆ ಮೂಲಸೌಕರ್ಯವೂ ಅಗತ್ಯವಿರುತ್ತದೆ. ಕಳೆದ 25 ವರ್ಷಗಳಲ್ಲಿ ವೈದ್ಯಕೀಯ ಸೀಟುಗಳ ಸಂಖ್ಯೆಯನ್ನು ಗಣನೀಯ ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ಪ್ರಾಯೋಗಿಕ ಕಲಿಕೆ, ಸಂಶೋಧನೆಗೆ ಸೂಕ್ತ ಅವಕಾಶ ಕಲ್ಪಿಸಲು ವೈದ್ಯಕೀಯ ಸಂಸ್ಥೆಗಳಿಗೆ ಸಾಧ್ಯವಾಗುತ್ತಿಲ್ಲ. ಸಂಶೋಧನೆಗೆ ಹೆಚ್ಚಿನ ಅನುದಾನ ಕಲ್ಪಿಸಬೇಕಾದ ಅಗತ್ಯವಿದೆ’ ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟರು.

‘ವೈದ್ಯಕೀಯ ಶಿಕ್ಷಣ ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ ಮಹಾನಗರ ಹಾಗೂ ಎರಡನೇ ಹಂತದ ನಗರಗಳ ನಡುವಿನ ಅಂತರ ಹೋಗಲಾಡಿಸಬೇಕು. ಜಿಲ್ಲಾ ಮಟ್ಟದಲ್ಲಿಯೇ ನಿರ್ವಹಿಸಬಹುದಾದ ಪ್ರಕರಣಗಳನ್ನು, ಬೆಂಗಳೂರಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಶಿಫಾರಸು ಮಾಡುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ರೋಗಿಗಳ ನಿರ್ವಹಣೆ ಹಾಗೂ ಚಿಕಿತ್ಸೆಯ ಅನುಭವ ಅಷ್ಟಾಗಿ ದೊರೆಯುತ್ತಿಲ್ಲ’ ಎಂದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ. ನವೀನ್ ಟಿ., ಎಚ್‌ಸಿಜಿ ಕಾರ್ಯನಿರ್ವಾಹಕ ಅಧ್ಯಕ್ಷ ಡಾ.ಬಿ. ಎಸ್. ಅಜಯ್ ಕುಮಾರ್, ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಸಾಹೇ) ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಬಿ.ಲಿಂಗೇಗೌಡ, ಎಚ್‌ಸಿಜಿ ಆಸ್ಪತ್ರೆಯ ವಿಕಿರಣ ಆಂಕಾಲಜಿ ತಜ್ಞ ಡಾ. ರಮೇಶ್ ಎಸ್. ಬಿಳಿಮಗ್ಗ, ದಂತ ಶಸ್ತ್ರಚಿಕಿತ್ಸಾ ತಜ್ಞ ಡಾ.ಕೆ.ಎಸ್. ನಾಗೇಶ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಕೊಂಡಜ್ಜಿ ಕೆ. ವೆಂಕಟೇಶ್ ಅವರ ‘ಅಮಾತ್ಯ ಲಕ್ಷ್ಮೀಧರ’ ಕಾದಂಬರಿ ಮತ್ತು ವಿಮರ್ಶಾ ಕೃತಿ ‘ಲೋಕ್ತಾನಾ’ ಬಿಡುಗಡೆ: ಸದ್ಯೋಜಾತ ಭಟ್, ಕೃತಿ ಅವಲೋಕನ: ಎಸ್. ನಂಜುಂಡಸ್ವಾಮಿ, ಮುಖ್ಯ ಅತಿಥಿ: ಮಲ್ಲೇಪುರಂ ಜಿ. ವೆಂಕಟೇಶ, ಅಧ್ಯಕ್ಷತೆ: ಎಚ್.ವಿ. ಸತ್ಯನಾರಾಯಣ, ಆಯೋಜನೆ: ಕೊಂಡಜ್ಜಿ ಮುದ್ರಣ ಮತ್ತು ಪ್ರಕಾಶನ, ಸ್ಥಳ: ಹೊಯ್ಸಳ ಕರ್ನಾಟಕ ಸಂಘ, ಹೊಂಬೇಗೌಡ ನಗರ, ಬೆಳಿಗ್ಗೆ 9.30

‘ಸಮಕಾಲೀನ ವಿಮರ್ಶೆಯ ಸ್ವರೂಪ’ ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಹಂಪ ನಾಗರಾಜಯ್ಯ, ಆಶಯ ನುಡಿ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿ: ವೂಡೇ ಪಿ. ಕೃಷ್ಣ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10

33ನೇ ವಾರ್ಷಿಕ ದಕ್ಷಿಣ ಭಾರತೀಯ ನಾಣ್ಯ ವಿಜ್ಞಾನ ರಾಷ್ಟ್ರೀಯ ಸಮ್ಮೇಳನ: ಮುಖ್ಯ ಅತಿಥಿ: ಜಯಕರ್ ಶೆಟ್ಟಿ, ಅಧ್ಯಕ್ಷತೆ: ವಿ. ನಾಗರಾಜ್, ಉಪಸ್ಥಿತಿ: ಆರ್. ಗೋಪಾಲ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಡಾ.ವೇಮಗಲ್ ಪ್ರತಿಷ್ಠಾನದ ಸುಗಮ ಸಂಗೀತ ಡಿಪ್ಲೊಮಾ ವಿದ್ಯಾರ್ಥಿಗಳ ಗೀತಗಾಯನ: ಉದ್ಘಾಟನೆ: ಹಿ.ಚಿ. ಬೋರಲಿಂಗಯ್ಯ, ಮುಖ್ಯ ಅತಿಥಿ: ಇಂದು ವಿಶ್ವನಾಥ್, ಸಮಾರೋಪ ನುಡಿ: ಬಿ.ವಿ. ರಾಜಾರಾಂ, ಆಯೋಜನೆ: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಭರತನಾಟ್ಯ ರಂಗ ಪ್ರವೇಶ: ಹರ್ಷಿತ ಎಂ., ಅತಿಥಿಗಳು: ಎಂ. ಸೂರ್ಯಪ್ರಸಾದ್, ಸ್ನೇಹಾ ಕಪ್ಪಣ್ಣ, ಆಯೋಜನೆ: ನಾಟ್ಯ ಮಯೂರಿ ಕ್ಲಾಸಿಕಲ್, ಸ್ಥಳ: ಸೇವಾಸದನ ರಂಗಮಂದಿರ, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5.30

ರವೀಂದ್ರ ಭಟ್ಟ ಅವರ ‘ಬರೆಯದ ಕಥೆಗಳು’ ಹಾಗೂ ಭಾರತಿ ಹೆಗಡೆ ಅವರ ‘ಉಪ್ಪಾಗೆ ಹರಳು’ ಪುಸ್ತಕ ಬಿಡುಗಡೆ: ಬಸವರಾಜ ಕಲ್ಗುಡಿ, ಉಪಸ್ಥಿತಿ: ಡಾ. ವಸುಂಧರಾ ಭೂಪತಿ, ಎಚ್.ಎನ್. ಆರತಿ, ಆಯೋಜನೆ: ಬಹುರೂಪಿ, ಸ್ಥಳ: ಗಾಂಧಿ ಭವನ, ಕುಮಾರಕೃಪ ರಸ್ತೆ, ಸಂಜೆ 5

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಟಿ.ಎಸ್. ಪಟ್ಟಾಭಿರಾಮ ಪಂಡಿತ್, ಪಿಟೀಲು: ಮತ್ತೂರು ಆರ್. ಶ್ರೀನಿಧಿ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಖಂಜೀರ: ಎ.ಎಸ್. ಎನ್. ಸ್ವಾಮಿ, ಆಯೋಜನೆ: ವಿದ್ವಾನ್ ಶ್ರೀ ಕೆ.ಎನ್. ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಜಯಮಾರುತಿ ದೇವಸ್ಥಾನ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರನಗರ, ಸಂಜೆ 6

ಎರಡು ನಾಟಕಗಳ ಪ್ರದರ್ಶನ: ಬೇಲೂರು ರಘುನಂದನ್ ನಿರ್ದೇಶನದ ‘ಪಂಚವರ್ಣಿ’, ಮಹೇಶ್ ಕುಮಾರ್ ನಿರ್ದೇಶನದ ‘ರಾಧಾ ನಿವಾಸ’ ನಾಟಕ ಪ್ರದರ್ಶನ, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ ಮತ್ತು ಸಂಜೆ 7.30

ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ: ಅತಿಥಿ: ಮೇಘನಾ ರಾಜ್, ಕಿರುಚಿತ್ರಗಳ ಬಿಡುಗಡೆ: ಸುಪಾರ್ಶ್ ನಿರ್ದೇಶನದ ‘ಬ್ಲೈಂಡ್ ಸ್ಪಾಟ್’, ಚಿರಾಗ್ ಮಂಜು ನಿರ್ದೇಶನದ ‘ಫಿಲ್ಮ್ ಸ್ಕೂಲ್’, ಆಯೋಜನೆ ಹಾಗೂ ಸ್ಥಳ: ಟೆಂಟ್ ಸಿನಿಮಾ, ನಾಗತಿಹಳ್ಳಿ ಸಿನಿಮಾ ಶಾಲೆ, ಬನಶಂಕರಿ 2ನೇ ಹಂತ, ಸಂಜೆ 5.30

ಮೇಘನಾ

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಟಿ20 ಕ್ರಿಕೆಟ್: ಫೈನಲ್‌ಗೆ ಸ್ವಸ್ತಿಕ್ ಯೂನಿಯನ್, ಮೌಂಟ್ ಜಾಯ್

ಬೆಂಗಳೂರು: ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ ಮತ್ತು ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್ ತಂಡಗಳು ಜಿ. ಕಸ್ತೂರಿರಂಗನ್ ಸ್ಮಾರಕ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಫೈನಲ್ ಪ್ರವೇಶಿಸಿವೆ.

ಮಳೆಯಿಂದಾಗಿ ಓವರ್‌ಗಳು ಕಡಿತಗೊಂಡ ಸೆಮಿಫೈನಲ್ ಪಂದ್ಯದಲ್ಲಿ ಸ್ವಸ್ತಿಕ್ ಯೂನಿಯನ್ ತಂಡವು 10 ರನ್‌ಗಳಿಂದ ರಾಜಾಜಿನಗರ ಕ್ರಿಕೆಟರ್ಸ್ ವಿರುದ್ಧ ಜಯಿಸಿತು. ಸ್ವಸ್ತಿಕ್ ತಂಡವು ಮೊದಲು ಬ್ಯಾಟಿಂಗ್ ಮಾಡಿ 5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 59 ರನ್ ಗಳಿಸಿತು. ರಾಜಾಜಿನಗರ ತಂಡವು 5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 49 ರನ್ ಗಳಿಸಿತು.

ಇನ್ನೊಂದು ಸೆಮಿಫೈನಲ್‌ನಲ್ಲಿ ಮೌಂಟ್ ಜಾಯ್ ಕ್ಲಬ್ ತಂಡವು 6 ವಿಕೆಟ್‌ಗಳಿಂದ ಸೋಷಿಯನ್ ಕ್ರಿಕೆಟರ್ಸ್ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಸ್ವಸ್ತಿಕ್ ಯೂನಿಯನ್ ಸಿಸಿ(2): 5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 59. ರಾಜಾಜಿನಗರ ಕ್ರಿಕೆಟರ್ಸ್: 5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 49 (ಸಿರೀಶ್ ಬಳಗಾರ್ 26, ಸಿ.ಎ. ಕಾರ್ತಿಕ್ 21ಕ್ಕೆ2, ಎನ್.ವಿ. ಪ್ರಣವ್ 15ಕ್ಕೆ2)

ಸೋಷಿಯಲ್ ಕ್ರಿಕೆಟರ್ಸ್: 20 ಓವರ್‌ಗಳಲ್ಲಿ 8ಕ್ಕೆ144 (ಆದರ್ಶ್ ಪ್ರಜ್ವಲ್ 45, ಕೃಶಿವ್ ಬಜಾಜ್ 43, ಅನ್ಮೋಲ್ ಮಾಥೂರ್ ಔಟಾಗದೇ 31, ಲಿಖಿತ್ ಬನ್ನೂರ್ 18ಕ್ಕೆ2, ನಿತೀಶ್ ಗೌಡ 28ಕ್ಕೆ2, ಎಸ್. ಚಿರಂತ್ 9ಕ್ಕೆ2) ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್: 18.4 ಓವರ್‌ಗಳಲ್ಲಿ 4ಕ್ಕೆ146 (ಚಿರಾಗ್ ಆರ್ ನಾಯಕ 21, ಶರತ್ ಬೇಲೂರ್ ರವಿ 47, ಕೆ. ಗಗನದೀಪ್ ಔಟಾಗದೇ 49, ಆದಿತ್ಯ ಸೋಮಣ್ಣ ಔಟಾಗದೇ 24, ಮೊಹಮ್ಮದ್ ಅಷ್ಫಾಕ್ 14ಕ್ಕೆ3)

ಟೆನಿಸ್: ದೀಪಕ್, ರಿಷಿ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ರಿಷಿ ರೆಡ್ಡಿ

ಬೆಂಗಳೂರು: ಮೂರನೇ ಶ್ರೇಯಾಂಕದ ಎ.ದೀಪಕ್ ಮತ್ತು ಆರನೇ ಶ್ರೇಯಾಂಕದ ರಿಷಿ ರೆಡ್ಡಿ ಅವರು ಎಐಟಿಎ ಟಿಎನ್‌ಆರ್ ಸ್ಮರಣಾರ್ಥ ಆಲ್ ಇಂಡಿಯನ್ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು.

ಇಲ್ಲಿನ ಟಾಪ್‌ಸ್ಪಿನ್ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ದೀಪಕ್ 6-3, 6-1ರಿಂದ ಕರಣ್ ಥಾಪಾ ಅವರನ್ನು ಸೋಲಿಸಿದರು. ಮತ್ತೊಂದು ಪಂದ್ಯದಲ್ಲಿ ರಿಷಿ 6–3, 6–2ರಿಂದ ರೋಹಿತ್ ಹರಿ ಬಾಲಾಜಿ ಅವರನ್ನು ಹಿಮ್ಮೆಟ್ಟಿಸಿದರು.

ಮಹಿಳೆಯರ ವಿಭಾಗದಲ್ಲಿ ಹರ್ಷಿಣಿ ನಾಗರಾಜ್ ಮತ್ತು ಜೆನ್ನಿಫರ್ ಲುಕಿಯಂ ಪ್ರಶಸ್ತಿ ಸುತ್ತಿಗೆ ಮುನ್ನಡೆದರು. ನಾಲ್ಕರ ಘಟ್ಟದಲ್ಲಿ ಹರ್ಷಿಣಿ 6-2, 6-2ರಿಂದ ನಾಲ್ಕನೇ ಶ್ರೇಯಾಂಕದ ಚೇವಿಕಾ ರೆಡ್ಡಿಗೆ ಆಘಾತ ನೀಡಿದರು. ಜೆನ್ನಿಫರ್ 6-2, 6-1ರಿಂದ ಅವನಿ ಸುಜಿತ್ ಚಿತಳೆ ಅವರನ್ನು ಸೋಲಿಸಿದರು.

‘ಸಮಾಜ, ಕಾನೂನಿನಿಂದಲೇ ಸಂಕಟ’

ಪೋಕ್ಸೊ ಪ್ರಕರಣ: ‘ಸುಪ್ರೀಂ’ನಿಂದ ಮಹತ್ವದ ತೀರ್ಪು ● 142ನೇ ವಿಧಿಯಡಿ ವಿಶೇಷಾಧಿಕಾರ ಬಳಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೋಕ್ಸೊ ಕಾಯ್ದೆಯಡಿ ಶಿಕ್ಷೆಗೊಳಗಾಗಿದ್ದ ವ್ಯಕ್ತಿಗೆ ಪ್ರಕರಣದ ವಿಶಿಷ್ಟ ಸಂದರ್ಭಗಳನ್ನು ಉಲ್ಲೇಖಿಸಿ ಯಾವುದೇ ಶಿಕ್ಷೆ ವಿಧಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು, ಸಂವಿಧಾನದ 142ನೇ ವಿಧಿ ಅಡಿಯಲ್ಲಿ ಇರುವ ವಿಶೇಷಾಧಿಕಾರ ಬಳಸಿ ಈ ನಿರ್ಧಾರ ತೆಗೆದುಕೊಂಡಿದೆ.

ಬಾಲಕಿಯ ಜತೆಗೆ ಲೈಂಗಿಕ ಸಂಬಂಧ ಹೊಂದಿದ್ದ ಅಪರಾಧಕ್ಕಾಗಿ ವ್ಯಕ್ತಿಯೊಬ್ಬ ಶಿಕ್ಷೆಗೆ ಗುರಿಯಾಗಿದ್ದನು. ಅಪರಾಧದ ಸಮಯದಲ್ಲಿ (2018) ಆ ವ್ಯಕ್ತಿಗೆ 24 ವರ್ಷ ವಯಸ್ಸಾಗಿತ್ತು. ಬಾಲಕಿಗೆ 14 ವರ್ಷವಾಗಿತ್ತು. ಆಕೆಯು ಪ್ರೌಢಾವಸ್ಥೆಗೆ ತಲುಪಿದ ಬಳಿಕ, ಆತನೇ ವಿವಾಹ ವಾಗಿದ್ದನು. ಈ ದಂಪತಿಗೀಗ ಮಗುವಿದ್ದು, ಒಟ್ಟಿಗೆ ವಾಸ ಮಾಡುತ್ತಿದ್ದಾರೆ.

ಮುಖ್ಯಾಂಶಗಳು

- ಯಾವುದೇ ಶಿಕ್ಷೆ ವಿಧಿಸದ ಸುಪ್ರೀಂ ಕೋರ್ಟ್ ಪೀಠ
- ಸಂತ್ರಸ್ತೆಯ ಭಾವನಾತ್ಮಕ ಬಾಂಧವ್ಯಕ್ಕೆ ಒತ್ತು
- ಸಂಪೂರ್ಣ ನ್ಯಾಯಕ್ಕಾಗಿ ವಿಶೇಷಾಧಿಕಾರ ಬಳಕೆ

ಸಂತ್ರಸ್ತೆಯ ಮಾನಸಿಕ ಮತ್ತು ಭಾವನಾತ್ಮಕ ಸ್ಥಿತಿ–ಗತಿಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಮನಃಶಾಸ್ತ್ರಜ್ಞರು ಮತ್ತು ಸಾಮಾಜಿಕ ವಿಜ್ಞಾನಿಗಳನ್ನು ಒಳಗೊಂಡ ತಜ್ಞರ ಸಮಿತಿಯನ್ನು ರಚಿಸಿತ್ತು. ಈ ಸಮಿತಿ ನೀಡಿದ ವರದಿಯನ್ನು ಆಧರಿಸಿ ಪೀಠ ಮಹತ್ವದ ತೀರ್ಪು ನೀಡಿದೆ.

ಸಮಾಜದಿಂದಲೇ ಹೆಚ್ಚಿನ ನೋವು: ‘ಸಮಾಜ ತನ್ನನ್ನು ನೋಡಿದ ದೃಷ್ಟಿಯಿಂದ ಸಂತ್ರಸ್ತೆ ಹೆಚ್ಚಾಗಿ ನೊಂದಿದ್ದಾಳೆ. ತನ್ನದೇ ಕುಟುಂಬ ಸಹ ಆಕೆಯ ಕೈಬಿಟ್ಟಿತ್ತು. ಕಾನೂನು ವ್ಯವಸ್ಥೆಯೂ ಆಕೆಯನ್ನು ಸೋಲುವಂತೆ ಮಾಡಿತು’ ಎಂಬ ಅಂಶಗಳನ್ನು ಪೀಠ ಗಂಭೀರವಾಗಿ ಪರಿಗಣಿಸಿತು.

‘ಸಂತ್ರಸ್ತೆ ಈಗ ವಯಸ್ಕಳಾಗಿದ್ದಾಳೆ. ಆಕೆ ಈ ಘಟನೆಯನ್ನು ಅಪರಾಧ ಎಂದು ಪರಿಗಣಿಸಿಲ್ಲ. ಅದು ಕಾನೂನು ಪ್ರಕಾರ ಅಪರಾಧವಾಗಿದ್ದರೂ, ಸಂತ್ರಸ್ತೆ ಅದನ್ನು ಹಾಗೆ ಸ್ವೀಕರಿಸಿಲ್ಲ. ಆಕೆಗೆ ಆಘಾತ ಉಂಟುಮಾಡಿದ್ದು ಈ ಅಪರಾಧವಲ್ಲ, ಬದಲಿಗೆ ಆ ನಂತರದ ಪರಿಣಾಮಗಳು. ಪೊಲೀಸ್, ಕಾನೂನು ವ್ಯವಸ್ಥೆ, ಆರೋಪಿಯನ್ನು ಶಿಕ್ಷೆಯಿಂದ ರಕ್ಷಿಸಲು ನಡೆಸಬೇಕಾದ ಹೋರಾಟದಿಂದ ಆಕೆ ರೋಸಿ ಹೋಗಿದ್ದಾಳೆ. ಈ ಸಂಗತಿಗಳು ಎಲ್ಲರ ಕಣ್ಣುಗಳನ್ನು ತೆರೆಸುವಂತಿವೆ’ ಎಂದು ಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಪೂರ್ಣ ನ್ಯಾಯಕ್ಕಾಗಿ ವಿಶೇಷ ಅಧಿಕಾರ



ಶಿಕ್ಷೆಗೆ ಒಳಗಾದ ವ್ಯಕ್ತಿ ಜತೆಗೆ ಸಂತ್ರಸ್ತೆಯ ಭಾವನಾತ್ಮಕ ಬಾಂಧವ್ಯ ಮತ್ತು ಅವರ ಈಗಿನ ಕೌಟುಂಬಿಕ ಜೀವನ ಸೇರಿದಂತೆ ಅಸಾಧಾರಣ ಸಂದರ್ಭಗಳನ್ನು ಪರಿಗಣಿಸಿ, ಆಕೆಗೆ ಸಂಪೂರ್ಣ ನ್ಯಾಯ ಒದಗಿಸಲು 142ನೇ ವಿಧಿಯಡಿ ವಿಶೇಷ ಅಧಿಕಾರವನ್ನು ಬಳಸಿರುವುದಾಗಿ ಪೀಠ ತಿಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲ್ಕತ್ತ ಹೈಕೋರ್ಟ್ 2023ರಲ್ಲಿ ವ್ಯಕ್ತಿಯನ್ನು 20 ವರ್ಷಗಳ ಶಿಕ್ಷೆಯಿಂದ ಖುಲಾಸೆಗೊಳಿಸಿತ್ತು. ಈ ವೇಳೆ ಅದು ನೀಡಿದ್ದ ವಿವಾದಾತ್ಮಕ ಅಭಿಪ್ರಾಯಗಳಿಂದಾಗಿ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿತ್ತು.

ಹದಿಹರಿಯದ ಬಾಲಕಿ ‘ಲೈಂಗಿಕ ಪ್ರಚೋದನೆಗಳನ್ನು ನಿಯಂತ್ರಿಸಬೇಕು. ಸಮಾಜವು ಅಂತಹ ಘಟನೆಗಳಲ್ಲಿ ಆಕೆಯನ್ನು ಸೋತವಳು ಎಂದು ಪರಿಗಣಿಸುತ್ತದೆ’ ಎಂದು ಹೈಕೋರ್ಟ್ ಉಲ್ಲೇಖಿಸಿತ್ತು. ಇದು ವ್ಯಾಪಕ ಟೀಕೆಗೆ ಗುರಿಯಾಗಿತ್ತು.

ಈ ಪ್ರಕರಣದ ವಿಚಾರಣೆಯನ್ನು 2024ರ ಆಗಸ್ಟ್ 20ರಂದು ನಡೆಸಿದ ಸುಪ್ರೀಂ ಕೋರ್ಟ್ ಕಲ್ಕತ್ತ ಹೈಕೋರ್ಟ್ ತೀರ್ಪನ್ನು ರದ್ದುಗೊಳಿಸಿ, ವ್ಯಕ್ತಿಯ ಶಿಕ್ಷೆಯನ್ನು ಮರುಸ್ಥಾಪಿಸಿತ್ತು. ಆದರೆ, ಶಿಕ್ಷೆ ಜಾರಿಗೂ ಮುನ್ನ ಸಂತ್ರಸ್ತೆಯ ಮನಃಸ್ಥಿತಿ ಮತ್ತು ಆಕೆಯ ಅಭಿಪ್ರಾಯಗಳನ್ನು ತಿಳಿದು ಮೌಲ್ಯಮಾಪನ ನಡೆಸಲು ನಿಮ್ಹಾನ್ಸ್ ಅಥವಾ ಟಿಐಎಸ್‌ಎಸ್‌ನಂತಹ ಸಂಸ್ಥೆಗಳ ಸದಸ್ಯರು ಸೇರಿದಂತೆ ಮಕ್ಕಳ ಕಲ್ಯಾಣ ಅಧಿಕಾರಿಗಳಿರುವ ತಜ್ಞರ ಸಮಿತಿ ರಚಿಸುವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ನಿರ್ದೇಶಿಸಿತ್ತು.

ಸಮಿತಿ ಏಪ್ರಿಲ್ 3 ರಂದು ವರದಿಯನ್ನು ನೀಡಿತ್ತು. ಸಂತ್ರಸ್ತೆಯು ಆರೋಪಿಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದಾಳೆ ಮತ್ತು ತನ್ನ ಪುಟ್ಟ ಕುಟಂಬದ ಬಗ್ಗೆ ಅಪಾರ ಪ್ರೀತಿ ಹೊಂದಿದ್ದಾಳೆ ಎಂದು ವರದಿಯಲ್ಲಿ ಉಲ್ಲೇಖಿಸಿತ್ತು.

ಪ್ರತ್ಯೇಕ ಎನ್‌ಕೌಂಟರ್: ಐವರು ನಕ್ಸಲರ ಹತ್ಯೆ

ಗಡಚಿರೋಲಿ (ಪಿಟಿಐ): ಮಹಾರಾಷ್ಟ್ರ ಮತ್ತು ಛತ್ತೀಸಗಢದ ಗಡಿಯ ಗಡಚಿರೋಲಿ ಜಿಲ್ಲೆಯಲ್ಲಿ ವಿಶೇಷ ಪೊಲೀಸ್ ಕಮಾಂಡೋ ಪಡೆ ಮತ್ತು ಸಿಆರ್‌ಪಿಎಫ್ ಯೋಧರು ನಡೆಸಿದ ಗುಂಡಿನ ಕಾರ್ಯಾಚರಣೆಯಲ್ಲಿ ನಾಲ್ವರು ಮಾವೋವಾದಿಗಳು ಹತರಾಗಿದ್ದಾರೆ ಎಂದು ಶುಕ್ರವಾರ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ನಕ್ಸಲರು ಇರುವ ಕುರಿತು ಕವಾಂಡೆ ಪ್ರದೇಶದ ಮುಂಚೂಣಿ ಕಾರ್ಯಾಚರಣೆ ನೆಲೆಗೆ (ಎಫ್‌ಒಬಿ) ಗುಪ್ತಚರ ಇಲಾಖೆಯು ಖಚಿತ ಮಾಹಿತಿ ನೀಡಿತ್ತು. ಇದನ್ನು ಆಧರಿಸಿ ಗುರುವಾರ ಮಧ್ಯಾಹ್ನ ಕಾರ್ಯಾಚರಣೆ ಆರಂಭಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ ಕಮಾಂಡೋಗಳು ಹಾಗೂ ನಕ್ಸಲರ ನಡುವೆ ಸುಮಾರು ಎರಡು ತಾಸು ಗುಂಡಿನ ಚಕಮಕಿ ನಡೆಯಿತು. ನಂತರ ನಾಲ್ವರು ನಕ್ಸಲರ ಶವಗಳು ಪತ್ತೆಯಾದವು.

ಸುಕ್ಮಾದಲ್ಲೂ ಒಬ್ಬ ನಕ್ಸಲ್ ಸಾವು: ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳ ಜೊತೆ ನಡೆಸಿದ ಗುಂಡಿನ ಚಕಮಕಿಯಲ್ಲಿ ನಕ್ಸಲರೊಬ್ಬರು ಸಾವಿಗೀಡಾಗಿದ್ದಾರೆ ಎಂದು ಶುಕ್ರವಾರ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

‘ಸುಪ್ರೀಂ ಕೋರ್ಟ್ ಸಿಜೆಐ ಕೇಂದ್ರಿತ’

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ‘ಮುಖ್ಯ ನ್ಯಾಯಮೂರ್ತಿ (ಸಿಜೆಐ) ಕೇಂದ್ರಿತ’ವಾಗಿದೆ. ಇದು ಬದಲಾಗಬೇಕಾದ ಅಗತ್ಯವಿದೆ ಎಂದು ನ್ಯಾಯಮೂರ್ತಿ ಅಭಯ್ ಎಸ್.ಓಕಾ ಅವರು ಹೇಳಿದರು.

ಅಭಯ್ ಎಸ್. ಓಕಾ

ಓಕಾ ಅವರು ಶನಿವಾರ ತಮ್ಮ ಸ್ಥಾನದಿಂದ ನಿವೃತ್ತಿ ಹೊಂದಲಿದ್ದಾರೆ. ಈ ದಿನ ಕೋರ್ಟ್ ರಜೆ ಇರುವ ಕಾರಣ ಶುಕ್ರವಾರ ಅವರ ವೃತ್ತಿಯ ಕೊನೆಯ ದಿನವಾಗಿತ್ತು.

ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಓಕಾ ಅವರು, ‘ಸುಪ್ರೀಂ ಕೋರ್ಟ್ ಸಂವಿಧಾನದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕು ಎಂಬುದು ಸಂವಿಧಾನ ರಚನಕಾರರ ಕನಸಾಗಿತ್ತು. ಅವರ ಕನಸನ್ನು ಸಾಕಾರಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ’ ಎಂದು ಹೇಳುತ್ತಾ ಭಾವುಕರಾದರು.

ತಾಯಿಯ ವಿಯೋಗವಾಗಿದ್ದರೂ ಕೆಲಸಕ್ಕೆ ಹಾಜರಿ: 11 ಅರ್ಜಿ ವಿಲೇವಾರಿ

ನಿವೃತ್ತಿಗೂ ಎರಡು ದಿನ ಮೊದಲು ಓಕಾ ಅವರ ತಾಯಿ ನಿಧನರಾಗಿದ್ದರು. ಅಂತ್ಯಸಂಸ್ಕಾರ ಪೂರ್ಣಗೊಳಿಸಿ ರಾತ್ರಿ ಇಡೀ ಪ್ರಯಾಣಿಸಿ ಶುಕ್ರವಾರ ಕೋರ್ಟ್‌ಗೆ ಹಾಜರಾದ ಓಕಾ ಅವರು 11 ಅರ್ಜಿಗಳನ್ನು ವಿಲೇವಾರಿ ಮಾಡಿದರು.

ಓಕಾ ಅವರು 2021ರ ಆಗಸ್ಟ್ 31ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾಗಿದ್ದರು. ಅವರ ಎರಡು ದಶಕಗಳ ನ್ಯಾಯಾಂಗ ಸೇವೆಯಲ್ಲಿ ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಮತ್ತು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

> **ನ್ಯಾಯಮೂರ್ತಿ ಓಕಾ ಅವರ ಕೊಡುಗೆಯು ತೀರ್ಪುಗಳ ಗುಣಮಟ್ಟವನ್ನು ಹೆಚ್ಚಿಸಿದೆ. ನ್ಯಾಯಾಲಯದಲ್ಲಿ ಅವರು ಶಿಕ್ಷಕರಾಗಿದ್ದರು**
>
> **ಬಿ.ಆರ್. ಗವಾಯಿ**
> ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ಸಾಮೂಹಿಕ ಪ್ರಯತ್ನದಿಂದ ಮಾತ್ರ ಸಂವಿಧಾನದ ಸ್ವಾತಂತ್ರ್ಯವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿಯಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

‘ಖ್ಯಾತಿ ಗಳಿಸಲು ನಾವು ನ್ಯಾಯಮೂರ್ತಿಗಳಾಗಿಲ್ಲ ಎನ್ನುವುದು ಸದಾ ನೆನಪಿನಲ್ಲಿ ಇರಬೇಕು ಎಂದು ನ್ಯಾಯಮೂರ್ತಿಯೊಬ್ಬರು ಸಲಹೆ ನೀಡಿದ್ದರು. ಅದನ್ನು ನಾನು ಪಾಲಿಸಿದ್ದೇನೆ’ ಎಂದರು.

ವಿಚಾರಣಾ ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಸಾಕಷ್ಟು ಅರ್ಜಿಗಳ ವಿಚಾರಣೆ ಬಾಕಿ ಇದೆ. ವಿಚಾರಣಾ ನ್ಯಾಯಾಲಯಗಳನ್ನು ಅಧೀನ ನ್ಯಾಯಾಲಯಗಳು ಎಂದು ಭಾವಿಸಬಾರದು. ಇದು ಸಂವಿಧಾನಾತ್ಮ ಮೌಲ್ಯಗಳಿಗೆ ವಿರುದ್ಧವಾದುದು ಎಂದು ಹೇಳಿದರು.

ಇಬ್ಬರು ಕಮಾಂಡೋಗಳಿಗೆ ‘ಶೌರ್ಯ ಚಕ್ರ’

ನವದೆಹಲಿ (ಪಿಟಿಐ): ಛತ್ತೀಸಗಢದ ನಕ್ಸಲರ ಭದ್ರಕೋಟೆಯಲ್ಲಿ ಕಾರ್ಯಾಚರಣೆ ವೇಳೆ ಮಾವೋವಾದಿಗಳ ಗುಂಡಿಗೆ ಎದೆಕೊಟ್ಟು ಹುತಾತ್ಮರಾದ ಸಿಆರ್‌ಪಿಎಫ್ ಕೋಬ್ರಾ ಪಡೆಯ ಇಬ್ಬರು ಕಮಾಂಡೋಗಳು ಸೇರಿ ಅರೆಸೇನಾ ಪಡೆಯ ಏಳು ಮಂದಿಗೆ ‘ಶೌರ್ಯ ಚಕ್ರ’ ಪದಕ ಪ್ರದಾನ ಮಾಡಲಾಯಿತು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಿಆರ್‌ಪಿಎಫ್ ಕಮಾಂಡೋಗಳ ಕುಟುಂಬಕ್ಕೆ ‘ಶೌರ್ಯ ಚಕ್ರ’ ಪದಕ ಪ್ರದಾನ ಮಾಡಿದರು. ಪವನ್ ಕುಮಾರ್ ತಾಯಿ ಮತ್ತು ಪತ್ನಿ ಪದಕ ಸ್ವೀಕರಿಸಿದರು.

ಗುರುವಾರ ರಾಷ್ಟ್ರಪತಿ ಭವನದಲ್ಲಿ ನಡೆದ ರಕ್ಷಣಾ ಪ್ರತಿಷ್ಠಾಪನಾ ಸಮಾರಂಭದಲ್ಲಿ ರಾಷ್ಟ್ರಪತಿಗಳು ‘ಶೌರ್ಯಚಕ್ರ’ ಪ್ರದಾನ ಮಾಡಿದರು. 201ನೇ ಕೋಬ್ರಾ ಬೆಟಾಲಿಯನ್‌ನ ಕಾನ್‌ಸ್ಟೆಬಲ್‌ಗಳಾದ ಪವನ್ ಕುಮಾರ್ ಮತ್ತು ಸಿ.ದೇವನ್‌ಗೆ ಮರಣೋತ್ತರವಾಗಿ ಪದಕವನ್ನು ನೀಡಲಾಯಿತು. ಅವರ ಕುಟುಂಬ ಸದಸ್ಯರು ಪದಕ ಸ್ವೀಕರಿಸಿದರು.

‘ಶೌರ್ಯ ಚಕ್ರ’ವು ದೇಶದ ಮೂರನೇ ಅತ್ಯುನ್ನತ ಸೇನಾ ಪದಕವಾಗಿದೆ.

2024ರ ಜನವರಿ 30ರಂದು ಪವನ್ ಕುಮಾರ್ ಮತ್ತು ಸಿ.ದೇವನ್ ಸುಕ್ಮಾ ಜಿಲ್ಲೆಯ ಟೇಕಲ್‌ಗುಡಿಯಂನಲ್ಲಿ ನಕ್ಸಲ್ ವಿರುದ್ಧದ ಕಾರ್ಯಾಚರಣೆ ವೇಳೆ ಹುತಾತ್ಮರಾಗಿದ್ದರು. 2023ರಲ್ಲಿ ಜಾರ್ಖಂಡ್‌ನಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಕೋಬ್ರಾ ಪಡೆಯ ಡೆಪ್ಯೂಟಿ ಕಮಾಂಡೆಂಟ್‌ಗಳಾದ ಲಖ್ವೀರ್, ವಿಕ್ರಾಂತ್ ಕುಮಾರ್, ಅಸಿಸ್ಟೆಂಟ್ ಕಮಾಂಡೆಂಟ್ ರಾಜೇಶ್ ಪಾಂಚಾಲ್, ಇನ್‌ಸ್ಪೆಕ್ಟರ್ ಜೆಫ್ರಿ ಮಿಂಗ್‌ಚುಲೋ, ಕಾನ್‌ಸ್ಟೆಬಲ್ ಮಲ್ಕಿತ್ ಸಿಂಗ್ ಅವರಿಗೂ ‘ಶೌರ್ಯ ಚಕ್ರ’ ಪ್ರದಾನ ಮಾಡಲಾಯಿತು.

ಐಪಿಎಲ್ ಹೆಸರಲ್ಲಿ ಜೂಜು: ಕಳವಳ

ನವದೆಹಲಿ (ಪಿಟಿಐ): ‘ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಹೆಸರಿನಲ್ಲಿ ಜನರು ಜೂಜು, ಬೆಟ್ಟಿಂಗ್‌ನಲ್ಲಿ ಹೆಚ್ಚು ತೊಡಗುತ್ತಿದ್ದು, ಇದು ಗಂಭೀರವಾದ ವಿಷಯ’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಕಳವಳ ವ್ಯಕ್ತಪಡಿಸಿತು.

‘ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳಿಂದಾಗಿ ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು’ ಎಂದು ಕೋರಿ ಸಲ್ಲಿಸಲಾಗಿದ್ದ ಪಿಐಎಲ್ ವಿಚಾರಣೆ ವೇಳೆ ಪೀಠ ಈ ಮಾತು ಹೇಳಿತು.

ಅರ್ಜಿದಾರ ಕೆ.ಎ.ಪೌಲ್, ‘ಆನ್‌ಲೈನ್‌ನಲ್ಲಿ ಸಕ್ರಿಯವಾಗಿರುವ ಪ್ರಭಾವಿಗಳು, ನಟರು, ಕ್ರಿಕೆಟ್ ಪಟುಗಳು ಆ್ಯಪ್‌ಗಳ ಬಗ್ಗೆ ಪ್ರಚಾರ ಮಾಡಿ, ಬೆಟ್ಟಿಂಗ್‌ನತ್ತ ಜನರ ಸೆಳೆಯುತ್ತಿದ್ದಾರೆ’ ಎಂದು ದೂರಿದ್ದರು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ಎನ್.ಕೋಟೀಶ್ವರ ಸಿಂಗ್ ಅವರಿದ್ದ ಪೀಠ, ಅರ್ಜಿ ಕುರಿತು ಪ್ರತಿಕ್ರಿಯೆಯನ್ನು ದಾಖಲಿಸುವಂತೆ ಸೂಚಿಸಿ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಕಳೆದ ಒಂದೆರಡು ವರ್ಷಗಳಲ್ಲಿ ಮೃತಪಟ್ಟಿರುವ ಮಕ್ಕಳ ಪೋಷಕರ ಪ್ರತಿನಿಧಿಯಾಗಿ ಪಿಐಎಲ್ ಸಲ್ಲಿಸುತ್ತಿದ್ದೇನೆ. ಸಿಗರೇಟ್ ಪ್ಯಾಕ್‌ಗಳ ಮೇಲೆ ಅದರ ಪರಿಣಾಮ ಬಿಂಬಿಸುವ ಚಿತ್ರಗಳಿವೆ. ಬೆಟ್ಟಿಂಗ್ ಆ್ಯಪ್‌ಗಳ ಸಂಬಂಧ ಇಂತಹ ಎಚ್ಚರಿಕೆಗಳನ್ನೂ ಪ್ರಸಾರ ಮಾಡುತ್ತಿಲ್ಲ. ಮಾಜಿ ಕ್ರಿಕೆಟ್ ಆಟಗಾರರೂ ಐಪಿಎಲ್ ವೇಳೆ ಈ ಆ್ಯಪ್‌ಗಳ ಬಗ್ಗೆ ಪ್ರಚಾರ ಮಾಡುತ್ತಿದ್ದಾರೆ’ ಎಂದು ಅರ್ಜಿದಾರ ಉಲ್ಲೇಖಿಸಿದ್ದಾರೆ.

ತೆಲಂಗಾಣದಲ್ಲೇ 1,023 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಾಲಿವುಡ್, ಟಾಲಿವುಡ್‌ನ 25ಕ್ಕೂ ಹೆಚ್ಚು ನಟರು, ಪ್ರಭಾವಿಗಳು ಈ ಅಮಾಯಕರ ಬದುಕಿನಲ್ಲಿ ಆಟವಾಡಿದ್ದಾರೆ. ಮೂಲಭೂತ ಹಕ್ಕಿನ ಉಲ್ಲಂಘನೆ ಸಂಬಂಧ ಈ ನಟರು, ಪ್ರಭಾವಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದಿದ್ದಾರೆ.

ಈ ಸಂಬಂಧ ತನ್ನ ಅಸಹಾಯಕತೆ ವ್ಯಕ್ತಪಡಿಸಿದ ಪೀಠವು, ‘ಇದು, ಸಮಾಜವೇ ಹಾದಿತಪ್ಪಿರುವ ಪರಿಸ್ಥಿತಿ. ಕೊಲೆ ಮಾಡದಂತೆ ಜನರನ್ನು ಹೇಗೆ ತಡೆಯಲು ಸಾಧ್ಯವಿಲ್ಲವೋ, ಹಾಗೆಯೇ ಕಾನೂನು ರಚನೆಯಿಂದ ಇದನ್ನೂ ತಡೆಯಲಾಗದು’ ಎಂದು ಪೀಠವು ವಿಚಾರಣೆ ವೇಳೆ ಪ್ರತಿಕ್ರಿಯಿಸಿತು.

ಶಬರಿಮಲೆ: ಕಸ- ಕ್ರಮಕ್ಕೆ ಸೂಚನೆ

ಕೊಚ್ಚಿ (ಪಿಟಿಐ): ಧಾರ್ಮಿಕ ಕ್ಷೇತ್ರ ಶಬರಿಮಲೆಯ ಮಂಡಲ–ಮಕರವಿಳಕ್ಕು (ಮಕರ ಸಂಕ್ರಾಂತಿ) ಸಂದರ್ಭದಲ್ಲಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಘನತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯುವವರ ವಿರುದ್ಧ ವನ್ಯಜೀವಿ (ಸಂರಕ್ಷಣಾ) ಕಾಯ್ದೆ ಅಡಿಯಲ್ಲಿ ಕಠಿಣ ಕ್ರಮ ಜರುಗಿಸುವಂತೆ ಪೆರಿಯಾರ್ ಹುಲಿ ಸಂರಕ್ಷಿತ ಪ್ರದೇಶದ ಉಪ ನಿರ್ದೇಶಕರಿಗೆ ಕೇರಳ ಹೈಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಅನಿಲ್ ಕೆ. ನರೇಂದ್ರನ್ ಮತ್ತು ಮುರಳೀ ಕೃಷ್ಣ ಅವರು ಇದ್ದ ಪೀಠವು ‘ಕೆಲವರು ಪ್ಲಾಸ್ಟಿಕ್ ಚೀಲಗಳು, ಘನತ್ಯಾಜ್ಯಗಳನ್ನು ಸುಡುತ್ತಿದ್ದಾರೆ. ಅಂಥವರ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಸೂಚಿಸಿತು.

ಆತ್ಮಹತ್ಯೆ: ಸರ್ಕಾರಕ್ಕೆ ‘ಸುಪ್ರೀಂ’ ತರಾಟೆ

ನವದೆಹಲಿ (ಪಿಟಿಐ): ಕೋಟಾ ನಗರದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು ಹೆಚ್ಚು ವರದಿಯಾಗುತ್ತಿರುವ ವಿಚಾರವಾಗಿ ರಾಜಸ್ಥಾನ ಸರ್ಕಾರವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿತು.

ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್.ಮಹದೇವನ್ ಅವರನ್ನು ಒಳಗೊಂಡ ನ್ಯಾಯಪೀಠವು, ‘ಈ ವರ್ಷ ನಗರದಲ್ಲಿ 14 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ವರದಿಯಾಗಿದೆ. ಪರಿಸ್ಥಿತಿ ಗಂಭೀರವಾಗಿದೆ’ ಎಂದು ಕೋರ್ಟ್ ಕಳವಳ ವ್ಯಕ್ತಪಡಿಸಿತು.

‘ಕೋಟಾದಲ್ಲಿ ಮಾತ್ರ ವಿದ್ಯಾರ್ಥಿಗಳು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ಸರ್ಕಾರದ ಪರ ವಕೀಲರನ್ನು ಪಾರ್ದೀವಾಲಾ ಪ್ರಶ್ನಿಸಿದರು.

ರ‍್ಯಾಪರ್ ವೇದನ್ ವಿರುದ್ಧ ಎನ್‌ಐಎ ತನಿಖೆಗೆ ಮನವಿ

ಪ್ರಜಾವಾಣಿ ವಾರ್ತೆ/ ಪಿಟಿಐ

ಪಾಲಕ್ಕಾಡ್: ರ‍್ಯಾಪರ್ ಮತ್ತು ಗೀತರಚನೆಕಾರ ವೇದನ್ (ಹಿರಣ್‌ದಾಸ್ ಮುರಳಿ) ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ಪಾಲಕ್ಕಾಡ್‌ನ ಬಿಜೆಪಿ ನಾಯಕಿ ವಿ.ಎಸ್ ಮಿನಿಮೋಳ್ ಅವರು ದೂರು ನೀಡಿದ್ದಾರೆ.

ವೇದನ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಅವರು ಕೇಂದ್ರ ಗೃಹ ಸಚಿವಾಲಯ ಮತ್ತು ಎನ್‌ಐಎಗೆ ಲಿಖಿತ ಮನವಿ ಸಲ್ಲಿಸಿದ್ದಾರೆ.

ವೇದನ್ ಅವರು ಸಂಗೀತದ ಮೂಲಕ ಜಾತಿ ಆಧರಿತ ವಿಭಜನೆಗೆ ಉತ್ತೇಜನ ನೀಡುತ್ತಿದ್ದಾರೆ ಎಂದೂ ಅವರು ಆರೋಪಿಸಿದ್ದಾರೆ.

ಮಿನಿಮೋಳ್ ಅವರು ಪಾಲಕ್ಕಾಡ್‌ನ ಪುರಸಭೆ ಸದಸ್ಯೆ ಮತ್ತು ಅಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ.

ಐದು ವರ್ಷಗಳ ಹಿಂದೆ ಬಿಡುಗಡೆಯಾದ ‘ವಾಯ್ಸ್ ಆಫ್ ವಾಯ್ಸ್‌ಲೆಸ್’ ಶೀರ್ಷಿಕೆಯ ಹಾಡಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಗೌರವ ತೋರಿದ್ದಾರೆ ಮತ್ತು ಅವಹೇಳನ ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ವೇದನ್ ಅವರು ಮಾದಕದ್ರವ್ಯ ಸೇವನೆ ಪ್ರಕರಣದಲ್ಲಿ ಜಾಮೀನಿನ ಮೇಲೆ ಹೊರಗಿದ್ದರೂ ದೊಡ್ಡ ಮಟ್ಟದಲ್ಲಿ ಸಂಗೀತ ಕಛೇರಿಗಳನ್ನು ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರು ಹಿಂಸಾಚಾರ ಮತ್ತು ದ್ವೇಷವನ್ನು ಹುರಿದುಂಬಿಸುತ್ತಿದ್ದಾರೆ. ವೇದನ್ ಅವರ ವಿರುದ್ಧ ದಾಖಲಾಗಿರುವ ಹಲವು ಪ್ರಕರಣಗಳ ಸಂಬಂಧ ಎನ್‌ಐಎ ತನಿಖೆ ನಡೆಯಬೇಕು ಎಂದು ಅವರು ಕೋರಿದ್ದಾರೆ.

‘ದಲಿತ ವಿರೋಧಿ ಅಜೆಂಡಾ’: ಸಂಘ ಪರಿವಾರದ ದಲಿತ ವಿರೋಧಿ ಅಜೆಂಡವೇ ವೇದನ್ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಲು ಕಾರಣ ಎಂದು ಸಿಪಿಎಂ ಮತ್ತು ಕಾಂಗ್ರೆಸ್ ಹೇಳಿವೆ.

ಎನ್‌ಐಎ ಪ್ರಕರಣಗಳ ವಿಚಾರಣೆಗೆ ವಿಶೇಷ ಕೋರ್ಟ್: ‘ಸುಪ್ರೀಂ’ ಪ್ರತಿಪಾದನೆ

ನವದೆಹಲಿ (ಪಿಟಿಐ): ಎನ್‌ಐಎ ತನಿಖೆ ನಡೆಸುತ್ತಿರುವ ಪ್ರಕರಣಗಳ ವಿಚಾರಣೆಗಾಗಿಯೇ ನಿಯೋಜಿತ ಕೋರ್ಟ್ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಒತ್ತಿ ಹೇಳಿದೆ.

ಎನ್‌ಐಎ ತನಿಖೆ ನಡೆಸುತ್ತಿರುವ ಪ್ರಕರಣಗಳು ಗಂಭೀರವಾಗಿದ್ದು, ದೇಶದಾದ್ಯಂತ ವ್ಯಾಪ್ತಿ ಹೊಂದಿವೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಕೋಟೀಶ್ವರ ಸಿಂಗ್ ಅವರಿದ್ದ ಪೀಠ ಹೇಳಿದೆ.

ನಕ್ಸಲರ ಪರ ಅನುಕಂಪವುಳ್ಳ ಗಡಚಿರೋಲಿಯ ನಿವಾಸಿ ಕೈಲಾಶ್ ರಾಮ್‌ಚಂದಾನಿ ಅವರಿಗೆ ಜಾಮೀನು ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ವೇಳೆ ಪೀಠ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ನಿಯೋಜಿತ ಕೋರ್ಟ್‌ನ ಅವಶ್ಯಕತೆಯ ಬಗ್ಗೆ ಗಮನಹರಿಸಲು ಹೆಚ್ಚುವರಿ ಸಾಲಿಸಿಟರ್ ಜನರಲ್ ರಾಜಕುಮಾರ್ ಭಾಸ್ಕರ್ ಠಾಕ್ರೆ ಅವರಿಗೆ ನಾಲ್ಕು ವಾರ ಸಮಯ ನೀಡಿದ ಪೀಠ, ವಿಚಾರಣೆಯನ್ನು ಜುಲೈಗೆ ಮುಂದೂಡಿತು.

‘ಎನ್‌ಐಎ ತನಿಖೆಯಲ್ಲಿರುವ ಪ್ರಕರಣಗಳಿಗೆ ನೂರಾರು ಸಾಕ್ಷಿಗಳಿರುತ್ತವೆ. ಹಾಲಿ ಕೋರ್ಟ್‌ನಲ್ಲಿ ವಿಚಾರಣೆ ನಡೆದರೆ, ನ್ಯಾಯಮೂರ್ತಿಗಳು ಇತರೆ ಪ್ರಕರಣಗಳನ್ನು ಗಮನಿಸಬೇಕಾದ ಕಾರಣ ನಿಗದಿತ ವೇಗದಲ್ಲಿ ಎನ್‌ಐಎ ಪ್ರಕರಣಗಳ ವಿಚಾರಣೆ ಸಾಧ್ಯವಾಗದು’ ಎಂದು ಪೀಠ ಕಾರಣ ನೀಡಿತು.

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆ.ಶಾ/ವಾ.ವಿ/ಟೈರ್ ಖರೀದಿ/2025–26 ದಿನಾಂಕ: .05.2025

ಪತ್ರಿಕಾ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯ ಘನ ತ್ಯಾಜ್ಯ ವಸ್ತು ನಿರ್ವಹಣೆಗೆ ಬಳಸುವ 14 ಸಂಖ್ಯೆ BOLERO BMT PLUS ಆಟೋ ಟಿಪ್ಪರ್‌ಗಳಿಗೆ ಟೈರ್‌ಗಳು ಹಾಳಾಗಿದ್ದು, ಸದರಿ ಆಟೋ ಟಿಪ್ಪರ್‌ಗಳಿಗೆ ಹೊಸದಾಗಿ ಟೈರ್‌ಗಳನ್ನು ಖರೀದಿಸಲು ಇಚ್ಛಿಸಿರುವ ಪ್ರಯುಕ್ತ ಆಸಕ್ತದಾರರಾದ ಅಧಿಕೃತ ಟೈರ್ ಮಾರಾಟಗಾರರು ಆಟೋ ಟಿಪ್ಪರ್‌ಗಳ ಟೈರ್‌ಗಳಿಗೆ ತಮ್ಮ ಧರಗಳನ್ನು ದಿನಾಂಕ: .05.2025 ರಂದು ಸಂಜೆ 05:00 ಗಂಟೆ ರೊಳಗಾಗಿ ಮುಚ್ಚಿದ ಲಕೋಟೆಯಲ್ಲಿ ಅಥವಾ ಇ–ಮೇಲ್:ka.ballari.cc@gmail.com ಗೆ ಕಳುಹಿಸಲು ಈ ಪತ್ರಿಕಾ ಪ್ರಕಟಣೆ ಹೊರಡಿಸಿದೆ.

ಷರತ್ತುಗಳು:
1. ಕೊಟೇಶನ್‌ಗಳನ್ನು ಮುಚ್ಚಿದ ಲಕೋಟಿಯಲ್ಲಿ ಸಲ್ಲಿಸತಕ್ಕದ್ದು.
2. ದರಗಳನ್ನು ಎಲ್ಲಾ ತೆರಿಗೆಗಳು ಸೇರಿ ಸಲ್ಲಿಸತಕ್ಕದ್ದು.
3. ಅವಧಿ ಮೀರಿ ಬಂದ ಕೊಟೇಶನ್‌ಗಳನ್ನು ಪರಗಣಿಸಲಾಗುವುದಿಲ್ಲ
4. ಕೊಟೇಶನ್‌ಗಳನ್ನು ಒಪ್ಪುವ ಅಥವಾ ತಿರಿಸ್ಕರಿಸುವ ಅಧಿಕಾರ ಆಯುಕ್ತರು, ಮಹಾನಗರಪಾಲಿಕೆ ಬಳ್ಳಾರಿ ಇವರಿಗೆ ಇರುತ್ತದೆ.
5. ಹೆಚ್ಚಿನ ಮಾಹಿತಿಗಾಗಿ ಶ್ರೀ ಕಿರಣ್ ಕುಮಾರ್ ಪರಿಸರ ಅಭಿಯಂತರರು ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ(ದೂರವಾಣಿ ಸಂಖ್ಯೆ:9620095318) ರವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ

NMDC Limited
(A Government of India Enterprise)
‘Khanij Bhavan’, 10-3-311/A, Castle Hills, Masab Tank, Hyderabad-500 028
CIN : L13100TG1958GOI001674

Employment Notification No 03/2025 **Dated : 22.05.2025**

NMDC Limited, a Navaratna Public Sector Enterprise under the Ministry of Steel, Government of India and a multi locational, multi product and consistently profit making Mining & Mineral Exploration Organization with large turnover. NMDC is now inviting applications from suitable persons for the following posts for Bailadila Iron Ore Mine, Kirandul Complex, Bailadila Iron Ore Mine, Bacheli Complex in Dantewada, Chhattisgarh and Donimalai Iron Ore Mine, Donimalai Complex in Bellary, Karnataka.

SI No.	Name of the post	No. of Vacancies		
		BIOM Kirandul Complex	BIOM Bacheli Complex	DIOM Donimalai Complex
1.	Field Attendant (Trainee) (RS-01)	86	38	27
2.	Maintenance Assistant (Elect.) (Trainee) (RS-02)	49	56	36
3.	Maintenance Assistant (Mech) (Trainee) (RS-02)	86	182	37
4.	Blaster Gr.- II (Trainee) (RS-04)	-	3	3
5.	Electrician Gr.-III (Trainee) (RS-04)	1	11	29
6.	Electronics Technician Gr.-III (Trainee) (RS-04)	3	-	3
7.	HEM Mechanic Gr.-III (Trainee) (RS-04)	39	12	26
8.	HEM Operator Gr.-III (Trainee) (RS-04)	118	40	70
9.	MCO Gr.-III (Trainee) (RS-04)	6	14	16
10.	QCA Gr III (Trainee) (RS-04)	1	-	3

For detailed notification regarding age, qualification, experience, scale of pay and other conditions etc, interested candidates may visit **“Careers”** page of NMDC website, www.nmdc.co.in

AGM (Personnel) R&P

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)
ಕೊಠಡಿ ಸಂಖ್ಯೆ: 612, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು–560001. ದೂರವಾಣಿ: 080- 2203 2825

ಅ.ಸ.ಪ. ಸಂಖ್ಯೆ: ಸಿಆಸುಇ(ಆಸು) 38 ಆರ್‌ಟಿಐ2025 ದಿನಾಂಕ: 23.05.2025

ಅಧಿಸೂಚನೆ

ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿ ಇರುವ ರಾಜ್ಯ ಮಾಹಿತಿ ಆಯುಕ್ತರ **ಬೆಂಗಳೂರು ಪೀಠದಲ್ಲಿ 02 ಮತ್ತು ಕಲಬುರಗಿ ಪೀಠದಲ್ಲಿ 01 ರಂತೆ ಒಟ್ಟು 03 ಹುದ್ದೆಗಳನ್ನು ಭರ್ತಿ ಮಾಡಲು** ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಅಧಿಸೂಚನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) **website www.dparar.karnataka.gov.in** ನಲ್ಲಿ ಪಕಟಿಸಲಾಗಿದೆ.

ಮಾಹಿತಿ ಹಕ್ಕು ಕಾಯ್ದೆ 2005 ರ ಅಧ್ಯಾಯ IV ರನ್ವಯ ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ನಿರ್ವಹಣೆ (ಮ್ಯಾನೇಜ್‌ಮೆಂಟ್), ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ನಿರ್ವಹಣೆ ಮತ್ತು ಆಡಳಿತ (ಅಡ್ಮಿನಿಸ್ಟ್ರೇಷನ್ ಮತ್ತು ಗವರ್ನೆನ್ಸ್) ರಲ್ಲಿ ವಿಶಾಲ ತಿಳುವಳಿಕೆ ಮತ್ತು ಅನುಭವ ಹೊಂದಿರುವ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ರಾಜ್ಯ ಮಾಹಿತಿ ಆಯುಕ್ತರನ್ನಾಗಿ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯ ಮಾಹಿತಿ ಆಯುಕ್ತರಾಗಿ ನೇಮಕಗೊಳ್ಳಲು ಆಸಕ್ತರಾದವರು ಇಲಾಖಾ ಜಾಲತಾಣ **www.dparar.karnataka.gov.in** ಅಥವಾ **https://sevasindhuservices.karnataka.gov.in/directApply.do?serviceId=2509 link** ನ್ನು ಬಳಸಿ ತಮ್ಮ ವ್ಯಕ್ತಿಗತ ವಿವರಗಳನ್ನು ಸಲ್ಲಿಸಲು **ದಿನಾಂಕ: 23.06.2025 ರ ಸಂಜೆ 5.30 ಗಂಟೆಯವರೆಗೆ** ಅವಕಾಶ ನೀಡಲಾಗಿದೆ.

ಸಹಿ/–
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)
(ತರಬೇತಿ ಮತ್ತು ಮಾಹಿತಿ ಹಕ್ಕು)

DIPR/CP/SA/828/2025-26

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆಶಾ/ವಾವಿ/ಬಾಡಿಗೆ ವಾಹನ/ಪ.ಪ್ರ/2025–26 ದಿನಾಂಕ:. 05.2025

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಳ್ಳಾರಿ ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಉಪಯೋಗಿಸಲು ಮಾಸಿಕ ಬಾಡಿಗೆ ಆಧಾರದ ಮೇಲೆ 10 ಸಂಖ್ಯೆಯ ಎ.ಸಿ ವಾಹನಗಳು ಮತ್ತು 08 ಸಂಖ್ಯೆಯ ನಾನ್ ಎ.ಸಿ ವಾಹನಗಳು ಮತ್ತು 2 ಸಂಖ್ಯೆ ಇನ್ನೋವಾ ಕ್ರಿಷ್ಣಾ ವಾಹನ (ಇಂಧನ ಹಾಗೂ ಚಾಲಕರ ಸಹಿತ) ಗಳ ಸೇವೆಯನ್ನು ಪಡೆಯಲು ನಿರ್ಧರಿಸಿದ್ದು, ಪ್ರಯುಕ್ತ ಅರ್ಹ ಆಸಕ್ತಿಯುಳ್ಳ ಅಧಿಕೃತ ಏಜೆನ್ಸಿದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಇಂಡೆಂಟ್ ಸಂಖ್ಯೆ:ಆಓಂ/2025–26/ಖಇ5169/ಅಂಐ–2 ಮೂಲಕ ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್ https://Kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು ದಿನಾಂಕ: 06/06/2025 ಸಂಜೆ 05 ಗಂಟೆಗೆ ಕೊನೆಯ ದಿನಾಂಕವಾಗಿರುತ್ತದೆ.

ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–15/542/2025–26 ದಿನಾಂಕ : 23.05.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : 1) ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು 3ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿ. (2ನೇ ಕರೆ). 2) ಮೈಸೂರು ಜಿಲ್ಲೆ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ 2X20 ಎಂ.ವಿ.ಎ 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ನಿರ್ಮಾಣ ಕಾಮಗಾರಿ ಮತ್ತು ಹಾಲಿ ಇರುವ 66ಕೆ.ವಿ ಹೂಟಗಳ್ಳಿ–ಬನ್ನಿಕುಪ್ಪೆ (ಹುಣಸೂರು) ಪ್ರಸರಣ ಮಾರ್ಗದಿಂದ ಉದ್ದೇಶಿತ ಕೂರ್ಗಳ್ಳಿ 66/11 ಕೆ.ವಿ ವಿದ್ಯುತ್ ಉಪ ಕೇಂದ್ರದವರೆಗೆ ಒಟ್ಟು 0.632ಕಿ.ಮಿ ಉದ್ದದ 66ಕೆ.ವಿ ಲಿಲೋ ಲೈನ್ ನಿರ್ಮಾಣ ಕಾಮಗಾರಿ. (2ನೇ ಕರೆ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12.06.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/832/Zen/2025-26

ಶನಿವಾರ • ಮೇ 24, 2025 ಪ್ರಜಾವಾಣಿ

ಸಂಕ್ಷಿಪ್ತ ಸುದ್ದಿ

ಡಾ.ವೆಂಕಟೇಶ ಮಲಘಾಣ ಅಮಾನತು

ಬಾಗಲಕೋಟೆ: ಕರ್ತವ್ಯಲೋಪ ಮತ್ತು ದುರ್ನಡತೆ ಆರೋಪದ ಕುರಿತ ಇಲಾಖೆ ವಿಚಾರಣೆ ಬಾಕಿಯಿರಿಸಿ, ಮುಧೋಳ ತಾಲ್ಲೂಕು ವೈದ್ಯಾಧಿಕಾರಿ ಡಾ.ವೆಂಕಟೇಶ

ಮಲಘಾಣ ಅವರನ್ನು ಅಮಾನತು ಮಾಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಶಿವಕುಮಾರ್ ಆದೇಶಿಸಿದ್ದಾರೆ.

'ಅನಧಿಕೃತ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳದೇ ಮುಚ್ಚಳಿಕೆ ಪಡೆದು ಪ್ರಕರಣ ಮುಚ್ಚಿ ಹಾಕಿರುವುದು. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮದಡಿ ನೋಂದಣಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸದಿರುವುದು ಕರ್ತವ್ಯಲೋಪ. ಪಿಸಿ ಆ್ಯಂಡ್ ಪಿಎನ್‌ಡಿಸಿ ಕಾಯ್ದೆಯಡಿ ಕಾರ್ಯನಿರ್ವಹಿಸಲು ಅಧಿಕಾರವಿಲ್ಲ ಎಂದು ಹೇಳಿ ಕರ್ತವ್ಯಲೋಪ ಮಾಡಿದ್ದಾರೆ' ಎಂದು ತನಿಖಾ ವರದಿಯಲ್ಲಿ ತಿಳಿಸಲಾಗಿದೆ.

'ನಕಲಿ ವೈದ್ಯರ ವಿರುದ್ಧ ದೂರು ಬಂದಾಗ ದಾಳಿ ಮಾಡಿ ಕೆಲವು ಪ್ರಕರಣಗಳಲ್ಲಿ ಅವರಿಂದ ಮುಚ್ಚಳಿಕೆ ಪತ್ರ ಪಡೆದು, ಪ್ರಕರಣಗಳನ್ನು ಮುಚ್ಚಿ ಹಾಕಲಾಗಿದೆ. ಇನ್ನೂ ಕೆಲ ಪ್ರಕರಣಗಳಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗೆ ವರದಿ ಮಾಡಿದ್ದಾರೆ. ಈ ವಿಭಿನ್ನ ಕ್ರಮಗಳಿಗೆ ಯಾವುದೇ ಸ್ಪಷ್ಟ ವಿವರಣೆ ನೀಡಿಲ್ಲ. ಈ ವಿಷಯದಲ್ಲಿ ಪೂರ್ಣ ತನಿಖೆ ನಡೆಸಬೇಕಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಹಾಲಿಂಗಪುರದಲ್ಲಿ ಭ್ರೂಣಹತ್ಯೆ ಮಾಡಿಸಿಕೊಂಡಿದ್ದ ಮಹಾರಾಷ್ಟ್ರ ರಾಜ್ಯ ಮೂಲದ ಸೋನಾಲಿ ಕದಮ್ ಮೃತಪಟ್ಟಿದ್ದರು. ಭ್ರೂಣಹತ್ಯೆ ನಡೆದಿದ್ದ ಆಸ್ಪತ್ರೆಯನ್ನು ಸೀಜ್ ಮಾಡಿ, ಕವಿತಾ ಬಾಡನವರ ಎಂಬುವರನ್ನು ಬಂಧಿಸಲಾಗಿತ್ತು. 2019 ಹಾಗೂ 2022ರಲ್ಲಿ ಇಲ್ಲಿ ಭ್ರೂಣಹತ್ಯೆ ಮಾಡಿರುವುದು ಬೆಳಕಿಗೆ ಬಂದಿತ್ತು. ಆಗ ಮುಚ್ಚಳಿಕೆ ಬರೆಸಿಕೊಂಡು ಬಿಡಲಾಗಿತ್ತು.

14 ಅಧಿಕಾರಿ, ಸಿಬ್ಬಂದಿ ವಿರುದ್ಧ ಎಫ್‌ಐಆರ್

ಕೊಳ್ಳೇಗಾಲ: 'ನಗರಸಭೆ ವ್ಯಾಪ್ತಿಯ ವಿವಿಧ ಬಡಾವಣೆಗಳ 21 ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಸಂದಾಯವಾದ ಹಣ ದುರುಪಯೋಗವಾಗಿದ್ದು, ತಪ್ಪಿತಸ್ಥ 14 ಅಧಿಕಾರಿ ಮತ್ತು ನೌಕರರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಕೋರಿ ನಗರಸಭೆ ಪೌರಾಯುಕ್ತ ಎ.ರಮೇಶ್ ಅವರು ಶುಕ್ರವಾರ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. 'ಕೋಟ್ಯಂತರ ಹಣ ದುರುಪಯೋಗವಾಗಿದೆ' ಎಂದು ದೂರಿನಲ್ಲಿದ್ದು, ನಿರ್ದಿಷ್ಟ ಮೊತ್ತವನ್ನು ಉಲ್ಲೇಖಿಸಿಲ್ಲ.

ಜಿಲ್ಲಾ ನಗರಾಭಿವೃದ್ಧಿ ಕೋಶದ ನಿರ್ಗಮಿತ ಯೋಜನಾ ನಿರ್ದೇಶಕ ಕೆ.ಸುರೇಶ್, ನಗರಸಭೆಯ ನಿವೃತ್ತ ಪೌರಾಯುಕ್ತ ನಾಗಶೆಟ್ಟಿ, ಹಿಂದಿನ ಪೌರಾಯುಕ್ತರಾದ ಡಿ.ಕೆ.ಲಿಂಗರಾಜು, ವಿಜಯ, ಹಿಂದಿನ ಎಇಇ ಅಲ್ತಾಫ್ ಅಹ್ಮದ್, ಹಾಲಿ ಲೆಕ್ಕಾಧೀಕ್ಷಕ ಹನುಮಂತರಾಜು, ಕಚೇರಿ ವ್ಯವಸ್ಥಾಪಕ ಲಿಂಗರಾಜು, ಹಿಂದಿನ ಸಹಾಯಕ ಎಂಜಿನಿಯರ್ ಸಿ.ಎಂ. ನಟರಾಜು, ಕಿರಿಯ ಎಂಜಿನಿಯರ್ ಸಿದ್ದಪ್ಪ, ಎಸ್‌ಡಿಎ ಜಯಚಿತ್ರ, ವಾಟರ್‌ಮನ್‌ಗಳಾದ ಮಲ್ಲಪ್ಪ, ಚಿಕ್ಕಸಿದ್ದಯ್ಯ, ನಾಗರಾಜು, ಸಾಗರ್ ಅವರ ವಿರುದ್ಧ ದೂರು ನೀಡಲಾಗಿದೆ. ಶುದ್ಧ ಕುಡಿಯುವ ನೀರು ಘಟಕಗಳಿಂದ ನೀರು ಪಡೆದ ಬಳಿಕ ಗ್ರಾಹಕರು ಪಾವತಿಸಿದ ಹಣದ ದುರ್ಬಳಕೆ ಸಂಬಂಧ ನಗರಸಭೆ ಸದಸ್ಯೆ ಜಯಮರಿ ಅವರು ಪೌರಾಡಳಿತ ನಿರ್ದೇಶನಾಲಯ ಹಾಗೂ ಜಿಲ್ಲಾಧಿಕಾರಿ ಕಚೇರಿಗೆ ದೂರು ನೀಡಿದ್ದರು.

ಬಾಲಕಿ ಕುಟುಂಬಕ್ಕೆ ಕೊಟ್ಟಿದ್ದ ಪರಿಹಾರ ವಾಪಸ್

ರಾಮನಗರ: ತಾಲ್ಲೂಕಿನ ಭದ್ರಾಪುರ ಹಕ್ಕಿಪಿಕ್ಕಿ ಕಾಲೊನಿ ರೈಲು ಹಳಿ ಪಕ್ಕ ಪತ್ತೆಯಾಗಿದ್ದ 15 ವರ್ಷದ ಬಾಲಕಿ ಶವದ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆ ಕುಟುಂಬಕ್ಕೆ ಸಿಕ್ಕಿದ್ದ ₹4,12,500 ಪರಿಹಾರವೀಗ ಕೈ ತಪ್ಪಲಿದೆ. ಜಾತಿ ದೌರ್ಜನ್ಯ ಪ್ರಕರಣವೆಂದು ಭಾವಿಸಿ ಪರಿಹಾರ ಕೊಟ್ಟಿದ್ದ ಸಮಾಜ ಕಲ್ಯಾಣ ಇಲಾಖೆ, ಬಾಲಕಿಯದ್ದು ರೈಲು ಅಪಘಾತದ ಸಾವು ಎಂದು ಪೊಲೀಸರು ಹೇಳಿರುವ ಬೆನ್ನಲ್ಲೇ ಪರಿಹಾರ ಹಿಂಪಡೆಯಲು ಸಿದ್ಧತೆ ನಡೆಸಿದೆ.

8ನೇ ತರಗತಿಯ ಮಾತು ಬಾರದ ಮತ್ತು ಕಿವಿ ಕೇಳಿಸದ ಬಾಲಕಿ ಖುಷಿ, ಮೇ 11ರಂದು ರಾತ್ರಿ ಕಾಣೆಯಾಗಿದ್ದಳು. ಮಾರನೇ ದಿನ ಬೆಳಗ್ಗೆ ಗ್ರಾಮದ ರೈಲು ಹಳಿ ಪಕ್ಕ ಅರೆನಗ್ನಾವಸ್ಥೆಯಲ್ಲಿ ಶವ ಪತ್ತೆಯಾಗಿತ್ತು. ದುಷ್ಕರ್ಮಿಗಳು ಬಾಲಕಿ ಅಪಹರಿಸಿ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದಾರೆಂದು ಕುಟುಂಬದವರು ಸೇರಿದಂತೆ ಗ್ರಾಮಸ್ಥರು ಆರೋಪಿಸಿದ್ದರು. ಘಟನೆ ಬಗ್ಗೆ ಭಾರಿ ಆಕ್ರೋಶ ವ್ಯಕ್ತವಾಗಿತ್ತು. ಜಾತಿ ದೌರ್ಜನ್ಯದಿಂದ ಮೃತಪಟ್ಟಾಗ ₹8.25ಲಕ್ಷ ಪರಿಹಾರ ನೀಡಲಾಗುತ್ತದೆ. ಅದರಂತೆ ಕೊಲೆ ಆರೋಪದಡಿ ಎಫ್‌ಐಆರ್ ದಾಖಲಾಗಿದ್ದರಿಂದ ಅರ್ಧ ಪರಿಹಾರ ನೀಡಲಾಗಿತ್ತು. ಪರಿಹಾರ ಹಿಂಪಡೆಯಲು ತೀರ್ಮಾನಿಸಿದ್ದು, ಪೊಲೀಸರ ವರದಿಗಾಗಿ ಕಾಯಲಾಗುತ್ತಿದೆ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಎರಡು ದಶಕ ಕಳೆದರೂ ಶಿಕ್ಷಕರಿಗಿಂತಲೂ ಉಪನ್ಯಾಸಕರಿಗೆ ಸಿಗುತ್ತಿದೆ ಕಡಿಮೆ ಸಂಬಳ

ಇನ್ನೂ ನೀಗದ ವೇತನ ತಾರತಮ್ಯ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪದವಿಪೂರ್ವ ಕಾಲೇಜಿಗೆ ಬಡ್ತಿ ಪಡೆದ ಉಪನ್ಯಾಸಕರು, ಬಡ್ತಿ ಪಡೆಯದ ತಮ್ಮ ಸಮಕಾಲೀನ ಸಹ ಶಿಕ್ಷಕರಿಗಿಂತ ಕಡಿಮೆ ವೇತನ ಪಡೆಯುತ್ತಿದ್ದು, ಎರಡು ದಶಕವಾದರೂ ತಾರತಮ್ಯ ನಿವಾರಣೆ ಆಗಿಲ್ಲ.

ಸರ್ಕಾರಿ ಪ್ರೌಢಶಾಲೆಗಳಿಗೆ 1992, 1994 ಹಾಗೂ 1997ರಲ್ಲಿ ನೇಮಕವಾಗಿದ್ದ ಸಹ ಶಿಕ್ಷಕರಿಗೆ ಅವರು ಪಡೆದ ಸ್ನಾತಕೋತ್ತರ ಪದವಿ ಆಧಾರದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಬಡ್ತಿ ನೀಡಲಾಗಿತ್ತು. ಪಿಯು ಕಾಲೇಜುಗಳಲ್ಲಿ 34 ವಿಷಯಗಳ ಉಪನ್ಯಾಸಕ ಹುದ್ದೆಗಳಿದ್ದು, ಪ್ರೌಢಶಾಲಾ ಶಿಕ್ಷಕರು ಯಾವ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರೋ, ಆ ವಿಷಯಗಳ ಉಪನ್ಯಾಸಕರಾಗಿ ಬಡ್ತಿ ಪಡೆದಿದ್ದರು.

ಹೆಚ್ಚಿನ ಸಂಖ್ಯೆಯ ಶಿಕ್ಷಕರು 2005–06ನೇ ಸಾಲಿನಲ್ಲಿ ಉಪನ್ಯಾಸಕರಾಗಿ ಬಡ್ತಿ ಪಡೆದಿದ್ದು, ಬಡ್ತಿ ನೀಡುವಾಗ ₹300 ವೇತನ ಹೆಚ್ಚಳ ಮಾಡಲಾಗಿತ್ತು. ಅಲ್ಲಿಂದ ಇಲ್ಲಿಯವರೆಗೂ ಅವರಿಗೆ ಕಾಲಮಿತಿ ಬಡ್ತಿಯ ಸೌಲಭ್ಯ ಸಿಕ್ಕಿಲ್ಲ. ಅವರ ಜತೆಗೇ ಪ್ರೌಢಶಾಲಾ ಸಹ ಶಿಕ್ಷಕರಾಗಿ ನೇಮಕವಾಗಿ, ನಂತರ ಮುಖ್ಯ ಶಿಕ್ಷಕರಾಗಿ ಬಡ್ತಿ ಹೊಂದಿದವರ ಮೂಲ ವೇತನ ಇವರಿಗಿಂತ ₹10 ಸಾವಿರಕ್ಕೂ ಹೆಚ್ಚು ಇದೆ.

ವೇತನ ಆಯೋಗ ಶಿಫಾರಸು ಕಡೆಗಣನೆ

ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ನೇಮಿಸಿದ್ದ ಆರನೇ ವೇತನ ಆಯೋಗ ಬಡ್ತಿ ಉಪನ್ಯಾಸಕರ ವೇತನ ತಾರತಮ್ಯ ಸೇರಿದಂತೆ ಕೆಲವು ಇಲಾಖೆಗಳಲ್ಲಿ ಇಂತಹದ್ದೇ ವೇತನ ತಾರತಮ್ಯ ನಿವಾರಣೆಗೆ ಶಿಫಾರಸು ಮಾಡಿತ್ತು.

ಆಯೋಗವು ತನ್ನ 2ನೇ ಸಂಪುಟ ವರದಿಯಲ್ಲಿ ಬಡ್ತಿ ಉಪನ್ಯಾಸಕರ ಕಾಲಮಿತಿ ಬಡ್ತಿಯನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಇತ್ಯರ್ಥಕ್ಕೆ ಸೂಚಿಸಿತ್ತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಬಕಾರಿ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ, ಅರಣ್ಯ, ಪೊಲೀಸ್, ಕಾರ್ಮಿಕ, ಕಾನೂನುಮಾಪನ ಶಾಸ್ತ್ರ, ಸಮಾಜ ಕಲ್ಯಾಣ, ಮುದ್ರಣ, ಬುಡಕಟ್ಟು ಕಲ್ಯಾಣ, ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆಯ ಕೆಲ ನೌಕರರ ವೇತನ ತಾರತಮ್ಯ ಸರಿಪಡಿಸಲು ವೇತನ ಶ್ರೇಣಿಯನ್ನು ಮೇಲ್ದರ್ಜೆಗೇರಿಸಿ, ಕನಿಷ್ಠ ₹3,000ದಿಂದ ಗರಿಷ್ಠ₹10,000ದವರೆಗೂ ಮೂಲ ವೇತನ ಹೆಚ್ಚಳ ಮಾಡಲಾಗಿತ್ತು. ಆದರೆ, ಬಡ್ತಿ ಉಪನ್ಯಾಸಕರ ವೇತನ ತಾರತಮ್ಯಕ್ಕೆ ಆಗಲೂ ಪರಿಹಾರ ಸಿಗಲಿಲ್ಲ.

2029ಕ್ಕೆ ಎಲ್ಲರೂ ನಿವೃತ್ತಿ

ಬಡ್ತಿ ಪಡೆದ ಶೇ 75ರಷ್ಟು ಉಪನ್ಯಾಸಕರು ವೇತನ ತಾರತಮ್ಯದ ವಿರುದ್ಧ ಹೋರಾಟ ಮಾಡುತ್ತಲೇ ನಿವೃತ್ತರಾಗಿದ್ದಾರೆ. 2029ರ ವೇಳೆಗೆ ಉಳಿದ ಎಲ್ಲರೂ ನಿವೃತ್ತರಾಗಲಿದ್ದಾರೆ.

'ಉನ್ನತ ಶಿಕ್ಷಣದ ಆಧಾರದಲ್ಲಿ ನಮ್ಮನ್ನು ಪಿಯು ಕಾಲೇಜುಗಳಿಗೆ ಕಳುಹಿಸಲಾಗಿತ್ತು. ಉಪನ್ಯಾಸಕರಾಗಿ ಹೋದವರಿಗೆ ಪ್ರಾಂಶುಪಾಲರಾಗುವ ಅವಕಾಶವೇ ಸಿಕ್ಕಿಲ್ಲ. ಪ್ರೌಢಶಾಲೆಗಳಲ್ಲೇ ಉಳಿದವರು ಮುಖ್ಯಶಿಕ್ಷಕರು, ಬಿಇಒಗಳಾಗಿದ್ದಾರೆ. ಈಗಾಗಲೇ ಶೇ 75ರಷ್ಟು ಉಪನ್ಯಾಸಕರು ನಿವೃತ್ತರಾಗಿದ್ದಾರೆ. ಈಗ ಕಾಲಮಿತಿ ಬಡ್ತಿ ನೀಡಿದರೆ ಹೆಚ್ಚಿನ ಆರ್ಥಿಕ ಹೊರೆ ಆಗದು' ಎನ್ನುತ್ತಾರೆ ಬಡ್ತಿ ಉಪನ್ಯಾಸಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಮೇಶ್ ಡಿ.ಆರ್.

ಕರ್ನಾಟಕ ರಾಜ್ಯ ಸರ್ಕಾರಿ ಪದವಿಪೂರ್ವ ಕಾಲೇಜು ಬಡ್ತಿ ಉಪನ್ಯಾಸಕರ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ವೇತನ ತಾರತಮ್ಯ ನಿವಾರಣೆಗೆ ಆಗ್ರಹಿಸಿ ಉಪನ್ಯಾಸಕರು ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ. ಮುಖ್ಯಮಂತ್ರಿ, ಸಚಿವರು, ಶಾಸಕರು, ಶಿಕ್ಷಕರು ಹಾಗೂ ಪದವೀಧರರ ಕ್ಷೇತ್ರಗಳನ್ನು ಪ್ರತಿನಿಧಿಸುವ ವಿಧಾನಪರಿಷತ್ ಸದಸ್ಯರಿಗೆ ನಿರಂತರ ಮನವಿ ಸಲ್ಲಿಸುತ್ತಾ ಬಂದಿದ್ದಾರೆ.

ಮುಖ್ಯಮಂತ್ರಿ ಸೂಚನೆಗೂ ಇಲ್ಲ ಮನ್ನಣೆ: ಬಡ್ತಿ ಉಪನ್ಯಾಸಕರ ನಿರಂತರ ಹೋರಾಟ, ವಿಧಾನಮಂಡಲದಲ್ಲಿ ಚರ್ಚೆಯಾದ ನಂತರ 2017ರಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ, ಶಿಕ್ಷಣ ಸಚಿವ ತನ್ವೀರ್ ಸೇಠ್, ಅಧಿಕಾರಿಗಳ ಸಭೆ ನಡೆಸಿ, ವೇತನ ತಾರತಮ್ಯ ನಿವಾರಣೆಗೆ ಸೂಚನೆ ನೀಡಿದ್ದರು.

'ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಾಗಿದ್ದ ಪಿ.ಸಿ. ಜಾಫರ್ ಅವರು ಸಹ ಶಿಕ್ಷಕರು ಹಾಗೂ ಬಡ್ತಿ ಉಪನ್ಯಾಸಕರ ವೇತನ ತಾರತಮ್ಯದ ಅಂತರ, ವೇತನ ತಾರತಮ್ಯ ನಿವಾರಣೆಗೆ ಅಗತ್ಯ ಅನುದಾನ ಕುರಿತು ವರದಿ ನೀಡಿದ್ದರು. ವರದಿ ಪ್ರಕಾರ ಆಗ ತಿಂಗಳಿಗೆ ₹46.99 ಲಕ್ಷ ಹೆಚ್ಚುವರಿ ಅನುದಾನದ ಅಗತ್ಯವಿತ್ತು. ವೇತನ ಶ್ರೇಣಿಯನ್ನು ಮೇಲ್ದರ್ಜೆಗೇರಿಸುವ ಕುರಿತು ನಡಾವಳಿಯನ್ನೂ ಸಿದ್ಧಪಡಿಸಲಾಗಿತ್ತು. ಆದರೆ, ಪ್ರಸ್ತಾವವನ್ನು ಆರ್ಥಿಕ ಇಲಾಖೆ ತಿರಸ್ಕರಿಸಿತ್ತು. ಇಂದಿಗೂ ಸಮಸ್ಯೆ ಬಗೆಹರಿದಿಲ್ಲ' ಎನ್ನುತ್ತಾರೆ ಸರ್ಕಾರಿ ಪದವಿಪೂರ್ವ ಕಾಲೇಜು ಬಡ್ತಿ ಉಪನ್ಯಾಸಕರ ಕ್ಷೇಮಾಭಿವೃದ್ಧಿ ಸಂಘದ ಹಾಸನ ಜಿಲ್ಲಾ ಘಟಕದ ಅಧ್ಯಕ್ಷ ಎ.ಎನ್. ಲಕ್ಷ್ಮಣಗೌಡ, ದಾವಣಗೆರೆ ಘಟಕದ ಅಧ್ಯಕ್ಷ ತಿಪ್ಪೇಸ್ವಾಮಿ ಕಾತ್ರಿಕೆಹಟ್ಟಿ.

'ಹಣಕಾಸು ಇಲಾಖೆಯ ನಿಯಮ 12ರ ಪ್ರಕಾರ ಒಂದೂ ಬಡ್ತಿ ಪಡೆಯದೆ ಒಂದೇ ಹುದ್ದೆಯಲ್ಲಿ ನಿರಂತರ ಕೆಲಸ ಮಾಡಿದವರಿಗೆ ಮಾತ್ರ 20, 25 ಹಾಗೂ 30 ವರ್ಷಗಳ ಕಾಲಮಿತಿ ವೇತನ ಬಡ್ತಿ ನೀಡಲು ಅವಕಾಶವಿದೆ. ಬಡ್ತಿ ಪಡೆಯದ ಶಿಕ್ಷಕರು ಈ ಸೌಲಭ್ಯ ಪಡೆದಿದ್ದು, ಮೂರು ವೇತನ ಬಡ್ತಿಯಲ್ಲಿ ಹೆಚ್ಚಳವಾಗಿದೆ. ಉಪನ್ಯಾಸಕ ಹುದ್ದೆಗೆ ಬಡ್ತಿ ನೀಡಿದಾಗಲೇ ಮೂಲ ವೇತನ ಹೆಚ್ಚಳವಾಗಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ' ಎನ್ನುವುದು ಹಣಕಾಸು ಇಲಾಖೆಯ ವಿವರಣೆ.

> ಪ್ರೌಢ-ಪದವಿಪೂರ್ವ ಶಿಕ್ಷಣ ಒಂದೇ ಇಲಾಖೆ. ಕರ್ನಾಟಕ ನಾಗರಿಕ ಸೇವೆಗಳು, ಆರ್ಥಿಕ ಇಲಾಖೆಯ ನಿಯಮಗಳ ಅನ್ವಯ ಆದೇಶ ಮಾರ್ಪಾಡು ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ
>
> **ರಮೇಶ್ ಡಿ.ಆರ್,** ಅಧ್ಯಕ್ಷ, ಸರ್ಕಾರಿ ಪದವಿಪೂರ್ವ ಕಾಲೇಜು ಬಡ್ತಿ ಉಪನ್ಯಾಸಕರ ಕ್ಷೇಮಾಭಿವೃದ್ಧಿ ಸಂಘ

3,840 ಬಡ್ತಿ ಪಡೆದ ಉಪನ್ಯಾಸಕರು

2,860 ನಿವೃತ್ತರಾದವರು

980 ಪ್ರಸ್ತುತ ಇರುವ ಬಡ್ತಿ ಉಪನ್ಯಾಸಕರು

ಸುದ್ದಿ 2 ನಿಮಿಷ

'ಅತ್ಯಾಚಾರ ಆರೋಪಿಗಳ 'ರೋಡ್ ಶೋ' ಆಘಾತಕಾರಿ'

ಬೆಂಗಳೂರು: ಹಾವೇರಿ ಜಿಲ್ಲೆ ಹಾನಗಲ್‌ನಲ್ಲಿ ಸಾಮೂಹಿಕ ಅತ್ಯಾಚಾರದ ಆರೋಪ ಹೊತ್ತ ದುರುಳರು ನ್ಯಾಯಾಲಯದಿಂದ ಜಾಮೀನಿನ ಮೇಲೆ ಬಿಡುಗಡೆಯಾದ ಕಾರಣಕ್ಕೆ 'ರೋಡ್ ಶೋ' ನಡೆಸಿ ಸಂಭ್ರಮಿಸಿರುವುದು ಆಘಾತಕಾರಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಅಪರಾಧ ಎಸಗುವುದು ವಿಜಯದ ಸಂಕೇತ ಎಂಬಂತೆ ವರ್ತಿಸಿರುವ ರಕ್ಕಸೀ ಮನಃಸ್ಥಿತಿಯ ಈ ದುಷ್ಟರ ಅತಿರೇಕದ ವರ್ತನೆಯನ್ನು ಹತ್ತಿಕ್ಕುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಸರ್ಕಾರದ ವ್ಯವಸ್ಥೆಯಲ್ಲಿ ಮಾನವಂತ ಹೆಣ್ಣು ಮಕ್ಕಳಿಗೆ, ಸಭ್ಯ ನಾಗರಿಕರಿಗೆ ರಕ್ಷಣೆ ಎನ್ನುವುದು ಮರೀಚಿಕೆಯಾಗಿದೆ' ಎಂದು ಅವರು 'ಎಕ್ಸ್' ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ರಾಜ್ಯದ ಕಾನೂನು ಸುವ್ಯವಸ್ಥೆಯ ಸ್ಥಿತಿಯನ್ನು ಗಮನಿಸಿದರೆ ಈ ರಾಜ್ಯದಲ್ಲಿ ಸಭ್ಯ ನಾಗರಿಕ ಸಮಾಜ ಮರೆಯಾಗುತ್ತಿರುವ ಆತಂಕ ಉಂಟಾಗುತ್ತಿದೆ. ಸುಸಂಸ್ಕೃತ ನಾಗರಿಕ ಸಮಾಜ ಭಯದಲ್ಲಿ ಬದುಕುವ ದುಃಸ್ಥಿತಿಗೆ ರಾಜ್ಯದ ಆಡಳಿತ ವ್ಯವಸ್ಥೆ ಸಾಗಿರುವುದು ಆತಂಕಕಾರಿ ಬೆಳವಣಿಗೆ' ಎಂದು ಹೇಳಿದ್ದಾರೆ.

'ನಾರಾಯಣಸ್ವಾಮಿ ಕೊಲೆಗೆ ಯತ್ನ'

ಬೆಳಗಾವಿ: 'ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರನ್ನು ಕಲಬುರಗಿಯಲ್ಲಿ 5 ಗಂಟೆ ದಿಗ್ಬಂಧನ ಹಾಕಿ, ಕಾಂಗ್ರೆಸ್‌ನ ಗೂಂಡಾಗಳಿಂದ ಕೊಲೆ ಮಾಡಿಸುವ ಹುನ್ನಾರ ನಡೆದಿದೆ. ಕಲಬುರಗಿ ಜಿಲ್ಲೆ ಖರ್ಗೆ ಕುಟುಂಬದ 'ರಿಪಬ್ಲಿಕ್' ಆಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆರೋಪಿಸಿದರು.

'ಖರ್ಗೆ ಕುಟುಂಬದಿಂದ ಸೇಡಿನ ರಾಜಕಾರಣ ನಡೆದಿದೆ. ಖರ್ಗೆ ಕುಟುಂಬದ ಅಕ್ರಮವನ್ನು ಛಲವಾದಿ ನಾರಾಯಣಸ್ವಾಮಿ ಬಯಲಿಗೆ ಎಳೆದಿದ್ದರು. ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಅಕ್ರಮವಾಗಿ ಪಡೆದಿದ್ದ 5 ಎಕರೆ ಜಮೀನನ್ನು ಕೆಐಎಡಿಬಿಗೆ ವಾಪಸ್ ಕೊಡುವಂತೆ ಮಾಡಿದ್ದರು. ಅದಕ್ಕೆ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಮಾಡಿದ್ದಾರೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ವಿರೋಧ ಪಕ್ಷ ನಾಯಕನ ಹುದ್ದೆಯು ಮುಖ್ಯಮಂತ್ರಿಯ ನೆರಳು ಇದ್ದಂತೆ. ಅವರಿಗೆ ರಕ್ಷಣೆ ನೀಡುವಲ್ಲಿ ಸರ್ಕಾರ ವಿಫಲ ಆಗಿದೆ. ಕಲಬುರಗಿ ಪೊಲೀಸರು ಸಚಿವ ಪ್ರಿಯಾಂಕ್ ಏಜೆಂಟರಂತೆ ಕೆಲಸ ಮಾಡುತ್ತಿದ್ದಾರೆ. ಬೆರಳೆಣಿಕೆಯಷ್ಟು ಇದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ನಿಯಂತ್ರಣ ಮಾಡಿಲ್ಲ' ಎಂದು ಅವರು ಆರೋಪಿಸಿದರು.

ಮೈಸೂರ್ ಸ್ಯಾಂಡಲ್ ರಾಯಭಾರಿ: ಡಾ. ಶರಣಪ್ರಕಾಶ ಪಾಟೀಲ ಸ್ಪಷ್ಟನೆ

'ಬ್ರ್ಯಾಂಡ್ ವಿಸ್ತರಣೆಗೆ ತಮನ್ನಾ ಆಯ್ಕೆ'

ಪ್ರಜಾವಾಣಿ ವಾರ್ತೆ



ಶರಣಪ್ರಕಾಶ ಪಾಟೀಲ

ಗದಗ: 'ಇಡೀ ದೇಶದಲ್ಲಿ ಮೈಸೂರ್ ಸ್ಯಾಂಡಲ್ ಬ್ರ್ಯಾಂಡ್ ಪ್ರಚಾರ ಪಡಿಸಲು ಪ್ಯಾನ್ ಇಂಡಿಯಾ ನಟಿ ತಮನ್ನಾ ಭಾಟಿಯಾ ಅವರನ್ನು ರಾಯಭಾರಿಯನ್ನಾಗಿ ಆಯ್ಕೆ ಮಾಡಲಾಗಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಹೇಳಿದರು.

'ಸ್ಯಾಂಡಲ್‌ವುಡ್‌ನ ನಟ, ನಟಿಯರೇ ಈ ಉತ್ಪನ್ನದ ರಾಯಭಾರಿ ಆಗಬೇಕು ಎಂಬ ಇಚ್ಛೆ ರಾಜ್ಯದ ಜನರದ್ದು. ಆದರೆ, ರಾಯಭಾರಿಯಾಗಿ ಯಾರನ್ನೇ ಆಯ್ಕೆ ಮಾಡಿದರೂ ಎಲ್ಲರನ್ನೂ ತೃಪ್ತಿಪಡಿಸುವುದು ಕಷ್ಟ. ಜನಪ್ರಿಯ ಸಿನಿಮಾ ನಟಿಯನ್ನು ರಾಯಭಾರಿಯನ್ನಾಗಿಸಿದರೆ, ಬ್ರ್ಯಾಂಡ್‌ನ ಜನಪ್ರಿಯತೆ ಹೆಚ್ಚಿಸಬಹುದು ಎಂಬ ಅಧಿಕಾರಿಗಳ ಸಲಹೆ ಮೇರೆಗೆ ಈ ನಿರ್ಧಾರ ತೆಗೆದುಕೊಂಡಿರಬಹುದು' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಜಿ.ಪರಮೇಶ್ವರ ಅವರಿಗೆ ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳ ಮೇಲೆ ನಡೆದಿರುವ ಇ.ಡಿ ದಾಳಿಯ ಹಿಂದೆ ಕಾಂಗ್ರೆಸ್‌ನ ಒಂದು ಗುಂಪು ಕೆಲಸ ಮಾಡಿದೆ' ಎಂಬ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮಾತಿಗೆ ತಿರುಗೇಟು ನೀಡಿದ ಅವರು, 'ಯಾರಾದರೂ ದೂರು ನೀಡಿದರೆ, ಅದು ಜೋಶಿ ಅವರಿಗೆ ಹೋಗಿ ತಲುಪುವುದೇ? ಇ.ಡಿ. ದಾಳಿ ಜೋಶಿ ಮಾರ್ಗದರ್ಶನದಲ್ಲಿ ನಡೆಯುತ್ತದೆಯೇ' ಎಂದು ಪ್ರಶ್ನಿಸಿದರು.

'ಜನಔಷಧ ಕೇಂದ್ರಗಳನ್ನು ತೆರವು ಮಾಡುವುದರ ಹಿಂದೆ ರಾಜಕೀಯ ದುರುದ್ದೇಶವಿಲ್ಲ. ಸರ್ಕಾರವೇ ಉಚಿತವಾಗಿ ಔಷಧಿಗಳನ್ನು ನೀಡುತ್ತಿರುವ ಸಂದರ್ಭದಲ್ಲಿ ಆಸ್ಪತ್ರೆಯೊಳಗೆ ಮಾರಾಟ ಮಳಿಗೆ ಇರಬೇಕಾದ ಅವಶ್ಯಕತೆ ಇಲ್ಲ' ಎಂದರು.

ಕನ್ನಡತನದ ಗಂಧ ಗೊತ್ತಿಲ್ಲದ ನಟಿಗೆ ರಾಯಭಾರಿ ಮಾಡಿದ್ದೇಕೆ?

ಮೈಸೂರು: 'ಮೈಸೂರು ಸಂಸ್ಥಾನದ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ಸಂಸ್ಥೆಗಳಲ್ಲಿ ಒಂದಾದ ಮೈಸೂರು ಸಾಬೂನು ಮತ್ತು ಮಾರ್ಜಕಗಳ ನಿಗಮದ (ಕೆಎಸ್‌ಡಿಎಲ್) ಉತ್ಪನ್ನಗಳ ಪ್ರಚಾರಕ್ಕೆ ಪರಭಾಷಾ ನಟಿ ತಮನ್ನಾ ಭಾಟಿಯಾ ಅವರನ್ನು ರಾಯಭಾರಿಯನ್ನಾಗಿ ನೇಮಿಸಿರುವುದು ಅತ್ಯಂತ ಅಸಂಬದ್ಧ ಹಾಗೂ ಬೇಜವಾಬ್ದಾರಿಯುತ ನಿರ್ಧಾರ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಪಾದಿಸಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, 'ಇದು ಕಾಂಗ್ರೆಸ್ ಸರ್ಕಾರದ ಅವಿವೇಕದ ತೀರ್ಮಾನ' ಎಂದು ದೂರಿದ್ದಾರೆ.

'ತಮನ್ನಾ ಕರ್ನಾಟಕದ ಸಂಸ್ಕೃತಿ, ಇತಿಹಾಸದೊಂದಿಗೆ ನಂಟು ಹೊಂದಿಲ್ಲ. ಕನ್ನಡತನದ ಗಂಧ– ಗಾಳಿ ಗೊತ್ತಿಲ್ಲದ ಈ ನಟಿಯನ್ನು ನಮ್ಮ ಶ್ರೀಗಂಧದ ಸಾಬೂನಿನ ಸಂಸ್ಥೆಗೆ ರಾಯಭಾರಿ ಮಾಡುವ ಅಗತ್ಯವೇನಿತ್ತು? ಸರ್ಕಾರ ಈ ನೇಮಕವನ್ನು ತಕ್ಷಣವೇ ರದ್ದುಗೊಳಿಸಬೇಕು. ಕನ್ನಡಿಗರ ಹಣ ಉಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ರಾಯಭಾರಿ ಮಾಡಲೇಬೇಕೆಂದಿದ್ದರೆ ಕನ್ನಡದ ಜನಪ್ರಿಯ ಹಾಗೂ ಪ್ರತಿಭಾವಂತ ನಟಿಯರನ್ನು ನೇಮಿಸಿಕೊಳ್ಳಬೇಕಾಗಿತ್ತು. ತಮನ್ನಾ ಅವರಿಗೆ ಮಣೆ ಹಾಕುವ ಮೂಲಕ ಸರ್ಕಾರ ಕನ್ನಡಿಗರ ಭಾವನೆಗಳಿಗೆ ಧಕ್ಕೆ ತಂದಿದೆ' ಎಂದು ಆರೋಪಿಸಿದ್ದಾರೆ.

'ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಜನರಿಗೆ ಅವುಗಳನ್ನು ನೀಡದೇ ಮಾತು ತಪ್ಪಿರುವ ಕಾಂಗ್ರೆಸ್ ಸರ್ಕಾರ, ಈಗ ಪರಭಾಷೆ ನಟಿಗೆ ಮಣೆ ಹಾಕುವುದನ್ನು ನಿಲ್ಲಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬೆಂಗಳೂರು ದಕ್ಷಿಣ ಅಧಿಕೃತ ಘೋಷಣೆ

ಬೆಂಗಳೂರು: 'ರಾಮನಗರ ಜಿಲ್ಲೆ'ಯನ್ನು 'ಬೆಂಗಳೂರು ದಕ್ಷಿಣ ಜಿಲ್ಲೆ' ಎಂದು ಮರುನಾಮಕರಣ ಮಾಡಿ ಕಂದಾಯ ಇಲಾಖೆ ಶುಕ್ರವಾರ ಅಧಿಸೂಚನೆ ಹೊರಡಿಸಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆ ಮರುನಾಮಕರಣ ಮಾಡಲು ಸಮ್ಮತಿ ನೀಡಿತ್ತು.

ತಿರಂಗಾ ಯಾತ್ರೆ

'ಆಪರೇಷನ್ ಸಿಂಧೂರ' ಯಶಸ್ಸಿಗೆ ಕಾರಣರಾದ ಯೋಧರಿಗೆ ಗೌರವ ಸಮರ್ಪಿಸಲು ಮಡಿಕೇರಿಯಲ್ಲಿ ಸಿಂಧೂರ ವಿಜಯೋತ್ಸವ ಸಮಿತಿಯು ಏರ್ಪಡಿಸಿದ್ದ 'ತಿರಂಗಾ ಯಾತ್ರೆ'ಯಲ್ಲಿ ಸುಮಾರು 300 ಅಡಿ ಉದ್ದದ ರಾಷ್ಟ್ರಧ್ವಜ ಹಿಡಿದು ಸಾರ್ವಜನಿಕರು ಶುಕ್ರವಾರ ಮೆರವಣಿಗೆ ನಡೆಸಿದರು ಚಿತ್ರ: ರಂಗಸ್ವಾಮಿ

'ಕೇಂದ್ರ ಅಧಿಸೂಚನೆ ಹೊರಡಿಸಲಿ'

ಪ್ರಜಾವಾಣಿ ವಾರ್ತೆ



ಶಿವಕುಮಾರ್

ವಿಜಯಪುರ: 'ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಲು ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದೇವೆ. ಇದಕ್ಕೆ ಅಗತ್ಯ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಲು ತೀರ್ಮಾನಿಸಿದ್ದೇವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಜಯಪುರ ಜಿಲ್ಲೆಯ ಕೊಲ್ಹಾರ ದಲ್ಲಿ ಶುಕ್ರವಾರ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಮಾತನಾಡಿದ ಅವರು, 'ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 524 ಮೀಟರ್‌ಗೆ ಎತ್ತರಿಸಲು ನಮ್ಮ ಸರ್ಕಾರ ಸಂಕಲ್ಪಿಸಿದೆ. ಈ ವಿಷಯದಲ್ಲಿ ಶಾಸಕರ ಜೊತೆ ಚರ್ಚಿಸಿದ್ದು, ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಲು ತೀರ್ಮಾನಿಸಿದ್ದೇವೆ. ಈಚೆಗೆ ನಾನು ಹಾಗೂ ಮುಖ್ಯಮಂತ್ರಿ ಕೇಂದ್ರದ ಸಚಿವರನ್ನು ಭೇಟಿಯಾಗಿ, ಅಧಿಸೂಚನೆ ಹೊರಡಿಸಲು ಒತ್ತಡ ಹಾಕಿದ್ದೇವೆ. ಇದಕ್ಕಾಗಿ ಕೇಂದ್ರ ಸಚಿವರು ಸಭೆ ಕರೆದಿದ್ದರು. ಆದರೆ, ಅದು ಮುಂದೂಡಲ್ಪಟ್ಟಿದೆ' ಎಂದರು.

'ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸುವುದು ಈ ಸರ್ಕಾರದ ಸಂಕಲ್ಪ. ಇದನ್ನು ರಾಷ್ಟ್ರೀಯ ಯೋಜನೆ ಮಾಡಬೇಕು ಎಂದು ನಮ್ಮ ಸರ್ಕಾರ ಕೇಂದ್ರಕ್ಕೆ ಒತ್ತಡ ಹಾಕುತ್ತಿದೆ' ಎಂದು ಹೇಳಿದರು

'ಅಧಿಸೂಚನೆ ಹೊರಡಿಸಲಾಗದು'

ಗೋವಿಂದ ಕಾರಜೋಳ

ವಿಜಯಪುರ: 'ಕೃಷ್ಣಾ ನದಿ ನೀರು ಹಂಚಿಕೆ ವಿವಾದದ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇದೆ. ಅಂತಿಮ ತೀರ್ಪು ಬಾರದೇ, ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಲು ಆಗದು' ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

'ರಾಜ್ಯ ಸರ್ಕಾರಕ್ಕೆ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲ. ಅಧಿಕಾರಕ್ಕೆ ಬಂದು ಎರಡು ವರ್ಷವಾದರೂ ವಿವಾದ ಬಗೆಹರಿಸಿಕೊಳ್ಳಲು ಯಾವುದೇ ಪ್ರಯತ್ನ ನಡೆಸಿಲ್ಲ. ಕುಂಟು ನೆಪ ಹೇಳುವುದನ್ನು ರಾಜ್ಯ ಸರ್ಕಾರ ಬಿಡಬೇಕು' ಎಂದರು.

'ಆಲಮಟ್ಟಿ ಜಲಾಶಯದ ಎತ್ತರವನ್ನು ಹಂತ, ಹಂತವಾಗಿ ಏರಿಸುವುದು ಸರಿಯಲ್ಲ. ಸುಪ್ರೀಂ ಕೋರ್ಟ್ ತೀರ್ಪು ಬಂದ ತಕ್ಷಣವೇ ಒಮ್ಮೆಲೇ 524 ಮೀಟರ್‌ಗೆ ಎತ್ತರಿಸಬೇಕು. ಇದರಿಂದ ರಾಜ್ಯಕ್ಕೆ 130 ಟಿಎಂಸಿ ಅಡಿ ನೀರು ಮತ್ತು, 15 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಲಭಿಸಲಿದೆ' ಎಂದರು.

'ಕೃಷ್ಣಾ ನದಿ ನೀರು ಹಂಚಿಕೆ ಸಂಬಂಧಿಸಿದಂತೆ ಅಂತರರಾಜ್ಯಗಳ ನಡುವೆ ವಿವಾದ ಇರುವ ಕಾರಣ ಕೇಂದ್ರ ಸರ್ಕಾರವು ಕೃಷ್ಣ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಬಾರದು. ವಿವಾದ ಇತ್ಯರ್ಥದ ಬಳಿಕ ಕೇಂದ್ರದಿಂದ ಯೋಜನೆಗೆ ಹಣಕಾಸು ನೆರವು ಕೇಳಬಹುದು' ಎಂದರು.

ಡಿಸಿಎಂ ಡಿಕೆಶಿ ₹25 ಲಕ್ಷ ದೇಣಿಗೆ

ಒಂದನೇ ಪುಟದಿಂದ...

ಇವರೆಲ್ಲ, ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ಗೆ ಸೇರಿದ ₹2,000 ಕೋಟಿ ಬೆಲೆಬಾಳುವ ಆಸ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಲ್ಲಿ ಹಣದ ಅಕ್ರಮ ವರ್ಗಾವಣೆ ನಡೆಸಿರುವುದನ್ನು ದೂರಿನಲ್ಲಿ ಹೇಳಲಾಗಿದೆ ಎಂದು ಇ.ಡಿ ಉಲ್ಲೇಖಿಸಿತ್ತು. ನ್ಯಾಷನಲ್ ಹೆರಾಲ್ಡ್ ಮಾಧ್ಯಮ ಸಂಸ್ಥೆಯ (ಪತ್ರಿಕೆ ಮತ್ತು ವೆಬ್ ತಾಣ) ಪ್ರಕಾಶನ ಸಂಸ್ಥೆ ಎಜೆಎಲ್. ಇದರ ಮಾಲೀಕತ್ವವನ್ನು ಯಂಗ್ ಇಂಡಿಯನ್ ಪ್ರೈ.ಲಿ. ಹೊಂದಿದೆ. ಯಂಗ್ ಇಂಡಿಯನ್ ಕಂಪನಿಯಲ್ಲಿ ತಲಾ ಶೇಕಡ 38ರಷ್ಟು ಷೇರುಗಳನ್ನು ಸೋನಿಯಾ ಮತ್ತು ರಾಹುಲ್ ಹೊಂದಿದ್ದಾರೆ.

ಇ.ಡಿ ಈ ಪ್ರಕರಣದಲ್ಲಿ ಸೋನಿಯಾ, ರಾಹುಲ್ ಅವರನ್ನು 2 ವರ್ಷಗಳ ಹಿಂದೆ ಸುದೀರ್ಘ ವಿಚಾರಣೆಗೆ ಗುರಿಪಡಿಸಿತ್ತು..

'ಜೈವಿಕ ಇಂಧನ ನೀತಿ ಶೀಘ್ರ ಅನುಷ್ಠಾನ'

ಬೆಂಗಳೂರು: 'ನೂತನ ಜೈವಿಕ ಇಂಧನ ನೀತಿ'ಯನ್ನು ಶೀಘ್ರವೇ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುವುದು' ಎಂದು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ ಸುಧೀಂದ್ರ ತಿಳಿಸಿದರು.

ಮಂಡಳಿಯ 42ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಉದ್ದೇಶಿತ ಜೈವಿಕ ಇಂಧನ ನೀತಿ ಕುರಿತು ಚರ್ಚೆ ನಡೆಸಿದ ಅವರು, 'ಜೈವಿಕ ಇಂಧನ ನೀತಿ ಜಾರಿಗೊಳಿಸುವ ನಿಟ್ಟಿನಲ್ಲಿ ಕಾರ್ಯ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ' ಎಂದು ವಿವರಿಸಿದರು.

ಇದೇ ವೇಳೆ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಲಾಯಿತು.

ಕಾರ್ಯಕಾರಿ ಸಮಿತಿಯ ಸದಸ್ಯ ಕೃಷ್ಣನ್, 'ಜೈವಿಕ ಇಂಧನ ಕ್ಷೇತ್ರದಲ್ಲಿ ಬಯೋಬ್ರಿಕೆಟ್ಸ್, ಬಯೋಪಿಲೆಟ್ಸ್, ಕಂಪ್ರೆಸ್ಡ್ ಬಯೋಗ್ಯಾಸ್, ಬಯೋಮಾಸ್ ಆಧಾರಿತ ಗ್ರೀನ್ ಹೈಡ್ರೋಜನ್‌ಗಳು ಆಟೊಮೊಬೈಲ್ ಕಂಪನಿಗಳಲ್ಲಿನ ವಿದ್ಯುತ್ ಬೇಡಿಕೆಗಳನ್ನು ಸುಧಾರಿಸುವಲ್ಲಿ ನೆರವಾಗಲಿವೆ' ಎಂದು ತಿಳಿಸಿದರು.

ಮರುಮೌಲ್ಯಮಾಪನ: 625 ಅಂಕ

ಸಿರಿಗೌರಿ

ತನ್ಮಯ್

ಪುನೀತಾ

ಸಾನಿಧ್ಯ ರಾವ್

ಭೂಮಿಕಾ

ನಿಧಿ ಪೈ

ಪೃಥ್ವೀಶ

ಹುಬ್ಬಳ್ಳಿ/ ಮಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರು ಮೌಲ್ಯಮಾಪನದಲ್ಲಿ ಉತ್ತರ ಕನ್ನಡ ಜಿಲ್ಲೆ ಕುಮಟಾದ ಗಿಬ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯ ಭೂಮಿಕಾ ಹೆಗಡೆ ಹಾಗೂ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಮಾಕನೂರ ಗ್ರಾಮದ ಮೊರಾರ್ಜಿ ವಸತಿ ಶಾಲೆ ವಿದ್ಯಾರ್ಥಿ ಪೃಥ್ವೀಶ ಗೋವಿಂದಪ್ಪ ಗೊಲ್ಲರಹಳ್ಳಿ 625ಕ್ಕೆ 625 ಅಂಕ ಗಳಿಸಿದ್ದಾರೆ.

ಭೂಮಿಕಾಗೆ ಈ ಮೊದಲು ಪ್ರಥಮ ಭಾಷೆ ಇಂಗ್ಲಿಷ್‌ಗೆ 125ಕ್ಕೆ 124 ಅಂಕಗಳು ಹೊರತುಪಡಿಸಿ ಉಳಿದ ವಿಷಯಗಳಿಗೆ ಪೂರ್ಣಾಂಕ ಬಂದಿತ್ತು. ಪೃಥ್ವೀಶಗೆ ವಿಜ್ಞಾನದಲ್ಲಿ 97 ಅಂಕಗಳು ಬಂದಿದ್ದು ಮರು ಮೌಲ್ಯಮಾಪನದಲ್ಲಿ 100 ಅಂಕಗಳು ಬಂದಿವೆ.

ಮೂಡುಬಿದಿರೆಯ ಎಕ್ಸಲೆಂಟ್ ಆಂಗ್ಲಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಸಾನಿಧ್ಯ ರಾವ್ ಹಾಗೂ ಉಡುಪಿ ಜಿಲ್ಲೆಯ ಕೋಟ ವಿವೇಕ ಆಂಗ್ಲಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ನಿಧಿ ಪೈ 625ಕ್ಕೆ 625 ಅಂಕ ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಸಾನಿಧ್ಯ ರಾವ್ ಈ ಮೊದಲು 625ರಲ್ಲಿ 624 ಅಂಕ ಪಡೆದಿದ್ದರು.

ಮೈಸೂರು/ಮಂಡ್ಯ ವರದಿ: ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿ ಎಂ.ಎನ್.ತನ್ಮಯ್ ಹಾಗೂ ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದ ಪೂರ್ಣ ಪ್ರಜ್ಞಾ ಶಾಲೆಯ ಪುನೀತಾ ಮರು ಮೌಲ್ಯಮಾಪನದಲ್ಲಿ 625 ಅಂಕ ಗಳಿಸಿದ್ದಾರೆ. ಮೊದಲಿಗೆ ಪ್ರಕಟವಾಗಿದ್ದ ಫಲಿತಾಂಶದಲ್ಲಿ ಪುನೀತಾಗೆ 624 ಹಾಗೂ ತನ್ಮಯ್‌ಗೆ 622 ಅಂಕಗಳಷ್ಟೇ ದೊರಕಿದ್ದವು.

ಸೊರಬ (ಶಿವಮೊಗ್ಗ ಜಿಲ್ಲೆ): ಪಟ್ಟಣದ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಎಸ್.ಡಿ. ಸಿರಿಗೌರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರು ಮೌಲ್ಯಮಾಪನದಲ್ಲಿ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾಳೆ.

ಮೊದಲು ಪ್ರಕಟವಾಗಿದ್ದ ಫಲಿತಾಂಶದಲ್ಲಿ 622 ಅಂಕ ಗಳಿಸಿದ್ದ ಈ ವಿದ್ಯಾರ್ಥಿನಿಗೆ ಮತ್ತೆ 3 ಅಂಕಗಳು ಲಭಿಸಿವೆ.

ಆದಿವಾಸಿಗಳಿಗೆ ಕಳಪೆ ಆಹಾರ ಪೂರೈಕೆ: ಗುತ್ತಿಗೆದಾರ ಸಂಸ್ಥೆಗೆ ನೋಟಿಸ್

ಜಿಲ್ಲಾ ಸಮಿತಿಯ ಅಧಿಕಾರ ಮೊಟಕು

• ಬಾಲಚಂದ್ರ ಎಚ್.

ಚಾಮರಾಜನಗರ: 'ಅರಣ್ಯದಲ್ಲಿ ವಾಸಿಸುವ ಬುಡಕಟ್ಟು ಸಮುದಾಯದವರಿಗೆ ಪೌಷ್ಟಿಕ ಆಹಾರ ಪೂರೈಸಲು ಜಿಲ್ಲಾ ಸಮಿತಿಗಳಿಗೆ ಇದ್ದ ಅಧಿಕಾರವನ್ನು ಮೊಟಕುಗೊಳಿಸಿ, ರಾಜ್ಯಮಟ್ಟದಲ್ಲಿ ಟೆಂಡರ್ ಕರೆಯುತ್ತಿರುವುದರಿಂದ ಉದ್ದೇಶ ಈಡೇರುತ್ತಿಲ್ಲ' ಎಂಬ ಆರೋಪ ಅಧಿಕಾರಿಗಳು ಹಾಗೂ ಆದಿವಾಸಿಗಳಿಂದ ಕೇಳಿ ಬಂದಿದೆ.

ಮಾರ್ಚ್‌ನಿಂದ ರಾಜ್ಯಮಟ್ಟದಲ್ಲಿ ಟೆಂಡರ್ ಕರೆಯಲಾಗುತ್ತಿದೆ. 'ಟೆಂಡರ್ ಪಡೆದ ಸಂಸ್ಥೆಯ ವಿರುದ್ಧ ಜಿಲ್ಲಾ ಮಟ್ಟದ ಸಮಿತಿಯು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ಬುಡಕಟ್ಟು ಸಮುದಾಯಗಳಿಗೆ ಆಹಾರ ಪದಾರ್ಥ ಪೂರೈಸಲು ಹಿಂದೆ ಜಿಲ್ಲಾ ಮಟ್ಟದ ಸಮಿತಿಯಿಂದ ಟೆಂಡರ್ ಕರೆಯಲಾಗುತ್ತಿತ್ತು. ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಮಿತಿಯು ಟೆಂಡರ್ ಪಡೆದ ಸಂಸ್ಥೆಯ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿತ್ತು. ಕಳಪೆ ಆಹಾರ ಪೂರೈಸಿದರೆ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸುವ ಹಾಗೂ ಬಿಲ್ ತಡೆಹಿಡಿಯುವ ಅಧಿಕಾರ ಸಮಿತಿಗೆ ಇತ್ತು. ಈಗ ಈ ವ್ಯವಸ್ಥೆ ಸಂಪೂರ್ಣ ಬದಲಾಗಿದೆ.

ನೋಟಿಸ್: ಕಳಪೆ ಆಹಾರ ಪದಾರ್ಥ ಪೂರೈಸಿದ ಆರೋಪದಲ್ಲಿ, ಕೋಲಾರ ಮೂಲದ ಆರ್.ಆರ್.ಎಂಟರ್‌ಪ್ರೈಸಸ್ ಸಂಸ್ಥೆಗೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಎಚ್.ಎಸ್.ಬಿಂದ್ಯಾ ಅವರು ಏಪ್ರಿಲ್‌ನಿಂದ ಇಲ್ಲಿಯವರೆಗೆ ಮೂರು ನೋಟಿಸ್‌ಗಳನ್ನು ನೀಡಿದ್ದಾರೆ. ಆದರೆ, ಸಂಸ್ಥೆಯ ವಿರುದ್ಧ ಕಠಿಣ ಕ್ರಮ ಆಗಿಲ್ಲ.

'ಬಳಸಲು ಯೋಗ್ಯವಲ್ಲದ ಅಡುಗೆ ಎಣ್ಣೆ ಹಾಗೂ ಕೆಟ್ಟಿರುವ ಮೊಟ್ಟೆ ಪೂರೈಸಲಾಗಿದೆ ಎಂದು ದೂರು ಬಂದ ಬಳಿಕ, ಗೋದಾಮಿಗೆ ತೆರಳಿ ಪರಿಶೀಲಿಸಲಾಯಿತು. ಪದಾರ್ಥಗಳು ಉತ್ತಮವಾಗಿಲ್ಲ ಎಂಬುದು ಕಂಡು ಬಂದಿದ್ದರಿಂದ ನೋಟಿಸ್ ನೀಡಿ ಮೇಲಧಿಕಾರಿಗಳಿಗೆ ಪ್ರತಿ ಸಲ್ಲಿಸಲಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಲಾಖೆ ಕಾರ್ಯದರ್ಶಿ ಹಾಗೂ ನಿರ್ದೇಶಕರ ಸೂಚನೆಯಂತೆ ಹಾಡಿಗಳಿಗೆ ಅಡುಗೆ ಎಣ್ಣೆ ಪೂರೈಕೆ ಸ್ಥಗಿತಗೊಳಿಸಲಾಗಿದೆ. ಎಣ್ಣೆಯ ಬಾಟಲ್‌ಗಳನ್ನು ಹಿಂಪಡೆದು, ಮುಂದಿನ ತಿಂಗಳು ಹೆಚ್ಚುವರಿ ನೀಡಲು ನಿರ್ಧರಿಸಲಾಗಿದೆ. ಸಕ್ಕರೆ ಬದಲು ಬೆಲ್ಲ ವಿತರಿಸುವಂತೆ ಟೆಂಡರ್‌ದಾರರಿಗೆ ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

8,159 ಕುಟುಂಬಗಳಿಗೆ ಪೌಷ್ಟಿಕ ಆಹಾರ: ಜಿಲ್ಲೆಯ ಯಳಂದೂರು, ಹನೂರು ಹಾಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ 8,159 ಕುಟುಂಬಗಳಿಗೆ ಪ್ರತಿ ತಿಂಗಳು ಪೌಷ್ಟಿಕ ಆಹಾರ ಪೂರೈಸಲಾಗುತ್ತಿದೆ. ಪ್ರತಿ ಕುಟುಂಬಕ್ಕೆ 8 ಕೆ.ಜಿ ರಾಗಿ, 3 ಕೆ.ಜಿ ತೊಗರಿಬೇಳೆ, ಕಡಲೆಕಾಳು, ಕಡಲೆಬೀಜ, ಅಲಸಂದೆ, ಹುರುಳಿಕಾಳು, ಹೆಸರುಕಾಳು, ಸಕ್ಕರೆ, ಬೆಲ್ಲ ತಲಾ ಒಂದು ಕೆ.ಜಿ ಹಾಗೂ, 30 ಮೊಟ್ಟೆ , 2 ಲೀಟರ್ ಸೂರ್ಯಕಾಂತಿ ಎಣ್ಣೆ, ಅರ್ಧ ಕೆ.ಜಿ ನಂದಿನಿ ತುಪ್ಪ ವಿತರಿಸಲಾಗುತ್ತಿದೆ.

ಮುಖ್ಯಾಂಶಗಳು

- ಆಹಾರ ಪೂರೈಕೆ ಟೆಂಡರ್ ನಿಯಮ ಬದಲು
- ಮಾರ್ಚ್‌ನಿಂದ ರಾಜ್ಯಮಟ್ಟದಲ್ಲೇ ಟೆಂಡರ್

'ಹೆಸರೇ ಇಲ್ಲದ ಅಡುಗೆ ಎಣ್ಣೆ'

ಬುಡಕಟ್ಟು ಸಮುದಾಯಗಳಿಗೆ ವಿತರಿಸಲಾಗಿರುವ ಅಡುಗೆ ಎಣ್ಣೆಯ ಬಾಟಲ್ ಮೇಲೆ ಉತ್ಪಾದಕ ಕಂಪನಿಯ ಹೆಸರೇ ಇಲ್ಲ. ಎಣ್ಣೆ ತಯಾರಿಸಲು ಆಹಾರ ಸುರಕ್ಷತಾ ಪ್ರಾಧಿಕಾರದಿಂದ ಅನುಮತಿ ಪಡೆಯಲಾಗಿದೆಯೇ, ಗುಣಮಟ್ಟ ಪರೀಕ್ಷೆ ನಡೆದಿದೆಯೇ ಎಂಬ ಮಾಹಿತಿಯೂ ಮಾಹಿತಿ ಇಲ್ಲ. ಈಗಾಗಲೇ ಸಿಕಲ್‌ಸೆಲ್ (ಕುಡುಗೋಲು ಕೋಶ) ರೋಗದಿಂದ ಬಳಲುತ್ತಿರುವ ಆದಿವಾಸಿಗಳಿಗೆ ಕಳಪೆ ಆಹಾರ ಪೂರೈಸಿದರೆ ಆರೋಗ್ಯ ಮತ್ತಷ್ಟು ಹದಗೆಡಲಿದ್ದು ಸರ್ಕಾರವೇ ನೇರ ಹೊಣೆ' ಎಂದು ದೂರುತ್ತಾರೆ ಆದಿವಾಸಿ ಮುಖಂಡರು.

> ಕಳಪೆ ಆಹಾರದಿಂದ ವಾಂತಿ ಭೇದಿ ಪ್ರಕರಣಗಳು ಹೆಚ್ಚಾಗಿವೆ. ಬೆಲ್ಲ ಬಳಸುವ ರೂಢಿ ಇದ್ದರೂ ಕಳಪೆ ಸಕ್ಕರೆ ವಿತರಿಸಲಾಗುತ್ತಿದೆ. ಗುತ್ತಿಗೆದಾರ ಸಂಸ್ಥೆ ವಿರುದ್ಧ ಇನ್ನೂ ಕ್ರಮ ಆಗಿಲ್ಲ
>
> **ಡಾ.ಸಿ.ಮಾದೇಗೌಡ.,** ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಕಾರ್ಯದರ್ಶಿ

ಮದುವೆಯಾಗುವುದನ್ನು ತಪ್ಪಿಸಿಕೊಳ್ಳಲು ವಿಷಯುಕ್ತ ಮಾತ್ರೆ ನೀಡಿದ್ದ ಅಪರಾಧಿ

ತರುಣಿ ಸಾವಿಗೆ ಕುಮ್ಮಕ್ಕು: 5 ವರ್ಷ ಸಜೆ ಕಾಯಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತರುಣಿಯನ್ನು ಗರ್ಭಿಣಿಯಾಗಿಸಿ ಆಕೆಯೊಂದಿಗೆ ಮದುವೆ ಮಾಡಿಕೊಳ್ಳುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ವಿಷಯುಕ್ತ ಮಾತ್ರೆಗಳನ್ನು ನೀಡಿ ಅವಳ ಸಾವಿಗೆ ಕಾರಣವಾದ ಅಪರಾಧಿಯೊಬ್ಬನ ಐದು ವರ್ಷಗಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ಕಾಯಂಗೊಳಿಸಿದೆ.

'ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ವಿಚಾರಣಾ ನ್ಯಾಯಾಲಯ ನನಗೆ ವಿಧಿಸಿರುವ ಐದು ವರ್ಷಗಳ ಜೈಲು ಶಿಕ್ಷೆ ಮತ್ತು ದಂಡವನ್ನು ರದ್ದುಗೊಳಿಸಬೇಕು' ಎಂದು ಕೋರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯ ಬಿದಲಪುರದ ಯುವಕ ಮುರಳಿ (25) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್‌.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸಂತ್ರಸ್ತೆ ಸಾಯುವುದಕ್ಕೂ ಮುನ್ನ ನೀಡಿರುವ ಮರಣ ಪೂರ್ವ ಹೇಳಿಕೆಯಲ್ಲಿ ಅಪರಾಧಿಯ ಹೆಸರನ್ನು ತಿಳಿಸಿದ್ದಾರೆ. ಆಕೆ ಸಾಯುವ ಮುನ್ನ ಅವಳ ಹೊಟ್ಟೆಯಲ್ಲಿ ಆರೂವರೆ ತಿಂಗಳ ಭ್ರೂಣ ಇರುವುದು ವೈದ್ಯಕೀಯ ವರದಿಯಲ್ಲಿ ಸಾಬೀತಾಗಿದೆ. ಈ ಭ್ರೂಣವನ್ನು ಡಿಎನ್‌ಎ ಪರೀಕ್ಷೆಗೆ ಒಳಪಡಿಸಲಿಲ್ಲ ಎಂಬ ಕಾರಣದಿಂದ ಮೃತಳು ಗರ್ಭಧರಿಸಲು ಆರೋಪಿ ಕಾರಣ ಅಲ್ಲ ಎಂಬ ಮೇಲ್ಮನವಿದಾರನ ವಾದವನ್ನು ಒಪ್ಪಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ಅಪರಾಧಿಗೆ ವಿಧಿಸಿರುವ ಶಿಕ್ಷೆಯ ಆದೇಶದಲ್ಲಿ ಯಾವುದೇ ದೋಷಗಳಿಲ್ಲ. ಹೀಗಾಗಿ, ದೇವನಹಳ್ಳಿಯ ತ್ವರಿತಗತಿಯ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಹೊರಡಿಸಿರುವ ಆದೇಶದಲ್ಲಿ ಮಧ್ಯಪ್ರವೇಶ ಮಾಡುವ ಅಗತ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠವು, ಕ್ರಿಮಿನಲ್ ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದೆ.

ಹೈಕೋರ್ಟ್ ಸುದ್ದಿ

ಶಾಸಕ ಹರೀಶ್ ಪೂಂಜಾ ವಿರುದ್ಧದ ಪ್ರಕರಣಕ್ಕೆ ತಡೆ

'ಕೋಮು ದ್ವೇಷ ಹರಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬೆಳ್ತಂಗಡಿಯ ಬಿಜೆಪಿ ಶಾಸಕ ಹರೀಶ್ ಪೂಂಜಾ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ಎಫ್‌ಐಆರ್ ಮತ್ತು ಮುಂದಿನ ನ್ಯಾಯಿಕ ಪ್ರಕ್ರಿಯೆಗಳಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಎಫ್‌ಐಆರ್ ರದ್ದು ಕೋರಿ ಹರೀಶ್ ಪೂಂಜಾ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ರಜಾಕಾಲದ ನ್ಯಾಯಮೂರ್ತಿ ಎಸ್‌. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿ ವಿಚಾರಣೆಯನ್ನು ಜೂನ್ 18ಕ್ಕೆ ಮುಂದೂಡಿದೆ.

ಹರೀಶ್ ಪೂಂಜಾ

ಪ್ರಕರಣವೇನು?: 'ಇದೇ 3ರಂದು ತೆಕ್ಕಾರುವಿನ ಭಟ್ರಬೈಲಿನ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಬ್ರಹ್ಮಕಲಶೋತ್ಸವದಲ್ಲಿ ಪಾಲ್ಗೊಂಡಿದ್ದ ಹರೀಶ್ ಪೂಂಜಾ ಅವರು ತುಳು ಭಾಷೆಯಲ್ಲಿ ಮಾತನಾಡುತ್ತಾ, ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ದ್ವೇಷ ಹರಡಿದ್ದಾರೆ. ಈ ಸಂಬಂಧದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲೂ ವೀಕ್ಷಿಸಲಾಗಿದೆ' ಎಂದು ಆರೋಪಿಸಿ ತೆಕ್ಕಾರಿನ ಎಸ್‌.ಬಿ.ಇಬ್ರಾಹಿಂ, ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಮೇ 4ರಂದು ದೂರು ನೀಡಿದ್ದರು. ಪೂಂಜಾ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 196 (ಧರ್ಮದ ಆಧಾರದಲ್ಲಿ ದ್ವೇಷ ಹರಡುವುದು), 353(2) (ದ್ವೇಷ ಹರಡಲು ಸುಳ್ಳು ಸುದ್ದಿ ಹಂಚಿಕೆ) ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ.

ಲಂಚ: 4 ವರ್ಷ ಜೈಲು ಶಿಕ್ಷೆ ಕಾಯಂ

ಬಾಗಲಗುಂಟೆ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಎಂ.ಕೆ.ಮಂಜಣ್ಣ ವಿರುದ್ಧದ ₹10 ಸಾವಿರ ಲಂಚ ಪಡೆದ ಅಪರಾಧ ಸಾಬೀತಾದ ಕಾರಣ ವಿಚಾರಣಾ ನ್ಯಾಯಾಲಯ ವಿಧಿಸಿದ್ದ 4 ವರ್ಷಗಳ ಶಿಕ್ಷೆ ಮತ್ತು ₹1 ಲಕ್ಷ ದಂಡದ ಆದೇಶವನ್ನು ಹೈಕೋರ್ಟ್ ಕಾಯಂಗೊಳಿಸಿದೆ.

'ವಿಶೇಷ ನ್ಯಾಯಾಲಯ ನನಗೆ ವಿಧಿಸಿರುವ ಶಿಕ್ಷೆಯನ್ನು ರದ್ದುಗೊಳಿಸಬೇಕು' ಎಂದು ಕೋರಿ ಎಂ.ಕೆ.ಮಂಜಣ್ಣ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್‌.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಭ್ರಷ್ಟಾಚಾರ ಆರೋಪ ಹೊತ್ತ ಪ್ರಕರಣಗಳಲ್ಲಿ ಮುಖ್ಯವಾಗಿ ಹಣಕ್ಕಾಗಿ ಬೇಡಿಕೆ ಇಟ್ಟಿರುವುದು ಮತ್ತು ಹಣ ಪಡೆದಿರುವುದು ಸಾಬೀತಾಗಬೇಕು. ಇದರಲ್ಲಿ ಅವೆರಡೂ ದೃಢಪಟ್ಟಿವೆ. ಹೀಗಾಗಿ, ವಿಚಾರಣಾ ನ್ಯಾಯಾಲಯದ ಆದೇಶವನ್ನು ಕಾಯಂಗೊಳಿಸಲಾಗುತ್ತಿದೆ' ಎಂದು ನ್ಯಾಯಪೀಠ ವಿವರಿಸಿದೆ.

ಏನಿದು ಪ್ರಕರಣ: ಕ್ರಿಮಿನಲ್ ಆರೋಪದ ಪ್ರಕರಣವೊಂದನ್ನು ಮುಕ್ತಾಯಗೊಳಿಸಲು ಮಂಜಣ್ಣ 10 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿ ಬಿದ್ದಿದ್ದರು.

ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯ ಆರೋಪಿಗೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13(1)ಡಿ ಮತ್ತು ಕಲಂ 13(2) ಅಡಿ ನಾಲ್ಕು ವರ್ಷಗಳ ಜೈಲು ಶಿಕ್ಷೆ ಮತ್ತು ₹50 ಸಾವಿರ ದಂಡ ವಿಧಿಸಿತ್ತು.

ಸಿಒಪಿ: 31ರವರೆಗೆ ಕೊನೆಯ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1961ರಿಂದ 2010ರವರೆಗೆ ಕಾನೂನು ಪದವಿ ಪಡೆದವರಿಗೆ ಸರ್ಟಿಫಿಕೇಟ್ ಆಫ್ ಪ್ರಾಕ್ಟೀಸ್ (ಸಿಒಪಿ) ಪಡೆಯಲು ಅರ್ಜಿ ಸಲ್ಲಿಸುವುದಕ್ಕಾಗಿ ಇದೇ 31ರವರೆಗೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಕೊನೆಯ ಅವಕಾಶ ಕಲ್ಪಿಸಿದೆ.

'1961ರಿಂದ 2010ರ ಜೂನ್ 12ರೊಳಗೆ ಕಾನೂನು ಪದವಿ ಪಡೆದಿರುವ ಆದರೆ, ಸಿಒಪಿ ಪಡೆಯದೇ ಇರುವವರು ₹300 ಸಾಮಾನ್ಯ ಶುಲ್ಕ ಮತ್ತು ₹1,200 ವಿಳಂಬ ಶುಲ್ಕ ಸೇರಿ ಒಟ್ಟು ₹1,500 ಪಾವತಿಸಿ ಭೌತಿಕವಾಗಿ ಅಥವಾ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆದರೆ, ಅಂಚೆ ಮುಖಾಂತರ ಅರ್ಜಿ ಸಲ್ಲಿಸುವಂತಿಲ್ಲ' ಎಂದು ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಸ್‌.ಎಸ್‌.ಮಿಟ್ಟಲಕೋಡ ತಿಳಿಸಿದ್ದಾರೆ.

ಇದೇ ವೇಳೆ 2010ರ ಜೂನ್ 12ರ ಬಳಿಕ ಅಖಿಲ ಭಾರತ ವಕೀಲರ ಪರಿಷತ್ ಪರೀಕ್ಷೆ (ಎಐಬಿಇ) ಉತ್ತೀರ್ಣರಾಗಿ, ನೋಂದಣಿ ಮಾಡಿಕೊಂಡಿರುವವರು ಘೋಷಣಾ ಫಾರಂ ಅನ್ನು ಸಲ್ಲಿಸಿರದಿದ್ದರೆ ಆನ್‌ಲೈನ್ ಮೂಲಕ ಸಲ್ಲಿಸುವಂತೆ ಸೂಚಿಸಲಾಗಿದೆ.

ಸವಿನೆನಪು



ದಿ॥ ಶ್ರೀಮುನಿಶಾಮಪ್ಪ (ಮೋಟಪ್ಪ) ನಿಧನ: 15-08-1984

ದಿ॥ ಶ್ರೀಮತಿ ಮುನಿಯಮ್ಮ ನಿಧನ: 24-05-2002

ನೀವು ನಮ್ಮನ್ನಗಲಿ ತಂದೆ–41 / ತಾಯಿ–23 ವರ್ಷಗಳು ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ಶ್ರೀಮತಿ ಕಲ್ಪನ, ಶ್ರೀ ಎಂ. ಗೋಪಾಲ್ ಮತ್ತು ಮಕ್ಕಳು

ಮಾಲೀಕರು, M M Group, ವೇಣು ಎಂಟರ್ ಪ್ರೈಸಸ್ ಗುತ್ತಿಗೆದಾರರು ಮತ್ತು ಕುಟುಂಬ ವರ್ಗದವರು, ಖಾಜಿ ಹೊಸಹಳ್ಳಿ, ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಹಾಸನ: ಕೆರೆಯಲ್ಲಿ ಮುಳುಗಿ ಇಬ್ಬರು ಬಾಲಕರ ಸಾವು

ನುಗ್ಗೇಹಳ್ಳಿ (ಹಾಸನ ಜಿಲ್ಲೆ): ಸಮೀಪದ ಅಣತಿ ಗ್ರಾಮದಲ್ಲಿ ಈಜಲು ಹೋಗಿದ್ದ ಇಬ್ಬರು ಬಾಲಕರು ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ವಳಗೇರಹಳ್ಳಿಯ ನೂತನ್ (15) ಹಾಗೂ ಬೀರೇಶ್ (14) ಮೃತರು. ಬೇಸಿಗೆ ರಜೆ ಕಳೆಯಲು ಸಹೋದರರಾದ ಯಶ್ವಂತ್, ನೂತನ್ ಹಾಗೂ ಚಿಕ್ಕಪ್ಪನ ಮಗ ಬೀರೇಶ್, ಪಕ್ಕದ ಅಣತಿ ಗ್ರಾಮದ ಕೆರೆಗೆ ಈಜಲು ತೆರಳಿದ್ದರು.

ಆಳವಾದ ಕೆರೆಗೆ ಇಳಿಯುತ್ತಿದ್ದಂತೆ ನೂತನ್ ಹಾಗೂ ಬೀರೇಶ್ ಮುಳುಗಿದ್ದಾರೆ. ಯಶ್ವಂತ್‌ಗೆ ಈಜು ಬಾರದ ಕಾರಣ, ಕಣ್ಣೆದುರೇ ಅವರು ಮುಳುಗುತ್ತಿದ್ದರೂ ರಕ್ಷಿಸಲು ಸಾಧ್ಯವಾಗಿಲ್ಲ.

ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಮೃತದೇಹಗಳನ್ನು ಹೊರತೆಗೆದರು. ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ನುಗ್ಗೇಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ಜೈಪುರದ ನಾಹರಗಢ ಜೈವಿಕ ಉದ್ಯಾನದಲ್ಲಿ ಬಿರು ಬೇಸಿಗೆಯ ನಡುವೆ ತುಂತುರು ಹನಿಗಳ ನಡುವೆ ಹುಲಿಯ ಆಟ ಕಂಡುಬಂದುದು ಹೀಗೆ –ಪಿಟಿಐ ಚಿತ್ರ

ಸಮೀಕ್ಷೆ: ಇದೇ 29ರವರೆಗೆ ವಿಸ್ತರಣೆ

ಒಂದನೇ ಪುಟದಿಂದ...

ಬಿಬಿಎಂಪಿ ವ್ಯಾಪ್ತಿಯ ವಲಯಗಳಲ್ಲಿ ಸಮೀಕ್ಷೆ ಕಾರ್ಯ ಇನ್ನೂ ಪ್ರಗತಿಯಲ್ಲಿದೆ. ಮಳೆ ಮತ್ತು ಹವಾಮಾನ ವೈಪರೀತ್ಯದ ಕಾರಣ ಅನೇಕ ಪರಿಶಿಷ್ಟ ಜಾತಿ ಸಂಘಗಳಿಂದ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ದಿನಾಂಕ ವಿಸ್ತರಣೆಯ ಕೋರಿಕೆ ಬಂದ ಕಾರಣ ದಿನಾಂಕವನ್ನು ವಿಸ್ತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಇಟಿ-2025: ಇಂದು ಫಲಿತಾಂಶ

ಒಂದನೇ ಪುಟದಿಂದ...

'ಮೇ 23ರಂದು ಸಿಇಟಿ ಫಲಿತಾಂಶ ಪ್ರಕಟಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಕೆಲ ತಾಂತ್ರಿಕ ಕಾರಣಗಳಿಂದ ಒಂದು ದಿನ ಮುಂದೂಡಲಾಗಿದ್ದು, ಮೇ 24ರ ಬೆಳಿಗ್ಗೆ 11.30ಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ಫಲಿತಾಂಶ ಪ್ರಕಟಿಸುವರು. ಮಧ್ಯಾಹ್ನ 2 ಗಂಟೆ ನಂತರ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ (https://cetonline.Karnataka.gov.in/ ugcetrank2025/ checkresult.aspx ಹಾಗೂ https://karresults.nic.in) ಫಲಿತಾಂಶದ ವಿವರಗಳು ಲಭ್ಯವಾಗಲಿವೆ' ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಮಾಹಿತಿ ನೀಡಿದ್ದಾರೆ.

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ: ಇನ್‌ಸ್ಪೆಕ್ಟರ್ ಪುತ್ರ ಸೆರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರ ಹೊರವಲಯದ ಫಾರ್ಮ್‌ಹೌಸ್‌ನಲ್ಲಿ 15 ವರ್ಷದ ಬಾಲಕಿಯನ್ನು ಪುಸಲಾಯಿಸಿ, ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ 17 ವರ್ಷದ ಮೂರನೇ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಆತ ಬೇರೆ ಜಿಲ್ಲೆಯ ಪೊಲೀಸ್ ಇನ್‌ಸ್ಪೆಕ್ಟರ್‌ವೊಬ್ಬರ ಮಗ ಎಂದು ಗೊತ್ತಾಗಿದೆ.

'ಅತ್ಯಾಚಾರ ಎಸಗಿದವರು ಮೂವರೂ ಬಾಲಕರು ಎಂದು ಅಂದಾಜಿಸಲಾಗಿತ್ತು. ಆದರೆ, ಅವರಲ್ಲಿ ಇಬ್ಬರು ಮಾತ್ರ ಬಾಲಕರು. ಅವರನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಇಲ್ಲಿನ ರುಕ್ಮಿಣಿ ನಗರದ ನಿವಾಸಿ ಸಾಕಿಬ್ ನಿಜಾಮ್ (22) ಮುಖ್ಯ ಆರೋಪಿ. ಅಪ್ರಾಪ್ತರಿಗೆ ಕೊಠಡಿಯನ್ನು ಬಾಡಿಗೆ ನೀಡಿದ ಆರೋಪದ ಮೇಲೆ ಫಾರ್ಮ್‌ಹೌಸ್ ಮಾಲೀಕರಾದ ಅಶುತೋಷ್ ಪಾಟೀಲ ಮತ್ತು ರೋಹನ್ ಪಾಟೀಲ ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಶಾಲೆಯ ಬೇಸಿಗೆ ರಜೆ ಕಳೆಯಲು ನಗರಕ್ಕೆ ಬಂದಿದ್ದ ಬಾಲಕಿಯನ್ನು ಪುಸಲಾಯಿಸಿದ ಮೂವರು, ಮೇ 6ರಂದು ಫಾರ್ಮ್‌ಹೌಸ್‌ಗೆ ಕರೆದೊಯ್ದು ಪಾರ್ಟಿ ಮಾಡಿ, ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಮೇ 12ರಂದು ಬಾಲಕಿ ಅನಾರೋಗ್ಯಕ್ಕೆ ಒಳಗಾದ ಬಳಿಕ ಪಾಲಕರಿಗೆ ವಿಷಯ ಗೊತ್ತಾಗಿ, ದೂರು ದಾಖಲಿಸಿದ್ದರು. ಶುಕ್ರವಾರ ಇಬ್ಬರು ಬಾಲಕರ ವೈದ್ಯಕೀಯ ತಪಾಸಣೆ ನಡೆಸಲಾಗಿದ್ದು, ಸಾಕಿಬ್ ವೈದ್ಯಕೀಯ ತಪಾಸಣೆ ಶನಿವಾರ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

'ಅಭೂತಪೂರ್ವ ಪ್ರಗತಿಗೆ ಸಾಕ್ಷಿಯಾದ ಈಶಾನ್ಯ ಪ್ರದೇಶ'

ನವದೆಹಲಿ (ಪಿಟಿಐ): ಈಶಾನ್ಯ ಪ್ರದೇಶವು ಅಭೂತಪೂರ್ವ ಪ್ರಗತಿಯನ್ನು ಕಾಣುತ್ತಿದೆ ಮತ್ತು ಅದರ ಪ್ರಗತಿಯ ವೇಗವನ್ನು ಇನ್ನಷ್ಟು ಹೆಚ್ಚಿಸಲು ಸರ್ಕಾರ ದೃಢ ನಿಶ್ಚಯ ಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದ್ದಾರೆ.

ಎರಡು ದಿನಗಳ 'ಈಶಾನ್ಯ ಹೂಡಿಕೆದಾರರ ಶೃಂಗ' ಉದ್ಘಾಟಿಸಿ ಮಾತನಾಡಿದ ಅವರು, 'ಈಶಾನ್ಯ ಪ್ರದೇಶ ದಲ್ಲಿರುವ ವೈವಿಧ್ಯವು ಅದರ ಬೆಳವಣಿಗೆಗೆ ದೊಡ್ಡ ಶಕ್ತಿಯಾಗಿದೆ. ಒಂದು ಕಾಲದಲ್ಲಿ ಈ ಪ್ರದೇಶವನ್ನು ಕೇವಲ ಗಡಿನಾಡು ಎಂದು ಕರೆಯಲಾಗುತ್ತಿತ್ತು. ಆದರೆ, ಈಗ ಬೆಳವಣಿಗೆಯಲ್ಲಿ ಮೂಂಚೂಣಿ ಯಲ್ಲಿದೆ' ಎಂದರು

ಕಾರ್ಯಕ್ರಮದಲ್ಲಿ ಉದ್ಯಮಿಗಳಾದ ಮುಖೇಶ್ ಅಂಬಾನಿ, ಗೌತಮ್ ಅದಾನಿ, ಅನಿಲ್ ಅಗರ್ವಾಲ್ ಭಾಗವಹಿಸಿದ್ದರು.

ಪೂಂಛ್: ಕಾಳ್ಗಿಚ್ಚಿನಿಂದ ನೆಲಬಾಂಬ್ ಸ್ಫೋಟ

ಮೆಂಧರ್/ಜಮ್ಮು(ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಕಾಳ್ಗಿಚ್ಚು ಆವರಿಸಿದ್ದು, ಆ ಪ್ರದೇಶದಲ್ಲಿದ್ದ ಕೆಲವು ನೆಲಬಾಂಬ್‌ಗಳು ಸ್ಫೋಟಗೊಂಡಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಎಲ್‌ಒಸಿಯಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ಅದು ಕೃಷ್ಣ ಘಾಟಿಯ ಪರ್ವತ ಪ್ರದೇಶದವರೆಗೂ ಆವರಿಸಿದೆ. ಘಟನೆಯಿಂದ ಯಾವುದೇ ಪ್ರಾಣ ಹಾನಿ ಮತ್ತು ಗಾಯಗಳು ಆಗಿಲ್ಲ. ಸ್ಥಳೀಯರೊಂದಿಗೆ ಸೇನೆ ಮತ್ತು ಅರಣ್ಯ ಇಲಾಖೆಯು ಬೆಂಕಿ ನಂದಿಸಿದೆ.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂಖ್ಯೆ:ಕೆಆರ್‌ಐಡಿಎಲ್/ಎಸಿಟಿ/ಟಿಎನ್‌ಡಿ/ಎಫ್‌ಡಿ/2025–26 ದಿನಾಂಕ:23.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಆರ್‌ಐಡಿಎಲ್ ಇವರು ನಿಶ್ಚಿತ ಠೇವಣಿಯಲ್ಲಿ ಒಂದು ವರ್ಷದ ಅವಧಿಗೆ ಸುಮಾರು **ರೂ. 500.00** ಕೋಟಿ ಮೊತ್ತವನ್ನು ಹೂಡಿಕೆ ಮಾಡಲು ಸಾರ್ವಜನಿಕ ವಲಯದ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ ಖಾಸಗಿ ವಲಯದ ಬ್ಯಾಂಕುಗಳಿಂದ ಇ–ಬಿಡ್ಡಿಂಗ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. ಇತರೆ ನಿಯಮಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.kppp.karnataka.gov.in** ಇಲ್ಲಿ ದಿನಾಂಕ: **23.05.2025** ರಿಂದ ನೋಡಬಹುದು. ಸಹಾಯವಾಣಿ ಇ–ಪ್ರೋಕ್ ಸಂಪರ್ಕ: **+91–8046010000, +91–8068948777.** (1) ಇ–ಹರಾಜು ಅಧಿಸೂಚನೆ ಪ್ರಕಟಣೆ ದಿನಾಂಕ: **23.05.2025.** (2) ಬಿಡ್ ಸಲ್ಲಿಸುವ ಕಡೆಯ ದಿನಾಂಕ: **04.06.2025 ರಂದು 15.00 ಗಂಟೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.06.2025 ರಂದು 15.00 ಗಂಟೆಗೆ.** (4) ಇ–ಹರಾಜು ತೆರೆಯುವ ದಿನಾಂಕ: **11.06.2025ರಂದು 10.30 ಗಂಟೆಯಿಂದ 15.00 ಗಂಟೆಯವರೆಗೆ**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಮುಖ್ಯ ಹಣಕಾಸು ಅಧಿಕಾರಿ
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09
ದೂರವಾಣಿ: 080–28015609, ಇ–ಮೇಲ್: cfo-1@kridl.net
ಸಹಿ/– ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು

RAJIV GANDHI UNIVERSITY OF HEALTH SCIENCES, KARNATAKA
4th 'T' Block, Jayanagara, Bengaluru – 560 041,
Ph No.080-26961932

No:RGUHSK/2025-26/AUCTION 10/11/12 Dt:23.05.2025

E-TENDER NOTIFICATION

The Finance Officer, Rajiv Gandhi University of Health Sciences, invites E-Bid notice for Competitive Rate of Interest for placing Surplus Funds only in Nationalized Banks in FD **Rs.400.00 Crores**, **Rs.300.00 Crores** and **Rs.157.00 Crores**. More details on the Service are provided in the attached Terms of Reference.

Tender No.RGUHSK/2025-26/AUCTION 10 Tender No.RGUHSK/2025-26/AUCTION 11 Tender No.RGUHSK/2025-26/AUCTION 12	
Date of e-Auction Notification Published date & time	23.05.2025 12:15
Last Date and Time for Submit the Query	31.05.2025 13:00
Date and time to confirm participation of interest in Auction	02.06.2025 13:30
Start date and time of Evaluation	03.06.2025 13:31
Live Bid Date, Start & End Time	04.06.2025, 15:00 -15:30, 15:11 - 15:40, 15:21 - 15:50.

More Details Can be fetched from website:
https://kppp.karnataka.gov.in.

DIPR/SI/822/2025-26

Sd/-
Finance Officer

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ದೂ.ಸಂಖ್ಯೆ:08172–234839 E-mail: pdhassandudc@gmail.com

ನಂ:ಮುನಿಸಿ(3)ಸಿ.ಆರ್/27/2025–26 ದಿನಾಂಕ 22–05–2025

: ಕೊಟೇಷನ್ ಆಹ್ವಾನ ಪ್ರಕಟಣೆ :

ಹಾಸನ ನಗರ ವ್ಯಾಪ್ತಿಯಲ್ಲಿರುವ ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ದೇವಾಲಯದ ಜಾತ್ರಾ ಮಹೋತ್ಸವದ ಸಮಯದಲ್ಲಿ ಕೈಗೊಳ್ಳಬೇಕಾದ ಕೆಲಸಗಳಿಗೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾಧಿಕಾರಿಯವರು ಈ ಕೆಳಕಂಡ ಐಟಂಗಳಿಗೆ ಆಯವ್ಯಯ ವೆಚ್ಚಗಳನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಸದರಿ ಆಯವ್ಯಯ ಹಾಗೂ ಅಂದಾಜು ಪಟ್ಟಿಯನ್ನು ತಯಾರಿಸುವ ಸಲುವಾಗಿ ಕೊಟೇಷನ್ ದರಗಳನ್ನು ಆಹ್ವಾನಿಸಲಾಗಿದೆ. ಕೆಲಸದ ವಿವರ ಈ ಕೆಳಕಂಡಂತೆ ಇರುತ್ತದೆ. ಕ್ರ.ಸಂ.1)ಕೆಲಸದ ವಿವರ: ಮುದ್ರಣ ಸಾಮಗ್ರಿ ಸರಬರಾಜು ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸುವುದು. 2)ತಾತ್ಕಾಲಿಕ ಶೌಚಾಲಯ ಸರಬರಾಜು ಅಳವಡಿಕೆ ಹಾಗೂ ನಿರ್ವಹಿಸುವ ಕೆಲಸ 3)ನಗರದಾದ್ಯಂತ ಲೈಟಿಂಗ್ ವ್ಯವಸ್ಥೆ ಅಳವಡಿಸಿ ನಿರ್ವಹಿಸುವುದು. ಮೇಲ್ಕಂಡ ಐಟಂಗಳಿಗೆ ಸಂಬಂಧಿಸಿದಂತೆ ಆಸಕ್ತ ಸಂಸ್ಥೆಯವರು/ ಗುತ್ತಿಗೆದಾರರು ದಿನಾಂಕ 29–05–2025 ರ ಸಂಜೆ 5.30 ಗಂಟೆಯೊಳಗಾಗಿ ಜಿ.ಎಸ್.ಟಿ ಒಳಗೊಂಡಂತೆ ದರಗಳನ್ನು ನಮೂದಿಸಿ ಸಲ್ಲಿಸುವುದು. ಮೇಲ್ಕಂಡ ಐಟಂಗಳಲ್ಲಿ ಇರುವ ವಿಶಿಷ್ಟ ವಿವರಣೆಯನ್ನು (Specification) ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ಸಮಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ ರವರಿಂದ ಪಡೆಯಬಹುದಾಗಿದೆ.

ಸಹಿ/–ಆರ್. ಕೃಷ್ಣಮೂರ್ತಿ ಕೆ.ಎಂ.ಎ.ಎಸ್ (ಆಯ್ಕೆ ಶ್ರೇಣಿ) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ.

ವಾಸಾಸಂಇ/ಹಿಸನಿ/ಹಾಸನ/131/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ – ಆಯುಷ್ ಇಲಾಖೆ

ಪ್ರಾಚಾರ್ಯರವರ ಕಛೇರಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ & ಬೋಧನಾ ಆಸ್ಪತ್ರೆ, ಸಾಗರ ರಸ್ತೆ, ಪ್ರವಾಸಿ ಮಂದಿರದ ಎದುರು, ಶಿವಮೊಗ್ಗ–577201

G-mail: principalgamcshimoga@gmail.com
Ph: 08182-223230

ಕ್ರ.ಸಂ: ಸಆವೈಮಬೋಆಶಿ/06/ಹೊ.ಗು.(1)/2024–25 ದಿ: 21–05–2025

ಇ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರಮೆಂಟ್ ಪೋರ್ಟಲ್) (ದ್ವಿಲಕೋಟೆ ಪದ್ಧತಿ)

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆ, ಶಿವಮೊಗ್ಗ ಇಲ್ಲಿಗೆ 2025–26 ಮತ್ತು 2026–27ನೇ ಸಾಲಿಗೆ ವಿವಿಧ ಗ್ರೂಪ್–ಡಿ ಹುದ್ದೆಗಳ ಸೇವೆಯನ್ನು ಪಡೆಯಲು ಕೆ.ಟಿ.ಪಿ.ಪಿ. ಅಧಿನಿಯಮ 1999 ನಿಯಮ 2000ರನ್ವಯ ಅರ್ಹ ಟೆಂಡರ್‌ದಾರರಿಂದ ಹಾಗೂ ಮಾನ್ಯತೆ ಪಡೆದ ಸಂಘ–ಸಂಸ್ಥೆಗಳಿಂದ ಇ–ಟೆಂಡರ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಇ–ಟೆಂಡರ್ ವೇಳಾಪಟ್ಟಿ

1. ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ: GAMCTHS/06/OS(1)/2024-25 ದಿನಾಂಕ 21–05–2025 ರ ಸಂಜೆ 5.00 ಗಂಟೆಗೆ **2.** ಟೆಂಡರ್ ಅಂದಾಜು ಮೊತ್ತ: ರೂ.235.00 ಲಕ್ಷ **3.** ಇ.ಎಂ.ಡಿ ಮೊತ್ತ (1.5%): ರೂ.3,53,000/– ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಾವತಿ ಮಾಡುವುದು **4.** ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:20.06.2025 ರ ಸಂಜೆ 5.30 ಗಂಟೆಯವರೆಗೆ **5.** ಟೆಂಡರ್ ತೆರೆಯುವ ಸ್ಥಳ: ಪ್ರಾಚಾರ್ಯರ ಕಛೇರಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆ, ಶಿವಮೊಗ್ಗ. **6.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ/ ಸಮಯ: 23–06–2025 ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ನಮೂನೆಗಳಿಗಾಗಿ, ಟೆಂಡರ್ ಷರತ್ತು/ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.

ಸಹಿ/– ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆ, ಸಾಗರ ರಸ್ತೆ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/25–26/152/05/318

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:03/2025–26/283 ದಿನಾಂಕ: 19–05–2025

ಅಲ್ಪಾವಧಿ ಟೆಂಡರ ಪ್ರಕಟಣೆ

(E-GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

SBM(G) ಯೋಜನೆಯಡಿ ಶಿಗ್ಗಾಂವ ತಾಲೂಕಿನ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.

1) Tender queries/ Clarifications ಗೆ ಕೊನೆಯ ದಿನ ಮತ್ತು ಸಮಯ	ದಿನಾಂಕ: 23–05–2025 ರ 11:00 ಗಂಟೆವರೆಗೆ
2) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ	ದಿನಾಂಕ: 28–05–2025 ರ 17:00 ಗಂಟೆವರೆಗೆ
3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ)	ದಿನಾಂಕ: 29–05–2025 ರ 17:00 ಗಂಟೆ ನಂತರ
4) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ)	ದಿನಾಂಕ: 30–05–2025 ರ 10:00 ಗಂಟೆ ನಂತರ

ಇಂಡೆಂಟ್ ನಂ : (1) Construction of 3 KLD Faecal Sludge Treatment Plant (FSTP) at Bada Gram Panchayath in Shiggaon Taluka of Haveri Dist. (RWSSD/2025-26/WT/WORK_INDENT9271)

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ https://kppp.karnataka.gov.in ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/–
ಕಾರ್ಯನಿರ್ವಾಹಕ ಇಂಜನೀಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.

Dipr/hvr/dipo/116/25-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ದಕ್ಷಿಣ ವೃತ್ತ), ಬಿಬಿಎಂಪಿ, ದಕ್ಷಿಣ ವಲಯ, 9ನೇ ಕ್ರಾಸ್, 9ನೇ ಮೇನ್, ಜಯನಗರ, 2ನೇ ಬ್ಲಾಕ್, ಬೆಂಗಳೂರು–560011.

ಸಂಖ್ಯೆ: ಹಿಸತೋನಿ(ದ)/ಟೆಂಡರ್/07/2025–26 ದಿನಾಂಕ: 23.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

ಏಕ & ದ್ವಿಲಕೋಟೆ ಪದ್ಧತಿ (ಜಿಒಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ದಕ್ಷಿಣ ವೃತ್ತ), ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಬಿಬಿಎಂಪಿ ಅಥವಾ ಕಾರ್ಮಿಕ ಇಲಾಖೆಗಳಲ್ಲಿ ನೊಂದಾಯಿತಗೊಂಡ ಅರ್ಹ ಮತ್ತು ಅನುಭವವಿರುವ ವ್ಯಕ್ತಿಗಳು / ಏಜೆನ್ಸಿಗಳು / ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ಯಡಿಯೂರು ವಾರ್ಡ್ (ವಾರ್ಡ್ ನಂ. 188)ನಲ್ಲಿ ಎರೆಹುಳು ಗೊಬ್ಬರ ಘಟಕ, ಜೈವಿಕ ಅನಿಲ ಘಟಕಗಳು ಮತ್ತು ಜೈವಿಕ ಡೈಜೆಸ್ಟರ್‌ಗಳ ಘಟಕಗಳು ನಿರ್ವಹಣೆ ಮತ್ತು ಮೇಲ್ವಿಚಾರಣೆ (2ನೇ ಕರೆ).
	ಕಾಮಗಾರಿಯ ಅಂದಾಜು ಮೊತ್ತ: **ರೂ. 75,00,000/–**. ಇಎಂಡಿ: **ರೂ. 75,000/–**
2	ಹೊಸ ಗುಡ್ಡದಹಳ್ಳಿ ವಾರ್ಡ್ (ವಾರ್ಡ್ ನಂ. 148) ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (3ನೇ ಕರೆ).
	ಕಾಮಗಾರಿಯ ಅಂದಾಜು ಮೊತ್ತ: **ರೂ. 4,51,140/–**. ಇಎಂಡಿ: **ರೂ. 11,300/–**
3	ಸುದ್ದುಗುಂಟೆ ಪಾಳ್ಯ ವಾರ್ಡ್ (ವಾರ್ಡ್ ನಂ. 178) ಉದ್ಯಾನವನಗಳಲ್ಲಿ ತೋಟಗಾರಿಕೆ ಕೆಲಸಗಳ ನಿರ್ವಹಣೆ (3ನೇ ಕರೆ).
	ಕಾಮಗಾರಿಯ ಅಂದಾಜು ಮೊತ್ತ: **ರೂ. 50,66,000/–**. ಇಎಂಡಿ: **ರೂ. 1,01,400/–**
4	ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದ ಉದ್ಯಾನವನಗಳಲ್ಲಿ ಶೌಚಾಲಯಗಳ ನಿರ್ವಹಣೆ (2ನೇ ಕರೆ).
	ಕಾಮಗಾರಿಯ ಅಂದಾಜು ಮೊತ್ತ: **ರೂ. 33,65,620/–**. ಇಎಂಡಿ: **ರೂ. 33,700/–**

ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ: **12 ತಿಂಗಳು**. ಮೀಸಲು : **ಕ್ರ.ಸಂ. 1 & 4ಕ್ಕೆ ಪ.ಪಂಗಡ ಹಾಗೂ ಕ್ರ.ಸಂ. 2 & 3ಕ್ಕೆ ಇತರೆ ವರ್ಗ.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ ದಿನಾಂಕ: **26.05.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ ಬಿಡ್ ಸಭೆಯ ದಿನಾಂಕ: **31.05.2025ರ ಸಂಜೆ 4.30 ಗಂಟೆಗೆ.** (3) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **03.06.2025 ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **04.06.2025ರಂದು ಸಂಜೆ 4.30 ಗಂಟೆಗೆ.** (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ದಕ್ಷಿಣ ವಲಯ, ಬಿಬಿಎಂಪಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–1,2,3,4/ಅಲ್ಪಾವಧಿ ಟೆಂಡರ್ ಪ್ರಕಟಣೆ – ಐ.ಎಫ್.ಟಿ–02/2025–26 ದಿನಾಂಕ: 22–05–2025.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1,2, 3 ಹಾಗೂ 4 (ಟೆಂಡರ್‌ಗಿಟ್ಟ ಮೊತ್ತ **ಕನಿಷ್ಠ ರೂ.3.50 ಲಕ್ಷ ರೂಗಳು ಹಾಗೂ ಗರಿಷ್ಟ ರೂ.199.42 ಲಕ್ಷ ರೂಗಳು**) ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ– ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಒಟ್ಟು 30 ಕಾಮಗಾರಿಗಳ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. **ದಿ: 23–05–2025** ರಿಂದ ಕೆಪಿಪಿ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ **ದಿನಾಂಕ:31–05–2025 ಸಾಯಂಕಾಲ 5.30** ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ:02–06–2025 ರ ಸಾಯಂಕಾಲ 4.00 ಗಂಟೆಯವರೆಗೆ** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ **ದಿನಾಂಕ: 03–06–2025 ಸಾಯಂಕಾಲ 04–30 ಗಂಟೆಯ** ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ **ದಿನಾಂಕ: 04–06–2025 ಸಾಯಂಕಾಲ 04–30** ಗಂಟೆಯ ನಂತರ(ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: +91–8046010000+91–8068948777 ರಿಂದ ಪಡೆಯಬಹುದು.

DIPR/CTA/KSMCA/101/2025-26

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯ ರಸ್ತೆ, ಕನಕನಪಾಳ್ಯ, ಜಯನಗರ 2ನೇ ಬ್ಲಾಕ್, ಬೆಂಗಳೂರು–560 011.

ಸಂಖ್ಯೆ:ಕಾಪಾಅ/ಚಿಕ್ಕಪೇಟೆ/ಕೆಪಿಪಿ/03/2025-26 ದಿನಾಂಕ: 19-05-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಏಕ ಮತ್ತು ದ್ವಿ ಲಕೋಟೆ ಪದ್ಧತಿ) (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) ವೆಬ್‌ಸೈಟ್: **https://kppp.karnataka.gov.in** ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಚಿಕ್ಕಪೇಟೆ ವಿಭಾಗ), ಬೃಬೆಂಮಪಾ, ಬೆಂಗಳೂರು ರವರು ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1)	ವಾರ್ಡ್ ಸಂಖ್ಯೆ 160 ಧರ್ಮರಾಯಸ್ವಾಮಿ ದೇವಸ್ಥಾನ ಮತ್ತು ವಾರ್ಡ್ ಸಂಖ್ಯೆ 161 ರ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಜೆ ಸಿ ರಸ್ತೆ, ಸುಧಾಮನಗರ ಸಿಕೆಸಿ ಗಾರ್ಡನ್, ಕಲಾಸಿಪಾಳ್ಯ, ಕಬ್ಬನ್ ಪೇಟೆ, ವಿನೋಭನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಒಳಚರಂಡಿಗಳ ಮತ್ತು ಇತರ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 400.00. ಇಎಂಡಿ ಮೊತ್ತ (ರೂ. ಗಳಲ್ಲಿ): ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.1.00 ಲಕ್ಷ ಮತ್ತು ಬಿಜಿ ಮೂಲಕ ರೂ.5,00,000/–.
2)	ವಾರ್ಡ್ ಸಂಖ್ಯೆ 162 ಸುಂಕೇನಹಳ್ಳಿಯ ಸುಂಕೇನಹಳ್ಳಿ, ಸಮೀರಾಪುರ, ಕೆಂಪೇಗೌಡನಗರ, ದತ್ತಾತ್ರೇಯ ಬಡಾವಣೆ, ಚಿಕ್ಕಣ್ಣ ಗಾರ್ಡನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಒಳಚರಂಡಿಗಳ ಮತ್ತು ಇತರ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 250.00. ಇಎಂಡಿ ಮೊತ್ತ (ರೂ. ಗಳಲ್ಲಿ): ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.1.00 ಲಕ್ಷ ಮತ್ತು ಬಿಜಿ ಮೂಲಕ ರೂ.2,75,000/–.
3)	ವಾರ್ಡ್ ಸಂಖ್ಯೆ 160ರ ಧರ್ಮರಾಯ ಸ್ವಾಮಿ ದೇವಸ್ಥಾನ ಉಪವಿಭಾಗದ ಧರ್ಮರಾಯ ಸ್ವಾಮಿ ದೇವಸ್ಥಾನ ವಾರ್ಡ್‌ನ ಬ್ಲಾಕ್ ಸಂಖ್ಯೆ 26, 17, 19, 15, 25, 14, 21, 12_1, 18 ಮತ್ತು 78ರ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 150.00. ಇಎಂಡಿ ಮೊತ್ತ (ರೂ. ಗಳಲ್ಲಿ): ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.1.00 ಲಕ್ಷ ಮತ್ತು ಬಿಜಿ ಮೂಲಕ ರೂ.1,25,000/–.
4)	ವಾರ್ಡ್ ಸಂಖ್ಯೆ 160ರ ಧರ್ಮರಾಯ ಸ್ವಾಮಿ ದೇವಸ್ಥಾನ ಉಪವಿಭಾಗದ ಧರ್ಮರಾಯ ಸ್ವಾಮಿ ದೇವಸ್ಥಾನ ವಾರ್ಡ್‌ನ ಬ್ಲಾಕ್ ಸಂಖ್ಯೆ 26, 17, 19, 15 ಮತ್ತು 25ರ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 50.00. ಇಎಂಡಿ ಮೊತ್ತ (ರೂ. ಗಳಲ್ಲಿ): ರೂ.1,00,000/–.
5)	ವಾರ್ಡ್ ಸಂಖ್ಯೆ 160ರ ಧರ್ಮರಾಯ ಸ್ವಾಮಿ ದೇವಸ್ಥಾನ ಧರ್ಮರಾಯ ಸ್ವಾಮಿ ದೇವಸ್ಥಾನ ಉಪ–ವಿಭಾಗದ ಬ್ಲಾಕ್ ಸಂಖ್ಯೆ 14, 21, 12_1, 18 ಮತ್ತು 78ರ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 50.00. ಇಎಂಡಿ ಮೊತ್ತ (ರೂ. ಗಳಲ್ಲಿ): ರೂ.1,00,000/–.
6)	ವಾರ್ಡ್ ಸಂಖ್ಯೆ 161ರ ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದ ಸಿಲ್ವರ್ ಜ್ಯೂಬಿಲಿ ಪಾರ್ಕ್ ವಾರ್ಡ್‌ನ ಬ್ಲಾಕ್ ಸಂಖ್ಯೆ 39, 112, 96, 38, 95 ಮತ್ತು 40 ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 200.00. ಇಎಂಡಿ ಮೊತ್ತ (ರೂ. ಗಳಲ್ಲಿ): ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.1.00 ಲಕ್ಷ ಮತ್ತು ಬಿಜಿ ಮೂಲಕ ರೂ.2,00,000/–.
7)	ವಾರ್ಡ್ ಸಂಖ್ಯೆ 161ರ ಸಿಲ್ವರ್ ಜ್ಯೂಬಿಲಿ ಪಾರ್ಕ್ ವಾರ್ಡ್‌ನ ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದ ಬ್ಲಾಕ್ ಸಂಖ್ಯೆ 34, 25, 48_2, 35_1 ಮತ್ತು 98 ರಲ್ಲಿ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 150.00. ಇಎಂಡಿ ಮೊತ್ತ (ರೂ. ಗಳಲ್ಲಿ): ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.1.00 ಲಕ್ಷ ಮತ್ತು ಬಿಜಿ ಮೂಲಕ ರೂ.1,25,000/–.
8)	ವಾರ್ಡ್ ಸಂಖ್ಯೆ 165–ಬಿ ವೆಂಕಟರೆಡ್ಡಿ ನಗರ ವಾರ್ಡ್‌ನಲ್ಲಿನ ವಿಶ್ವೇಶ್ವರಪುರಂ ಉಪವಿಭಾಗದ ಬ್ಲಾಕ್ ಸಂಖ್ಯೆ 77, 79, 80, 85, 42_2, 42_1, 2, 35, 20 ಮತ್ತು 1_2 ವಾರ್ಡ್ ಸಂಖ್ಯೆ 164ರ ಹೊಂಬೇಗೌಡನಗರ ವಾರ್ಡ್ ಮತ್ತು ಬ್ಲಾಕ್ ಸಂಖ್ಯೆ 62, 17, 36, 16, 61, 15 ಮತ್ತು 50 ರಲ್ಲಿ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 400.00. ಇಎಂಡಿ ಮೊತ್ತ (ರೂ. ಗಳಲ್ಲಿ): ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.1.00 ಲಕ್ಷ ಮತ್ತು ಬಿಜಿ ಮೂಲಕ ರೂ.5,00,000/–.

ಟೆಂಡರ್‌ನ ಕಾರ್ಯಸೂಚಿ: 1. ಪೂರ್ವ ಬಿಡ್ ಸಭೆ **ದಿನಾಂಕ: 30–05–2025ರ ಮಧ್ಯಾಹ್ನ 3:00 ಗಂಟೆಗೆ** ನಡೆಸಲಾಗುವುದು. 2. ಭರ್ತಿಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ: 05–06–2025ರ ಸಂಜೆ 4:00 ಗಂಟೆಯವರೆಗೆ.** 3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 06–06–2025ರ ಸಂಜೆ 4:30 ಗಂಟೆಗೆ.** 4. ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್ ಅನುಮೋದನೆಯ ನಂತರ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬಿಬಿಎಂಪಿ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನೀತಿ ನಿಯಮಗಳ ಬೇಲಿ ಇಲ್ಲದೆ ಸಮಾಜಜೀವನ ಅಸಾಧ್ಯ.
-ಎಂ.ಗೋಪಾಲಕೃಷ್ಣ ಅಡಿಗ

ಭ್ರಷ್ಟಾಚಾರದ ಆರೋಪಿಗಳ ವಿಚಾರಣೆಗೆ ಅನುಮತಿ ನಿರಾಕರಣೆ ಅಕ್ಷಮ್ಯ

2011ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆಸಿದ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರಾಗಿದ್ದ ಗೋನಾಳ ಭೀಮಪ್ಪ ಮತ್ತು ಸದಸ್ಯರಾಗಿದ್ದ ಒಂಬತ್ತು ಮಂದಿಯ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣಾ ಪ್ರಕ್ರಿಯೆ ಆರಂಭಿಸಲು ಅನುಮತಿ ಕೋರುವ (ಪ್ರಾಸಿಕ್ಯೂಷನ್) ಕಡತವನ್ನು ರಾಷ್ಟ್ರಪತಿಯವರಿಗೆ ಕಳುಹಿಸುವ ಪ್ರಸ್ತಾವವನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತಿರಸ್ಕರಿಸಲಾಗಿದೆ. ಇದಲ್ಲದೇ ನಾಲ್ಕು ಪ್ರಕರಣಗಳಲ್ಲಿ ಭ್ರಷ್ಟಾಚಾರದ ಆರೋಪ ಮೇಲ್ನೋಟಕ್ಕೆ ಸಾಬೀತಾದ ಕಾರಣದಿಂದ ಇಬ್ಬರು ನಿವೃತ್ತ ಐಎಎಸ್ ಅಧಿಕಾರಿಗಳೂ ಸೇರಿದಂತೆ ಎಂಟು ಮಂದಿ ನಿವೃತ್ತ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರು ಮಾಡಿದ್ದ ಶಿಫಾರಸುಗಳನ್ನೂ ತಿರಸ್ಕರಿಸುವ ನಿರ್ಣಯವನ್ನು ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ. ಸರ್ಕಾರದ ಈ ತೀರ್ಮಾನಗಳು ಸದುದ್ದೇಶದಿಂದ ಕೂಡಿಲ್ಲ. ಆಡಳಿತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ, ದುರಾಡಳಿತವನ್ನು ನಿಯಂತ್ರಿಸಬೇಕಾದರೆ ಅವುಗಳನ್ನು ಕಿಂಚಿತ್ತೂ ಸಹಿಸುವುದಿಲ್ಲ ಎಂಬ ಕಠಿಣ ನಿಲುವನ್ನು ಸರ್ಕಾರ ತಾಳಬೇಕಾಗುತ್ತದೆ. ಅಕ್ರಮಗಳಲ್ಲಿ ಭಾಗಿಯಾದವರನ್ನು ಕಾನೂನಿನ ವ್ಯಾಪ್ತಿಯಲ್ಲಿ ಶಿಕ್ಷಿಸಲು ಇರುವ ಎಲ್ಲ ಅವಕಾಶಗಳನ್ನೂ ಸಂಪೂರ್ಣವಾಗಿ ಬಳಸಿಕೊಳ್ಳಬೇಕಾಗುತ್ತದೆ. ಆದರೆ, ಸರ್ಕಾರ ಈಗ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ನಿಲುವನ್ನು ತಳೆದಿರುವುದು ದುರದೃಷ್ಟಕರ ಬೆಳವಣಿಗೆ.

ಇಂತಹ ಪ್ರಕರಣಗಳಲ್ಲಿ ಯಾವುದೇ ಒತ್ತಡಕ್ಕೆ ಮಣಿಯದೆ ನಿರ್ಧಾರ ಕೈಗೊಳ್ಳಬೇಕಾದ ಸಂವಿಧಾನಬದ್ಧ ಹೊಣೆಗಾರಿಕೆ ಸರ್ಕಾರದ ಮೇಲಿದೆ

362 ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಪರೀಕ್ಷಾ ಫಲಿತಾಂಶವನ್ನು 2013ರ ಮಾರ್ಚ್ 21ರಂದು ಪ್ರಕಟಿಸಲಾಗಿತ್ತು. ಆದರೆ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಅಭ್ಯರ್ಥಿಯೊಬ್ಬರು 2013ರ ಮೇ ತಿಂಗಳಲ್ಲಿ ಅಡ್ವೊಕೇಟ್ ಜನರಲ್ ಕಚೇರಿಗೆ ದೂರು ಸಲ್ಲಿಸಿದ್ದರು. ಬಳಿಕ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಸಿಐಡಿಯು ತನಿಖೆಯನ್ನು ಪೂರ್ಣಗೊಳಿಸಿ ಸೆಪ್ಟೆಂಬರ್‌ನಲ್ಲಿ ತನಿಖಾ ವರದಿಯನ್ನು ಸಲ್ಲಿಸಿತ್ತು. ಕೆಪಿಎಸ್‌ಸಿಯ ಆಗಿನ ಅಧ್ಯಕ್ಷ ಮತ್ತು ಹಲವು ಸದಸ್ಯರು ಅಕ್ರಮಗಳಲ್ಲಿ ಭಾಗಿಯಾಗಿರುವುದು ದೃಢಪಟ್ಟಿದ್ದು, ಅವರ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಲು ಅನುಮತಿ ನೀಡಬೇಕು ಎಂದು ಸಿಐಡಿ ಶಿಫಾರಸು ಮಾಡಿತ್ತು. ಎಂಟು ವರ್ಷಗಳಾದರೂ ಈ ವಿಚಾರದಲ್ಲಿ ರಾಜ್ಯ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ. ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿರಲು 2021ರ ಮೇ 27ರಂದು ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ, ಆರೋಪಿಗಳ ವಿರುದ್ಧ ವಿಚಾರಣೆ ಆರಂಭಿಸಲು ಅನುಮತಿ ಕೋರಿ ರಾಜ್ಯಪಾಲರ ಮೂಲಕ ರಾಷ್ಟ್ರಪತಿಯವರಿಗೆ ಪ್ರಸ್ತಾವ ಸಲ್ಲಿಸುವ ನಿರ್ಧಾರವನ್ನು ಆಗ ಕೈಗೊಳ್ಳಲಾಗಿತ್ತು. ನೇಮಕಾತಿ ಅಧಿಸೂಚನೆಯನ್ನೇ ವಾಪಸ್ ಪಡೆಯುವ ರಾಜ್ಯ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. ಆದರೆ, 2022ರಲ್ಲಿ ರಾಜ್ಯ ಸರ್ಕಾರವು ಪ್ರತ್ಯೇಕ ಕಾಯ್ದೆಯೊಂದನ್ನು ಜಾರಿಗೊಳಿಸಿ, ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿತ್ತು. ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ 2023ರ ಡಿಸೆಂಬರ್‌ನಲ್ಲಿ ರಾಜ್ಯಪಾಲರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. 2021ರ ಸಂಪುಟ ಸಭೆಯ ನಿರ್ಣಯವನ್ನು ಉಲ್ಲೇಖಿಸಿದ್ದ ರಾಜ್ಯಪಾಲರು, ಪ್ರಸ್ತಾವಕ್ಕೆ ಒಪ್ಪಿಗೆ ನೀಡಲು ನಿರಾಕರಿಸಿದ್ದರು. ಸಕ್ಷಮ ಪ್ರಾಧಿಕಾರಿಯಾದ ರಾಷ್ಟ್ರಪತಿಯವರ ಅನುಮತಿ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಬಹುದು ಎಂಬ ಷರಾದೊಂದಿಗೆ ಕಡತವನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದ್ದರು. ಈಗ, ಆರೋಪಿಗಳು ನಿವೃತ್ತರಾಗಿದ್ದಾರೆ ಎಂಬ ಕಾರಣವನ್ನೇ ಮುಂದಿಟ್ಟುಕೊಂಡು, ವಿಚಾರಣೆಗೆ ಅನುಮತಿ ನಿರಾಕರಿಸುವ ನಿರ್ಧಾರವನ್ನು ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಕೆಪಿಎಸ್‌ಸಿಗೂ ಅಕ್ರಮಗಳಿಗೂ ಬಿಡದ ನಂಟು ಎಂಬ ಪರಿಸ್ಥಿತಿ ಇದೆ. ನೇಮಕಾತಿ ಪರೀಕ್ಷೆಗಳು ನಡೆದಾಗಲೆಲ್ಲ ಅಕ್ರಮದ ಆರೋಪಗಳು ಕೇಳಿಬರುತ್ತಿವೆ. ಕೆಪಿಎಸ್‌ಸಿಯನ್ನು ಆಮೂಲಾಗ್ರವಾಗಿ ಶುದ್ಧೀಕರಿಸುವುದಾಗಿ ಘೋಷಿಸಿದ ಸರ್ಕಾರವೇ ಭ್ರಷ್ಟಾಚಾರದ ಆರೋಪಿಗಳ ರಕ್ಷಣೆಗೆ ನಿಲ್ಲುವ ನಿರ್ಣಯ ಕೈಗೊಂಡಿರುವುದು ವಿಪರ್ಯಾಸ. ಇಂತಹ ಪ್ರಕರಣಗಳಲ್ಲಿ ಯಾವುದೇ ಒತ್ತಡಕ್ಕೆ ಮಣಿಯದೆ ನಿರ್ಧಾರ ಕೈಗೊಳ್ಳಬೇಕಾದ ಸಂವಿಧಾನಬದ್ಧ ಹೊಣೆಗಾರಿಕೆ ಸರ್ಕಾರದ ಮೇಲಿದೆ. ಸಿಐಡಿ ವರದಿಯಲ್ಲಿನ ಶಿಫಾರಸಿನಂತೆ ತಪ್ಪಿತಸ್ಥರನ್ನು ಕಾನೂನಿನ ವ್ಯಾಪ್ತಿಯಲ್ಲಿ ವಿಚಾರಣೆಗೆ ಗುರಿಪಡಿಸುವ ಕೆಲಸ ಆಗಲೇಬೇಕು. ವಿಚಾರಣೆಗೆ ಅನುಮತಿ ನಿರಾಕರಿಸುವ ನಿರ್ಣಯವನ್ನು ಹಿಂಪಡೆದು, ಸರಿಯಾದ ಕ್ರಮದಲ್ಲಿ ರಾಷ್ಟ್ರಪತಿಯವರಿಗೆ ಪ್ರಸ್ತಾವ ಸಲ್ಲಿಸುವ ದೃಢ ನಿರ್ಧಾರವನ್ನು ಸರ್ಕಾರ ತಳೆಯಬೇಕು.

ಬುಡ್ಗಜಂಗಮ, ಬೇಡಜಂಗಮರ ಮೀಸಲಾತಿ ಕಸಿಯುವ ಹುನ್ನಾರಕ್ಕೆ ತಡೆ ಬೀಳಲಿ

‘ಜಂಗಮ’ ವಿವಾದಕ್ಕೂ ಅಳಿವಿಲ್ಲ!

ವಿಶ್ಲೇಷಣೆ

ಸಿ.ಎಸ್.ದ್ವಾರಕಾನಾಥ್

‘ಲಿಂಗಾಯತ ಸಮುದಾಯದಲ್ಲಿರುವ ಬೇಡಜಂಗಮರನ್ನು ನೀವು ಎಸ್‌ಸಿ (ಪರಿಶಿಷ್ಟ ಜಾತಿ) ಪಟ್ಟಿಗೆ ಸೇರಿಸುತ್ತಿದ್ದೀರಿ. ನಾಲ್ಕು ಲಕ್ಷ ಜನ ಎಸ್‌ಸಿ ಪಟ್ಟಿಗೆ ಹೇಗೆ ಬಂದರು? ಲಿಂಗಾಯತರಲ್ಲಿನ ಬಡವರ್ಗದವರಿಗೆ ಅಗತ್ಯ ಬಿದ್ದರೆ ಪ್ರೋತ್ಸಾಹ ನೀಡೋಣ. ಆದರೆ ಬೇಡಜಂಗಮರು ತಾವು ಎಸ್‌ಸಿ ಎಂದು ತೋರಿಸುವುದು ತಪ್ಪು. ಸುಳ್ಳು ಜಾತಿಪತ್ರ ನೀಡುವವರನ್ನು ಒಳಹಾಕಬೇಕು. ಸರ್ಕಾರ ಈ ಬಗ್ಗೆ ಗಮನಹರಿಸಬೇಕು’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಹೊಸಪೇಟೆಯಲ್ಲಿ ನಡೆದ ರಾಜ್ಯ ಸರ್ಕಾರದ ಸಾಧನಾ ಸಮಾವೇಶದಲ್ಲಿ ಗುಡುಗಿದ್ದಾರೆ.

ಇದಕ್ಕೂ ಮುಂಚೆ ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ‘ನಡಾವಳಿ’ಯೊಂದನ್ನು ಹೊರಡಿಸಿ, ಇದೇ ಬೇಡ ಜಂಗಮ, ಬುಡ್ಗಜಂಗಮ ವಿವಾದದ ಬಗ್ಗೆ ಪ್ರಸ್ತಾಪಿಸಿ, ವೀರಶೈವ ಲಿಂಗಾಯತರು ಪರಿಶಿಷ್ಟ ಪಟ್ಟಿಯಲ್ಲಿರುವ ಬುಡ್ಗ-ಬೇಡ ಜಂಗಮರ ಮೀಸಲಾತಿ ಕಸಿಯುತ್ತಿರುವ ಬಗ್ಗೆ ಗಮನ ಸೆಳೆದಿದ್ದಾರೆ. ಒಳಮೀಸಲಾತಿ ಸಂಬಂಧ ಪರಿಶಿಷ್ಟ ಜಾತಿಗಳ ಸಮೀಕ್ಷೆ ಮಾಡುತ್ತಿರುವ ಸಂದರ್ಭದಲ್ಲಿ ಈ ವಿವಾದ ಮುನ್ನೆಲೆಗೆ ಬಂದಿದೆ.

ವೀರಶೈವ ಲಿಂಗಾಯತರ ಒಂದು ವರ್ಗದವರು ಬೇಡ- ಬುಡ್ಗ ಜಂಗಮರ ಮೀಸಲಾತಿಯನ್ನು ಕಸಿಯುತ್ತಿದ್ದಾರೆ ಎಂಬ ಆರೋಪ ನಿನ್ನೆ ಮೊನ್ನೆಯದಲ್ಲ. ನಾಲ್ಕೈದು ದಶಕಗಳಿಂದಲೂ ಇದು ಮತ್ತೆ ಮತ್ತೆ ಚರ್ಚೆಗೆ ಬರುತ್ತಿದೆ. ಆ ಸಂದರ್ಭದ ಬಿಸಿ ಮುಗಿದ ನಂತರ ತಣ್ಣಗಾಗುತ್ತದೆ. ಇದಕ್ಕೆ ಶಾಶ್ವತ ಪರಿಹಾರ ದೊರಕಿಸಲು ಯಾವ ಪಕ್ಷದ ನೇತೃತ್ವದ ಸರ್ಕಾರವೂ ಪ್ರಯತ್ನಿಸಿಲ್ಲ.

ಬೇಡಜಂಗಮ, ಬುಡ್ಗಜಂಗಮ ಮತ್ತು ಬೇಡುವ ಜಂಗಮ ಎಂಬ ಹೆಸರುಗಳಲ್ಲಿ ‘ಜಂಗಮ’ ಎಂಬ ಪದ ಇರುವುದರಿಂದಲೂ ವೀರಶೈವರಲ್ಲಿ ‘ಜಂಗಮ’ ಪಂಗಡದವರು ಪ್ರಮುಖವಾಗಿ ಇರುವುದರಿಂದಲೂ ಅದರಲ್ಲೂ ವೀರಶೈವರಲ್ಲಿ ಬೇಡುವ ಜಂಗಮ ಎಂಬ ಪಂಗಡದವರೇ ಇರುವುದರಿಂದಲೂ ಇದರ ಫಲವನ್ನು ವೀರಶೈವರು ಪಡೆಯಲಾರಂಭಿಸಿದರು (ಬೇಡುವ ಜಂಗಮರು ಮೂಲತಃ ಹಿಂದುಳಿದ ವರ್ಗಗಳ ಪ್ರವರ್ಗ 3(ಬಿ) ಪಟ್ಟಿಯಲ್ಲಿ ಬರುತ್ತಾರೆ). ಇದರಿಂದಾಗಿ, ಅಲೆಮಾರಿಗಳಾದ ಬುಡ್ಗ-ಬೇಡ ಜಂಗಮರಿಗೆ ಅಪಾರ ಅನ್ಯಾಯ ಆಗತೊಡಗಿತು. ಹಾಗೆ ನೋಡಿದರೆ, ಅಲೆಮಾರಿಗಳಾದ ಬುಡ್ಗ-ಬೇಡ ಜಂಗಮರಿಗೂ ಜಾತಿ ಶ್ರೇಣೀಕರಣದ ಮೇಲಿರುವ ಬೇಡುವ ಜಂಗಮ ಎಂಬ ವೀರಶೈವರಿಗೂ ಯಾವುದೇ ಸಂಬಂಧವಿಲ್ಲ. ತಮ್ಮ ಪಾಲನ್ನು ಇತರರು ತಿನ್ನುತ್ತಿರುವುದರ ವಿರುದ್ಧ ಬುಡ್ಗ-ಬೇಡ ಜಂಗಮರು ದಶಕಗಳಿಂದಲೂ ಹೋರಾಟ ಮಾಡುತ್ತಲೇ ಇದ್ದಾರೆ. ರಾಜಕೀಯ ಪ್ರಾತಿನಿಧ್ಯ, ಪ್ರಭಾವ ಇಲ್ಲದ ಈ ಬುಡ್ಗ-ಬೇಡಜಂಗಮ ಎಂಬ ಅಸಂಘಟಿತ ನತದೃಷ್ಟರ ಹೋರಾಟಕ್ಕೆ ಸರ್ಕಾರಗಳು ಜಾಣ ಕಿವುಡಾಗುತ್ತಲೇ ಇವೆ!

ನೂರಾರು ವರ್ಷಗಳ ಹಿಂದೆ ಆಂಧ್ರಪ್ರದೇಶದಿಂದ ಅಲೆಮಾರಿ ಜೀವನ ಸಾಗಿಸುತ್ತಾ ಬಂದಿರಬಹುದಾದ ಬುಡ್ಗ-ಬೇಡ ಜಂಗಮರು ಇಂದಿಗೂ ಅಲೆಮಾರಿ ಜೀವನವನ್ನೇ ನಡೆಸುತ್ತಿದ್ದಾರೆ. ಇವರಿಗೆ 1990ರವರೆಗೂ ತಮ್ಮ ಜಾತಿ ಯಾವುದೆಂದೇ ಗೊತ್ತಿರಲಿಲ್ಲ. ಊರ ಹೊರಗಿನ ಬಯಲಿನಲ್ಲಿ, ರೈಲ್ವೆ ಹಳಿಗಳ ಆಸುಪಾಸಿನಲ್ಲಿ, ಹೆದ್ದಾರಿ ಪಕ್ಕ, ಸ್ಮಶಾನಗಳ ಸೆರಗಿನಲ್ಲಿ, ಪಾಳು ಮಂಟಪಗಳಲ್ಲಿ ಹಳೆಯ ಬಟ್ಟೆ, ಟಾರ್ಪಾಲು, ಪ್ಲಾಸ್ಟಿಕ್ ಚೀಲಗಳಿಂದ ಗುಡಾರ ಹಾಕಿಕೊಂಡು ಜೀವನ ನಡೆಸುವ ಇವರ ಮಾತೃಭಾಷೆ ಬುಡ್ಗಭಾಷೆ ಮತ್ತು ತೆಲುಗು. ಕುಲಶಾಸ್ತ್ರೀಯ ಅಧ್ಯಯನಕಾರರು ಮತ್ತು ಮಾನವಶಾಸ್ತ್ರಜ್ಞರು ಇವರು ಬದುಕುವ ಪ್ರದೇಶ ಹಾಗೂ ವೇಷಭಾಷೆ ಆಧರಿಸಿ ಬುರ‍್ರಕತೆಯವರು, ಬಹುರೂಪಿಗಳು, ಬೈರಾಗಿಗಳು, ಭಿಕ್ಷುಕರು ಎಂದು ಕರೆದರು. ‘ಬುಡ್ಗ’ ಎಂಬ ತಂಬೂರಿವಾದ್ಯ ನುಡಿಸುತ್ತಾ ಭಿಕ್ಷೆ ಬೇಡುತ್ತಾ ಊರೂರು ಅಲೆಯುವ ಕಾರಣಕ್ಕೆ ಬುಡ್ಗ ಜಂಗಮರು ಎಂದರು.

ಅಳಿಲು, ಆಮೆ, ಉಡ, ಕಾಡುಬೆಕ್ಕು, ಮುಂಗುಸಿ, ಬಯಲು ಇಲಿಗಳನ್ನು ಬೇಟೆಯಾಡಿ ತಿನ್ನುವುದರಿಂದ ಇವರನ್ನು ಬೇಡಜಂಗಮ ಎಂದು ಕರೆದರು. ಬೇಡರಂತೆ ಬೇಟೆಯಾಡುವುದೇ ಇವರಿಗೆ ಬೇಡಜಂಗಮ ಎಂತಲೂ ಹೆಸರು ಬರಲು ಕಾರಣವಾಯಿತು. ಪರಿಶಿಷ್ಟರ ಪಟ್ಟಿ ತಯಾರು ಮಾಡಿದವರು ಈ ಬಡವರಿಗೆ ಅನ್ಯಾಯ ಆಗದಿರಲೆಂದು ಬುಡ್ಗಜಂಗಮ ಮತ್ತು ಬೇಡಜಂಗಮ ಎರಡೂ ಹೆಸರುಗಳನ್ನು ಸೇರಿಸಿರುವ ಸದುದ್ದೇಶ ಇದ್ದಂತಿದೆ. ಆದರೆ ಇದನ್ನು ಬೇಡುವ ಜಂಗಮರು ಬಳಸಿಕೊಳ್ಳಬಹುದೆಂದು ಆಗಿನ ಕಾಲದಲ್ಲಿ ಅವರು ಎಣಿಸಿರಲಾರರು. ಬೇಡುವ ಜಂಗಮರು ಮೂಲತಃ ವೀರಶೈವರಾಗಿದ್ದು, ಇವರಲ್ಲಿ ಕೆಲವರು ತಮ್ಮ ಮಠಕ್ಕಾಗಿ ಭಿಕ್ಷಾಟನೆ ಮಾಡುವುದು ನಿಜ. ಇವರು ಭಿಕ್ಷೆಗೆ ಹೋದಾಗ ಬುಡ್ಗಜಂಗಮರಂತೆ ಟೆಂಟುಗಳಲ್ಲಿ ವಾಸಿಸುವುದಿಲ್ಲ, ಮಾಂಸಾಹಾರ ಸೇವಿಸುವುದಿಲ್ಲ (ಇವರು ಅಪ್ಪಟ ಸಸ್ಯಾಹಾರಿಗಳು). ಬದಲಿಗೆ ಯಾವುದೋ ಮಠದಲ್ಲೋ ಶಿವಾಲಯದಲ್ಲೋ ಶರಣರ ಮನೆಗಳಲ್ಲೋ ತಂಗುತ್ತಾರೆ. ಇವರು ಭಿಕ್ಷೆ ಬೇಡುವುದು ಬಹುತೇಕ ವೀರಶೈವರ ಮನೆಗಳಲ್ಲೇ. ಇವರ ಉದ್ದೇಶ ಧರ್ಮಪ್ರಚಾರ ಮತ್ತು ಮಠಗಳ ಮುನ್ನಡೆಸುವಿಕೆ, ಅಷ್ಟೆ.

ಬುಡ್ಗ-ಬೇಡ ಜಂಗಮರಿಗೆ ತಮ್ಮದೇ ಆದ ಬೆಡಗುಗಳಿವೆ. ಆಲಂ, ಅವದೂತ, ಇನಕೊಂಡ, ಈರಪಲ್ಲಿ ಮುಂತಾಗಿ 150 ಬೆಡಗುಗಳಿವೆ. ಆದರೆ ಬೇಡುವ ಜಂಗಮರನ್ನು ತಗ್ಗಿನಮಠ, ಗಚ್ಚಿನಮಠ, ಹಿರೇಮಠ, ಚಿಕ್ಕಮಠ ಮುಂತಾಗಿ ಗುರುತಿಸುತ್ತಾರೆ. ಸುಂಕಲಮ್ಮ, ಜಂಬಾಲಮ್ಮ, ಮಾರಮ್ಮ, ಪೋಷಮ್ಮ ಅವರು ಬುಡ್ಗ-ಬೇಡ ಜಂಗಮರ ಆರಾಧ್ಯದೈವಗಳಾಗಿದ್ದು, ಇವರಿಗೆ ಯಾವುದೇ ಗುರುಪೀಠವಿಲ್ಲ. ಆದರೆ ಬೇಡುವ ಜಂಗಮರಿಗೆ ತಮ್ಮದೇ ಆದ ವೀರಶೈವ ಪುರಾಣಗಳಿವೆ. ಹೀಗೆ ಬುಡ್ಗ-ಬೇಡಜಂಗಮ ಮತ್ತು ಬೇಡುವ ಜಂಗಮರ ನಡುವೆ ಆಕಾಶ, ಭೂಮಿಯಷ್ಟೇ ಅಂತರವಿದೆ.

ಈ ವಿವಾದ ಆರಂಭವಾದುದು ಬುಡ್ಗ-ಬೇಡ ಜಂಗಮರ ಜನಸಂಖ್ಯೆ ಏಕಾಏಕಿ ಅತಿಯಾಗಿ ಬೆಳೆದ ಕಾರಣಕ್ಕೆ! ಹಿಂದಿನ ಆರು ದಶಕಗಳಲ್ಲಿ ಜನಗಣತಿ ಆಯುಕ್ತರು ದಾಖಲಿಸಿದಂತೆ, ಕರ್ನಾಟಕದಲ್ಲಿ ಬೇಡ-ಬುಡ್ಗ ಜಂಗಮರ ಸಂಖ್ಯೆ 1961ರಲ್ಲಿ 5,141 ಇದ್ದದ್ದು 1971ರಲ್ಲಿ 13,676ಕ್ಕೆ ಬೆಳೆಯಿತು. ನ್ಯಾಯಮೂರ್ತಿ ಸದಾಶಿವ ಆಯೋಗ ಗುರುತಿಸಿದಂತೆ, ಕ್ರಮವಾಗಿ 1981ರಲ್ಲಿ 3,035, 1991ರಲ್ಲಿ 1,21,056, 2001ರಲ್ಲಿ 54,873, 2010ರಲ್ಲಿ 20,289ರಂತೆ ಹೆಚ್ಚುಕಡಿಮೆ ಆಗತೊಡಗಿತು. ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷೆಯಂತೆ, 2011ರಲ್ಲಿ 1,17,164 ಇದ್ದದ್ದು 2014ಕ್ಕೆ ಒಮ್ಮೆಲೇ 4,10,804ಕ್ಕೆ ಏರಿತು! ಈ ರೀತಿಯಲ್ಲಿ ಇದೊಂದೇ ಸಮುದಾಯದ ಜನಸಂಖ್ಯೆಯಲ್ಲಿ ಏರುಪೇರಾಗುವುದಕ್ಕೆ ಆಗ ಇದ್ದ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಕಾರಣವಾಗಿರಬಹುದು. ಏಕೆಂದರೆ ವೀರಶೈವ ಸಮುದಾಯದವರು ಮುಖ್ಯಮಂತ್ರಿಯಾಗಿದ್ದಾಗ ಮಾತ್ರ ಅತ್ಯಂತ ಧೈರ್ಯವಾಗಿ ಬುಡ್ಗಜಂಗಮ ಮತ್ತು ಬೇಡ ಜಂಗಮ ಹೆಸರಿನಲ್ಲಿ ಹೆಚ್ಚು ಜಾತಿ ಪ್ರಮಾಣಪತ್ರಗಳನ್ನು ಪಡೆಯಲು ಕಾರಣವಾಗಿರುವ ಸಾಧ್ಯತೆ ಇದೆ.

ಇಂತಹ ಬೆಳವಣಿಗೆಯ ಬಗ್ಗೆ 2011ರಲ್ಲಿಯೇ ಬೇಸರ ವ್ಯಕ್ತಪಡಿಸಿದ್ದ ಸಂಶೋಧಕ ಎಂ.ಎಂ. ಕಲಬುರ್ಗಿ ಅವರು, ‘ಬುಡ್ಗಜಂಗಮರಿಗೆ ಅರ್ಹವಾಗಿ ದೊರೆಯಬೇಕಿದ್ದ ಸೌಲಭ್ಯಗಳನ್ನು ವೀರಶೈವ ಜಂಗಮರು ಬೇಡಜಂಗಮರ ಹೆಸರಿನಲ್ಲಿ ಪಡೆಯುತ್ತಿದ್ದಾರೆ. ಇದಕ್ಕೆ ಕೆಲವು ಲಿಂಗಾಯತ ಮಠಾಧೀಶರು ಪ್ರೋತ್ಸಾಹ ನೀಡುತ್ತಿರುವುದು ದುರ್ದೈವ. ಮೇಲ್ವರ್ಗದವರು ಎನ್ನಿಸಿಕೊಂಡವರಿಂದಲೇ ಬುಡ್ಗಜಂಗಮರಿಗೆ ಅನ್ಯಾಯವಾಗುತ್ತಿದೆ. ಇದಕ್ಕೆ ಸಮಾಜದ ಪರವಾಗಿ ನಾನು ಕ್ಷಮೆ ಕೇಳುತ್ತೇನೆ’ ಎಂದಿದ್ದರು. ಈ ಹಿಂದೆ ಬುಡ್ಗಜಂಗಮ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆದ ರವೀಂದ್ರಸ್ವಾಮಿ ಎನ್ನುವವರಿಗೆ ಹೈಕೋರ್ಟ್ ₹ 1 ಲಕ್ಷ ದಂಡ ಹಾಕಿತ್ತು. ಇಂದಿಗೂ ಇದಕ್ಕೆ ಸಂಬಂಧಿಸಿದ ನೂರಾರು ಪ್ರಕರಣಗಳು ಸಿ.ಆರ್.ಇ. ಸೆಲ್‌ನಲ್ಲಿ ಬಾಕಿ ಇವೆ. ಇದಕ್ಕೆ ಪರಿಹಾರ ಕಷ್ಟಸಾಧ್ಯವಲ್ಲ. ಸಿ.ಆರ್.ಇ. ಸೆಲ್ ಅನ್ನು ಚುರುಕುಗೊಳಿಸಿ, ಈವರೆಗೂ ಬುಡ್ಗ-ಬೇಡ ಜಂಗಮ ಜಾತಿ ಪ್ರಮಾಣಪತ್ರ ಪಡೆದವರನ್ನು ತನಿಖೆಗೆ ಒಳಪಡಿಸಬಹುದು. ಅವರ ಹಿನ್ನೆಲೆ ಮತ್ತು ಕುಲಶಾಸ್ತ್ರೀಯ ಅಧ್ಯಯನದಿಂದ ನಕಲಿಗಳನ್ನು ಬೇರ್ಪಡಿಸಿ ಸಮಸ್ಯೆ ಪರಿಹರಿಸುವುದು ಸುಲಭ. ಬೇಡಜಂಗಮ ಎನ್ನುವುದೇ ಈ ಸಮಸ್ಯೆಗೆ ಕಾರಣವಾಗಿರುವುದರಿಂದ ಪರಿಶಿಷ್ಟ ಜಾತಿ ಪಟ್ಟಿಯಿಂದ ಬೇಡಜಂಗಮ ಎನ್ನುವುದನ್ನು ತೆಗೆದು ಬುಡ್ಗಜಂಗಮ ಹೆಸರನ್ನು ಮಾತ್ರ ಉಳಿಸಿಕೊಳ್ಳಬಹುದು.

ಬೇಡಜಂಗಮ ಜಾತಿ ಪ್ರಮಾಣಪತ್ರ ನೀಡುವಾಗ ಸುಪ್ರೀಂ ಕೋರ್ಟ್ ಆದೇಶದಂತೆ, ಸ್ಥಳ ಪರಿಶೀಲನೆ ಮಾಡಿ ಅರ್ಹರಿಗೆ ಮಾತ್ರ ನೀಡಲು ತಹಶೀಲ್ದಾರರಿಗೆ ಆದೇಶಿಸಬಹುದು. ಪರಿಹಾರಗಳೇನೋ ಇವೆ, ಆದರೆ ಎಲ್ಲದಕ್ಕೂ ಸರ್ಕಾರಕ್ಕೆ ಇಚ್ಛಾಶಕ್ತಿ ಇರಬೇಕಷ್ಟೆ.

ಚುರುಮುರಿ

ಆಯೋಗ-ನಿಯೋಗ!

● ತುರುವೇಕೆರೆ ಪ್ರಸಾದ್

‘ಲೇಯ್, ಆಯೋಗಕ್ಕೂ ನಿಯೋಗಕ್ಕೂ ಏನ್ಲಾ ಯತ್ವಾಸ?’ ಸಿಬಿರಬ್ಬಿದ ಗುದ್ಲಿಂಗ ಹರಟೆಕಟ್ಟೇಲಿ.

‘ಒಬ್ರೋ ಇಬ್ರೋ ಇದ್ರೆ ಆಯೋಗ, ತುಂಬಾ ಜನ ಇದ್ರೆ ನಿಯೋಗ’ ಎಂದ ಮಾಲಿಂಗ.

‘ಅದು ಅಂಗಲ್ಲಲೇ, ತನಿಖೆಗೆ ಆಯೋಗ, ಮನವರಿಕೆಗೆ ನಿಯೋಗ’ ತಿದ್ದುಪಡಿ ಒತ್ತಿದ ಕಲ್ಲೇಶಿ.

‘ಆಯೋಗ ಏಕವ್ಯಕ್ತಿ ವ್ಯಸನ, ನಿಯೋಗ ಬಹುವ್ಯಕ್ತಿಗಳ ಪ್ರಹಸನ’.

‘ಆಯೋಗ ಕಮಿಷನ್ನು, ನಿಯೋಗ ಮಿಷನ್ನು. ಆಯೋಗ ವರ್ಷಗಟ್ಲೆ ಕೊಟಕೊಟ ಕೆಲಸ ಮಾಡುತ್ತೆ. ನಿಯೋಗ ಅಂದ್ರೆ ಹೋದ ಪುಟ್ಟ, ಬಂದ ಪುಟ್ಟ!’

‘ಆಮೇಲೆ ಆಯೋಗ ಅಂದ್ರೆ ತಮಗಾಗದವರ ವಿರುದ್ಧ ರಚನೆ ಮಾಡೋದು. ನಿಯೋಗ ಎಲ್ಲರನ್ನೂ ಸೇರಿಸ್ಕೊಂಡ್ ರಚನೆ ಮಾಡೋದು’.

‘ವ್ಹಾ ಅದೇಯ! ಆಯೋಗದಲ್ಲಿ ಪರಸ್ಪರ ಸಕತ್ ಬೈಯ್ಯಿ. ನಿಯೋಗದಲ್ಲಿ ಒಬ್ರಿಗೊಬ್ರು ಭಾಯಿ, ಭಾಯಿ’.

‘ಒಂದು ಏಕಪಕ್ಷಕ್ಕೆ ಅಭಿಯೋಗ, ಅಂದ್ರೆ ಉಗಿಯೋಗ, ಇನ್ನೊಂದು ಸರ್ವಪಕ್ಷಕ್ಕೆ ಫಾರಿನ್ ಯೋಗ’.

‘ಈಗ ಮೋದಿ ಅಣ್ಣ, ವೈರಿಗಳ ಷಡ್ಯಂತ್ರನ ಜಗತ್ತಿಗೇ ಮನವರಿಕೆ ಮಾಡಿ ಬನ್ನಿ ಅಂತ ಏಳು ದೇಶಕ್ಕೆ ಏಳು ನಿಯೋಗ ಕಳ್ಸವ್ರಲ್ಲಪ್ಪ’.

‘ಸದಾ ಸದನದಲ್ಲಿ ತೂಕಡಿಕೆ, ಕನವರಿಕೆ ಮಾಡೋರಿಗೆ ಈ ತರ ಅವಾಗವಾಗ ಲವಲವಿಕೆ ಇರ್ಬೇಕು ಬಿಡು’.

‘ಅದ್ರಲ್ಲೂ ಅಪಸ್ವರ ಎದ್ದೈತಲ್ಲ, ಕೈನೋರು ನಾವು ಶಿಫಾರಸು ಮಾಡ್ದೋರನ್ನ ಬಿಟ್ಟು ಶಶಿ ತರೂರ್ ಅವರನ್ನ ನಿಯೋಗದಲ್ಲಿ ಸೇರುಸ್ಕೊಂಡಿದೀರ ಅಂತ ಗರಂ ಆಗವ್ರಲ್ಲ’.

‘ಶಶಿ ತರೂರ್ ತಮ್ ಕೈ ತವರೂರು ಬಿಟ್ಟು ಕಮಲದಲ್ಲಿ ಚಂದ್ರನ್ನ ಅರಳಿಸೋಕೆ ಹೊಂಟವ್ರಂತೆ. ಅದ್ಕೇ ಮತ್ತೆ ನಿಯೋಗದಾಗೆ ಜಾಗ ಗಿಟ್ಟಿಸ್ಕಂಡಿರಾದು ಅಂತ ಸುದ್ದಿ ಹಬ್ಬೈತೆ’.

‘ಮತ್ತೆ ತಮ್ ಶಿಫಾರಸು ಧಿಕ್ಕರಿಸವ್ರೆ ಅಂತ ಕೈ ಪಾಳಯಕ್ಕೆ ಸಿಟ್ಟು ಬಂದಿರಕಿಲ್ವಾ? ಅದಕ್ಕೇ ರಾಗಾ ಸೀದಾ ಅಮೆರಿಕಾಗೆ ಓಗಿ, ಯಾವ್ದಾರ ಯೂನಿವರ್ಸಿಟೀಲಿ ಈ ವರ್ತನೇನ ಕಟು ಮಾತುಗಳಲ್ಲಿ ಖಂಡಿಸ್ತಾರೆ’.

‘ಆಮೇಲೆ ಅವರದ್ದೇ ಸರ್ಕಾರ ಬಂದಾಗ ಇದರ ತನಿಖೆಗೆ ಒಂದು ಆಯೋಗನೂ ರಚಿಸ್ತಾರೆ’ ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು.

ದಿನದ ಟ್ವೀಟ್

ಮಳೆ: ಇರಲಿ ಎಚ್ಚರ

... ಮಂಗಳೂರಿನಲ್ಲಿ ಭಾರಿ ಮಳೆ! ಈ ವರ್ಷ ಮುಂಗಾರು ಬೇಗ ಬಂದಂತೆ ಕಾಣುತ್ತಿದೆ... ಬೆಟ್ಟಗಳಿಗೆ ಅಥವಾ ಕರಾವಳಿಗೆ ರಸ್ತೆ ಮೂಲಕ ಪ್ರವಾಸ ತೆರಳಲು ಯೋಜಿಸುತ್ತಿರುವವರು ಎಚ್ಚರದಿಂದಿರಿ ಮತ್ತು ಬೆಳಗಿನ ಹೊತ್ತಿನಲ್ಲಷ್ಟೇ ವಾಹನ ಚಾಲನೆ ಮಾಡಿ. ನೀವು ಹೊಸದಾಗಿ ಚಾಲನೆ ಮಾಡುವವರಾಗಿದ್ದರೆ ಪ್ರಯಾಣಿಸದಿರುವುದೇ ಒಳ್ಳೆಯದು. ಏಕೆಂದರೆ, ಭಾರಿ ಮಳೆ ಜೊತೆಗೆ ಅಂಕುಡೊಂಕಾದ ರಸ್ತೆಗಳು ಅಪಾಯಕಾರಿ ಆಗಬಹುದು.

ಲೋಹಿತ್ ರಾವ್, ಛಾಯಾಗ್ರಾಹಕ

ಕಿಡಿನುಡಿ

1916ರಲ್ಲಿ ಸಂಸ್ಥೆ ಕಟ್ಟುವಲ್ಲಿ ಕೃಷ್ಣರಾಜ ಒಡೆಯರ್ ಪ್ರಮುಖ ಪಾತ್ರ ವಹಿಸಿದ್ದರು. ಅದರ ಸಾಬೂನು ದಶಕಗಳಿಂದಲೂ ಎಲ್ಲರ ಮನೆಯಲ್ಲಿ ಸ್ಥಾನ ಪಡೆದಿದೆ. ಅದರ ಬಹುತೇಕ ಉತ್ಪನ್ನಗಳನ್ನು ಬಳಸುತ್ತಿರುವವರೇ ಕನ್ನಡಿಗರು. ಇಂಥ ಸಂಸ್ಥೆಗೆ ಪರಭಾಷಾ ನಟಿಯನ್ನು ರಾಯಭಾರಿಯನ್ನಾಗಿ ಮಾಡಿದ್ದು ಹುಚ್ಚುತನದ್ದು. ಸಾಲದೆಂಬಂತೆ ₹ 6.20 ಕೋಟಿ ಸಂಭಾವನೆ ಕೊಟ್ಟು ರಾಯಭಾರಿ ಮಾಡಿರುವುದು ಅಕ್ಷಮ್ಯ.

(ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮದ (ಕೆಎಸ್‌ಡಿಎಲ್) ಪ್ರಚಾರ ರಾಯಭಾರಿಯಾಗಿ ನಟಿ ತಮನ್ನಾ ಭಾಟಿಯಾ ಅವರನ್ನು ನೇಮಿಸಿರುವುದಕ್ಕೆ ಪ್ರತಿಕ್ರಿಯೆ)

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

25 ವರ್ಷಗಳ ಹಿಂದೆ

ಬುಧವಾರ, 24-5-2000

● **ಪ್ರಸಕ್ತ ವರ್ಷದಿಂದ ಸಾವಿರ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ**

ನವದೆಹಲಿ, ಮೇ 23– ರಾಜ್ಯದ ಆಯ್ದ ಒಂದು ಸಾವಿರ ಹೈಸ್ಕೂಲ್‌ಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನೀಡುವ ಹೊಸ ಯೋಜನೆಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೇ ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

‘ಕಂಪ್ಯೂಟರ್ ಶಿಕ್ಷಣ ನಗರದ ಮಕ್ಕಳಿಗಷ್ಟೇ ಸೀಮಿತವಾಗದೆ ಗ್ರಾಮೀಣ ಮಕ್ಕಳಿಗೂ ಆ ಅವಕಾಶ ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶ’ ಎಂದು ಶಿಕ್ಷಣ ಸಚಿವ ಎಚ್. ವಿಶ್ವನಾಥ್ ತಿಳಿಸಿದ್ದಾರೆ.

● **ಎಸ್‌ಐ ಆತ್ಮಹತ್ಯೆ**

ಮಂಗಳೂರು, ಮೇ 23– ಹಣ ಸ್ವೀಕಾರದ ಆರೋಪ ಹೊತ್ತ ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಒಬ್ಬರು ಪೊಲೀಸ್ ಠಾಣೆಯಲ್ಲಿಯೇ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಇಂದು ಮಧ್ಯಾಹ್ನ ನಡೆದಿದೆ.

ಪಾಂಡೇಶ್ವರ ಠಾಣೆಯಲ್ಲಿ ಅಪರಾಧ ವಿಭಾಗದಲ್ಲಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮನೋಹರ ಸೋನ್ಸ್ (55) ಆತ್ಮಹತ್ಯೆ ಮಾಡಿಕೊಂಡವರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಮಲ್ ಪಂತ್ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 24-5-1975

● **ಅಕ್ಕಿ ಕೊಡಿ, ಇಲ್ಲವೇ ದಂಗೆ**

ವೆಲ್ಲೂರು, ಮೇ 23– ಅಕ್ಕಿಗಾಗಿ ರಾಜ್ಯವು ಸಲ್ಲಿಸಿರುವ ಬೇಡಿಕೆಯನ್ನು ಪೂರೈಸಲು ಕೇಂದ್ರ ಸರ್ಕಾರ ವಿಫಲವಾದರೆ ಕೇಂದ್ರದ ವಿರುದ್ಧ, ಹಿಂದೆಂದೂ ಕಾಣದಂಥ ಅಭಾವಪೀಡಿತ ಪರಿಸ್ಥಿತಿಗೊಳಗಾಗಿರುವ ತಮಿಳುನಾಡಿನ ಜನತೆ ‘ಬಂಡಾಯ’ ಏಳುವರೆಂದು ಮುಖ್ಯಮಂತ್ರಿ ಕರುಣಾನಿಧಿಯವರು ಇಲ್ಲಿ ಇಂದು ಹೇಳಿದರು.

ಅಭಾವ ಪರಿಹಾರ ಕಾಮಗಾರಿ ಸಂಬಂಧದಲ್ಲಿ ತಮಿಳುನಾಡಿನ ಬಗೆಗೆ ಕೇಂದ್ರ ‘ತಾರತಮ್ಯದ ಧೋರಣೆ’ ಅನುಸರಿಸುತ್ತಿದೆ ಎಂದು ಅವರು ಆಪಾದಿಸಿದರು.

● **‘ಕುರಿ’ ದಕ್ಷಿಣೆ**

ಸುಂದರ್‌ನಗರ್ (ಹಿಮಾಚಲ ಪ್ರದೇಶ), ಮೇ 23– ಮದುವೆ ಗಂಡು ವರದಕ್ಷಿಣೆಯಾಗಿ ಬಯಸಿದ್ದು ಸ್ಕೂಟರ್. ಆದರೆ ದೊರೆತಿದ್ದು ಒಂದು ಕುರಿ ಜತೆಗೆ ನಿಶ್ಚಯಿಸಿದ್ದ ಹೆಣ್ಣೂ ಕೈತಪ್ಪಿಹೋಗಿ ಬಡ ಹುಡುಗಿಯೊಬ್ಬಳಿಗೆ ತಾಳಿ ಕಟ್ಟಬೇಕಾಯಿತು.

ಇಲ್ಲಿಗೆ 30 ಕಿ.ಮೀ. ದೂರದ ಗ್ರಾಮದಲ್ಲಿ ಈ ಘಟನೆ ನಡೆದದ್ದು. ಹಸೆಮಣೆ ಏರುವ ಮುನ್ನ ಬೀಗರನ್ನು ಮದುಮಗ ಸ್ಕೂಟರ್ ಕೇಳಿದ್ದ. ಇದರಿಂದ ಮದುಮಗಳಿಗೆ ಸಿಟ್ಟು, ಬೇಸರ. ತಾಳಿ ಕಟ್ಟಿಸಿಕೊಳ್ಳಲು ನಿರಾಕರಿಸಿ ವಾಪಸು ಹೋಗಲು ಗಂಡಿನವರಿಗೆ ಸೂಚಿಸಿದಳು.

ದಿಗ್ಭ್ರಮೆಗೊಂಡ ಗಂಡಿನ ಕಡೆಯವರು ಕ್ಷಮೆ ಕೇಳಿದರು. ಆದರೆ ಹೆಣ್ಣಿನ ಮನಸ್ಸು ಕರಗಲಿಲ್ಲ. ಈ ಪರಿಸ್ಥಿತಿಯಲ್ಲಿ ಗ್ರಾಮಸ್ಥರು ಗಂಡಿನವರ ನೆರವಿಗೆ ಬಂದರು. ಬೇರೆ ಬಡ ಹುಡುಗಿಯೊಬ್ಬಳನ್ನು ತಂದು ಹೇಗೋ ಮದುವೆ ಮುಗಿಸಿದರು. ಜತೆಗೆ ವರದಕ್ಷಿಣೆಯಾಗಿ ಒಂದು ಕುರಿಯನ್ನೂ ಕೊಟ್ಟರು.

ಸಂಗತ

ಕಾರ್ಮಿಕರ ಕಾಯಲಿ ಕಾಯಕ

ಅಸಂಘಟಿತ ಕಾರ್ಮಿಕರ ಹಿತ ಕಾಯಲು ಇರುವ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕಾಗಿದೆ

● ಪ.ರಾಮಕೃಷ್ಣ ಶಾಸ್ತ್ರಿ

ಕಾರ್ಮಿಕ ವಲಯದಲ್ಲಿ ಪದೇಪದೇ ದುರಂತಗಳು ಘಟಿಸುತ್ತವೆ. ಲಾರಿಯಿಂದ ಕಬ್ಬಿಣದ ಪೈಪುಗಳನ್ನು ಇಳಿಸುವಾಗ ಆಯತಪ್ಪಿ ಬಿದ್ದ ಪೈಪುಗಳ ಕೆಳಗೆ ಸಿಲುಕಿ ಕಾರ್ಮಿಕರ ದುರ್ಮರಣ, ಕಲ್ಲುಕ್ವಾರಿಯಲ್ಲಿ ಸಂಭವಿಸಿದ ಸ್ಫೋಟಕ್ಕೆ ಕಾರ್ಮಿಕ ಬಲಿ, ಬಾಯ್ಲರ್ ಸಿಡಿದು ಹೋಟೆಲ್ ಕೆಲಸಗಾರ ಸಾವು... ಹೀಗೆ ಯಾರದೋ ತಪ್ಪಿಗೆ ಕೆಲಸಗಾರರು ಬಲಿಪಶುಗಳಾಗುತ್ತಲೇ ಹೋಗುತ್ತಾರೆ.

ಅಂತಹದ್ದೊಂದು ಪ್ರಕರಣ ಸಂಭವಿಸಿದ ಕೂಡಲೇ ಸುರಕ್ಷತಾ ಕ್ರಮಗಳನ್ನು ಅನುಸರಿಸದ ಸಂಗತಿ ಸುದ್ದಿಯಾಗುತ್ತದೆ. ಸಂಬಂಧಪಟ್ಟ ಮಾಲೀಕನ ಬಂಧನವೂ ಆಗುತ್ತದೆ. ಒಂದಷ್ಟು ದಿನ ಈ ವಿಷಯದ ಬಗ್ಗೆ ಚರ್ಚೆಗಳು ನಡೆಯುತ್ತವೆ. ಇಷ್ಟೆಲ್ಲ ಆದ ಮೇಲಾದರೂ ಜೀವ ಕಳೆದುಕೊಂಡವನನ್ನು ನಂಬಿದ ಕುಟುಂಬಕ್ಕೆ ಅನ್ನದ ದಾರಿ ದೊರಕೀತೇ? ಒಂದು ದುರಂತ ಘಟಿಸಿದ ಮೇಲಾದರೂ ಇಂತಹ ದುಡಿಮೆಯಲ್ಲಿ ತೊಡಗಿಕೊಂಡವರ ಸಂರಕ್ಷಣೆಗಾಗಿಯೇ ಇರುವ ಕಾನೂನಿನ ಬಿಗಿ ಹೆಚ್ಚಾಯಿತೇ ಎಂದು ನೋಡಿದರೆ, ಸಾವಿಗೆ ಕಾರಣವಾದ ಇನ್ನೊಂದು ದುರಂತ ಈ ಪ್ರಶ್ನೆಗೆ ನಕಾರಾತ್ಮಕ ಉತ್ತರ ನೀಡುತ್ತದೆ.

ಜೀವರಕ್ಷಣೆಯ ಅಭಯವೇ ಇಲ್ಲದೆ, ಪ್ರಾಣವನ್ನು ಪಣಕ್ಕಿಟ್ಟು ಸಾರ್ವಜನಿಕ ವಲಯದ ಕೆಲಸಗಳಲ್ಲಿ ತೊಡಗಿರುವ ಬಡ ಕಾರ್ಮಿಕರ ಸಂಖ್ಯೆ ಎಷ್ಟೆಂಬುದು ನಿಖರವಾಗಿ ನಮಗೆ ತಿಳಿಯದು. ಆದರೆ ಅವರ ದುಡಿಮೆಯ ಆಳ- ಅಗಲದ ಬಗ್ಗೆ ಯೋಚಿಸಿದಾಗ, ನಾವು ಅವರಿಗೆ ಕೈಯೆತ್ತಿ ಒಂದು ಸೆಲ್ಯೂಟ್ ಹೇಳಲೇಬೇಕು ಎನಿಸುತ್ತದೆ. ರಾಜ್ಯದಲ್ಲಿ ಜೀವಕ್ಕೆ ಕುತ್ತು ತರುವ ಹಲವು ಕಾಮಗಾರಿಗಳಲ್ಲಿ ದುಡಿದು ದುರಂತ ಸಾವಿಗೆ ಗುರಿಯಾಗುವವರಲ್ಲಿ ಉತ್ತರ ಕರ್ನಾಟಕದವರಿದ್ದಾರೆ, ಜಾರ್ಖಂಡ್, ಬಿಹಾರದಿಂದ ಬಂದವರಿದ್ದಾರೆ.

ಇವರೆಲ್ಲ ಮಾಡುವ ದುಡಿಮೆ ಸಣ್ಣದೇನಲ್ಲ. ಉರಿಯುವ ಸೂರ್ಯ ನೆತ್ತಿಯ ಮೇಲಿರುವಾಗಲೂ ಹೆದ್ದಾರಿಯ ಕಾಮಗಾರಿಯಲ್ಲಿ ತನ್ಮಯರಾಗುವವರಲ್ಲಿ ಬಹುತೇಕರು ಜಾರ್ಖಂಡ್ ಮೂಲದ ಕಾರ್ಮಿಕರು. ಒಂದುವೇಳೆ ಅವರು ಗೈರುಹಾಜರಾದರೆ ಅಂದಿನ ಕಾಮಗಾರಿಯೇ ಸ್ಥಗಿತವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಎರಡು ಲಾರಿಗಳ ನಡುವೆ ಅಪಘಾತ ಸಂಭವಿಸಿ, ಲಾರಿಯಲ್ಲಿದ್ದ ಜಲ್ಲಿಮಿಶ್ರಿತ ಬಿಸಿ ಡಾಂಬರು ಮೈಮೇಲೆ ಬಿದ್ದು ಲಾರಿ ಚಾಲಕರೊಬ್ಬರು ದಾರುಣ ಅಂತ್ಯ ಕಂಡರು. ಸೇತುವೆಗಳು, ರೈಲು ಹಳಿಗಳು, ಗಗನಚುಂಬಿ ಕಟ್ಟಡಗಳು, ದೂರವಾಣಿ ಗೋಪುರಗಳು... ಎಲ್ಲವುಗಳ ನಿರ್ಮಾಣದ ಮೂಲಕ ನಮಗೆ ಸೌಲಭ್ಯಗಳನ್ನು ಒದಗಿಸುವವರು ಈ ಕೆಲಸಗಾರರು. ಆದರೆ ಈ ಬಹು ದೊಡ್ಡ ಸಮೂಹದ ಪರಿಚಯ ಎಂದಿಗೂ ನಮಗೆ ಆಗದು. ‘ಉತ್ತಮ ಕೆಲಸಗಾರ’ ಎಂಬ ಪ್ರಶಸ್ತಿಯೇನೂ ಅವರನ್ನು ಅರಸಿಕೊಂಡು ಹೋಗುವುದಿಲ್ಲ.

ಅನೇಕರು ಹೇಳುವ ಪ್ರಕಾರ, ನೆರೆ ರಾಜ್ಯಗಳ ಕಾರ್ಮಿಕರು ತಮ್ಮ ಊರಿನಲ್ಲಿ ಕೆಲಸ ಸಿಗುವುದಿಲ್ಲ ಎಂಬ ಒಂದೇ ಕಾರಣಕ್ಕೆ ಕರ್ನಾಟಕಕ್ಕೆ ಬರುತ್ತಾರೆ. ಗುತ್ತಿಗೆದಾರರ ಕೈಕೆಳಗೆ ಬೆವರು ಹರಿಸುತ್ತಾರೆ. ರಕ್ಷಣಾತ್ಮಕ ವ್ಯವಸ್ಥೆಗಳಿಲ್ಲದ ಪರಿಣಾಮವಾಗಿ ಸಾವನ್ನಪ್ಪುವ ಕೆಲಸಗಾರನಿಗೆ ಹುತಾತ್ಮನ ಗೌರವವೇನೂ ಸಿಗುವುದಿಲ್ಲ. ಅವನನ್ನೇ ನಂಬಿದ ಕುಟುಂಬಕ್ಕೆ ಯೋಗ್ಯ ಪರಿಹಾರ ಕೊಡಿಸಲು ಕಾನೂನಿನ ಅಸ್ತ್ರ ಹಿಡಿದು ಹೋಗುವವರೂ ಇರುವುದಿಲ್ಲ. ಬಹುತೇಕ ಪ್ರಕರಣಗಳಲ್ಲಿ, ನ್ಯಾಯವಾಗಿ ಅವರಿಗೆ ಸಿಗುವ ಸಂಬಳವೆಷ್ಟು, ಗುತ್ತಿಗೆದಾರನ ಜೊತೆಗೆ ಕರಾರು ಮಾಡಿಕೊಂಡಿದ್ದಾರೆಯೇ ಎಂದು ವಿಚಾರಿಸುವ ಅಧಿಕಾರಿ ವರ್ಗವಿಲ್ಲ. ಹೀಗಾಗಿ, ಆಕಸ್ಮಿಕವಾಗಿ ಸಂಭವಿಸುವ ಎಷ್ಟೋ ದುರಂತಗಳು ಒಂದು ದಿನದ ಸುದ್ದಿಯಾಗಿ ಮಾಸಿಹೋಗುತ್ತವೆ.

ಒಂದು ಬೃಹತ್ ಕಟ್ಟಡದ ವಾಸ್ತು ವಿನ್ಯಾಸ ಮಾಡಿದ ತಂತ್ರಜ್ಞನ ಜಾಣ್ಮೆಯು ಪ್ರಶಸ್ತಿಗೆ ಮಾನ್ಯವಾಗುತ್ತದೆಯೇ ವಿನಾ ಗೋಡೆಯನ್ನು ಚಾಕಚಕ್ಯತೆಯಿಂದ ಕಟ್ಟಿದ ಕಾರ್ಮಿಕನ ನೈಪುಣ್ಯವಲ್ಲ. ಆ ಕಾರ್ಮಿಕ ಯಾರು, ಅಂತಹವರ ಸಂಖ್ಯೆ ಎಷ್ಟು ಎಂಬುದು ಬೆಳಕಿಗೇ ಬರುವುದಿಲ್ಲ. ವೇತನ ಕೊಟ್ಟಲ್ಲಿಗೆ ಕೆಲಸಗಾರನಿಗೂ ಕಾಮಗಾರಿಗೂ ಇರುವ ಸಂಬಂಧದ ಬಾಗಿಲು ಶಾಶ್ವತವಾಗಿ ಮುಚ್ಚಿ ಹೋಗುತ್ತದೆ.

ಅಸಂಘಟಿತ ಕಾರ್ಮಿಕರ ಹಿತ ಕಾಯಲು ನಮ್ಮಲ್ಲಿ ಬಹಳಷ್ಟು ಕಾನೂನುಗಳು ಜಾರಿಯಲ್ಲಿವೆ. ಆದರೆ ಅನೇಕ ಕಾರ್ಮಿಕರಿಗೆ ಅದರ ಅರಿವು ಇರುವುದಿಲ್ಲ. ಕೆಲಸ ಮಾಡುವಾಗ ಸಾವು ಸಂಭವಿಸಿದರೆ, ಅಂಗಾಂಗಕ್ಕೆ ಹಾನಿಯಾದರೆ ಪರಿಹಾರ ಸಿಗುತ್ತದೆ ಎಂಬುದೂ ಅವರಿಗೆ ತಿಳಿದಿರುವುದಿಲ್ಲ. ಕಾಮಗಾರಿ ಆರಂಭವಾಗುವ ಮೊದಲು ಕಾರ್ಮಿಕ ಇಲಾಖೆಯಿಂದ ಗುತ್ತಿಗೆದಾರರು ಪರವಾನಗಿ ಪಡೆದಿದ್ದಾರೆಯೇ, ಕೆಲಸಗಾರರು ನಿಯಮದ ಪ್ರಕಾರ ಇಲಾಖೆಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆಯೇ ಎಂಬುದನ್ನು ತಿಳಿಯುವ ತಮ್ಮ ಜವಾಬ್ದಾರಿಯನ್ನು ಅಧಿಕಾರಿಗಳು ಸರಿಯಾಗಿ ನಿಭಾಯಿಸಿದರೆ ಎಷ್ಟೋ ಸಂಭವನೀಯ ದುರಂತಗಳನ್ನು ತಡೆಯಬಹುದು.

ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳದೆ ಕೆಲಸ ಆರಂಭಿಸಲೇಬಾರದು ಎಂದು ಅಧಿಕಾರಿಗಳು ತಾಕೀತು ಮಾಡದಿರುವುದೇ ಅಮಾಯಕರ ಜೀವಹಾನಿಗೆ ಕಾರಣ ಆಗಬಾರದು. ಆಗ ದುರಂತದಲ್ಲಿ ಅಧಿಕಾರಿಗಳೂ ಭಾಗಿಯಾದಂತೆ ಆಗುತ್ತದೆ.

ಸಮೂಹದ ಸೇವೆಗಾಗಿ ಶ್ರಮಿಸುವ ಅನಾಮಿಕ ಕಾರ್ಮಿಕನ ಬೆವರಿನ ಶ್ರಮವನ್ನು ಗೌರವಿಸುವ, ಅವನು ಸಾವಿಗೀಡಾದಾಗ ಪರಿತಪಿಸುವ ಹೃದಯವಂತಿಕೆ ನಮ್ಮದಾಗಬೇಕಾಗಿದೆ. ಕಾರ್ಮಿಕ ದಿನಾಚರಣೆಯನ್ನು ಒಳಗೊಂಡಿರುವ ಈ ಮಾಸ, ಅಂತಹದ್ದೊಂದು ಎಚ್ಚರವನ್ನು ನಮ್ಮಲ್ಲಿ ಮೂಡಿಸಬೇಕಾಗಿದೆ.

ವಾಚಕರ ವಾಣಿ

ಅಕ್ರಮ ಗಣಿಗಾರಿಕೆಗೆ ಕಡಿವಾಣ ಬೀಳಲಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಇದೇ 28ರವರೆಗೂ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಈ ಕಾರಣದಿಂದ, ಜಿಲ್ಲಾಡಳಿತವು ಸಾರ್ವಜನಿಕರು ಹಾಗೂ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಕಟ್ಟೆಚ್ಚರ ವಹಿಸಲು ಸೂಚಿಸಿದೆ. ಆದರೆ ಅಕ್ರಮ ಮರಳು ಗಣಿಗಾರಿಕೆಗೆ ಮಾತ್ರ ಇಂತಹ ಯಾವುದೇ ಸೂಚನೆ ಅನ್ವಯಿಸುತ್ತಿಲ್ಲ. ಇದಕ್ಕೆ ಪುಷ್ಟಿ ನೀಡುವಂತೆ, ಹೊನ್ನಾವರದ ಕಾಸರಕೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಕ್ರಮ ಮರಳು ತುಂಬಿದ್ದ ಲಾರಿಯೊಂದು ನದಿಗೆ ಮಗುಚಿ ಬಿದ್ದ ವಿಡಿಯೊ ದೃಶ್ಯವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಅಧಿಕಾರಿಗಳು ರಾಜಕೀಯ ಲಾಬಿಗೆ ಮಣಿಯದೇ ಅಕ್ರಮ ಮರಳು ಗಣಿಗಾರಿಕೆಗೆ ಇನ್ನಾದರೂ ಕಡಿವಾಣ ಹಾಕಬೇಕಾಗಿದೆ.

ಅಶೋಕ ಪೈ, ಹೊನ್ನಾವರ

ಹೆಸರು ಬದಲಾವಣೆಯ ತಂತ್ರಗಾರಿಕೆ ಸಲ್ಲ

ಬಿಬಿಎಂಪಿ ಹೆಸರನ್ನು ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ಎಂತಲೂ, ಇದೀಗ ‘ರಾಮನಗರ ಜಿಲ್ಲೆ’ಯನ್ನು ‘ಬೆಂಗಳೂರು ದಕ್ಷಿಣ ಜಿಲ್ಲೆ’ ಎಂತಲೂ ಬದಲಾವಣೆ ಮಾಡಲು ರಾಜ್ಯ ಸರ್ಕಾರ ಮುಂದಾಗಿರುವುದನ್ನು ನೋಡಿದರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಂತೆ ನಮ್ಮ ರಾಜ್ಯ ಸರ್ಕಾರಕ್ಕೂ ಹೆಸರು ಬದಲಿಸುವ ಕಾಯಿಲೆ ಶುರುವಾಗಿದೆಯೇ ಎಂಬ ಅನುಮಾನ ಮೂಡುತ್ತದೆ. ಹೆಸರು ಬದಲಾವಣೆ ಮಾಡಿದಾಕ್ಷಣ ಆ ಕ್ಷೇತ್ರದಲ್ಲಿ ‘ಪ್ರಗತಿ’ ಮೇಲಿಂದ ಧುತ್ತನೆ ಬಂದು ಬೀಳುವುದಿಲ್ಲ. ಅಲ್ಲಿ ಏನೇನು ಓರೆಕೋರೆಗಳಿವೆಯೋ ಅವನ್ನೆಲ್ಲಾ ಹುಡುಕಿ ಸರಿಮಾಡುವ ಹಾಗೂ ಅಲ್ಲಿನ ಜನಜೀವನದಲ್ಲಿ ಸ್ವಲ್ಪಮಟ್ಟಿಗಾದರೂ ನೆಮ್ಮದಿ ಮೂಡಿಸುವಂತಹ ಕೆಲಸಗಳು ಸರ್ಕಾರಗಳಿಂದ ಆಗಬೇಕಾಗಿದೆ. ಒಂದು ಸಂಸ್ಥೆಯೇ ಆಗಲಿ, ಪ್ರದೇಶವೇ ಆಗಲಿ ಭ್ರಷ್ಟಾಚಾರಮುಕ್ತವಾಗಿ ಅಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸಿದಾಗ ಮಾತ್ರ, ಹೆಸರು ಏನೇ ಇದ್ದರೂ ಅದು ಮುನ್ನೆಲೆಗೆ ಬರುತ್ತದೆ.

ಹೆಸರು ಬದಲಾವಣೆ ಪ್ರಕ್ರಿಯೆ ನಿಜಕ್ಕೂ ಮೈಮೇಲಿನ ಹುಣ್ಣನ್ನು ಮುಚ್ಚಿಡಲು ಅದರ ಮೇಲೆ ಹೊದಿಕೆ ಹಾಕುವಂತೆ, ಜನರ ಕಣ್ಣಿಗೆ ಮಣ್ಣೆರಚಲು ಮಾಡುವ ತಂತ್ರಗಾರಿಕೆಗೆ ಸಮನಾದದ್ದು ಎಂಬುದನ್ನು ಸರ್ಕಾರಗಳು ಮನಗಾಣಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ರಾಯಭಾರಿ ನೇಮಕ: ಅಗತ್ಯ ಇದೆಯೇ?

ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮವು (ಕೆಎಸ್‌ಡಿಎಲ್) ಚಿತ್ರನಟಿ ತಮನ್ನಾ ಭಾಟಿಯಾ ಅವರಿಗೆ ಎರಡು ವರ್ಷ ಎರಡು ದಿನಕ್ಕೆ ₹ 6.20 ಕೋಟಿ ಸಂಭಾವನೆ ನೀಡಿ, ತನ್ನ ಉತ್ಪನ್ನಗಳ ಪ್ರಚಾರ ರಾಯಭಾರಿಯನ್ನಾಗಿ ನೇಮಿಸಲು ಮುಂದಾಗಿರುವ ಸುದ್ದಿಯನ್ನು (ಪ್ರ.ವಾ., ಮೇ 23) ಓದಿ ತುಂಬಾ ಆಶ್ಚರ್ಯವಾಯಿತು. ರಾಜ್ಯದಲ್ಲಿ ಮನೆಮಾತಾಗಿರುವ ಮೈಸೂರು ಸ್ಯಾಂಡಲ್ ಸೋಪ್ ಅನ್ನು ಒಳಗೊಂಡ ತನ್ನ ಉತ್ಪನ್ನಗಳ ಮಾರಾಟಕ್ಕೆ ಇಷ್ಟೊಂದು ಹಣ ಖರ್ಚು ಮಾಡಿ, ಒಬ್ಬ ಜನಪ್ರಿಯ ನಟಿಯನ್ನು ರಾಯಭಾರಿಯನ್ನಾಗಿ ನೇಮಿಸುವ ಅಗತ್ಯ ಇದೆಯೇ?

ಶ್ರೀಗಂಧದಿಂದ ತಯಾರಿಸುವ ಒಳ್ಳೆಯ ಗುಣಮಟ್ಟದ ಮೈಸೂರು ಸ್ಯಾಂಡಲ್ ಸೋಪ್‌ನಂತಹ ಉತ್ಪನ್ನಗಳಿಗೆ ನಮ್ಮಲ್ಲಿ ಹೆಚ್ಚಿನ ಬೇಡಿಕೆ ಇದೆ. ಈ ಉತ್ಪನ್ನಗಳ ಪ್ರಚಾರಕ್ಕೆ ಕೋಟಿಗಟ್ಟಲೆ ಹಣ ಪಾವತಿಸಿ ರಾಯಭಾರಿಯನ್ನು ನೇಮಿಸುವ ಅವಶ್ಯಕತೆ ಕಾಣುತ್ತಿಲ್ಲ.

ಸಂಜೀವ ಅಲದಿ, ಬೆಂಗಳೂರು

ಭ್ರಷ್ಟಾಚಾರದ ವಿಚಾರಣೆ ಪ್ರಸ್ತಾವ ಕೈಬಿಟ್ಟಿದ್ದೇಕೆ?

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಲ್ಲಿ ಭಾಗಿಯಾದ ಆರೋಪಕ್ಕೆ ಸಂಬಂಧಿಸಿದಂತೆ, ಕೆಪಿಎಸ್‌ಸಿಯ ಈ ಹಿಂದಿನ ಒಬ್ಬ ಅಧ್ಯಕ್ಷ ಮತ್ತು ಸದಸ್ಯರಾಗಿದ್ದ ಎಂಟು ಮಂದಿಯ ವಿರುದ್ಧದ ವಿಚಾರಣೆಯ ಪ್ರಸ್ತಾವ ಕೈಬಿಡಲು ಸರ್ಕಾರ ತೀರ್ಮಾನಿಸಿರುವುದು (ಪ್ರ.ವಾ., ಮೇ 23) ಅತ್ಯಂತ ಅಚ್ಚರಿಯ ಸಂಗತಿ. ಭ್ರಷ್ಟಾಚಾರಮುಕ್ತ ಸರ್ಕಾರ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈ ತೀರ್ಮಾನ, ಸರ್ಕಾರವು ಭ್ರಷ್ಟರ ರಕ್ಷಣೆಗೆ ನಿಂತಿರುವುದನ್ನು ಬಹಿರಂಗಪಡಿಸಿದೆ. ಈ ರೀತಿಯ ನಿರ್ಧಾರಗಳಿಂದ ಕೆಪಿಎಸ್‌ಸಿಯಲ್ಲಿ ವ್ಯಾಪಕ ಭ್ರಷ್ಟಾಚಾರಕ್ಕೆ ಸರ್ಕಾರವೇ ಹಸಿರುನಿಶಾನೆ ತೋರಿದಂತಾಗಿದೆ.

ಕೆಪಿಎಸ್‌ಸಿಯ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಂತೆ ಹೈಕೋರ್ಟ್ ಹಲವು ಬಾರಿ ಸರ್ಕಾರಕ್ಕೆ ಛೀಮಾರಿ ಹಾಕಿ ಎಚ್ಚರಿಕೆ ನೀಡಿದ್ದರೂ ಭ್ರಷ್ಟರಿಗೆ ಮತ್ತು ಸರ್ಕಾರಕ್ಕೆ ಯಾವುದೇ ಭಯ ಇಲ್ಲದಂತಹ ವಾತಾವರಣ ಸೃಷ್ಟಿಯಾಗಿರುವುದು ದುರದೃಷ್ಟಕರ.

ಎಸ್.ಎನ್.ರಮೇಶ್, ಸಾತನೂರು, ಮಂಡ್ಯ

ಮೆಟ್ರೊ: ಮತ್ತೊಮ್ಮೆ ಸಹನೆಯ ಪರೀಕ್ಷೆ

ಮೆಟ್ರೊ ನಿಲ್ದಾಣಗಳಲ್ಲಿನ ಶೌಚಾಲಯಗಳಿಗೆ ಬಳಕೆದಾರರ ಶುಲ್ಕ ವಿಧಿಸಲು ನಿರ್ಧರಿಸುವ ಮೂಲಕ ಬಿಎಂಆರ್‌ಸಿಎಲ್ ತನ್ನ ಪ್ರಯಾಣಿಕರಿಗೆ ಮತ್ತೊಂದು ಆಘಾತ ನೀಡಿದೆ. ಇತ್ತೀಚೆಗೆ ಪ್ರಯಾಣ ದರವನ್ನು ಅವೈಜ್ಞಾನಿಕವಾಗಿ ಹೆಚ್ಚಿಸಿದ್ದರೂ ‘ನಮ್ಮ ಮೆಟ್ರೊ’ ಎಂಬ ಪ್ರೀತಿಯಿಂದ ಅದನ್ನು ಹೇಗೋ ಸಹಿಸಿಕೊಂಡ ಪ್ರಯಾಣಿಕರಿಗೆ ಈಗಿನ ನಿರ್ಧಾರದಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ. ಪ್ರಯಾಣಿಕಸ್ನೇಹಿ ಅಲ್ಲದ ಇಂತಹ ನಿರ್ಧಾರಗಳನ್ನು ಅದು ಏಕಾಏಕಿ ಏಕೆ ತೆಗೆದುಕೊಳ್ಳುತ್ತದೋ ತಿಳಿಯದು. ಇದು, ಎಲ್ಲವನ್ನೂ ತಾಳ್ಮೆಯಿಂದ ಒಪ್ಪುವ ಬೆಂಗಳೂರಿಗರ ಸಹನೆಯ ಪರೀಕ್ಷೆಯೇ?

ಒಂದೆರಡು ವಾರ ಮೆಟ್ರೊದಲ್ಲಿ ಪ್ರಯಾಣಿಸಲೇಬಾರದೆಂದು ಪ್ರಯಾಣಿಕರು ದೃಢ ನಿಶ್ಚಯ ಮಾಡಿದರೆ, ಆಗ ವಿರೋಧದ ಬಿಸಿ ಅದಕ್ಕೆ ತಾಗಬಹುದೇನೊ. ಮುಂದಿನ ದಿನಗಳಲ್ಲಿ ಮೆಟ್ರೊ ರೈಲಿನಲ್ಲಿರುವ ಎ.ಸಿ. ಸೌಲಭ್ಯಕ್ಕೂ ಹೆಚ್ಚುವರಿ ಶುಲ್ಕ ವಿಧಿಸುವುದಿಲ್ಲ ಎನ್ನುವ ಗ್ಯಾರಂಟಿ ಏನು? ಇದನ್ನೇ ಅನುಸರಿಸಿ, ಸರ್ಕಾರಿ ಕಚೇರಿಗಳಲ್ಲಿ, ಖಾಸಗಿ ಕಂಪನಿಗಳಲ್ಲಿ ಅಥವಾ ಹೋಟೆಲ್‌ಗಳಲ್ಲಿ ಶೌಚಾಲಯ ಶುಲ್ಕ ವಿಧಿಸತೊಡಗಿದರೆ ಜನಸಾಮಾನ್ಯರ ಗತಿ ಏನು? ಈಗಲೂ ರಸ್ತೆಬದಿಗಳಲ್ಲಿ ಉಗಿಯುವ, ಮೂತ್ರ ವಿಸರ್ಜಿಸುವ ಮಂದಿಗೆ ನಮ್ಮಲ್ಲಿ ಕೊರತೆ ಇಲ್ಲ. ಇನ್ನು ಎಲ್ಲೆಡೆ ಶೌಚಾಲಯ ಶುಲ್ಕ ವಿಧಿಸತೊಡಗಿದರೆ ಇಡೀ ರಸ್ತೆಗಳು ದುರ್ಗಂಧದಿಂದ ನಾರತೊಡಗಬಹುದು. ಬಿಎಂಆರ್‌ಸಿಎಲ್ ಈ ಬಗ್ಗೆ ಯೋಚಿಸಲಿ.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂತ್ರಸ್ತ ಕೇಂದ್ರಿತ ತನಿಖಾ ಪದ್ಧತಿ ಅಳವಡಿಕೆ

● ಆದಿತ್ಯ ಕೆ.ಎ.

ರಾಜ್ಯದ 43ನೇ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿ–ಐಜಿಪಿ) ಡಾ.ಎಂ.ಎ. ಸಲೀಂ ಅವರು ಬುಧವಾರ (ಮೇ 21) ಅಧಿಕಾರ ಸ್ವೀಕರಿಸಿದ್ದಾರೆ. ಸಿಐಡಿಯ ಆರ್ಥಿಕ ಅಪರಾಧ ಹಾಗೂ ವಿಶೇಷ ಘಟಕಗಳ ವಿಭಾಗದ ಪೊಲೀಸ್ ನಿರ್ದೇಶಕರಾಗಿರುವ ಸಲೀಂ ಅವರಿಗೆ ಹೆಚ್ಚುವರಿ ಜವಾಬ್ದಾರಿ ವಹಿಸಲಾಗಿದೆ. ಬೆಂಗಳೂರು ಸಮೀಪದ ಚಿಕ್ಕಬಾಣಾವರ ಮೂಲದ ಸಲೀಂ ಅವರು, ರಾಜ್ಯದಲ್ಲಿ ಶಾಂತಿ–ಸೌಹಾರ್ದ, ಸುರಕ್ಷತೆಯ ವಾತಾವರಣ ನಿರ್ಮಿಸಲು ಹಾಗೂ ಇಲಾಖೆಯನ್ನು ಸಮಾಜಸ್ನೇಹಿಯಾಗಿ ಬದಲಾಯಿಸಲು ಪಣ ತೊಟ್ಟಿದ್ದಾರೆ. ಹೊಸ ಆಲೋಚನೆ, ಯೋಜನೆಗಳ ಕುರಿತು ಅವರು 'ಪ್ರಜಾವಾಣಿ' ಜೊತೆ ಮಾತನಾಡಿದ್ದಾರೆ

● ಪ್ರಶ್ನೆ: ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥರಾಗಿರುವ ನೀವು, ಇಲಾಖೆಯನ್ನು ಜನಸ್ನೇಹಿಯಾಗಿ ಹೇಗೆ ರೂಪಿಸುತ್ತೀರಿ?

ಸಾರ್ವಜನಿಕರ ಸೇವೆಗೆ ಅವಕಾಶ ಸಿಕ್ಕಿದೆ. ಪೊಲೀಸರ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗುವುದು. ರಾಜ್ಯದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡಲು ಒತ್ತು ನೀಡಲಾಗುವುದು. ಅಪರಾಧ ಪ್ರಕರಣಗಳ ತನಿಖೆಯಲ್ಲಿ ಇದುವರೆಗೂ ಅನುಸರಿಸುತ್ತಿದ್ದ ಪಥವಾದ 'ಆರೋಪಿ ಕೇಂದ್ರಿತ ವ್ಯವಸ್ಥೆ'ಯನ್ನು 'ಸಂತ್ರಸ್ತ ಕೇಂದ್ರಿತ ವ್ಯವಸ್ಥೆ'ಯ ಪಥವಾಗಿ ಬದಲಾವಣೆ ಮಾಡಲಾಗುವುದು. ಇಂತಹ ಕ್ರಮದಿಂದ ಅಪರಾಧಿಗಳಿಗೆ ಶಿಕ್ಷೆ ಆಗುವ ಜತೆಗೆ ಸಂತ್ರಸ್ತರಿಗೆ ನ್ಯಾಯ ದೊರೆಯಲಿದೆ. ಸಂತ್ರಸ್ತರಿಗೆ ಸೌಲಭ್ಯಗಳನ್ನೂ ಕಲ್ಪಿಸಲು ಸಾಧ್ಯವಾಗಲಿದೆ.

● ಪ್ರಶ್ನೆ: ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವ, ರಾಜಕೀಯ ವೈಷಮ್ಯ ಬಿತ್ತುವ ಕೆಲಸಗಳು ನಡೆಯುತ್ತಿವೆ. ಅದರ ನಿಯಂತ್ರಣ ಹೇಗೆ?

ಅಪರಾಧ ತನಿಖಾ ವಿಭಾಗದಿಂದ (ಸಿಐಡಿ) ಸಾಮಾಜಿಕ ಜಾಲತಾಣಗಳ ನಿಯಂತ್ರಣ ಘಟಕ ಆರಂಭಿಸಲಾಗಿದೆ. ಜಿಲ್ಲಾ ಕೇಂದ್ರಗಳಲ್ಲೂ ಈ ಘಟಕಗಳಿವೆ. ಕಿಡಿಗೇಡಿಗಳು ಹಾಕುವ ಪೋಸ್ಟ್‌ಗಳ ಮೇಲೆ ನಿಗಾ ವಹಿಸುವಿಕೆ, ಆರೋಪಿಗಳ ಪತ್ತೆ ಹಚ್ಚುವುದರ ಕುರಿತು ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.

ದ್ವೇಷ ಮೂಡಿಸುವವರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ–2008 ಹಾಗೂ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುವುದು. ಸುಳ್ಳು ಸುದ್ದಿ ಹಬ್ಬಿಸಿದವರ ವಿರುದ್ಧ ಕಳೆದ ನಾಲ್ಕು ತಿಂಗಳಲ್ಲಿ ರಾಜ್ಯದಲ್ಲಿ 427 ಪ್ರಕರಣಗಳು ದಾಖಲಾಗಿವೆ.

● ಪ್ರಶ್ನೆ: ಕರಾವಳಿ ಜಿಲ್ಲೆಗಳಲ್ಲಿ 'ಕೋಮುಗಲಭೆ ನಿಗ್ರಹ ಪಡೆ' ರಚಿಸುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಅದರ ರಚನೆ ಯಾವಾಗ?

'ಕೋಮುಗಲಭೆ ನಿಗ್ರಹ ಪಡೆ'ಯ ರೂಪುರೇಷೆಗಳು ಸಿದ್ಧಗೊಳ್ಳುತ್ತಿವೆ. ಶೀಘ್ರದಲ್ಲೇ ಈ ಪಡೆ ಅಸ್ತಿತ್ವಕ್ಕೆ ಬರಲಿದೆ. ಏನೆಲ್ಲಾ ಸೌಲಭ್ಯಗಳನ್ನು ಕಲ್ಪಿಸಬೇಕು, ಅದರ ಕಾರ್ಯನಿರ್ವಹಣೆಯ ಕುರಿತೂ ಚರ್ಚೆಗಳು ನಡೆಯುತ್ತಿವೆ.

● ಪ್ರಶ್ನೆ: ಕೆಲವು ಪೊಲೀಸ್ ಸಿಬ್ಬಂದಿಯೂ ಮತೀಯವಾಗಿ ವಿಭಜನೆಗೊಂಡಿದ್ದಾರೆ ಎನ್ನುವ ಟೀಕೆ ಸಾರ್ವಜನಿಕ ವಲಯದಲ್ಲಿದೆ?

ರಾಜ್ಯದ ಯಾವ ಜಿಲ್ಲೆಯಲ್ಲಿ, ಯಾವ ಭಾಗದಲ್ಲಿ ಈ ರೀತಿಯ ಆರೋಪಗಳಿವೆ ಎಂಬುದನ್ನು ಪರಿಶೀಲಿಸಲಾಗುವುದು. ಆ ರೀತಿಯ ಪರಿಸ್ಥಿತಿ ಕಂಡುಬಂದರೆ ಅದರ ಬದಲಾವಣೆಗೆ ಕ್ರಮವಹಿಸಲಾಗುವುದು

● ಪ್ರಶ್ನೆ: ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ ಯಾವಾಗ?

ಸ್ಥಗಿತಗೊಂಡಿದ್ದ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ), ಕಾನ್‌ಸ್ಟೆಬಲ್ ನೇಮಕಾತಿ ಪ್ರಕ್ರಿಯೆಗೆ ಮರುಚಾಲನೆ ಸಿಕ್ಕಿದೆ. ಒಂದು ಬ್ಯಾಚ್ (ಪಿಎಸ್‌ಐ) ತರಬೇತಿಯಲ್ಲಿದೆ. ಇನ್ನೊಂದು ಬ್ಯಾಚ್‌ಗೆ ನೇಮಕಾತಿ ಪತ್ರ ಕೊಡಬೇಕಿದೆ. ಅವರೆಲ್ಲರೂ ಕರ್ತವ್ಯಕ್ಕೆ ಬಂದರೆ ಸಮಸ್ಯೆ ಆಗುವುದಿಲ್ಲ. ಪಿಎಸ್‌ಐ ನೇಮಕಾತಿಯಲ್ಲಿ ನಡೆದಿದ್ದ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ಪೂರ್ಣಗೊಳಿಸಿದೆ. ನ್ಯಾಯಾಲಯದಲ್ಲಿ ವಿಚಾರಣೆಯೂ ಆರಂಭವಾಗಲಿದೆ.

● ಪ್ರಶ್ನೆ: ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಯಲ್ಲಿ ಭ್ರಷ್ಟಾಚಾರ ತಡೆ ಹೇಗೆ?

ಹಿಂದೆ ನಡೆದಿದ್ದ ಲೋಪಗಳಿಂದ ಸಾಕಷ್ಟು ಪಾಠ ಕಲಿತಿದ್ದೇವೆ. ಮುಂದೆ ನಡೆಯುವ ನೇಮಕಾತಿಗಳಲ್ಲಿ ಅಕ್ರಮ ನಡೆಯದಂತೆ ನಿಗಾ ವಹಿಸಲಾಗುವುದು. ಪಾರದರ್ಶಕ ನೇಮಕಾತಿಯ ಕುರಿತು ನೇಮಕಾತಿ ವಿಭಾಗವು ನೀಲನಕ್ಷೆ ಸಿದ್ಧಪಡಿಸಿದೆ.

● ಪ್ರಶ್ನೆ: ತಾವು ಬೆಂಗಳೂರು ಸಂಚಾರ ವಿಭಾಗದ ವಿಶೇಷ ಕಮಿಷನರ್ ಆಗಿದ್ದ ವೇಳೆ ಸಂಚಾರ ದಟ್ಟಣೆ ಸಮಸ್ಯೆ ತಕ್ಕಮಟ್ಟಿಗೆ ನಿವಾರಣೆಯಾಗಿತ್ತು. ಮತ್ತೆ ವಿಪರೀತ ದಟ್ಟಣೆಯಿಂದ ಸಮಸ್ಯೆಯಾಗಿದೆಯಲ್ಲ?

ಸಂಚಾರ ವಿಭಾಗದ ವಿಶೇಷ ಕಮಿಷನರ್ ಹುದ್ದೆಯಿಂದ ನಾನು ತೆರವುಗೊಂಡು ಎರಡು ವರ್ಷ ಕಳೆದಿದೆ. ಸದ್ಯ ಯಾವೆಲ್ಲಾ ಸಮಸ್ಯೆಗಳಿವೆ ಎಂಬುದನ್ನು ಪರಿಶೀಲಿಸುತ್ತೇನೆ. ಸಂಚಾರ ದಟ್ಟಣೆ ಸುಧಾರಣೆಗೆ ಕೈಗೊಂಡ ಕ್ರಮಗಳ ಬಗ್ಗೆ ಆ ವಿಭಾಗದ ಅಧಿಕಾರಿಗಳ ಜತೆಗೆ ಚರ್ಚಿಸುತ್ತೇನೆ. ಬೆಂಗಳೂರಿನಲ್ಲೇ 1.40 ಕೋಟಿ ವಾಹನಗಳಿವೆ. ರಾತ್ರೋರಾತ್ರಿ ಮೂಲಸೌಕರ್ಯ ಕಲ್ಪಿಸುವುದೂ ಕಷ್ಟ. ಬೆಂಗಳೂರಿನಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಾದ 'ನಮ್ಮ ಮೆಟ್ರೊ' ಹಾಗೂ ಬಿಎಂಟಿಸಿ ಸೇವೆ ಉತ್ತಮವಾಗಿದೆ. ಪ್ರಯಾಣಿಕರು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸಿದರೆ ಅನುಕೂಲ. ಮೈಸೂರು, ಮಂಗಳೂರಿನಲ್ಲೂ ದಟ್ಟಣೆ ಸಮಸ್ಯೆಯಿದ್ದು, ಸಮಸ್ಯೆ ನಿವಾರಣೆ ಮಾಡಲಾಗುವುದು.

ಪ್ರಜಾವಾಣಿ ಸಂದರ್ಶನ

ಡಾ.ಎಂ.ಎ. ಸಲೀಂ

● ಪ್ರಶ್ನೆ: ಪೊಲೀಸ್ ಠಾಣೆಗಳಲ್ಲೇ ಸಿವಿಲ್ ವ್ಯಾಜ್ಯಗಳನ್ನು ಇತ್ಯರ್ಥ ಪಡಿಸುವುದಕ್ಕೆ ತಡೆ ಹಾಕುತ್ತೀರಾ?

ಜಮೀನು ಹಾಗೂ ಹಣಕಾಸಿಗೆ ಸಂಬಂಧಿಸಿದ ಗಲಾಟೆಗಳು ಠಾಣೆಯ ಮೆಟ್ಟಿಲೇರಿದಾಗ ಇಲಾಖೆಯ ಅಧಿಕಾರಿಗಳು ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಸ್ಪಷ್ಟ ಮಾರ್ಗಸೂಚಿಯಿದೆ. ಮತ್ತೊಮ್ಮೆ ಮಾರ್ಗಸೂಚಿ ಹೊರಡಿಸಲಾಗುವುದು. ನಗರ ಪ್ರದೇಶಗಳಲ್ಲಿ ಈ ರೀತಿಯ ಆರೋಪಗಳು ಹೆಚ್ಚು ಬರುತ್ತಿವೆ. ತಮ್ಮ ವ್ಯಾಪ್ತಿ ಮೀರಿ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿದ್ದರೂ ಅವರ ವಿರುದ್ಧ ಶಿಸ್ತು ಕ್ರಮ ಆಗಲಿದೆ. ಬೆಂಗಳೂರು ನಗರ ಪೊಲೀಸ್ ಕಮಿಷನರ್ ಅವರು ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

● ಪ್ರಶ್ನೆ: ರಾಜ್ಯದಲ್ಲಿ ರೌಡಿಗಳ ಚಟುವಟಿಕೆ ನಿಯಂತ್ರಣಕ್ಕೆ ಬಂದಂತೆ ಕಾಣಿಸುತ್ತಿಲ್ಲ. ಇತ್ತೀಚೆಗೆ ದಾವಣಗೆರೆ, ಮಂಗಳೂರಿನಲ್ಲಿ ಕೊಲೆ ಪ್ರಕರಣಗಳು ನಡೆದಿವೆ?

ರೌಡಿ ಚಟುವಟಿಕೆಯನ್ನು ಸಮಾಜವೂ ಸಹಿಸುವುದಿಲ್ಲ. ರೌಡಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮ ಆಗಲಿದೆ. ಅದನ್ನು ಬೇರು ಸಹಿತ ಕಿತ್ತು ಹಾಕಲಾಗುವುದು. ಇಲಾಖೆ ಸಿಬ್ಬಂದಿಗೂ ಸೂಚನೆ ನೀಡಲಾಗಿದೆ. ಡ್ರಗ್ಸ್ ಮಾರಾಟ, ಮಟ್ಕಾ, ಬೆಟ್ಟಿಂಗ್ ದಂಧೆಗೂ ಕಡಿವಾಣ ಹಾಕಲಾಗುವುದು.

● ಪ್ರಶ್ನೆ: ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗಿದ್ದು, ಜನಸಾಮಾನ್ಯರು ನಿತ್ಯ ಹಣ ಕಳೆದುಕೊಳ್ಳುತ್ತಿದ್ದಾರೆ. ಸೈಬರ್ ವಂಚಕರ ಪತ್ತೆ ಕಾರ್ಯ ಪೊಲೀಸ್ ಇಲಾಖೆಗೆ ಸವಾಲಾಗಿದೆಯೇ?

ತಂತ್ರಜ್ಞಾನ ಬೆಳೆದಂತೆ ಜನರ ಜೀವನ ಸರಳವಾಗಿದೆ. ಇದನ್ನೇ ವಂಚಕರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಸೈಬರ್ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕಲು ರಾಜ್ಯ ಪೊಲೀಸ್ ಇಲಾಖೆ ಶ್ರಮಿಸುತ್ತಿದೆ. ಸೈಬರ್ ಅಪರಾಧಗಳ ಪತ್ತೆ ಕಾರ್ಯದ ಕುರಿತು 26 ಸಾವಿರ ಪೊಲೀಸರಿಗೆ ತರಬೇತಿ ನೀಡಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ ನ್ಯಾಯಾಂಗ ಇಲಾಖೆಯ ಸಿಬ್ಬಂದಿಗೂ ತರಬೇತಿ ಕೊಡಲಾಗಿದೆ. ಇನ್ನೂ 24 ಸಾವಿರ ಸಿಬ್ಬಂದಿಗೆ ತರಬೇತಿ ನೀಡುವ ಉದ್ದೇಶವಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಆರೋಪಿಗಳ ಪತ್ತೆ ಕಾರ್ಯ ನಡೆಸಲಾಗುವುದು. ಪ್ರಾಸಿಕ್ಯೂಷನ್ ಎದುರು ಸಾಕ್ಷ್ಯಗಳನ್ನು ಪ್ರಸ್ತುತಪಡಿಸಿ ವಂಚಕರಿಗೆ ಶಿಕ್ಷೆ ಆಗುವಂತೆ ಮಾಡಲಾಗುವುದು. ಸಾರ್ವಜನಿಕರಲ್ಲೂ ಜಾಗೃತಿ ಬರಬೇಕಿದೆ. ಜನರು ಎರಡು ಬ್ಯಾಂಕ್ ಖಾತೆ ಹೊಂದಿದ್ದರೆ ಉತ್ತಮ. ಕಡಿಮೆ ಹಣವಿರುವ ಖಾತೆಯನ್ನು ಆನ್‌ಲೈನ್ ವ್ಯವಹಾರಕ್ಕೆ ಬಳಸಿಕೊಳ್ಳಬೇಕು. ಇನ್ನೊಂದು ಖಾತೆಯಲ್ಲಿ ಚೆಕ್‌ಗಳಲ್ಲಿ ವ್ಯವಹಾರ ನಡೆಸಬೇಕು. ❖

ಎಲ್ಲೆಲ್ಲಿ ಕೆಲಸ?

1993ರಲ್ಲಿ ಅಖಿಲ ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ಆಯ್ಕೆಯಾಗಿ ವೃತ್ತಿ ಜೀವನ ಆರಂಭಿಸಿದ್ದರು.

ಉಡುಪಿ, ಹಾಸನದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮೈಸೂರು ನಗರ ಪೊಲೀಸ್ ಕಮಿಷನರ್, ಬೆಂಗಳೂರು ನಗರ ವಿಶೇಷ ಪೊಲೀಸ್ ಕಮಿಷನರ್, ಪೂರ್ವ ವಲಯದ ಪೊಲೀಸ್ ಮಹಾನಿರೀಕ್ಷಕ, ಭ್ರಷ್ಟಾಚಾರ ನಿಗ್ರಹ ದಳದ ಮುಖ್ಯಸ್ಥ ಸೇರಿ ಪೊಲೀಸ್ ಇಲಾಖೆಯಲ್ಲಿ 26 ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಪೊಲೀಸ್ ಪಡೆಯ ಮುಖ್ಯಸ್ಥರಾಗಿ ಅವರು ನೇಮಕಗೊಂಡಿದ್ದಾರೆ.

ಕರಾವಳಿಯ ಕೋಮು ಸಾಮರಸ್ಯಕ್ಕೆ ಕ್ರಮ ಏನು?

ಉಡುಪಿಯಲ್ಲಿ ನಾನು ಎಸ್‌ಪಿಯಾಗಿ ಕೆಲಸ ಮಾಡುತ್ತಿದ್ದ ವೇಳೆ ಸಾಮರಸ್ಯದ ವಾತಾವರಣ ಇತ್ತು. ಸಾಮರಸ್ಯ ಮೂಡಿಸುವ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಬಹಳ ಮುಖ್ಯ. ನಿಷ್ಪಕ್ಷಪಾತ ಹಾಗೂ ಪಾರದರ್ಶಕವಾಗಿ ಪೊಲೀಸರು ಕೆಲಸ ಮಾಡಬೇಕು. ಆಗ ಪೊಲೀಸರ ಮೇಲೆ ಜನರಿಗೆ ನಂಬಿಕೆ, ವಿಶ್ವಾಸ ಮೂಡಲಿದೆ. ಆಗ ಸಹಜವಾಗಿಯೇ ಅಪರಾಧ ಪ್ರಕರಣಗಳಿಗೆ ಕಡಿವಾಣ ಬೀಳಲಿದೆ. ಉಡುಪಿಯಲ್ಲಿ ಮನೆ ಕಳ್ಳತನ ಪ್ರಕರಣಗಳ ನಿಯಂತ್ರಣಕ್ಕೆ ಮನೆಗಳಲ್ಲಿ 'ಚಾಕ್ ಪೀಸ್ ಗುರುತು' ಕಾರ್ಯಕ್ರಮ ರೂಪಿಸಲಾಗಿತ್ತು. ಅದು ಯಶಸ್ವಿಯೂ ಆಗಿತ್ತು. ಈಗಲೂ ಸಮುದಾಯದ ಸಹಭಾಗಿತ್ವವನ್ನು ಸಾಧಿಸಿ, ಸಾಮರಸ್ಯದ ವಾತಾವರಣ ಮೂಡಿಸಲಾಗುವುದು.

ನ್ಯಾಯಾಂಗದ ಶಿಖರದಲ್ಲಿ ಸಜ್ಜನ ಬಿ.ಆರ್. ಗವಾಯಿ

● ಹಮೀದ್ ಕೆ.

ವ್ಯಕ್ತಿ

ಸುಪ್ರೀಂ ಕೋರ್ಟ್‌ನ 52ನೇ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡಿರುವ ಬಿ.ಆರ್. ಗವಾಯಿ ಅವರು ಸಾರ್ವಜನಿಕವಾಗಿ ನ್ಯಾಯಾಂಗವು ಹೇಗಿರಬೇಕು ಎಂಬುದರ ಕುರಿತು ಭಿನ್ನ ನಿಲುವು ಹೊಂದಿದ್ದಾರೆ. ಈ ಹಿಂದೆ ಇದ್ದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ನ್ಯಾಯಾಂಗದಲ್ಲಿರುವವರು ಬಹಿರಂಗವಾಗಿ ಏನನ್ನೂ ಹೇಳಬಾರದು ಎಂಬ ನಿಲುವು ಹೊಂದಿದ್ದರು. ಆದರೆ, ಮಾಧ್ಯಮದ ಜೊತೆಗೆ ಸೀಮಿತ ಸಂವಹನ ಇರಬೇಕು ಎಂದು ನ್ಯಾಯಮೂರ್ತಿ ಗವಾಯಿ ಅವರು ಹೇಳುತ್ತಾರೆ

ಮೋದಿ ಎಂಬ ಉಪನಾಮಕ್ಕೆ ಸಂಬಂಧಿಸಿ ರಾಹುಲ್ ಗಾಂಧಿ ನೀಡಿದ್ದಾರೆ ಎನ್ನಲಾದ ಹೇಳಿಕೆಯು ಮಾನಹಾನಿಕರ ಎಂದು ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪಿಗೆ ತಡೆ ನೀಡಲು ಗುಜರಾತ್ ಹೈಕೋರ್ಟ್ ನಿರಾಕರಿಸಿದ್ದನ್ನು ರಾಹುಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಸುಪ್ರೀಂ ಕೋರ್ಟ್‌ನಲ್ಲಿ 2023ರ ಜುಲೈ 23ರಂದು ವಿಚಾರಣೆ ನಿಗದಿಯಾಗಿತ್ತು. ಪೀಠದಲ್ಲಿದ್ದವರು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ. ವಿಚಾರಣೆ ಆರಂಭಕ್ಕೂ ಮೊದಲೇ ಗವಾಯಿ ಅವರು ಮಾತನಾಡಿದರು.

'ನನ್ನ ಮುಂದಿರುವ ಕಷ್ಟವೊಂದನ್ನು ನಾನು ಎರಡೂ ಕಡೆಯವರ ಮುಂದೆ ವ್ಯಕ್ತಪಡಿಸಲೇಬೇಕು. ನನ್ನ ತಂದೆಯವರು ಕಾಂಗ್ರೆಸ್ ಸದಸ್ಯರಲ್ಲದಿದ್ದರೂ ಒಂದಷ್ಟು ಕಾಲ ಆ ಪಕ್ಷದ ಜೊತೆಗೆ ನಿಕಟ ಸಂಪರ್ಕದಲ್ಲಿದ್ದರು... ಅದು ನಿಮಗೆ ವೈಯಕ್ತಿಕವಾಗಿ ಗೊತ್ತಿದೆ. 40ಕ್ಕೂ ಹೆಚ್ಚು ವರ್ಷ ಅವರು ಕಾಂಗ್ರೆಸ್‌ಗೆ ಹತ್ತಿರವಾಗಿದ್ದರು. ಕಾಂಗ್ರೆಸ್ ಬೆಂಬಲದಿಂದ ಅವರು ಸಂಸದರಾಗಿದ್ದರು, ವಿಧಾನ ಪರಿಷತ್ ಸದಸ್ಯರಾಗಿದ್ದರು. ನನ್ನ ಸಹೋದರ ಈಗಲೂ ರಾಜಕಾರಣದಲ್ಲಿದ್ದಾರೆ ಮತ್ತು ಕಾಂಗ್ರೆಸ್ ಜೊತೆ ಸಂಪರ್ಕದಲ್ಲಿದ್ದಾರೆ. ಈ ರೀತಿಯ ಹಿನ್ನೆಲೆ ನನಗೆ ಇರುವುದರಿಂದ ನಾನು ವಿಚಾರಣೆ ನಡೆಸಬೇಕೇ ಎಂಬುದರ ಕುರಿತು ನೀವೇ ನಿರ್ಧಾರ ಕೈಗೊಳ್ಳಬೇಕು'.

ದೂರುದಾರರ ಪರ ಹಾಜರಿದ್ದವರು ಮಹೇಶ್ ಜೇಠ್ಮಲಾನಿ, ರಾಹುಲ್ ಪರ ಹಾಜರಿದ್ದವರು ಅಭಿಷೇಕ್ ಮನುಸಿಂಘ್ವಿ. ಈ ಇಬ್ಬರು ಘಟಾನುಘಟಿ ವಕೀಲರಿಗೆ ಗವಾಯಿ ಅವರ ನಿಷ್ಪಕ್ಷಪಾತ ನಿಲುವು, ನ್ಯಾಯಪರತೆ ಕುರಿತು ಯಾವ ಸಂದೇಹವೂ ಇರಲಿಲ್ಲ. ನೀವೇ ವಿಚಾರಣೆ ನಡೆಸಿ ಎಂದು ಇಬ್ಬರೂ ಸಂತೋಷದಿಂದಲೇ ಸಮ್ಮತಿಸಿದರು.

'ನ್ಯಾಯದಾನ ಆದರಷ್ಟೇ ಸಾಲದು, ನ್ಯಾಯದಾನ ಆಗಿದೆ ಎಂಬುದು ಮನದಟ್ಟು ಕೂಡ ಆಗಬೇಕು' ಎಂಬ ಮಾತಿನ ಮೇಲೆ ಗವಾಯಿ ಅವರಿಗೆ ಎಷ್ಟು ನಂಬಿಕೆ ಇದೆ ಎಂಬುದಕ್ಕೆ ಇದು ನಿದರ್ಶನ. ನ್ಯಾಯ ತೀರ್ಮಾನ ಮಾಡುವವರ ಮೇಲೆ ಎರಡೂ ಕಡೆಯವರಿಗೆ ಎಳ್ಳಷ್ಟೂ ಸಂದೇಹ ಇರಬಾರದು ಎಂಬುದನ್ನು ಗವಾಯಿ ಅವರು ಬಹಳ ಸ್ಪಷ್ಟವಾಗಿ ಖಚಿತಪಡಿಸಿಕೊಂಡರು. ಅದೇ ಭೂಷಣ್ ರಾಮಕೃಷ್ಣ ಗವಾಯಿ ಅವರು ಈಗ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ. ಅವರ ಅಧಿಕಾರಾವಧಿ ಆರು ತಿಂಗಳು ಮಾತ್ರ. ಆದರೆ, ಅವರು ಈ ಸ್ಥಾನದಲ್ಲಿ ಇದ್ದಷ್ಟು ದಿನ ನ್ಯಾಯದಾನದ ಕುರಿತು ಸಂದೇಹ ಮೂಡದು ಎಂಬುದಕ್ಕೆ ಈ ವಿಚಾರಣೆಯ ಸಂದರ್ಭದಲ್ಲಿ ಅವರು ನಡೆದುಕೊಂಡ ರೀತಿಯೇ ಪುರಾವೆ.

ಹಲವು ಹೆಗ್ಗಳಿಕೆಗಳೊಂದಿಗೆ ಗವಾಯಿ ಅವರು ನ್ಯಾಯಾಂಗದ ಅತ್ಯುನ್ನತ ಹುದ್ದೆಗೆ ಏರಿದ್ದಾರೆ. ಈ ಸ್ಥಾನಕ್ಕೇರಿದ ಬೌದ್ಧ ಧರ್ಮದ ಮೊದಲ ವ್ಯಕ್ತಿ ಅವರು. ಹಾಗೆಯೇ ಈ ಸ್ಥಾನ ಪಡೆದುಕೊಂಡ ದಲಿತ ಸಮುದಾಯದ ಎರಡನೇ ವ್ಯಕ್ತಿ. ಮೊದಲನೆಯವರು ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್. ಅವರು 2007ರ ಜನವರಿ 1ರಿಂದ 2010ರ ಮೇ 12ರವರೆಗೆ ಈ ಹುದ್ದೆಯಲ್ಲಿದ್ದರು.

ಬಿ.ಆರ್. ಗವಾಯಿ ಅವರ ತಂದೆ ರಾಮಕೃಷ್ಣ ಗವಾಯಿ ಅವರು ದಲಿತ ಸಮುದಾಯದಿಂದ ಬಂದವರು. ಡಾ.ಬಿ.ಆರ್. ಅಂಬೇಡ್ಕರ್ ಅವರ ಜೊತೆಗೆ 1956ರಲ್ಲಿ ಬೌದ್ಧ ಧರ್ಮ ಸ್ವೀಕರಿಸಿದವರಲ್ಲಿ ರಾಮಕೃಷ್ಣ ಅವರೂ ಒಬ್ಬರು. ಅಂಬೇಡ್ಕರ್ ಅವರ ಸ್ಫೂರ್ತಿಯೇ ಕಾನೂನು ಕಲಿಯಲು ಕಾರಣ ಎಂದು ಗವಾಯಿ ಅವರು ಹಲವು ಬಾರಿ ಹೇಳಿಕೊಂಡಿದ್ದಾರೆ. ಕಾನೂನು ಕಲಿಕೆಯ ಮೂಲಕ ದಲಿತ ಸಮುದಾಯದ ವಿಮೋಚನೆ ಸಾಧ್ಯ ಎಂದು ತಮ್ಮ ತಂದೆ ಸದಾ ನಂಬಿದ್ದರು ಎಂಬುದೂ ಗವಾಯಿ ಅವರು ಕಾನೂನು ಕಲಿಯಲು ಕಾರಣ.

ಗವಾಯಿ ಅವರ ತಂದೆ ರಾಮಕೃಷ್ಣ ಗವಾಯಿ ಅವರು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದಲ್ಲಿ ಸಕ್ರಿಯರಾಗಿದ್ದರು. ಅವರು ಅಮರಾವತಿಯಿಂದ ಸಂಸದರಾಗಿದ್ದರು. ರಾಜ್ಯಸಭೆಯ ಸದಸ್ಯರಾಗಿದ್ದರು. ಕೇಂದ್ರದಲ್ಲಿ ಯುಪಿಎ ಸರ್ಕಾರವಿದ್ದಾಗ 2006ರಿಂದ 2011ರ ನಡುವೆ ಬಿಹಾರ, ಸಿಕ್ಕಿಂ ಮತ್ತು ಕೇರಳದ ರಾಜ್ಯಪಾಲರಾಗಿದ್ದರು. ಪ್ರಖರ ಅಂಬೇಡ್ಕರ್‌ವಾದಿಯಾಗಿದ್ದರು.

ಗವಾಯಿ ಅವರು 1985ರಲ್ಲಿ ವಕೀಲರಾಗಿ ನೋಂದಣಿ ಮಾಡಿಕೊಂಡರು. ಮಹಾರಾಷ್ಟ್ರದ ಅಡ್ವೊಕೇಟ್ ಜನರಲ್ ಆಗಿದ್ದ ರಾಜಾ ಎಸ್. ಭೋಂಸ್ಲೆ ಅವರ ಕೈಕೆಳಗೆ ಕಿರಿಯ ವಕೀಲರಾಗಿ ಸೇರಿಕೊಂಡರು. 1987ರಿಂದ 1990ರವರೆಗೆ ಬಾಂಬೆ ಹೈಕೋರ್ಟ್‌ನಲ್ಲಿ ಸ್ವತಂತ್ರವಾಗಿ ವಕೀಲಿಕೆ ನಡೆಸಿದರು. 1990ರ ನಂತರ ಮುಖ್ಯವಾಗಿ ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠದಲ್ಲಿಯೇ ಕೆಲಸ ಮಾಡಿದರು. 2001ರ ಬಳಿಕ ಕೊಲಿಜಿಯಂಗಳು ಸತತವಾಗಿ ಅವರ ಹೆಸರನ್ನು ಹೆಚ್ಚುವರಿ ನ್ಯಾಯಮೂರ್ತಿ ಹುದ್ದೆಗೆ ಶಿಫಾರಸು ಮಾಡಿದ್ದವು. ಆದರೆ, ಬಾಂಬೆ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಳ್ಳಲು ಅವರು 2003ರ ನವೆಂಬರ್‌ವರೆಗೆ ಕಾಯಬೇಕಾಯಿತು. 2005ರಲ್ಲಿ ಕಾಯಂ ನ್ಯಾಯಮೂರ್ತಿಯಾದರು. 2019ರಲ್ಲಿ ಸುಪ್ರೀಂ ಕೋರ್ಟ್‌ಗೆ ಪದೋನ್ನತಿ ಹೊಂದುವವರೆಗೂ ಅಲ್ಲಿ ಕೆಲಸ ಮಾಡಿದ್ದಾರೆ.

ಗವಾಯಿ ಅವರ ಪದೋನ್ನತಿಯಲ್ಲಿಯೂ ಸಾಮಾಜಿಕ ನ್ಯಾಯದ ಒಂದು ಆಯಾಮ ಇದೆ ಎಂಬುದು ವಿಶೇಷ. 2019ರಲ್ಲಿ ಅವರ ಪದೋನ್ನತಿಯ ಸಂದರ್ಭದಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ಜ್ಯೇಷ್ಠತೆಯಲ್ಲಿ ಗವಾಯಿ ನಾಲ್ಕನೆಯವರಾಗಿದ್ದರು. 'ಗವಾಯಿ ಅವರ ನೇಮಕದ ಮೂಲಕ ದಶಕದ ಬಳಿಕ ಪರಿಶಿಷ್ಟ ಜಾತಿಯ ನ್ಯಾಯಮೂರ್ತಿಯೊಬ್ಬರು ಸುಪ್ರೀಂ ಕೋರ್ಟ್‌ಗೆ ದೊರೆಯಲಿದ್ದಾರೆ' ಎಂದು ಕೊಲಿಜಿಯಂ ನಿರ್ಣಯ ಕೈಗೊಂಡಿತ್ತು. ಆ ನಿರ್ಧಾರವು ಸುಪ್ರೀಂ ಕೋರ್ಟ್‌ಗೆ ಮೊದಲ ಬೌದ್ಧ ನ್ಯಾಯಮೂರ್ತಿಯನ್ನೂ ಕೊಟ್ಟಿರುವುದು ಇನ್ನೊಂದು ವಿಶೇಷ.

ಗವಾಯಿ ಅವರು ನ್ಯಾಯಮೂರ್ತಿಯಾಗಿ ಎರಡು ದಶಕಕ್ಕೂ ಹೆಚ್ಚು ಕೆಲಸ ಮಾಡಿದ್ದಾರೆ. ಹತ್ತಾರು ಮಹತ್ವದ ತೀರ್ಪುಗಳನ್ನು ನೀಡಿದ್ದಾರೆ. ಕಾನೂನನ್ನು ಚಾಚೂ ತಪ್ಪದೆ ಪಾಲಿಸುವ ನ್ಯಾಯಮೂರ್ತಿ ಎಂಬ ಹೆಗ್ಗಳಿಕೆಯನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಅವರು ಪಡೆದುಕೊಂಡಿದ್ದಾರೆ.

ಚುನಾವಣಾ ಬಾಂಡ್ ಯೋಜನೆಯು ಮತದಾರರ ಮಾಹಿತಿ ಹಕ್ಕನ್ನು ಕಸಿದುಕೊಳ್ಳುತ್ತದೆ. ಹಾಗಾಗಿ ಯೋಜನೆ ಅಸಾಂವಿಧಾನಿಕ ಎಂದು ಘೋಷಣೆ ಮಾಡಿದ ಪೀಠದಲ್ಲಿ ಗವಾಯಿ ಅವರಿದ್ದರು. ಪರಿಶಿಷ್ಟ ಜಾತಿಯಲ್ಲಿರುವ ಕೆಲವು ಸಮುದಾಯಗಳಿಗೆ ಪ್ರಾತಿನಿಧ್ಯ ಕಡಿಮೆ ಇದೆ. ಹಾಗಾಗಿ, ಒಳಮೀಸಲಾತಿ ಕಲ್ಪಿಸಬೇಕು ಎಂಬ ತೀರ್ಪು ನೀಡಿದ್ದ ಪೀಠದ ಭಾಗವಾಗಿಯೂ ಅವರಿದ್ದರು. ಪರಿಶಿಷ್ಟ ಜಾತಿ/ಪಂಗಡದಲ್ಲಿ ಕೂಡ ಕೆನೆಪದರ ನೀತಿಯನ್ನು ಜಾರಿಗೆ ತರಬೇಕು ಎಂಬುದರ ಪ್ರಬಲ ಪ್ರತಿಪಾದಕ ಅವರು. ಪೌರನೊಬ್ಬ ಅಪರಾಧ ಎಸಗಿದ್ದಾನೆ ಎಂಬ ಆರೋಪ ಹೊರಿಸಿ, ಆತನ ವಾಸದ ಮನೆಯನ್ನು ಧ್ವಂಸ ಮಾಡುವುದು ಕಾನೂನುಬಾಹಿರ. ಇದು ನ್ಯಾಯಾಂಗ ಮತ್ತು ಕಾರ್ಯಾಂಗ ನಡುವಣ ಅಧಿಕಾರ ಹಂಚಿಕೆಯ ಉಲ್ಲಂಘನೆಯೂ ಹೌದು ಎಂದು ಅವರು ತೀರ್ಪು ನೀಡಿದ್ದರು. ಆ ಸಂದರ್ಭದಲ್ಲಿ ಉತ್ತರ ಪ್ರದೇಶ, ಮಧ್ಯ ಪ್ರದೇಶ ಸೇರಿ ಹಲವು ರಾಜ್ಯಗಳಲ್ಲಿ ಆರೋಪಿಗಳ ಅದರಲ್ಲೂ ಮುಖ್ಯವಾಗಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರ ಮನೆ ಮತ್ತು ಇತರ ಕಟ್ಟಡಗಳನ್ನು ನಾಶ ಮಾಡುವುದು ಆಡಳಿತ ನಡೆಸುವವರ ಪ್ರಧಾನ ಅಸ್ತ್ರವಾಗಿ ಚಾಲ್ತಿಯಲ್ಲಿತ್ತು. ಗವಾಯಿ ಅವರಿದ್ದ ಪೀಠವು ಇದಕ್ಕೆ ಸಂಬಂಧಿಸಿ ರಾಷ್ಟ್ರವ್ಯಾಪಿ ಮಾರ್ಗಸೂಚಿಯನ್ನೇ ರೂಪಿಸಿಕೊಟ್ಟಿತು.

ಜೊತೆಗೆ, ₹500 ಮತ್ತು ₹1000 ಮುಖಬೆಲೆಯ ನೋಟು ಅಮಾನ್ಯೀಕರಣವನ್ನು ಎತ್ತಿ ಹಿಡಿದ ಬಹುಮತದ ತೀರ್ಪನ್ನು ಬರೆದವರು ಗವಾಯಿ ಅವರೇ. ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಹಿಂದಕ್ಕೆ ಪಡೆದ ಕೇಂದ್ರ ಸರ್ಕಾರದ ಕ್ರಮವನ್ನು ಎತ್ತಿಹಿಡಿದ ಐವರು ನ್ಯಾಯಮೂರ್ತಿಗಳ ಪೀಠದಲ್ಲಿಯೂ ಗವಾಯಿ ಅವರು ಇದ್ದರು.

ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅತೀವ ಮಹತ್ವವನ್ನು ನೀಡುವ ನ್ಯಾಯಮೂರ್ತಿಗಳಲ್ಲಿ ಗವಾಯಿ ಅಗ್ರಗಣ್ಯರು. ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಸೆರೆಯಲ್ಲಿದ್ದ ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರಿಗೆ ಜಾಮೀನು ನೀಡಿದ್ದರು. ಜಾಮೀನು ನೀಡದೇ ಇರುವುದು ಕೆಲವೊಮ್ಮೆ ಕಾನೂನಿನ ಉಲ್ಲಂಘನೆಯೂ ಆಗಬಹುದು ಎಂಬ ಎಚ್ಚರಿಕೆಯನ್ನು ಅವರು ಆಗ ನೀಡಿದ್ದರು. ಹೈಕೋರ್ಟ್‌ಗಳು ಜಾಮೀನು ನೀಡಬಹುದಾದ ಪ್ರಕರಣಗಳಲ್ಲಿಯೂ ಜಾಮೀನು ನೀಡದೇ 'ಸುರಕ್ಷತೆಯ ಆಟ' ಆಡಬಾರದು ಎಂದು ಗದರಿದ್ದರು.

ನ್ಯಾಯಪರತೆ, ಬದ್ಧತೆ, ಸಾಮಾಜಿಕ ನ್ಯಾಯದ ಕಳಕಳಿ, ಕಾನೂನು ಬದ್ಧತೆ, ವೈಯಕ್ತಿಕ ಸ್ವಾತಂತ್ರ್ಯದ ಬಗ್ಗೆ ಅಪಾರ ಗೌರವವುಳ್ಳ ಮತ್ತು ಔನ್ನತ್ಯದ ಹಮ್ಮುಬಿಮ್ಮುಗಳಿಲ್ಲದ ಗವಾಯಿ ಅವರಿಂದ ಸ್ವಲ್ಪ ಅವಧಿಯಲ್ಲಿಯೇ ಅತಿ ಹೆಚ್ಚಿನ ನಿರೀಕ್ಷೆಯನ್ನು ಇರಿಸಿಕೊಳ್ಳುವುದರಲ್ಲಿ ಯಾವ ತಪ್ಪೂ ಇಲ್ಲ. ❖

ಪದಬಂಧ 6052

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶ್ರೇಷ್ಠವಾದುದು ಇದು (3)
3.ಓಬವ್ವನ ಆಯುಧ (3)
5.ಕೊತ್ತಂಬರಿ ಕಾಳನ್ನು ಹೀಗೂ ಹೇಳುವರು(3)
7.ಕನ್ನ ಕೊರೆದಾಗ ಕಾಣಿಸಿದ ದರ್ಪಣ (3)
8.ಕಾರು ಇದ್ದವ ಹೇಳಿದ ಕೆಟ್ಟ ಸುದ್ದಿ! (3)
10.ನಿಜವಾಗಿಯೂ ಖನಿಯಲ್ಲಿ ಸಿಕ್ಕಿದುದುದು(3)
12.ಎಡಗೈ ಉಪಯೋಗಿಸಿ ಕೆಲಸ ಮಾಡುವವನು (3)
13.ಓದುಗ ಇಲ್ಲಿದ್ದಾನೆ (3)
14.ರಸ ಒಸರುವ ನಾಲಿಗೆ (3)
16.ಕಟಕಟೆ ಹತ್ತಿದವನಿಗಾದ ದುಃಖ (3)
18.ಸಂಗಾತಿ ಹೇಳಿರುವ ವಿಷಯ (3)
20.ರಜದಲ್ಲಿ ಖರೀದಿಸಿರುವ ಬೆಳ್ಳಿ (3)
21.ಸುಗಂಧಯುಕ್ತವಾದ ನೀರು (3)
22.ತಿಲದ ಹತ್ತಿರವಿರುವ ಬೊಟ್ಟು (3)

ಮೇಲಿಂದ ಕೆಳಕ್ಕೆ

1.ಪದ ಹೇಳಿ ಪಡೆದುಕೊಂಡ ಬಿಲ್ಲೆ (3)
2.ಮಡಿವಂತ ಹತ್ತಿರುವ ಅಟ್ಟ (3)
3.ನೆನಪು ಮಾಡಿಕೊಂಡು ತೋರಿದ ವೈಯಾರ(3)
4.ಕೊಸರು ಕೇಳುವಾಗ ಸಿಡಿದ ರಾಡಿ (3)
6.ಜನರ ಹತ್ತಿರ ನಿಂತಿರುವ ತಾಯಿ (3)
9.ಕಾಯ ಬಗ್ಗಿಸಿ ಮಾಡಿದ ಕಸುಬು (3)
10.ಖರದ ನಡುವಿರುವ ಪಕ್ಷಿ (3)
11.ಜನರ ಮಧ್ಯೆ ನುಸುಳಿರುವ ಸೇವಕ (3)
12.ಕಾಯಿಸಿದ ಲೋಹ ದ್ರವ್ಯವನ್ನು ಅಚ್ಚಿಗೆ ಎರೆಯುವಿಕೆ (3)
15.ಮರದ ಹತ್ತಿರ ನಡೆದ ಕಾಳಗ (3)
16.ತಾಪದ ಹೊತ್ತಿನಲ್ಲಿ ತೋರಿದ ಅತಿಯಾದ ದುಃಖ (3)
17.ಗುರುಗುಟ್ಟುತ್ತಿರುವ ಗಂಡುಕುರಿ (3)
18.ಸಂತನಿಂದ ಮುಂದುವರೆದ ಪೀಳಿಗೆ (3)
19.ತಿರುಪೆ ಬೇಡುವವನು ಇಲ್ಲಿದ್ದಾನೆ (3)



6051ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಆಮ್ಲಜನಕ 5.ಹಾವಸೆ
6.ಪಾಲಕ 7.ವಿರಳ
8.ಜನಕ 10.ಪಾದ
11.ವಿಮಾನಯಾನ
13.ಅಕ್ಕ 14.ಗಣಿತ
16.ಪ್ರಬಂಧ 17.ಸರಸ
18.ಅಂಬಿಗ 19.ವನಪಾಲಕ

ಮೇಲಿಂದ ಕೆಳಕ್ಕೆ:

1.ಮಹಾರಾಜ 2.ಆಸೆ
3.ಕಪಾಳ 4.ಮಕರಂದ
7.ವಿಧಾನಸೌಧ 9.ಕವಿ
12.ನಗ 13.ಅವಸರ
15.ತರಗತಿ 16.ಪ್ರಸವ
18.ಅಂಕ

ಸುಡೊಕು 6436

	8			9		5		3
6	7	5						
			1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6435 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 24, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ದ್ವಾದಶಿ ಗಂ. 19-21 ನಕ್ಷತ್ರ: ರೇವತಿ ಗಂ. 13-48 ಯೋಗ: ಆಯುಷ್ಮಾನ್ ಗಂ. 15-00 ಕರಣ: ಕೌಲವ ಗಂ. 8-58, ವೃಷಭ ಮಾಸದ 10 ನೇ ದಿನ.

ರಾಹುಕಾಲ : ಬೆಳಿಗ್ಗೆ 09-00 – 10-30

ಸೂರ್ಯೋದಯ : 06-07 ಸೂರ್ಯಾಸ್ತ : 06-48

ಮುಸ್ಲಿಂ ದಿನಾಂಕ : 25 ಜುಲ್ಕಾಯದ್

ದಿನ ವಿಶೇಷ : ಪಕ್ಷ ಪ್ರದೋಷ , ಅದೃಷ್ಟ ಸಂಖ್ಯೆ : 3, 5

ಮೇಷ: ಇತರರನ್ನು ಮಾತಿನ ಮೂಲಕ ಗೆಲ್ಲುವ ಸಾಮರ್ಥ್ಯವಿದೆ. ನಿಮ್ಮ ಮಾತು ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಇರುವ ಬಗ್ಗೆ ಗಮನ ನೀಡಿ. ತಾಳ್ಮೆ ವಹಿಸಿ. ಶಿರೋವೇದನೆಯಿಂದ ಬಳಲುವ ಸಾಧ್ಯತೆ ಇರುವುದು.

ವೃಷಭ: ಅವಸರ ಮತ್ತು ಉದ್ವೇಗ ಇವೆರಡೂ ತಲೆ ತಗ್ಗಿಸುವಂತೆ ಮಾಡಬಹುದು. ಕೆಲಸದ ಬಗ್ಗೆ ವಿಮರ್ಶಿಸಿ ನಂತರದಲ್ಲಿ ಕಾರ್ಯರೂಪಕ್ಕೆ ತನ್ನಿ. ವಿದ್ಯಾರ್ಥಿಗಳು ತಮ್ಮ ಅಭ್ಯಾಸದಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಾಣಲಿದ್ದಾರೆ.

ಮಿಥುನ: ತಪ್ಪುಗಳನ್ನು ಪುನರಾವರ್ತನೆಯಾಗದಂತೆ ಗಮನಿಸಿದರೆ ಯಶಸ್ಸಿನ ದಾರಿ ಕಾಣಬಹುದು. ಸಿದ್ಧಿವಿನಾಯಕನ ಆರಾಧನೆಯು, ನಾಮಸ್ಮರಣೆಯು ಶುಭವನ್ನು ಉಂಟುಮಾಡುತ್ತದೆ.

ಕರ್ಕಾಟಕ: ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ. ಮನೆಮದ್ದುಗಳಿಂದ ಸರಿಹೋಗುತ್ತದೆ. ಸಂಗೀತಗಾರರಿಗೆ ಮತ್ತು ನರ್ತಕರಿಗೆ ಅವಿಸ್ಮರಣೀಯ ದಿನ.

ಸಿಂಹ: ಸುಂದರ ವಸ್ತು, ಚಿತ್ರ ಅಥವಾ ಸಮಾಜದ ಅತಿ ಗಣ್ಯವ್ಯಕ್ತಿಗಳನ್ನು ನೋಡುವ, ಮಾತನಾಡುವ ಭಾಗ್ಯ ಸಿಗುವುದು. ಲೇಖನ ಬರೆಯುವುದರಿಂದ ಜನ ಸಂಪರ್ಕ ಅಭಿವೃದ್ಧಿಯಾಗಲಿದೆ. ಅನುಯಾಯಿಗಳು ಹುಟ್ಟಿಕೊಳ್ಳುವರು.

ಕನ್ಯಾ: ಸೂಕ್ತ ಸಮಯದಲ್ಲಿ ಸರಿಯಾದ ಕೆಲಸ ಮಾಡುವುದರಿಂದ ಅದೃಷ್ಟ ಖುಲಾಯಿಸಲಿದೆ. ವೃತ್ತಿಯಲ್ಲಿ ಉನ್ನತ ಅಧಿಕಾರಿಗಳಿಗೆ ಸಲಹೆ ನೀಡುವ ಬಗ್ಗೆ ಹಿಂಜರಿಕೆ ಬೇಡ. ಆಲೋಚನೆ ಮಾಡಿ.

ತುಲಾ: ಅಧಿಕಾರದಲ್ಲಿ ಸ್ಥಾನಮಾನ ಪಡೆಯುವ ಬಯಕೆಯಿಂದಾಗಿ ದೇವರ ಸೇವೆಯಂಥ ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಒಳ್ಳೆಯದು. ದಾಂಪತ್ಯದಲ್ಲಿ ಉತ್ತಮ ಅನ್ಯೋನ್ಯತೆ ವೃದ್ಧಿಯಾಗಲಿದೆ.

ವೃಶ್ಚಿಕ: ವಾತಾವರಣದಲ್ಲಿನ ಬದಲಾವಣೆಯಿಂದಾಗಿ ಸ್ವಲ್ಪ ಮಟ್ಟಿನ ಆಲಸ್ಯ ಉಂಟಾಗಲಿದೆ. ಕಾರ್ಯದ ವೇಗ ಕಡಿಮೆಯಾಗುವುದು. ಹೊಸ ಹೂಡಿಕೆಯಲ್ಲಿ ಎಚ್ಚರ ಇಲ್ಲದಿದ್ದರೆ ನಷ್ಟವಾಗುವುದು.

ಧನು: ಹವ್ಯಾಸಿ ಛಾಯಾಗ್ರಾಹಕರಿಗೆ ಪ್ರಶಸ್ತಿ ಅಥವಾ ಸಮಾಜದಲ್ಲಿ ಹೆಸರು ಲಭಿಸಲಿದೆ. ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯವನ್ನು ಹೊಂದುವಿರಿ. ಸಂಧಾನದಿಂದ ಸಮಸ್ಯೆ ಬಗೆಹರಿಯುತ್ತದೆ.

ಮಕರ: ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ. ತೈಲಗಳ ಲೇಪನ ಮಾಡಿಕೊಳ್ಳುವುದರಿಂದ ಕಾಲುನೋವು ನಿವಾರಣೆ. ವಿವಾಹದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ.

ಕುಂಭ: ವೃತ್ತಿಯಲ್ಲಿ ಬದಲಾವಣೆ ಅನಿವಾರ್ಯವೆನಿಸಲಿದೆ. ಅದಕ್ಕೆ ಸ್ನೇಹಿತರೊಂದಿಗಿನ ಮಾತುಕತೆ ಉಪಯುಕ್ತವಾಗುವುದು. ಮಗನಿಗೆ ಓದಿನಲ್ಲಿ ಸಹಾಯ ಮಾಡುವಿರಿ. ಬಿಳಿ ಬಣ್ಣದ ಉಡುಗೆ ಶುಭ ತರುವುದು.

ಮೀನ: ಹಿಂದಿನ ದಿನಗಳಿಗೆ ಹೋಲಿಸಿದರೆ ಸಂಸಾರ ನಿರ್ವಹಣೆ ಸುಲಭವೆನಿಸುವುದು. ಕ್ರೀಡಾಪಟುಗಳ ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣವಾಗುತ್ತದೆ. ಎಲ್ಲಾ ವಿಧದ ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕಿ.

ಷೇರುಪೇಟೆ ವಹಿವಾಟು 769



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,609
ಇಂದಿನ ಅಂತ್ಯ	24,853
▲	243
ದಿನದ ಗರಿಷ್ಠ	24,909

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹600
12 ಕ್ಕೆ ₹80
ಮೈಸೂರು
100ಕ್ಕೆ ₹605

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹235-544
ದ್ವಿತಳಿ (ಬಿ.ವಿ) ₹336-727

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹193.50
ಆರ್‌ಎಸ್‌ಎಸ್-5 ₹188.50
ಗುಡ್ ಲಾಟ್ ₹178.50
(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18500-18500
ದಾವಣಗೆರೆ	₹13500-13500
ತುಮಕೂರು	₹16500-18000

ಶೀಘ್ರ ಜಿಎಸ್‌ಟಿ ಮಂಡಳಿ ಸಭೆ

ನವದೆಹಲಿ (ಪಿಟಿಐ): ಜಿಎಸ್‌ಟಿ ದರ ಸರಳೀಕರಣ ಮತ್ತು ಪರಿಹಾರ ಸೆಸ್ ಕುರಿತು ಚರ್ಚಿಸಲು ಶೀಘ್ರವೇ ಸರಕು ಮತ್ತು ಸೇವಾ ತೆರಿಗೆ ಮಂಡಳಿಯ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ದರ ಸರಳೀಕರಣ, ಸ್ಲ್ಯಾಬ್‌ಗಳ ಪರಿಷ್ಕರಣೆ ಮತ್ತು ಪರಿಹಾರ ಸೆಸ್‌ಗೆ ಸಂಬಂಧಿಸಿದಂತೆ ಸಚಿವರ ಸಮಿತಿಗಳನ್ನು ರಚಿಸಲಾಗಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಮಂಡಳಿಯ ಸಭೆ ನಡೆದಿತ್ತು. ಆದರೆ, 148 ಸರಕುಗಳ ಮೇಲಿನ ದರ ಪರಿಷ್ಕರಣೆಗೆ ಸಂಬಂಧಿಸಿದ ವರದಿಯನ್ನು ಈ ಸಭೆಯಲ್ಲಿ ಮಂಡಿಸಿಲ್ಲ.

ಅಲ್ಲದೆ, ಸಭೆಯು ಆರೋಗ್ಯ ಮತ್ತು ಜೀವ ವಿಮೆ ಕಂತಿನ ಮೇಲಿನ ಜಿಎಸ್‌ಟಿ ಕಡಿತಗೊಳಿಸುವ ಕುರಿತ ನಿರ್ಧಾರವನ್ನು ಮುಂದೂಡಿತ್ತು. ಈ ಕುರಿತು ಸಭೆಯಲ್ಲಿ ಚರ್ಚಿಸುವ ಸಾಧ್ಯತೆಯಿದೆ ಎಂದು ಹೇಳಿವೆ.

ಪರಿಹಾರ ಸೆಸ್ ಅವಧಿಯು 2026ರ ಮಾರ್ಚ್‌ಗೆ ಅಂತ್ಯಗೊಳ್ಳಲಿದೆ. ಈ ಕುರಿತು ಚರ್ಚಿಸಲು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರ ಅಧ್ಯಕ್ಷತೆಯಲ್ಲಿ ಸಚಿವರ ಸಮಿತಿ ರಚಿಸಲಾಗಿದೆ.

ಭವಿಷ್ಯದಲ್ಲಿ ಈ ಸೆಸ್ ಅನ್ನು ಯಾವ ರೂಪದಲ್ಲಿ ಸಂಗ್ರಹಿಸಬೇಕು. ಜೊತೆಗೆ, ಇದರಿಂದ ಬರುವ ಆದಾಯವನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಹೇಗೆ ಹಂಚಿಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸಮಿತಿಯು ಚರ್ಚಿಸಿ ಅಂತಿಮ ವರದಿ ಸಲ್ಲಿಸಲಿದೆ.

ಮುಂಬೈ ಧಾರಣೆ

ಶೇಂಗಾ

23-05-2025

ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ(ಹೊಸ)	7700-7800
ದಪ್ಪ ಗುಜರಾತ್(ಹೊಸ)	8000-8100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1208 (1210)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹94,850 (95,250)
ಬೆಳ್ಳಿ ಕೆ.ಜಿ ₹96,950 (96,400)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-1,500
ಮಧ್ಯಮ	₹800-1,200
ಸಣ್ಣ	₹300-800

ಭಾರತೀಯ ವಿಮಾನಗಳಿಗೆ ನಿರ್ಬಂಧ ವಿಸ್ತರಿಸಿದ ಪಾಕ್

ಲಾಹೋರ್ (ಪಿಟಿಐ): ತನ್ನ ವಾಯು ಪ್ರದೇಶದಲ್ಲಿ ಭಾರತೀಯ ವಿಮಾನಗಳು ಹಾರಾಟ ನಡೆಸುವುದರ ಮೇಲಿನ ನಿರ್ಬಂಧವನ್ನು ಪಾಕಿಸ್ತಾನವು ಜೂನ್ 24ರವರೆಗೆ ವಿಸ್ತರಿಸಿದೆ. 'ಪಾಕಿಸ್ತಾನ ವಿಮಾನ ನಿಲ್ದಾಣ ಪ್ರಾಧಿಕಾರ'ವು ಈ ಬಗ್ಗೆ ಶುಕ್ರವಾರ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ಜೂನ್ 24ರ ಮುಂಜಾನೆ 4:59ರವರೆಗೆ ಈ ನಿರ್ಬಂಧ ಜಾರಿಯಲ್ಲಿರಲಿದೆ. ಭಾರತೀಯ ವಿಮಾನಯಾನ ಸಂಸ್ಥೆಗಳು, ಅಲ್ಲಿಂದ ನಿರ್ವಹಿಸಲ್ಪಡುವ, ಒಡೆತನದ, ನೋಂದಾಯಿತ ಮತ್ತು ಗುತ್ತಿಗೆಗೆ ಪಡೆದ ಎಲ್ಲಾ ವಿಮಾನಗಳು ನಿಷೇಧಕ್ಕೆ ಒಳಪಟ್ಟಿರುತ್ತವೆ. ಇದೇ ರೀತಿ ಭಾರತೀಯ ಸೇನಾ ವಿಮಾನಗಳೂ ಪಾಕಿಸ್ತಾನದ ವಾಯುಪ್ರದೇಶವನ್ನು ಬಳಸಲು ಅನುಮತಿಸಲಾಗುವುದಿಲ್ಲ ಎಂದು ಅದು ತಿಳಿಸಿದೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಬಳಿಕ ಉಂಟಾಗಿದ್ದ ಉಭಯ ದೇಶಗಳ ನಡುವಿನ ಸೇನಾ ಸಂಘರ್ಷದ ಸಮಯದಲ್ಲಿ ಭಾರತೀಯ ವಿಮಾನಗಳಿಗೆ ಪಾಕಿಸ್ತಾನ ನಿಷೇಧ ಹೇರಿ, ಮೇ 23ಕ್ಕೆ ಒಂದು ತಿಂಗಳು ಕಳೆಯಿತು.

ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯ ನಿಯಮಗಳ ಪ್ರಕಾರ ಒಂದು ತಿಂಗಳಿಗಿಂತ ಹೆಚ್ಚು ಸಮಯ ವಾಯು ಪ್ರದೇಶದ ಮೇಲೆ ವಿಮಾನ ಹಾರಾಟವನ್ನು ನಿರ್ಬಂಧಿಸುವಂತಿಲ್ಲ. ಹೀಗಾಗಿ ಪಾಕಿಸ್ತಾನವು ನಿಷೇಧದ ಅವಧಿಯನ್ನು ವಿಸ್ತರಿಸಿದೆ.

₹2.69 ಲಕ್ಷ ಕೋಟಿ ಪಾವತಿಗೆ ಆರ್‌ಬಿಐ ಸಮ್ಮತಿ

ಕೇಂದ್ರಕ್ಕೆ ದಾಖಲೆ ಲಾಭಾಂಶ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಕೇಂದ್ರ ಸರ್ಕಾರಕ್ಕೆ ₹2.69 ಲಕ್ಷ ಕೋಟಿಯಷ್ಟು ದಾಖಲೆ ಮೊತ್ತದ ಲಾಭಾಂಶ ಪಾವತಿಸಲು ನಿರ್ಧರಿಸಿದೆ.

ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಆರ್‌ಬಿಐನ ಕೇಂದ್ರೀಯ ಮಂಡಳಿಯ ನಿರ್ದೇಶಕರ 616ನೇ ಸಭೆಯು ಇದಕ್ಕೆ ಅನುಮೋದನೆ ನೀಡಿದೆ.

2023–24ನೇ ಆರ್ಥಿಕ ವರ್ಷದಲ್ಲಿ ₹2.10 ಲಕ್ಷ ಕೋಟಿ ಲಾಭಾಂಶ ಪಾವತಿಸಿದ್ದು, ಇಲ್ಲಿಯವರೆಗಿನ ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 27.4ರಷ್ಟು ಹೆಚ್ಚು ಲಾಭಾಂಶವು ಕೇಂದ್ರದ ಬೊಕ್ಕಸಕ್ಕೆ ಪಾವತಿಯಾಗಲಿದೆ.

2022–23ರಲ್ಲಿ ₹87,416 ಕೋಟಿ ಲಾಭಾಂಶ ಪಾವತಿಸಲಾಗಿತ್ತು.

ಸದ್ಯ ಜಾಗತಿಕ ಮತ್ತು ದೇಶದ ಆರ್ಥಿಕ ಪರಿಸ್ಥಿತಿ ಹಾಗೂ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಆರ್ಥಿಕ ಅಪಾಯಗಳ ಬಗ್ಗೆಯೂ ಸಭೆಯು ಪರಾಮರ್ಶೆ ನಡೆಸಿತು.

ತುರ್ತು ನಿಧಿ ಪ್ರಮಾಣ ಹೆಚ್ಚಳ

ಆರ್‌ಬಿಐ ಗವರ್ನರ್ ಆಗಿದ್ದ ಬಿಮಲ್ ಜಲನ್ ಅಧ್ಯಕ್ಷತೆಯ ಪರಿಣತರ ಸಮಿತಿ ನೀಡಿರುವ ಶಿಫಾರಸ್ಸಿನ ಅನ್ವಯ 2019ರಿಂದ ಆರ್ಥಿಕ ಬಂಡವಾಳದ ಚೌಕಟ್ಟನ್ನು (ಇಸಿಎಫ್) ಅಳವಡಿಸಿಕೊಳ್ಳಲಾಗಿದೆ. ಇದರ ಆಧಾರದ ಮೇಲೆ ಕೇಂದ್ರಕ್ಕೆ ಲಾಭಾಂಶ ಪಾವತಿಸಲಾಗುತ್ತದೆ.

ಮಾರ್ಚ್‌ನಲ್ಲಿ ನಡೆದ ಸಭೆಯಲ್ಲಿ ಪರಿಷ್ಕೃತ ಆರ್ಥಿಕ ಬಂಡವಾಳದ ಚೌಕಟ್ಟಿಗೆ ಕೇಂದ್ರೀಯ ಮಂಡಳಿ ಸಭೆಯು ಅನುಮೋದನೆ ನೀಡಿತ್ತು. ಇದರ ಅನ್ವಯ ಸರ್ಕಾರಕ್ಕೆ ಲಾಭಾಂಶ ಪಾವತಿಸಲು ಕ್ರಮವಹಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ಅರ್ಥ ವ್ಯವಸ್ಥೆಗೆ ಎದುರಾಗಬಹುದಾದ ಅಪಾಯ ಎದುರಿಸಲು ಆರ್‌ಬಿಐ ತೆಗೆದಿರಿಸುವ ತುರ್ತು ನಿಧಿಯ ಪ್ರಮಾಣವನ್ನು (ಸಿಆರ್‌ಬಿ) ಶೇ 4.50ರಿಂದ ಶೇ 7.50ರ ಮಿತಿಯಲ್ಲಿ ಕಾಯ್ದುಕೊಳ್ಳಬೇಕು ಎಂದು ಪರಿಷ್ಕೃತ ನಿಯಮಾವಳಿಯಲ್ಲಿ ಹೇಳಲಾಗಿದೆ. ಅಂದರೆ, ಆರ್‌ಬಿಐನ ಬ್ಯಾಲೆನ್ಸ್ ಶೀಟ್‌ಗೆ ಅನುಗುಣವಾಗಿ ಅನಿರೀಕ್ಷಿತ ಹಣಕಾಸು ಪರಿಸ್ಥಿತಿ ಎದುರಿಸಲು ಇರುವ ತುರ್ತು ನಿಧಿಯ ಪ್ರಮಾಣ ಇದಾಗಿದೆ.

ಇದರನ್ವಯ 2025–26ರಲ್ಲಿ ಸಿಆರ್‌ಬಿ ಉದ್ದೇಶಕ್ಕೆ ಮೀಸಲಿಡುವ ಮೊತ್ತವನ್ನು ಶೇ 7.50ಕ್ಕೆ ನಿಗದಿಪಡಿಸಲು ಮಂಡಳಿಯು ಸಮ್ಮತಿಸಿದೆ. 2024–25ರಲ್ಲಿ ಶೇ 6.5ಕ್ಕೆ ನಿಗದಿಪಡಿಸಲಾಗಿತ್ತು.

2024ರ ಏಪ್ರಿಲ್‌ನಿಂದ ಪ್ರಸಕ್ತ ವರ್ಷದ ಮಾರ್ಚ್‌ವರೆಗೆ ಆರ್‌ಬಿಐ ನಡೆಸಿದ ಕಾರ್ಯಾಚರಣೆ ಬಗ್ಗೆ ಚರ್ಚಿಸಲಾಯಿತು.

2024–25ನೇ ಆರ್ಥಿಕ ವರ್ಷದ ವಾರ್ಷಿಕ ವರದಿ ಮತ್ತು ಹಣಕಾಸಿಗೆ ಸಂಬಂಧಿಸಿದ ಹೇಳಿಕೆಗಳಿಗೆ ಒಪ್ಪಿಗೆ ನೀಡಿತು.

ಪಾಕ್‌ಗೆ ವಿಶ್ವಬ್ಯಾಂಕ್ ಸಾಲ: ಭಾರತ ಆಕ್ಷೇಪ

ಒಂದನೇ ಪುಟದಿಂದ...

ಜಾಗತಿಕ ಮಟ್ಟದ ಹಣಕಾಸು ಸಂಸ್ಥೆಗಳು ಅಭಿವೃದ್ಧಿ ಮತ್ತು ಬಡತನ ನಿರ್ಮೂಲನೆಗಾಗಿ ಅಭಿವೃದ್ಧಿಶೀಲ ದೇಶಗಳಿಗೆ ಆರ್ಥಿಕ ನೆರವು ನೀಡುತ್ತವೆ. ಆದರೆ, ಇಂತಹ ನೆರವು ಪಡೆದಿರುವ ಪಾಕಿಸ್ತಾನವು ರಕ್ಷಣಾ ಉದ್ದೇಶಕ್ಕೆ ದುರ್ಬಳಕೆ ಮಾಡಿಕೊಂಡಿದೆ ಎಂದು ಮೂಲಗಳು ಹೇಳಿವೆ.

ಐಎಂಎಫ್ ನಿಲುವಿಗೂ ಆಕ್ಷೇಪ: ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಪಾಕಿಸ್ತಾನಕ್ಕೆ ನೀಡಲು ಉದ್ದೇಶಿಸಿರುವ 230 ಕೋಟಿ ಡಾಲರ್ (₹19,500 ಕೋಟಿ) ಸಾಲದ ಬಗ್ಗೆಯೂ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಸಾಲ ನಿಲುವಳಿಗೆ ಮತ ಚಲಾಯಿಸುವುದಕ್ಕೆ ನಡೆದ ಐಎಂಎಫ್ ಕಾರ್ಯಕಾರಿ ಮಂಡಳಿಯ ಸಭೆಯಿಂದ ಹೊರಗುಳಿದಿತ್ತು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಐಎಂಎಫ್ ಮುಖ್ಯಸ್ಥರು ಮತ್ತು ಸದಸ್ಯರ ಜೊತೆಗೆ ಈ ಕುರಿತು ಚರ್ಚಿಸಿದ್ದರು. ಅಲ್ಲದೆ, ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ದಾಖಲೆಗಳನ್ನೂ ಮಂಡಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಆದರೂ ಸಾಲ ನೀಡಿಕೆಯನ್ನು ಐಎಂಎಫ್ ಸ್ಥಗಿತಗೊಳಿಸಿಲ್ಲ. ಭಾರತದಿಂದ ಒತ್ತಡ ಹೆಚ್ಚಿದ್ದರಿಂದ ಸಾಲದ ಕಂತಿನ ಮಂಜೂರಿಗೂ ಮೊದಲು 11 ಷರತ್ತುಗಳನ್ನು ಪೂರೈಸಲು ಸೂಚಿಸಿತ್ತು ಎಂದು ಹೇಳಿವೆ.

'ಯಾವುದೇ ದೇಶಕ್ಕೆ ಅಭಿವೃದ್ಧಿ ಚಟುವಟಿಕೆಗಳಿಗೆ ನೀಡುವ ಆರ್ಥಿಕ ನೆರವಿನ ಬಗ್ಗೆ ಭಾರತವು ತಗಾದೆ ವ್ಯಕ್ತಪಡಿಸಿಲ್ಲ. ಉಭಯ ದೇಶಗಳ ನಡುವೆ ತಲೆದೋರಿರುವ ಬಿಕ್ಕಟ್ಟಿನ ನಡುವೆಯೇ ಪಾಕಿಸ್ತಾನಕ್ಕೆ ಸಾಲ ನೀಡುವುದು ಸರಿಯಲ್ಲ ಎಂಬುದು ಭಾರತದ ವಾದ. ಅಭಿವೃದ್ಧಿ ಹೆಸರಿನಲ್ಲಿ ಪಡೆಯುವ ಹಣವನ್ನು ಆ ದೇಶವು ಜನರ ಕಲ್ಯಾಣಕ್ಕೆ ಬಳಸಿಲ್ಲ' ಎಂದು ಹೇಳಿವೆ.

ರಕ್ಷಣಾ ವೆಚ್ಚಕ್ಕೆ ಶೇ 18ರಷ್ಟು ಹಣ ನಿಗದಿ

ದಾಖಲೆಗಳ ಪ್ರಕಾರ ಪಾಕಿಸ್ತಾನವು ತನ್ನ ವಾರ್ಷಿಕ ಬಜೆಟ್‌ನಲ್ಲಿ ರಕ್ಷಣಾ ಉದ್ದೇಶಕ್ಕೆ ಶೇ 18ರಷ್ಟು ಹಣವನ್ನು ಮೀಸಲಿಟ್ಟಿದೆ. ಜಾಗತಿಕ ಮಟ್ಟದಲ್ಲಿ ಸಂಘರ್ಷಪೀಡಿತ ದೇಶಗಳು ರಕ್ಷಣಾ ಉದ್ದೇಶಕ್ಕೆ ಬಜೆಟ್‌ನಲ್ಲಿ ಶೇ 10ರಿಂದ ಶೇ 14ರಷ್ಟು ಅನುದಾನ ಮೀಸಲಿಟ್ಟಿವೆ ಎಂದು ಮೂಲಗಳು ಹೇಳಿವೆ.

1980ರಿಂದ 2023ರ ನಡುವೆ ಪಾಕಿಸ್ತಾನದ ಶಸ್ತ್ರಾಸ್ತ್ರ ಆಮದು ಪ್ರಮಾಣದಲ್ಲಿ ಸರಾಸರಿ ಶೇ 20ರಷ್ಟು ಹೆಚ್ಚಳವಾಗಿದೆ. ಐಎಂಎಫ್‌ನಿಂದ ನೆರವು ಪಡೆಯದಿರುವ ವರ್ಷಗಳಿಗೆ ಹೋಲಿಸಿದರೆ, ನೆರವು ಪಡೆದ ವರ್ಷಗಳಲ್ಲಿ ಶಸ್ತ್ರಾಸ್ತ್ರ ಖರೀದಿ ಪ್ರಮಾಣ ಹೆಚ್ಚಾಗಿದೆ ಎಂದು ತಿಳಿಸಿವೆ.

ಮತ್ತೆ ಬೂದು ಪಟ್ಟಿಗೆ ಸೇರಿಸಲು ಸಿದ್ಧತೆ

ನವದೆಹಲಿ (ಪಿಟಿಐ): ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನವನ್ನು ಮತ್ತೆ ಬೂದು ಪಟ್ಟಿಗೆ (ಗ್ರೇ ಲಿಸ್ಟ್) ಸೇರ್ಪಡೆಗೊಳಿಸುವ ಸಂಬಂಧ ಹಣಕಾಸು ಕಾರ್ಯಪಡೆ (ಎಫ್‌ಎಟಿಎಫ್) ಮುಂದೆ ದಾಖಲೆಗಳನ್ನು ಸಲ್ಲಿಸಲು ಭಾರತ ಸಿದ್ಧತೆ ನಡೆಸಿದೆ.

ಎಫ್‌ಎಟಿಎಫ್‌ನ ಏಷ್ಯಾ ಫೆಸಿಪಿಕ್ ದೇಶಗಳ ಸಭೆಯು ಆಗಸ್ಟ್ 25ರಂದು ನಿಗದಿಯಾಗಿದೆ. ಸಭೆಯಲ್ಲಿ ಪಾಕಿಸ್ತಾನವು ಉಗ್ರರಿಗೆ ನೀಡುತ್ತಿರುವ ನೆರವು ಮತ್ತು ಯುದ್ಧ ಸಾಮಗ್ರಿಗಳ ಖರೀದಿ ಮಾಡುತ್ತಿರುವ ವೆಚ್ಚದ ಕುರಿತ ದಾಖಲೆಗಳನ್ನು ಮಂಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ದಾಳಿ ನಡೆಸಿದ್ದರು. ಉಗ್ರರಿಗೆ ಆ ರಾಷ್ಟ್ರವು ಪ್ರಶಸ್ತ ಅಡಗು ತಾಣವಾಗಿದೆ ಎಂಬುದನ್ನು ಸಾಬೀತುಪಡಿಸಲು ಸಜ್ಜಾಗಿದೆ ಎಂದು ಹೇಳಿವೆ.

ಹಣ ಅಕ್ರಮ ವರ್ಗಾವಣೆ, ಭಯೋತ್ಪಾದಕರಿಗೆ ಹಣಕಾಸು ಪೂರೈಕೆಗೆ ತಡೆ ಹಾಗೂ ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ಸಮಗ್ರತೆಗೆ ಬೆದರಿಕೆಯೊಡ್ಡುವ ಕೃತ್ಯ ತಡೆಯುವ ಕೆಲಸವನ್ನು ಎಫ್‌ಎಟಿಎಫ್ ಮಾಡುತ್ತದೆ. ಇಂತಹ ಕೃತ್ಯಗಳಿಗೆ ಬೆಂಬಲ ನೀಡುವ ದೇಶಗಳನ್ನು ಬೂದು ಪಟ್ಟಿಗೆ ಸೇರ್ಪಡೆಗೊಳಿಸಲಾಗುತ್ತದೆ ಎಂದು ತಿಳಿಸಿವೆ.

ಪ್ರಸ್ತುತ ವಿಶ್ವದ 25 ದೇಶಗಳು ಈ ಪಟ್ಟಿಯಲ್ಲಿವೆ. 2008ರ ಫೆಬ್ರುವರಿವರೆಗೂ ಪಾಕಿಸ್ತಾನ ಕೂಡ ಬೂದು ಪಟ್ಟಿಯಲ್ಲಿತ್ತು. ಆ ನಂತರ ಅದನ್ನು ಮೇಲ್ವಿಚಾರಣೆ ಪಟ್ಟಿಗೆ ಸೇರಿಸಲಾಗಿತ್ತು. 2022ರ ಅಕ್ಟೋಬರ್‌ನಲ್ಲಿ ಈ ಪಟ್ಟಿಯಿಂದ ತೆಗೆದು ಹಾಕಲಾಗಿದೆ.

ಮೊದಲ ಕಂತಿನ ಸಾಲ ಐಎಂಎಫ್ ಅಸ್ತು

ವಾಷಿಂಗ್ಟನ್ (ಪಿಟಿಐ): 'ಸಾಲ ವಿಸ್ತರಣೆ ಕಾರ್ಯಕ್ರಮದಡಿ ಪಾಕಿಸ್ತಾನಕ್ಕೆ ಸಾಲ ಮಂಜೂರು ಮಾಡಲು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆದ ಸಭೆಯಲ್ಲಿ ಕಾರ್ಯಕಾರಿ ಮಂಡಳಿಯು ನಿರ್ಧರಿಸಿತ್ತು. ಇದನ್ನು ಪರಾಮರ್ಶಿಸಿ ಮೊದಲ ಕಂತಿನ ಸಾಲದ ಮೊತ್ತ ಬಿಡುಗಡೆಗೆ ಮಂಡಳಿಯು ಮೇ 9ರಂದು ಅನುಮೋದನೆ ನೀಡಿದೆ' ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಸಂವಹನ ವಿಭಾಗದ ನಿರ್ದೇಶಕಿ ಜೂಲಿ ಕೊಜಾಕ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 769 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಶುಕ್ರವಾರ ಗೂಳಿ ಓಟದಿಂದಾಗಿ ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಟಿಸಿ ಕಂಪನಿಯ ಷೇರುಗಳ ಖರೀದಿ ಹೆಚ್ಚಳವು ಮಾರುಕಟ್ಟೆ ಏರಿಕೆಗೆ ಕಾರಣವಾಯಿತು.

ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಸರ್ಕಾರಕ್ಕೆ ದಾಖಲೆ ಪ್ರಮಾಣದಲ್ಲಿ ಲಾಭಾಂಶ ನೀಡಲು ಒಪ್ಪಿಗೆ ಸೂಚಿಸಿದೆ. ಮತ್ತೊಂದೆಡೆ ಅಮೆರಿಕದ ಬಾಂಡ್ ಗಳಿಕೆ ಪ್ರಮಾಣ ಇಳಿಕೆಯಾಗಿದೆ. ಇದು ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 769 ಅಂಶ ಏರಿಕೆ ಕಂಡು (ಶೇ 0.95) 81,721 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 243 ಅಂಶ ಏರಿಕೆಯಾಗಿದ್ದು, 24,853 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

'ಆರ್‌ಬಿಐ ದಾಖಲೆ ಪ್ರಮಾಣದಲ್ಲಿ ಲಾಭಾಂಶ ನೀಡಲು ನಿರ್ಧರಿಸಿದ್ದು, ಸರ್ಕಾರದ ಹಣಕಾಸಿನ ಬಲವರ್ಧನೆಯನ್ನು ಗಟ್ಟಿಗೊಳಿಸಲಿದೆ. ಇದು ಷೇರುಪೇಟೆಗೆ ಬಲ ನೀಡಿದೆ' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಟರ್ನಲ್, ಪವರ್ ಗ್ರಿಡ್, ಐಟಿಸಿ, ಬಜಾಜ್ ಫೈನಾನ್ಸ್, ನೆಸ್ಲೆ, ಎಕ್ಸಿಸ್ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಅದಾನಿ ಪೋರ್ಟ್ಸ್ ಷೇರಿನ ಮೌಲ್ಯ ಏರಿಕೆಯಾಗಿದೆ. ಸನ್ ಫಾರ್ಮಾ ಷೇರಿನ ಮೌಲ್ಯದಲ್ಲಿ ಶೇ 2ರಷ್ಟು ಇಳಿಕೆಯಾಗಿದೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,045 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ರೂಪಾಯಿ ಮೌಲ್ಯ 50 ಪೈಸೆ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸತತ ಮೂರು ದಿನಗಳಿಂದ ಇಳಿಕೆ ಕಂಡಿದ್ದ ರೂಪಾಯಿ ಮೌಲ್ಯವು, ಶುಕ್ರವಾರದ ವಹಿವಾಟಿನಲ್ಲಿ 50 ಪೈಸೆ ಏರಿಕೆಯಾಗಿದೆ.

ಪ್ರತೀ ಡಾಲರ್ ಮೌಲ್ಯ ₹85.45 ಆಗಿದೆ.

ಡಾಲರ್ ಸೂಚ್ಯಂಕ ಇಳಿಕೆಯಾಗಿದೆ. ದೇಶೀಯ ಷೇರು ಸೂಚ್ಯಂಕಗಳು ಏರಿಕೆಯಾಗಿವೆ. ಇದು ರೂಪಾಯಿಗೆ ಬಲ ನೀಡಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಕಚ್ಚಾ ತೈಲದ ದರ ಏರಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವಿನ ನಡುವೆಯೂ ರೂಪಾಯಿ ಮೌಲ್ಯ ಹೆಚ್ಚಳವಾಗಿದೆ ಎಂದು ಹೇಳಿದ್ದಾರೆ. ಕಳೆದ ಮೂರು ದಿನದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 53 ಪೈಸೆ ಇಳಿಕೆಯಾಗಿತ್ತು.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ವಿಧ	ಧಾರಣೆ
ಕುಮಟ	ಚಾಲಿ	41499-42699
	ಚಿಪ್ಪು	12099-30279
	ಕೋಕ	7099-14189
	ಹೊಸಚಾಲಿ	33089-42529
ಪುತ್ತೂರು	ಕೋಕ	20000-31500
	ಹೊಸತು	26000-48000
ಶಿವಮೊಗ್ಗ	ಬೆಟ್ಟೆ	51509-58989
	ಗೊರಬಲು	20009-30399
	ರಾಶಿ	47009-58199
	ಸರಕು	61009-91240
ಶಿರಸಿ	ಬೆಟ್ಟೆ	23199-45001
	ಬಿಳಿಗೋಟು	20899-32199
	ಚಾಲಿ	36099-43311
	ಕೆಂಪುಗೋಟು	16899-23499
	ರಾಶಿ	42190-47911
ಯಲ್ಲಾಪುರ	ಬಿಳಿಗೋಟು	17099-31900
	ಚಾಲಿ	32698-42499
	ಕೋಕ	9699-18099
	ಕೆಂಪುಗೋಟು	17769-26899
	ರಾಶಿ	42009-53899
	ತಟ್ಟಿಬೆಟ್ಟೆ	28769-38199

ಟ್ರಂಪ್ ಸರ್ಕಾರದ ನಿರ್ಧಾರ ವಿರುದ್ಧ ಕೋರ್ಟ್‌ಗೆ ಹಾರ್ವರ್ಡ್ ವಿ.ವಿ

ವಾಷಿಂಗ್ಟನ್ (ಎ.ಪಿ): ವಿದೇಶಿ ವಿದ್ಯಾರ್ಥಿಗಳ ದಾಖಲು ಮಾಡದಂತೆ ಐವಿ ಲೀಗ್ ಸ್ಕೂಲ್‌ಗೆ ನಿರ್ಬಂಧ ಹೇರಿರುವ ಡೊನಾಲ್ಡ್ ಟ್ರಂಪ್ ಆಡಳಿತದ ನಿರ್ಧಾರವನ್ನು ಹಾರ್ವರ್ಡ್ ವಿಶ್ವವಿದ್ಯಾಲಯ ಪ್ರಶ್ನಿಸಿದೆ.

ಶ್ವೇತಭವನದ ರಾಜಕೀಯ ಬೇಡಿಕೆಗಳನ್ನು ತಿರಸ್ಕರಿಸಿದ್ದಕ್ಕೆ ಕೈಗೊಂಡ ಪ್ರತೀಕಾರದ ಕ್ರಮ ಇದಾಗಿದೆ ಎಂದು ಆರೋಪಿಸಿದೆ. ಬಾಸ್ಟನ್‌ನ ಫೆಡರಲ್ ಕೋರ್ಟ್‌ನಲ್ಲಿ ಈ ಬಗ್ಗೆ ಮೊಕದ್ದಮೆ ದಾಖಲಿಸಲಾಗಿದೆ.

ಸರ್ಕಾರದ ನಿರ್ಧಾರವು ಕಾಯ್ದೆಗೆ ವಿರುದ್ಧವಾಗಿದೆ. ಒಂದು ಆದೇಶದಿಂದ ವಿದ್ಯಾರ್ಥಿಗಳ ಸಂಖ್ಯೆಯನ್ನು ಶೇ 25ರಷ್ಟು ಕಡಿತಗಳಿಸಲು ಸರ್ಕಾರ ಮುಂದಾಗಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.

ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ 100ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಸೇರಿದ 6,800ಕ್ಕೂ ಅಧಿಕ ವಿದೇಶಿ ವಿದ್ಯಾರ್ಥಿಗಳು ದಾಖಲಾಗುತ್ತಾರೆ.

ಶ್ರೀ ಶಕ್ತಿ ಮಸಾಜ್ ಥೆರಪಿ
ಬೆಂಗಳೂರು ಇವರ ವತಿಯಿಂದ
ಉಚಿತ ಚಿಕಿತ್ಸೆ (ಬೆಂಗಳೂರುನಲ್ಲಿ)
ದಿನಾಂಕ ರಿಂದ 19/05/2025 ಪ್ರಾರಂಭವಾಗಿದೆ
ಸಮಯ ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ವರಗೆ
ವಿಳಾಸ : ಆನಂದ್ ರಾವ್ ಸರ್ಕಲ್ ಹತ್ತಿರ SC ರೋಡ್, ಕುಮಾರಕೀನೊ ಅಪಾರ್ಟ್ಮೆಂಟ್ ಎದುರು, ಶೇಷಾದ್ರಿಪುರಂ, ಬೆಂಗಳೂರು 20
9019626612
ಮಂಡಿ, ಬೆನ್ನು, ಕತ್ತುನೋವು, ಕೀಲುನೋವು, ಲಕ್ವ, ಹಿಮ್ಮಡಿ ನೋವು, ಟೆನ್ನಿಸ್ ಎಲಬೋ ಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್‌ಗುನ್ಯ ಗಂಟುನೋವು, ರೊಮೆಟೆಡ್ ಅರ್ಥ್ರೈಟಿಸ್, ವೆರಿಕೋಸ್ ವೇಯನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಕ್, ಮೂಳೆ ನೋವುಗಳಿಗೆ ಯಾವುದೇ ರೀತಿಯ ಔಷದಿ ಇಲ್ಲದೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ವಿಶೇಷವಾದ A C U ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ.

ಪಾಶ್ವವಾಯು ಪೀಡಿತರಿಗೆ ದೇಶೀಯ ಚಿಕಿತ್ಸೆ
ಸೂಚನೆ : ಪಾರ್ಶ್ವವಾಯುವಿಗೆ ಗುರಿಯಾಗಿ ಒಂದು ವರ್ಷದಿಂದ ಮೇಲ್ಪಟ್ಟ ವಯೋವೃದ್ಧಿಯಾಗಿ ಬಾಯಿಯ ಮುಖಾಂತರ ಔಷಧಿಯನ್ನು ಸೇವಿಸಲು ಸಾಧ್ಯವಾಗುವಂತಹ ರೋಗಿಗಳಿಗೆ ಮಾತ್ರ ಈ ಚಿಕಿತ್ಸೆ ಮಾಡಲಾಗುವುದು.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಲೇಡಿಸ್ ಬ್ಯೂಟಿ ಪಾರ್ಲರ್ ನಲ್ಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದರೆ. ತಿಂಗಳಿಗೆ ವೇತನ 25000/- Full ಟೈಮ್ & Part ಟೈಮ್ ಶೇಷಾದ್ರಿಪುರಂ ಬೆಂಗಳೂರು, ಸಂಪರ್ಕಿಸಿ: 7349494852

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

Hosur Road

WANTED VGP Plots & VHF Farm land inHosur Tamil Nadu. You have any property for sale in Hosur Contact: 9365816356

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

Tumkur

TUMKUR NH 44, 23 Guntas land with 10,000/sq ft /floor 1st and 2nd Floor. Satyamangala, Kasaba Hobli North facing building with water and power supply. Ideal for School, college, hospital or commercial establishment. 9845885487

ಶಿಕ್ಷಣ

Admission

ಪಲೋಮ ಪದವಿ ಕಾಲೇಜು ಕೋರ್ಸ್ :ಬಿ.ಕಾಂ (B.Com)100% Placement Assistance.ಶುಲ್ಕ ಕೇವಲ 10 ಸಾವಿರ ಮಾತ್ರ.ಉಚಿತ ಬಸ್ ವ್ಯವಸ್ಥೆ.ಮೊ:9902865643, 8904460239.ವಿಳಾಸ:ಚಂದಾಪುರ, ಆನೇಕಲ್ ತಾಲ್ಲೂಕು.

ಪ್ರವಾಸ

Travel

28.05.2025 05.06.2025 ಚಾರ್‌ಧಾಮ್ ಸಮೇತ ಪ್ರವಾಸ 08.06.2025 ನೈಮಿಷಾರಣ್ಯ ಬುದ್ಧಗಯಾ ಕಾಶಿ,ಅಯೋಧ್ಯ ಅಲಹಾಬಾದ್ ನೇಪಾಳ ಪೋಖ್ರಾ,ಮುಕ್ತಿನಾಥ. 23.06.2025 ಸೋಮನಾಥ್ ದ್ವಾರಕಾ ಮಹಾಕಾಳೇಶ್ವರ ಓಂಕಾರೇಶ್ವರ್. 29.06.2025 ಅಮರನಾಥ್‌ಯಾತ್ರೆ ಇತ್ಯಾದಿ. ವಿಷ್ಣನ್ ಟ್ರಾವೆಲ್ಸ್ ವಿಜಿನ್ನಿ ಬೆಂಗಳೂರು.04 26574131 8431888138 8317446683

ಭಾರತಪರಂಪರ ದರ್ಶನ: 9.6.2025 7 ದಿನಗಳು ಅಯೋಧ್ಯ ಕಾಶಿಯಾತ್ರೆ ವಿಮಾನದಲ್ಲಿ. 18.6.2025 ಚಾರ್ ಧಾಮ್ 13 ದಿನಗಳು ವಿಮಾನದಲ್ಲಿ. ಪ್ರಕಾಶ್ ಹೆಬ್ಬಾರ್: 9448792891.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

'ಮೈಸೂರು ಪಾಕ್' ಈಗ 'ಮೈಸೂರು ಶ್ರೀ': ರಾಜಸ್ಥಾನದಲ್ಲಿ 'ಸಿಹಿ' ಯುದ್ಧ

ಜೈಪುರ (ಪಿಟಿಐ): ಪಹಲ್ಗಾಮ್ ದಾಳಿಯನ್ನು ಖಂಡಿಸಿ, ಅದರ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲು ರಾಜಸ್ಥಾನದಲ್ಲಿ 'ಸಿಹಿ' ಯುದ್ಧ ನಡೆಯುತ್ತಿದೆ. ಭಾರತೀಯವಾಗಿರುವ, ಅತ್ಯಂತ ಸಾಂಪ್ರದಾಯಿಕ ಸಿಹಿತಿನಿಸುಗಳ ಹೆಸರಿನಲ್ಲಿದ್ದ 'ಪಾಕ್' ಈಗ 'ಶ್ರೀ' ಎಂದು ಬದಲಾಗಿದೆ.

ಮೈಸೂರು ಪಾಕ್– ಈಗ ಮೈಸೂರು ಶ್ರೀ. ಆಮ್ ಪಾಕ್– ಆಮ್ ಶ್ರೀ. ಗೊಂದ್ ಪಾಕ್– ಗೊಂದ್ ಶ್ರೀ... ಹೀಗೆ ಪಾಕ್ ಎಂಬ ಹೆಸರಿನಲ್ಲಿ ಕೊನೆಗೊಳ್ಳುವ ಎಲ್ಲ ತಿನಿಸುಗಳ ಹೆಸರುಗಳು ಬದಲಾಗಿವೆ. ರಾಜಸ್ಥಾನದ ಖ್ಯಾತ ಸಿಹಿತಿನಿಸು ವ್ಯಾಪಾರಿಗಳು ಇಂಥದ್ದೊಂದು 'ಪ್ರತೀಕಾರ' ಕೈಗೊಂಡಿದ್ದಾರೆ. ಇದಕ್ಕೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ ಎನ್ನುತ್ತಿದ್ದಾರೆ.

'ನಾವು ಸ್ಪಷ್ಟ ಸಂದೇಶ ನೀಡಲು ಬಯಸುತ್ತಿದ್ದೇವೆ. ಭಾರತದ ಮೇಲೆ ಕಣ್ಣೆತ್ತುವ ಧೈರ್ಯ ಮಾಡಿದರೆ, ನಾವು ಅಂಥವರ ಹೆಸರನ್ನು ಅಳಿಸಿಹಾಕುತ್ತೇವೆ. ಪ್ರತಿ ಭಾರತೀಯನು ಅವನದ್ದೇ ಆದ ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸುತ್ತಾನೆ. ಇದು ನಮ್ಮ ಸಾಂಕೇತಿಕವಾದ 'ಸಿಹಿ' ಪ್ರತೀಕಾರ' ಎನ್ನುತ್ತಾರೆ ಖ್ಯಾತ 'ಬಾಂಬೆ ಮಿಷ್ಠಾನ್ ಭಂಡಾರ' ಅಂಗಡಿಯ ವಿನೀತ್ ತ್ರಿಖಾ.

'ಪಾಕ್' ಎಂದರೆ ಪಾಕಿಸ್ತಾನವೇ?

ರೆಖ್ತಾ ಡಿಕ್ಷನರಿ ಪ್ರಕಾರ 'ಪಾಕ್' ಪದವು ಪರ್ಷಿಯಾ ಮೂಲದ್ದು. ಇದರ ಅರ್ಥ 'ಸಿಹಿತಿನಿಸು' ಅಥವಾ 'ಮಿಠಾಯಿ'. ಇದರೊಂದಿಗೆ ಈ ಪದಕ್ಕೆ 'ಶುದ್ಧ, ಸ್ವಚ್ಛ ಮತ್ತು ಪವಿತ್ರ' ಎನ್ನುವ ಅರ್ಥವೂ ಇದೆ. ಹಿಂದೂ ಪದಕೋಶ 'ಶಬ್ದಕೋಶ. ಕಾಂ' ಪ್ರಕಾರ, 'ಪಾಕ್' ಎಂದರೆ, 'ಅಡುಗೆ ಮಾಡುವುದು' ಎಂದರ್ಥ.

ಛಾನ್ಸೆಲರ್ ಫ್ರಿಡ್‌ರಿಚ್ ಮೆರ್ಝ್– ಜೈಶಂಕರ್ ಚರ್ಚೆ

ಜರ್ಮನಿ ಜತೆ ಪಾಲುದಾರಿಕೆ ವಿಸ್ತರಣೆ

ಬರ್ಲಿನ್ (ಪಿಟಿಐ): 'ಭಾರತವು ತನ್ನ ಕಾರ್ಯತಂತ್ರದ ಭಾಗವಾಗಿ ಜರ್ಮನಿ ಜೊತೆಗೆ ದ್ವಿಪಕ್ಷೀಯ ಪಾಲುದಾರಿಕೆಯನ್ನು ಮತ್ತಷ್ಟು ವಿಸ್ತರಿಸಿಕೊಳ್ಳಲು ಬಯಸುತ್ತದೆ' ಎಂದು ಜರ್ಮನ್ ಛಾನ್ಸೆಲರ್ ಫ್ರಿಡ್‌ರಿಚ್ ಮೆರ್ಝ್ ಅವರಿಗೆ ವಿದೇಶಾಂಗ ಸಚಿವ ಜೈಶಂಕರ್ ಹೇಳಿದ್ದಾರೆ.

ನೆದರ್‌ಲೆಂಡ್ಸ್, ಡೆನ್ಮಾರ್ಕ್ ಮತ್ತು ಜರ್ಮನಿ ದೇಶಗಳ ಪ್ರವಾಸ ಕೈಗೊಂಡಿರುವ ಅವರು ಬರ್ಲಿನ್‌ನಲ್ಲಿ ಭೇಟಿಯಾಗಿ ಈ ವಿಷಯ ಪ್ರಸ್ತಾಪಿಸಿದ್ದಾರೆ.

'ಬರ್ಲಿನ್‌ನಲ್ಲಿ ಛಾನ್ಸೆಲರ್ ಫ್ರಿಡ್‌ರಿಚ್ ಮೆರ್ಝ್ ಅವರನ್ನು ಭೇಟಿಯಾದೆ. ಪ್ರಧಾನಿ ನರೇಂದ್ರ ಮೋದಿ ಪರವಾಗಿ ಶುಭ ಹಾರೈಸಿದೆ. ಜರ್ಮನಿ ಜೊತೆಗೆ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ವಿಸ್ತರಿಸಿಕೊಳ್ಳಲು ಭಾರತ ಎದುರು ನೋಡುತ್ತಿದೆ. ಭಯೋತ್ಪಾದನೆಯ ವಿರುದ್ಧ ಹೋರಾಟದಲ್ಲಿ ಜರ್ಮನಿಯು ಒಗ್ಗಟ್ಟು ವ್ಯಕ್ತಪಡಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು' ಎಂದು ಜೈಶಂಕರ್ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಭೇಟಿ ವೇಳೆ ಜರ್ಮನಿಯ ಹಣಕಾಸು ಹಾಗೂ ಇಂಧನ ಸಚಿವೆ ಕ್ಯಾಥರಿನಾ ರಯೆಸಾ ಅವರನ್ನು ಜೈಶಂಕರ್ ಭೇಟಿಯಾದರು.

ಜರ್ಮನಿಯ ಸಂಸದರ ಜೊತೆಗೆ ಗುರುವಾರ ಸಂವಾದ ನಡೆಸಿದ್ದ ಜೈಶಂಕರ್, 'ಎಲ್ಲ ಮಾದರಿಯ ಭಯೋತ್ಪಾದನೆಯನ್ನು ನಿಗ್ರಹಿಸುವ ನಿಟ್ಟಿನಲ್ಲಿ ಭಾರತ ಬದ್ಧವಾಗಿದೆ' ಎಂದು ಈ ವೇಳೆ ಮನವರಿಕೆ ಮಾಡಿಕೊಟ್ಟರು.

ಛಾನ್ಸೆಲರ್ ಫ್ರಿಡ್‌ರಿಚ್ ಮೆರ್ಝ್ ಅವರನ್ನು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಜರ್ಮನಿಯ ಬರ್ಲಿನ್‌ನಲ್ಲಿ ಶುಕ್ರವಾರ ಭೇಟಿಯಾದರು ಪಿಟಿಐ ಚಿತ್ರ

₹12,000 ಕೋಟಿ ವಂಚನೆ ಪ್ರಕರಣ: ಜೆ.ಪಿ. ಇನ್‌ಫ್ರಾಟೆಕ್ ಮೇಲೆ ಇ.ಡಿ ದಾಳಿ

ನವದೆಹಲಿ (ಪಿಟಿಐ): ಮನೆ ಖರೀದಿದಾರರಿಗೆ ಭಾರಿ ಪ್ರಮಾಣದಲ್ಲಿ ವಂಚಿಸಿರುವ ಪ್ರಕರಣದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಜೆ. ಪಿ. ಇನ್‌ಫ್ರಾಟೆಕ್, ಜೈಪ್ರಕಾಶ್ ಅಸೋಸಿಯೇಟ್ಸ್ ಮತ್ತು ಇತರರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ಶುಕ್ರವಾರ ಶೋಧ ನಡೆಸಿದೆ.

ಇದು ಸುಮಾರು ₹12,000 ಕೋಟಿ ಮೌಲ್ಯದ ವಂಚನೆ ಪ್ರಕರಣವಾಗಿದ್ದು, ಹಣದ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆ ಯಡಿ ದೆಹಲಿ– ಎನ್‌ಸಿಆರ್, ಮುಂಬೈನಲ್ಲಿ ಇ.ಡಿ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಮನೆ ಖರೀದಿದಾರರು ಮತ್ತು ಹೂಡಿಕೆದಾರರಿಗೆ ಜೆಪೀ ಇನ್‌ಫ್ರಾಟೆಕ್, ಜೈಪ್ರಕಾಶ್ ಅಸೋಸಿಯೇಟ್ಸ್ ಮತ್ತು ಇತರ ಕಂಪನಿಗಳು ಸುಮಾರು ₹12,000 ಕೋಟಿ ವಂಚಿಸಿವೆ ಎಂಬ ಆರೋಪದ ಮೇರೆಗೆ ಈ ದಾಳಿ ನಡೆದಿದೆ ಎಂದು ಇ.ಡಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಿಮೆಂಟ್, ನಿರ್ಮಾಣ, ರಿಯಲ್, ಎಸ್ಟೇಟ್ ಮತ್ತ ಆತಿಥ್ಯ ವ್ಯವಹಾರಗಳಲ್ಲಿ ತೊಡಗಿರುವ ಜೈಪ್ರಕಾಶ್ ಅಸೋಸಿಯೇಟ್ಸ್ ಲಿಮಿಟೆಡ್ ಪ್ರಸ್ತುತ ದಿವಾಳಿತನ ಪ್ರಕ್ರಿಯೆಗಳನ್ನು ಎದುರಿಸುತ್ತಿದೆ.

ಆ್ಯಪಲ್ ಉತ್ಪನ್ನಗಳ ಮೇಲೆ ಶೇ 25ರಷ್ಟು ಸುಂಕ: ಟ್ರಂಪ್

ಐರೋಪ್ಯ ಒಕ್ಕೂಟಕ್ಕೆ ಸುಂಕ ಬಿಸಿ

ವಾಷಿಂಗ್ಟನ್ (ಎಎಫ್‌ಪಿ): ಐರೋಪ್ಯ ಒಕ್ಕೂಟದ 27 ದೇಶಗಳ ಆಮದು ಸರಕುಗಳ ಮೇಲೆ ಜೂನ್ 1ರಿಂದ ಶೇ 50ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಬೆದರಿಕೆ ಒಡ್ಡಿದ್ದಾರೆ.

ಡೊನಾಲ್ಡ್ ಟ್ರಂಪ್

ಈ ಬಗ್ಗೆ ತಮ್ಮ 'ಟ್ರುತ್ ಸೋಷಿಯಲ್' ವೇದಿಕೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಟ್ರಂಪ್, 'ಅಮೆರಿಕ ಮತ್ತು ಐರೋಪ್ಯ ಒಕ್ಕೂಟಗಳ ಮಾತುಕತೆಗಳು ಎತ್ತಲೋ ಸಾಗುತ್ತಿವೆ. ನಿಮ್ಮ ಮೇಲೆ ಶೇ 50ರಷ್ಟು ಸುಂಕ ವಿಧಿಸಲಾಗುವುದು' ಎಂದು ಹೇಳಿದ್ದಾರೆ.

'ಅಮೆರಿಕದಲ್ಲಿ ಐಫೋನ್ ತಯಾರಿಕೆ: ಕಾರ್ಯಸಾಧುವಲ್ಲ'

ಟ್ರಂಪ್ ಅವರ ಈ ಹೊಸ ಬೆದರಿಕೆಯು ಆ್ಯಪಲ್ ಸಿಇಒ ಟಿಮ್ ಕುಕ್ ಅವರ ಮೇಲೆ ಭಾರಿ ಒತ್ತಡ ಹೇರಿದೆ. ಆರ್ಥಿಕ ವಿಶ್ಲೇಷಣೆಗಳನ್ನು ನಡೆಸುವ 'ವೆಬ್‌ಬುಷ್ ಸೆಕ್ಯುರಿಟೀಸ್' ಸಂಸ್ಥೆಯ ವಿಶ್ಲೇಷಕ ಡ್ಯಾನ್ ಐವಿಸ್ ಅವರ ಪ್ರಕಾರ, 'ಆ್ಯಪಲ್ ಕಂಪನಿಯು ಏಷ್ಯಾದಲ್ಲಿರುವ ತನ್ನೆಲ್ಲಾ ತಯಾರಿಕಾ ವ್ಯವಸ್ಥೆಯನ್ನು ಅಮೆರಿಕಕ್ಕೆ ವರ್ಗಾಯಿಸುವುದು ಎಂದರೆ, ಅದೊಂದು ಕಾಲ್ಪನಿಕ ಕಥೆ ರೀತಿಯಂತಾಗುತ್ತದೆ. ಇದು ಕಾರ್ಯಸಾಧುವೇ ಅಲ್ಲ' ಎಂದಿದ್ದಾರೆ.

'ಅಮೆರಿಕದಲ್ಲಿ ಒಂದು ಐಫೋನ್ ಪ್ರೊಮ್ಯಾಕ್ಸ್‌ನ ಬೆಲೆ ಸುಮಾರು ₹1.5 ಲಕ್ಷದಿಂದ ₹1.6 ಲಕ್ಷದವರೆಗೆ ಇದೆ. ಒಂದು ವೇಳೆ ಅಮೆರಿಕದಲ್ಲಿಯೇ ಫೋನ್‌ಗಳು ತಯಾರಾದರೆ, ಐಫೋನ್ ಪ್ರೊಮ್ಯಾಕ್ಸ್‌ನ ಬೆಲೆ ಸುಮಾರು ₹3 ಲಕ್ಷವಾಗಲಿದೆ' ಎಂದು ಬ್ಯಾಂಕ್ ಆಫ್ ಅಮೆರಿಕ ಸೆಕ್ಯುರಿಟೀಸ್ ಹೇಳಿದೆ.

ಈ ಸುದ್ದಿ ತಿಳಿಯುತ್ತಿದ್ದಂತೆಯೇ ಯೂರೋಪ್‌ನ ಷೇರು ಮಾರುಕಟ್ಟೆಯಲ್ಲಿ ಕುಸಿತ ದಾಖಲಾಗಿದೆ. ಐರೋಪ್ಯ ಒಕ್ಕೂಟದ ದೇಶಗಳ ಮೇಲೆ ಅಮೆರಿಕವು ಈಗಾಗಲೇ ಶೇ 10ರಷ್ಟು ಸುಂಕ ವಿಧಿಸುತ್ತದೆ. ಅಮೆರಿಕವು ಹೊಸ ಸುಂಕವನ್ನು ವಿಧಿಸಿದರೆ, ಎರಡು ಪ್ರಬಲ ಆರ್ಥಿಕತೆಗಳ ಮಧ್ಯೆ ಸಂಘರ್ಷ ಉಂಟಾಗಲಿದೆ. ಈ ದೇಶಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿರುವ ಇತರ ದೇಶಗಳ ಮೇಲೆಯೂ ಈ ಬೆಳವಣಿಗೆ ಪ್ರಭಾವ ಬೀರಲಿದೆ.

ಆ್ಯಪಲ್‌ಗೂ ಬೆದರಿಕೆ: ಆ್ಯಪಲ್ ಕಂಪನಿಯು ಅಮೆರಿಕದಲ್ಲಿ ಐಫೋನ್ ತಯಾರಿಕೆಯನ್ನು ಆರಂಭಿಸಿಲ್ಲ. ಇಲ್ಲಿಯೇ ಐಫೋನ್ ತಯಾರಿಸಲು ಪದೇ ಪದೇ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಆ್ಯಪಲ್ ಕಂಪನಿಯ ಉತ್ಪನ್ನಗಳ ಮೇಲೆ ಕನಿಷ್ಠ ಶೇ 25ರಷ್ಟು ಸುಂಕ ವಿಧಿಸುವುದಾಗಿ ಟ್ರಂಪ್ ಅವರು ತಮ್ಮ ಪ್ರತ್ಯೇಕ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಆ್ಯಪಲ್‌ನ ಷೇರುಗಳ ಮೌಲ್ಯವು ಶೇ 3ರಷ್ಟು ಕುಸಿತ ಕಂಡಿವೆ.

ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಪ್ರೈಮ್‌ನಲ್ಲಿ 'ಫೈರ್‌ಫ್ಲೈ'

ಕಳೆದ ಏ.24ರಂದು ತೆರೆಕಂಡಿದ್ದ ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ ಚೊಚ್ಚಲ ಸಿನಿಮಾ 'ಫೈರ್‌ಫ್ಲೈ' ಅನ್ನು ಇದೀಗ ಅಮೆಜಾನ್ ಪ್ರೈಮ್ ಒಟಿಟಿ ವೇದಿಕೆಯಲ್ಲಿ ವೀಕ್ಷಿಸಬಹುದಾಗಿದೆ. ವಂಶಿ ಈ ಸಿನಿಮಾವನ್ನು ನಿರ್ದೇಶಿಸಿ ನಟಿಸಿದ್ದರು.

ಅಸ್ಪೃಶ್ಯತೆ, ದಬ್ಬಾಳಿಕೆ ಉಲ್ಲೇಖ, ಕಥೆ ದುರ್ಬಲ

ಅಸ್ಪೃಶ್ಯತೆ, ಜಾತಿ ತಾರತಮ್ಯ, ಪ್ರಬಲ ವರ್ಗದವರಿಂದ ದುರ್ಬಲ ವರ್ಗದ ಜನರ ಮೇಲೆ ದೌರ್ಜನ್ಯ, ದುರ್ಬಲ ವರ್ಗದ ಮೇಲೆ ವ್ಯವಸ್ಥೆಯ ದಬ್ಬಾಳಿಕೆ... ಇಂತಹ ವಿಷಯಗಳನ್ನಿಟ್ಟುಕೊಂಡು ಈಗಾಗಲೇ ಹಲವು ಚಿತ್ರಗಳು ನಿರ್ಮಾಣಗೊಂಡಿವೆ. ಪ್ರಮುಖವಾಗಿ ತಮಿಳು ಚಿತ್ರರಂಗದಲ್ಲಿ ಈ ವಿಷಯಾಧಾರಿತ ಸಿನಿಮಾಗಳು ಇತ್ತೀಚೆಗೆ ಸಾಲು ಸಾಲಾಗಿ ಬಂದಿವೆ. 'ಸತ್ಯ ಹರಿಶ್ಚಂದ್ರ' ಸಿನಿಮಾದ 'ಕುಲದಲ್ಲಿ ಕೀಳ್ಯಾವುದೋ' ಹಾಡನ್ನೇ ಶೀರ್ಷಿಕೆಯನ್ನಾಗಿ ಹೊತ್ತ ಈ ಸಿನಿಮಾವೂ ಇವೇ ಅಂಶಗಳ ಸುತ್ತ ಕಟ್ಟಿದ ಕಥೆಯಾಗಿದೆ.

ಬಿದಿರುಬುಂಡೆ ಎನ್ನುವ ಕಾಡಿನಲ್ಲಿ ದುರ್ಬಲ ವರ್ಗಕ್ಕೆ ಸೇರಿದ ಐದಾರು ಕುಟುಂಬಗಳು. ಆ ಕುಟುಂಬಗಳ ನಡುವೆ ಒಬ್ಬ ಅನಾಥ ಹುಡುಗ 'ಮುತ್ತರಸ'. ಬಿದಿರುಬುಂಡೆಗೆ ತಾಗಿಕೊಂಡಿರುವ ಬೆಟ್ಟದ ಮೇಲೆ ಆಂಜನೇಯನ ಪ್ರತಿಮೆ. ಅದುವೇ ಅವರ ದೈವ. ಈ ಕುಟುಂಬದ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸುವುದಾಗಿ ಸರ್ಕಾರೇತರ ಸಂಸ್ಥೆಯೊಂದು ಬರುತ್ತದೆ. ಯಾರೂ ಅವರ ಮಕ್ಕಳನ್ನು ಕಳುಹಿಸಿಕೊಡುವುದಿಲ್ಲ. ಆ ಸಂದರ್ಭದಲ್ಲಿ ಅಲ್ಲಿದ್ದ ಮಕ್ಕಳಲ್ಲಿ ಕುತಂತ್ರ ಬುದ್ಧಿ ಹೊಂದಿದ್ದ 'ಎಂಟೆಗೊದ್ದ' ಎಂಬ ಹುಡುಗನೊಬ್ಬ ನಾಟಕವಾಡಿ ಅವರೊಂದಿಗೆ ನಗರ ಸೇರಿಕೊಳ್ಳುತ್ತಾನೆ. ಹಲವು ವರ್ಷಗಳ ಬಳಿಕ ಬಿದಿರುಬುಂಡೆ ಜಾಗ ಸಂರಕ್ಷಿತ ಅರಣ್ಯವೆಂದು ಘೋಷಿಸಲ್ಪಡುತ್ತದೆ. ಈ ಕುಟುಂಬಗಳು ಕಾಡಿನಿಂದ ನಾಡಿಗೆ ಬಂದು ಗುಡಿಸಲುಗಳಲ್ಲಿ ವಾಸವಿರುತ್ತಾರೆ. ಅಲ್ಲಿಯೂ ಅಸ್ಪೃಶ್ಯತೆಯ ನೋವು. 'ರಾಯಪ್ಪ' ಎಂಬ ಪ್ರಬಲ ವರ್ಗದ ವ್ಯಕ್ತಿಯ ದೌರ್ಜನ್ಯ. ರಾಯಪ್ಪನ ಕುತಂತ್ರಗಳೇ ಚಿತ್ರದ ಮುಂದಿನ ಕಥೆ...

ಮೌನ, ಮನು

ತಮಿಳು ಚಿತ್ರರಂಗದಲ್ಲಿ ಇಂತಹ ವಿಷಯಾಧಾರಿತ ಸಿನಿಮಾಗಳನ್ನು ಕಟ್ಟಿಕೊಟ್ಟ ರೀತಿ ಚೆನ್ನಾಗಿತ್ತು. 'ಕಾಟೇರ'ವೂ ಈ ವಿಷಯಗಳನ್ನು ಅಚ್ಚುಕಟ್ಟಾಗಿ ಕಮರ್ಷಿಯಲ್ ರೂಪದಲ್ಲಿ ಪ್ರಸ್ತಾಪಿಸಿದ ಇತ್ತೀಚಿನ ಸಿನಿಮಾ. 'ಕುಲದಲ್ಲಿ ಕೀಳ್ಯಾವುದೋ' ಸಿನಿಮಾ ಚಿತ್ರಕಥೆಯ ವಿಚಾರದಲ್ಲಿ ಎಡವಿದೆ. ಅನಗತ್ಯ ವಿಷಯಗಳು, ದೃಶ್ಯಗಳು ಚಿತ್ರದ ಅವಧಿಯನ್ನು ಹೆಚ್ಚಿಸಿವೆ. ಮಧ್ಯಂತರದಲ್ಲಿ ಕಥೆಗೆ ತಿರುವು ನೀಡುವ ಅಂಶವಿದ್ದರೂ ಅದನ್ನು ಸಮರ್ಪಕವಾಗಿ ಮುಂದೊಯ್ಯಲು ಸಾಧ್ಯವಾಗಿಲ್ಲ. ವಾಸ್ತವಕ್ಕೆ ಹತ್ತಿರವಾಗದ ಹಲವು ಅಂಶಗಳು ಸಿನಿಮಾದಲ್ಲಿವೆ. ಕಥೆಗೂ ಪಾತ್ರಗಳ ವಯಸ್ಸಿಗೂ ಹೋಲಿಕೆಯಾಗುವುದೇ ಇಲ್ಲ. ಸಂಭಾಷಣೆಗಳನ್ನು ಇನ್ನಷ್ಟು ಹರಿತವಾಗಿಸಬಹುದಿತ್ತು. ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪುತ್ತಾ ಚಿತ್ರಕಥೆಯು ಸಿದ್ಧಸೂತ್ರಕ್ಕೆ ಅಂಟಿಕೊಳ್ಳುತ್ತದೆ.

ನಟನೆಯಲ್ಲಿ ಮಡೆನೂರು ಮನು, ಮೌನ, ಕರಿಸುಬ್ಬು, ಶರತ್ ಲೋಹಿತಾಶ್ವ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ತಬಲಾ ನಾಣಿ ಹಾಸ್ಯದ ಜವಾಬ್ದಾರಿ ಹೊತ್ತು ನಗಿಸುತ್ತಾರೆ. ಈ ಸಿನಿಮಾವನ್ನು ಯೋಗರಾಜ್ ಸಿನಿಮಾಸ್ ಅರ್ಪಿಸಿದ್ದು, ನಿರ್ದೇಶಕ ಯೋಗರಾಜ್ ಭಟ್ ಅವರೂ ಪಾತ್ರವೊಂದನ್ನು ನಿಭಾಯಿಸಿದ್ದಾರೆ. 'ನಮ್ ಪೈಕಿ ಒಬ್ಬ ವೋಗ್ಬಿಟ್ಟ...' ಹಾಡು ಚೆನ್ನಾಗಿದೆ.

–ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಕುಲದಲ್ಲಿ ಕೀಳ್ಯಾವುದೋ

- ನಿರ್ಮಾಣ: ಸಂತೋಷ್ ಕುಮಾರ್ ಎ.ಕೆ. ಮತ್ತು ವಿದ್ಯಾ
- ನಿರ್ದೇಶನ: ಕೆ.ರಾಮ್ ನಾರಾಯಣ್
- ತಾರಾಗಣ: ಮಡೆನೂರ್ ಮನು, ಮೌನ ಗುಡ್ಡೆಮನೆ, ಕರಿಸುಬ್ಬು, ಸೋನಲ್ ಮೊಂತೆರೋ, ಶರತ್ ಲೋಹಿತಾಶ್ವ, ತಬಲಾ ನಾಣಿ, ಡ್ರ್ಯಾಗನ್ ಮಂಜು ಮತ್ತಿತರರು

ಜೂನ್ 6ಕ್ಕೆ ಸಂಜು ವೆಡ್ಸ್ ಗೀತಾ -2 ಮರುಬಿಡುಗಡೆ

ದಶಕದ ಹಿಂದೆ ತೆರೆಕಂಡಿದ್ದ ನಾಗಶೇಖರ್ ನಿರ್ದೇಶನದ 'ಸಂಜು ವೆಡ್ಸ್ ಗೀತಾ' ಸಿನಿಮಾ ಕಥೆ ಹಾಗೂ ಹಾಡುಗಳಿಂದ ಜನರನ್ನು ಸೆಳೆದಿತ್ತು. ಕಳೆದ ಜನವರಿಯಲ್ಲಿ ನಾಗಶೇಖರ್ ಅವರೇ 'ಸಂಜು ವೆಡ್ಸ್ ಗೀತಾ–2' ತೆರೆ ಮೇಲೆ ತಂದಿದ್ದರು. ಆದರೆ ಮೂರೇ ದಿನಗಳಲ್ಲಿ ಈ ಸಿನಿಮಾದ ಪ್ರದರ್ಶನವನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ ಮತ್ತಷ್ಟು ದೃಶ್ಯಗಳನ್ನು ಸೇರಿಸಿ ಇದೇ ಸಿನಿಮಾವನ್ನು ಮರುಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ.

ಸಿನಿಮಾ ಜೂನ್ 6ರಂದು ಮರುಬಿಡುಗಡೆಯಾಗಲಿದೆ. 'ರೀರಿಲೀಸ್‌ಗೆ ಮೂರು ದಿನ ಇರುವಾಗ ಸಿನಿಮಾ ಬಿಡುಗಡೆಗೆ ಕೋರ್ಟ್‌ನಿಂದ ತಡೆ ತಂದಿದ್ದರಿಂದ ನಮಗೆ ತೊಂದರೆ ಆಗಿತ್ತು. ಎಲ್ಲಾ ಚಿತ್ರಮಂದಿರಗಳು ನಿಗದಿಯಾಗಿದ್ದರಿಂದ ತರಾತುರಿಯಲ್ಲಿ ತಡೆ ತೆಗೆಸಿ ಸಿನಿಮಾ ಬಿಡುಗಡೆ ಮಾಡಿದ್ದೆವು. ಆನಂತರ ಮೂರು ದಿನದಲ್ಲಿ ಸಿನಿಮಾ ನಿಲ್ಲಿಸಿದ್ದೆವು. ಈಗ ಪ್ರಮುಖವಾದ ಹೃದಯಸ್ಪರ್ಶಿ ದೃಶ್ಯಗಳನ್ನು ಸೇರಿಸಿ ಮರುಬಿಡುಗಡೆ ಮಾಡುತ್ತಿದ್ದೇವೆ' ಎಂದರು ಚಿತ್ರದ ನಿರ್ಮಾಪಕ ಛಲವಾದಿ ಕುಮಾರ್.

'ನಾನೇ ಈ ಚಿತ್ರದ ನಿರ್ಮಾಪಕ ಎಂದುಕೊಂಡವರು ನ್ಯಾಯಾಲಯದಿಂದ ತಡೆ ತಂದಿದ್ದರು. ಆ ಸಂದರ್ಭದಲ್ಲಿ ಗ್ರಾಫಿಕ್ಸ್ ಕೆಲಸಗಳು ಬಾಕಿ ಇದ್ದವು. 21 ನಿಮಿಷದ ಸಿಜಿ ಸಿದ್ಧವಾಗಿ ಕೈಸೇರುವ ಸಂದರ್ಭದಲ್ಲೇ ತಡೆ ಆಗಿತ್ತು. ಹೀಗಾಗಿ ಆ ದೃಶ್ಯಗಳಿಲ್ಲದೇ ಸಿನಿಮಾ ಬಿಡುಗಡೆಯಾಗಿತ್ತು. ಇದೀಗ ರಿವರ್ಕ್ ಮಾಡಿದ್ದೇವೆ. ಇದಕ್ಕೇ ಸುಮಾರು ₹50 ಲಕ್ಷ ಖರ್ಚು ಆಗಿದೆ. ಮತ್ತೆ ಕೋಟ್ಯಂತರ ರೂಪಾಯಿ ಹಾಕಿ ನಿರ್ಮಾಪಕರು ರೀರಿಲೀಸ್ ಮಾಡುತ್ತಿದ್ದಾರೆ. ಸಿನಿಮಾ ಈ ಬಾರಿ ಹಿಟ್ ಆಗಿಯೇ ಆಗುತ್ತದೆ. ಸಿನಿಮಾ ಈ ಹಿಂದೆ 2 ಗಂಟೆ 02 ನಿಮಿಷವಿತ್ತು. ಜೂನ್ 2ರಂದು ಪ್ರಿರಿಲೀಸ್ ಕಾರ್ಯಕ್ರಮ ಮಾಡಲಿದ್ದೇವೆ' ಎಂದರು ನಾಗಶೇಖರ್.



ರಚಿತಾ ರಾಮ್, ಶ್ರೀನಗರ ಕಿಟ್ಟಿ

ಅ.2ಕ್ಕೇ 'ಕಾಂತಾರ ಚಾಪ್ಟರ್–1' ಬಿಡುಗಡೆ



ಕಾಂತಾರ ಚಾಪ್ಟರ್ 1

ನಟ ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸುತ್ತಿರುವ 'ಕಾಂತಾರ' ಸಿನಿಮಾದ ಪ್ರೀಕ್ವೆಲ್(ಹಿಂದಿನ ಕಥೆ) ಅ.2ರಂದು ಬಿಡುಗಡೆಯಾಗಲಿದ್ದು, ಬಿಡುಗಡೆ ದಿನಾಂಕದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೊಂಬಾಳೆ ಫಿಲ್ಮ್ಸ್ ಅಧಿಕೃತವಾಗಿ ತಿಳಿಸಿದೆ.

ಪ್ರೀಕ್ವೆಲ್ ಮುಂದೂಡಿಕೆ ಆಗಲಿದೆ ಎನ್ನುವ ಊಹಾಪೋಹಗಳ ಬೆನ್ನಲ್ಲೇ ಹೊಂಬಾಳೆ ಸ್ಪಷ್ಟನೆ ನೀಡಿದೆ. 'ಯೋಜನೆಯಂತೆ ಎಲ್ಲವೂ ಸುಸೂತ್ರವಾಗಿ ಸಾಗುತ್ತಿದೆ. 'ಕಾಂತಾರ' ಚಿತ್ರದ ಯಶಸ್ಸಿನ ನಂತರ 'ಕಾಂತಾರ ಚಾಪ್ಟರ್ 1' ಕೂಡಾ ಪ್ರೇಕ್ಷಕರನ್ನು ಮತ್ತಷ್ಟು ಆಳವಾದ ಕಥೆ, ಸಂಸ್ಕೃತಿ ಮತ್ತು ದೈವಿಕ ಲೋಕಕ್ಕೆ ಕರೆದೊಯ್ಯಲಿದೆ. ನಿಮ್ಮ ಕಾತುರಕ್ಕೆ ತಕ್ಕಂತೆ ಚಿತ್ರವೂ ಅಂದುಕೊಂಡ ದಿನಾಂಕದಂದೇ ತೆರೆಗೆ ಬರಲಿದೆ. ಆದ್ದರಿಂದ ಯಾವುದೇ ಅನಧಿಕೃತ ಮಾಹಿತಿಗಳಿಗೆ ಕಿವಿಗೊಡದೆ ಅಧಿಕೃತ ಪ್ರಕಟಣೆಗಳನ್ನಷ್ಟೇ ನಂಬಿ' ಎಂದು ಚಿತ್ರತಂಡ ತಿಳಿಸಿದೆ.

ಆಸ್ಕರ್‌ಗಾಗಿಯೇ ಕಾಂತಾರ: ಆಸ್ಕರ್ ಪ್ರಶಸ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ 'ಕಾಂತಾರ' ಪ್ರೀಕ್ವೆಲ್ ಸಿನಿಮಾವನ್ನು ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡುತ್ತಿದೆ. ಚಿತ್ರವನ್ನು ಆಸ್ಕರ್ ಸ್ಪರ್ಧೆಯ ಅಂಗಳಕ್ಕೆ ತಲುಪಿಸಲು ಈಗಿನಿಂದಲೇ ಪ್ರಯತ್ನ ನಡೆಸಿರುವುದಾಗಿ ಹೊಂಬಾಳೆ ಫಿಲ್ಮ್ಸ್‌ನ ಸಹ ಸಂಸ್ಥಾಪಕ ಚಲುವೇಗೌಡ ಅವರು ಇತ್ತೀಚೆಗೆ ತಿಳಿಸಿದ್ದರು.

'ಕಾಂತಾರ ಚಾಪ್ಟರ್ 1' ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗುತ್ತಿದೆ. ಕುಂದಾಪುರದಲ್ಲಿ ಚಿತ್ರದ ಚಿತ್ರೀಕರಣ ನಡೆಯುತ್ತಿದ್ದು, ತಮ್ಮ ಪಾತ್ರದ ಸಲುವಾಗಿ ರಿಷಬ್ ಶೆಟ್ಟಿ ಕಳರಿಪಯಟ್ಟು ತರಬೇತಿ ಪಡೆದಿದ್ದಾರೆ. ತೆಲುಗಿನ ಹಿಟ್ ಸಿನಿಮಾ 'ಆರ್‌ಆರ್‌ಆರ್'ನ ಆ್ಯಕ್ಷನ್ ನಿರ್ದೇಶಕರಾಗಿದ್ದ ಟೊಡರ್ ಲ್ಯಾಜರೋವ್ 'ಕಾಂತಾರ'ದ ಸಾಹಸ ದೃಶ್ಯಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಳ್ಳತನ ಆರೋಪ: ಬಾಲಕ ಆತ್ಮಹತ್ಯೆ

ಕೋಲ್ಕತ್ತ (ಪಿಟಿಐ): ಮೇದಿನಿಪುರ ಜಿಲ್ಲೆಯಲ್ಲಿ ಅಂಗಡಿಯೊಂದರಲ್ಲಿ ಚಿಪ್ಸ್ ಕದ್ದ ಆರೋಪ ಹೊರಿಸಿದ್ದಕ್ಕೆ ಮನನೊಂದು 12 ವರ್ಷದ ಬಾಲಕನೊಬ್ಬ ಕೀಟನಾಶಕ ಸೇವಿಸಿ ಮೃತಪಟ್ಟಿದ್ದಾನೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

7ನೇ ತರಗತಿ ವಿದ್ಯಾರ್ಥಿ ಕ್ರಿಶೇಂದು ದಾಸ್, ಗೋಸಾಯಿಪುರ ಬಜಾರ್‌ನ ಅಂಗಡಿಯೊಂದರಲ್ಲಿ ಗುರುವಾರ ಚಿಪ್ಸ್ ಪ್ಯಾಕೆಟ್‌ವೊಂದನ್ನು ಕದ್ದಿರುವುದಾಗಿ ಅಂಗಡಿ ಮಾಲೀಕ ಶುಭಂಕರ್ ದೀಕ್ಷಿತ್ ಆರೋಪಿಸಿ, ಬಾಲಕನನ್ನು ಹಿಂಬಾಲಿಸಿ ಸಾರ್ವಜನಿಕ ಸ್ಥಳದಲ್ಲಿ ಕಪಾಳಕ್ಕೆ ಹೊಡೆದಿದ್ದಾರೆ. ಅಲ್ಲದೇ, ಬಸ್ಕಿ ಹೊಡೆಯುವಂತೆ ಹೇಳಿದ್ದಾರೆ ಎಂದು ಬಾಲಕನ ಕುಟುಂಬಸ್ಥರು ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾಯಿಯ ಎದುರಲ್ಲೇ ಅವಮಾನವಾಗಿತ್ತು. ಬಳಿಕ ಮನೆಗೆ ಬಂದ ಬಾಲಕ ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೀಟನಾಶಕ ಸೇವಿಸುವುದಕ್ಕಿಂತ ಮುಂಚೆ ಆತ 'ಅಮ್ಮ... ನಾನು ಕಳ್ಳ ಅಲ್ಲ, ಕಳ್ಳತನ ಮಾಡಿಲ್ಲ. ನಾನು ಕಾಯುತ್ತಿದ್ದೆ. ಅಂಗಡಿಯವರು ಇರಲಿಲ್ಲ. ಹಿಂದಿರುಗಿ ಬರುವಾಗ ರಸ್ತೆಯಲ್ಲಿ ಬಿದ್ದಿದ್ದ ಕುರ್ಕುರೆ ತೆಗೆದುಕೊಂಡೆ. ಇದು ನನ್ನ ಕೊನೆಯ ಮಾತು. ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಕ್ಷಮೆ ಇರಲಿ' ಎಂದು ಪತ್ರ ಬರೆದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಪಾಕಿಸ್ತಾನಕ್ಕೆ ಹೆಚ್ಚು ದಿನಗಳು ಉಳಿದಿಲ್ಲ'

ಅಯೋಧ್ಯೆ/ ಲಖನೌ (ಪಿಟಿಐ): 'ಪಾಕಿಸ್ತಾನವು 75 ವರ್ಷಗಳಷ್ಟು ದೀರ್ಘ ಕಾಲ ಕಳೆದಿದೆ, ಅದಕ್ಕೆ ಹೆಚ್ಚು ದಿನ ಉಳಿಗಾಲವಿಲ್ಲ' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ತಿಳಿಸಿದ್ದಾರೆ.

ಇಲ್ಲಿನ ಹನುಮಾನ್‌ಗಢದಲ್ಲಿ ಹನುಮಾನ್ ಕಥಾ ಮಂಟಪವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಭಯೋತ್ಪಾದನೆಯೇ ಪಾಕಿಸ್ತಾನವನ್ನು ನಾಶಪಡಿಸಲಿದೆ' ಎಂದು ಹೇಳಿದರು.

'ಭಾರತೀಯ ಸೇನೆ ಪಾಕಿಸ್ತಾನದ ಮೇಲೆ ದಾಳಿ ನಡೆಸಿಲ್ಲ. ಬದಲಾಗಿ ಪಾಕಿಸ್ತಾನವೇ ಧರ್ಮ ಕೇಳಿ ಅಮಾಯಕರ ಮೇಲೆ ಗುಂಡಿನ ದಾಳಿ ನಡೆಸಿತು. ಇದಕ್ಕೆ ಪ್ರತಿಯಾಗಿ ಭಾರತೀಯ ಸೇನೆ ನಡೆಸಿದ ಕಾರ್ಯಾಚರಣೆಯಲ್ಲಿ 124 ಭಯೋತ್ಪಾದಕರು ಹತರಾಗಿದ್ದಾರೆ' ಎಂದರು.

ವಿದ್ಯಾರ್ಥಿನಿ ಮೇಲೆ ಸ್ನೇಹಿತರಿಂದಲೇ ಅತ್ಯಾಚಾರ

ಮುಂಬೈ (ಪಿಟಿಐ): ಮದ್ಯದ ಅಮಲಿನಲ್ಲಿದ್ದ ಮೂವರು ಸ್ನೇಹಿತರು ಎಂಬಿಬಿಎಸ್ ವಿದ್ಯಾರ್ಥಿನಿಯೊಬ್ಬ ರಿಗೆ ಮತ್ತು ಬರುವ ಪಾನೀಯ ನೀಡಿ ಅತ್ಯಾಚಾರ ಎಸಗಿರುವ ಘಟನೆ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ನಡೆದಿದೆ.

'ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು, ಅವರಿಗೆ ನ್ಯಾಯಾಲಯ ಮೇ 27ರವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸಂತ್ರಸ್ತೆ ಕರ್ನಾಟಕದ ಬೆಳಗಾವಿ ಜಿಲ್ಲೆಯವರು. ಮೇ 18ರಂದು ಮದ್ಯದ ಅಮಲಿನಲ್ಲಿದ್ದ ಸ್ನೇಹಿತ ಸಂತ್ರಸ್ತೆಗೂ ಮತ್ತು ಬರುವ ಪಾನೀಯ ಕುಡಿಸಿದ್ದ. ಅವರು ಪ್ರಜ್ಞಾಹೀನರಾದ ಬಳಿಕ ಇನ್ನಿಬ್ಬರು ಸ್ನೇಹಿತರೂ ಸೇರಿ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆಪರೇಷನ್ ಸಿಂಧೂರ'ದಲ್ಲಿ ಮಹತ್ವದ ಪಾತ್ರ ವಹಿಸಿದ್ದ ವ್ಯವಸ್ಥೆ ಶ್ಲಾಘಿಸಿದ ಡಿಆರ್‌ಡಿಒ

'ಆಕಾಶ್‌ತೀರ್'ಗೆ ಬೇಡಿಕೆ ನಿರೀಕ್ಷೆ

ನಾಗ್ಪುರ (ಪಿಟಿಐ): 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಮಹತ್ವದ ಪಾತ್ರ ವಹಿಸಿದ, ಸಂಪೂರ್ಣ ಸ್ವದೇಶಿ ನಿರ್ಮಿತ 'ಆಕಾಶ್‌ತೀರ್' ವಾಯು ರಕ್ಷಣಾ ವ್ಯವಸ್ಥೆ ಖರೀದಿಸಲು ಇತರೆ ದೇಶಗಳು ಆಸಕ್ತಿ ವಹಿಸಲಿವೆ ಎಂದು ಭಾರತದ ಅತ್ಯುನ್ನತ ರಕ್ಷಣಾ ವಿಜ್ಞಾನಿಯೊಬ್ಬರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿದ್ದ 9 ಭಯೋತ್ಪಾದಕ ಶಿಬಿರಗಳ ಮೇಲೆ ಭಾರತವು 'ಆಪರೇಷನ್ ಸಿಂಧೂರ' ಹೆಸರಿನಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ 'ಆಕಾಶ್‌ತೀರ್' ವಾಯುರಕ್ಷಣಾ ಸ್ವಯಂಚಾಲಿತ ಹಾಗೂ ರಿಪೋರ್ಟಿಂಗ್ ವ್ಯವಸ್ಥೆಯು ಅಗೋಚರ ಶಕ್ತಿಯಾಗಿ ಹೊರಹೊಮ್ಮಿತ್ತು.

'ನಿಜವಾಗಿಯೂ ನಮ್ಮ ವಾಯುರಕ್ಷಣಾ ವ್ಯವಸ್ಥೆಯು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದು, ಬೇರೆ ದೇಶಗಳು ಆದಷ್ಟು ಬೇಗ ಇದನ್ನು ಖರೀದಿಸಲು ಮುಂದೆ ಬರಲಿವೆ' ಎಂದು ರಕ್ಷಣಾ ಸಂಶೋಧನಾ ಹಾಗೂ ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮುಖ್ಯಸ್ಥ ಸಮೀರ್ ವಿ.ಕಾಮತ್ ವಿಶ್ವಾಸ ವ್ಯಕ್ತಪಡಿಸಿದರು.

'ಇದು ರಕ್ಷಣಾ ಕ್ಷೇತ್ರದಲ್ಲಿ 'ಆತ್ಮನಿರ್ಭರ'ದ ಹೆಜ್ಜೆಯಾಗಿದೆ. ಈಗಾಗಲೇ ನಾವು ಗಣನೀಯ ಪ್ರಗತಿ ಸಾಧಿಸಿದ್ದು, ಸಂಪೂರ್ಣವಾಗಿ ಸ್ವಾವಲಂಬಿಯಾಗಲು ಇನ್ನಷ್ಟು ಕೆಲಸವಾಗಬೇಕಿದೆ' ಎಂದು ಹೇಳಿದರು. 'ಭಾರತೀಯ ರಕ್ಷಣಾ ತಂತ್ರಜ್ಞಾನದ ಭವಿಷ್ಯದ ಬಗ್ಗೆ ಆಶಾವಾದ ವ್ಯಕ್ತಪಡಿಸಿರುವ ಅವರು, ಡ್ರೋನ್, ಕ್ಷಿಪಣಿ ಹಾಗೂ ರಾಕೆಟ್ ಯೋಜನೆಗಳಲ್ಲಿ ಭಾರತ ಸಾಕಷ್ಟು ಪ್ರಗತಿ ಸಾಧಿಸಿದೆ' ಎಂದರು.

ಆಕಾಶ್‌ತೀರ್ ವಾಯುರಕ್ಷಣಾ ವ್ಯವಸ್ಥೆ ಚಿತ್ರ– ಪ್ರೆಸ್ ಇನ್‌ಫಾರ್ಮೇಶನ್ ಬ್ಯುರೋ

> **ಭಾರತದಲ್ಲಿ ನಡೆದಿರುವ ಭಯೋತ್ಪಾದನೆ ಚಟುವಟಿಕೆ ಸಂಪೂರ್ಣವಾಗಿ ಪಾಕಿಸ್ತಾನ ಪ್ರಾಯೋಜಿತ ಎಂಬುದನ್ನು ಆಪರೇಷನ್ ಸಿಂಧೂರ ಬಯಲು ಮಾಡಿದೆ**
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಏನಿದರ ವಿಶೇಷತೆ: 'ಆಕಾಶ್‌ತೀರ್' ವಾಯುರಕ್ಷಣಾ ವ್ಯವಸ್ಥೆಯಲ್ಲಿ ಬಹುವಿಧದ ರೇಡಾರ್ ವ್ಯವಸ್ಥೆಯು ಸಂಯೋಜನೆಗೊಂಡಿದ್ದು, ಶತ್ರುರಾಷ್ಟ್ರಗಳ ವಿಮಾನ, ಡ್ರೋನ್ ಹಾಗೂ ಕ್ಷಿಪಣಿಗಳನ್ನು ನಿಖರವಾಗಿ ಪತ್ತೆಹಚ್ಚಿ, ಪ್ರತಿದಾಳಿ ನಡೆಸಲು ನೆರವಾಗುತ್ತದೆ. ಸೆನ್ಸರ್ ಹಾಗೂ ಸಂವಹನ ತಂತ್ರಜ್ಞಾನವು ಏಕೀಕೃತಗೊಂಡಿದ್ದು, ಮೊಬೈಲ್ ಅಥವಾ ವಾಹನ ಆಧರಿತ ಚೌಕಟ್ಟಿನಲ್ಲಿ ಕೆಲಸ ಮಾಡಲು ಅನುಕೂಲಕರವಾಗಿದ್ದು, ಶತ್ರುರಾಷ್ಟ್ರಗಳ ವಿರುದ್ಧ ಕಾರ್ಯಾಚರಣೆ ನಡೆಸಲು ಅತ್ಯಂತ ಸಹಕಾರಿಯಾಗಿದೆ.

ಭಯೋತ್ಪಾದನೆ ವಿರುದ್ಧದ ದೃಢ ನಿಲುವು ವಿವರಿಸಿದ ನಿಯೋಗ

ಟೋಕಿಯೊ (ಪಿಟಿಐ): ಭಾರತದ ಸಂಸದೀಯ ನಿಯೋಗವೊಂದು ಜಪಾನ್‌ನ ಆಡಳಿತಾರೂಢ ಲಿಬರಲ್ ಡೆಮಾಕ್ರಟಿಕ್ ಪಕ್ಷದ (ಎಲ್‌ಡಿಪಿ) ಸದಸ್ಯರನ್ನು ಶುಕ್ರವಾರ ಭೇಟಿ ಮಾಡಿ, ಭಯೋತ್ಪಾದನೆ ವಿರುದ್ಧ ಭಾರತದ ದೃಢ ಮತ್ತು ಏಕೀಕೃತ ನಿಲುವನ್ನು ವಿವರಿಸಿತು.

ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ಪಾಕಿಸ್ತಾನದ ಬಗ್ಗೆ ಜಾಗತಿಕ ನಾಯಕತ್ವಕ್ಕೆ ತಿಳಿಸಿಕೊಡುವ ಉದ್ದೇಶದಿಂದ ಜೆಡಿಯು ಸಂಸದ ಸಂಜಯ್ ಝಾ ಅವರ ನೇತೃತ್ವದ ಸರ್ವ ಪಕ್ಷಗಳ ನಿಯೋಗವು ಜಪಾನ್‌ಗೆ ತೆರಳಿದೆ. ಭಾರತದ ನಿಯೋಗವು ಎಲ್‌ಡಿಪಿ ಪಕ್ಷದ ಭಯೋತ್ಪಾದನೆ ವಿರೋಧಿ ಸಂಶೋಧನಾ ಸಮಿತಿಯ ಹಂಗಾಮಿ ಮುಖ್ಯಸ್ಥ ಯಸುಹಿರೊ ಹನಾಶಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿತು. ಹನಾಶಿ ಅವರು ಮತ್ತು ನಿಯೋಗವು ಭಯೋತ್ಪಾದನೆ ವಿರುದ್ಧದ ಶೂನ್ಯ ಸಹಿಷ್ಣುತೆ ನಿಲುವನ್ನು ಒತ್ತಿ ಹೇಳಿತು ಎಂದು ಜಪಾನ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು 'ಎಕ್ಸ್'ನಲ್ಲಿ ತಿಳಿಸಿದೆ.ನಿಯೋಗವು ಗುರುವಾರ ಜಪಾನ್ ವಿದೇಶಾಂಗ ಸಚಿವ ಟಕೇಶಿ ಇವಾಯಾ ಅವರನ್ನು ಭೇಟಿಯಾಗಿತ್ತು.

40 ನಿಮಿಷ ತಡವಾಗಿ ಬಂದಿಳಿದ ನಿಯೋಗ

ಮಾಸ್ಕೊ (ಪಿಟಿಐ): ಡಿಎಂಕೆ ಸಂಸದೆ ಕನಿಮೊಳಿ ನೇತೃತ್ವದ ಭಾರತೀಯ ಸಂಸದೀಯ ನಿಯೋಗವನ್ನು ಹೊತ್ತ ವಿಮಾನವು ಸುಮಾರು 40 ನಿಮಿಷ ತಡವಾಗಿ ಡೊಮೊಡೆದೊವೊ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದೆ.

ರಷ್ಯಾದ ರಾಜಧಾನಿ ಮಾಸ್ಕೊವನ್ನು ಗುರಿಯಾಗಿಸಿಕೊಂಡು ಉಕ್ರೇನ್ ಡ್ರೋನ್ ದಾಳಿ ನಡೆಸಿದ್ದ ಕಾರಣ ಎಲ್ಲ ವಿಮಾನ ನಿಲ್ದಾಣಗಳನ್ನು ಮುಚ್ಚುವಂತೆ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. 'ತಾತ್ಕಾಲಿಕ ವಿಮಾನ ನಿರ್ಬಂಧ'ವು 153 ವಿಮಾನಗಳ ಮೇಲೆ ಪರಿಣಾಮ ಬೀರಿದೆ ಎಂದು ರಷ್ಯಾದ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ವಿಮಾನ ವಿಳಂಬಕ್ಕೆ ನಿರ್ದಿಷ್ಟ ಕಾರಣವೇನೆಂದು ಯಾವುದೇ ಅಧಿಕೃತ ಹೇಳಿಕೆಯನ್ನು ನೀಡಿಲ್ಲ.

ಪಾಕ್‌ನಿಂದ ಬಿಡುಗಡೆಗೊಂಡಿದ್ದ ಯೋಧನಿಗೆ ಅದ್ದೂರಿ ಸ್ವಾಗತ

ಕೋಲ್ಕತ್ತ (ಪಿಟಿಐ): ಪಾಕಿಸ್ತಾನ ವಶದಿಂದ ಬಿಡುಗಡೆಗೊಂಡಿದ್ದ ಬಿಎಸ್‌ಎಫ್ ಯೋಧ ಪೂರ್ಣಂ ಕುಮಾರ್ ಸಾಹು ಅವರು ತಮ್ಮ ಊರಾದ ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಗೆ ಶುಕ್ರವಾರ ಸಂಜೆ ಮರಳಿದ್ದಾರೆ.

